# ಅಧ್ಯಾಯ – 1

# ನೈತಿಕತೆ ಮತ್ತು ಮಾನವ ಸಹ ಸಂಬಂಧ

ನೈತಿಕತೆ ಎಂಬುದು ಮನುಷ್ಯನ ಮಾನವೀಯ ಮೌಲ್ಯಗಳಿಗೆ ಸಂಬಂಧಿಸಿದ ಪರಿಭಾಷೆಯಾಗಿದೆ. ಸಮಾಜದಲ್ಲಿ ಉತ್ತಮವೆಂದು ಪರಿಗಣಿಸಿರುವ ನಮ್ಮೆಲ್ಲರ ನಡೆ-ನುಡಿ ಆಚಾರ-ವಿಚಾರ ಕಾರ್ಯಶೈಲಿ ಇವೆಲ್ಲವುಗಳಿಂದ ಪೋಷಿತವಾದುದು.

ಖಾಸಗಿ ನೈತಿಕತೆ ಎಂದರೆ ಅದು ವ್ಯಕ್ತಿ ಕೇಂದ್ರಿತ ಮತ್ತು ವ್ಯಕ್ತಿಯ ಸುತ್ತಲೂ ಇರುವ ಖಾಸಗೀತನದಲ್ಲಿ ಪ್ರಭಾವಿಸುವ ಮೌಲ್ಯಗಳ ಒಂದು ಸಂಗ್ರಹವಾಗಿದೆ. ಖಾಸಗಿ ನೈತಿಕತೆಯ ಮೇಲೆ ಹೊರಗಿನ ಒತ್ತಡ ಕಡಿಮೆ ವೈಯಕ್ತಿಕವಾಗಿದ್ದು ಅವರ ನಡವಳಿಕೆಯನ್ನೇ ಬಹುತೇಕ ಅವಲಂಬಿಸಿದೆ. ಉದಾಹರಣೆಗೆ ಹಸಿದಿರುವ ವ್ಯಕ್ತಿಯನ್ನು ಕಂಡ ತಕ್ಷಣ ನಮ್ಮಿಂದ ಆದ ಹಣದ ಅಥವಾ ಅನ್ನದ ಸಹಾಯ ಖಾಸಗಿ ನೈತಿಕತೆಯ ಪರಧಿಯಲ್ಲಿ ಅಡಕವಾಗಿದೆ.

ಈ ನೆಲೆಯಲ್ಲಿ ಸಾರ್ವಜನಿಕ ನೈತಿಕತೆಯು **ಬಹುಜನ ಹಿತ** ಎಂಬ ತತ್ವದಡಿ ವೈಯಕ್ತಿಕವಾಗಿರದೇ ವ್ಯಕ್ತಿಯ ಸಾರ್ವಜನಿಕ ಬದುಕಿನಲ್ಲಿ ಸಮಾಜವು ಅಪೇಕ್ಷಿಸುವ ವಿಢಶಾಲವಾದ ಪರಿಧಿಯನ್ನು ಹೊಂದಿದೆ. ಸಾರ್ವಜನಿಕ ನೈತಿಕತೆಯಲ್ಲಿ ವ್ಯಕ್ತಿಗೆ ಅವನ ಆ ನೈತಿಕ ಆಚರಣೆಯಿಂದ ಯಾವುದೇ ಪ್ರತಿ ಫಲಾಪೇಕ್ಷೆ ಇಲ್ಲದಿರುವಿಕೆ ಕಾಣುವುದು.

ಉದಾಹರಣೆಗೆ ಓರ್ವ ಸಾರ್ವಜನಿಕ ಸೇವಕ ವೃದ್ದರು, ಅಂಗವಿಕಲರಿಗೆ ವಿಶೇಷ ಆದ್ಯತೆ ನೀಡಿ ಅವರಿಗೆ ಶೀಘ್ರ ಸೇವೆಯನ್ನು ದೊರಕಿಸಿ ಕೊಡುವುದು ಸಾರ್ವಜನಿಕ ನೈತಿಕತೆಯ ನೆಲೆಯಲ್ಲಿ ಬರುತ್ತದೆ.

ನೈತಿಕತೆ ಎಂಬುದು ಒಳಿತುಗಳ ಮತ್ತು ಉತ್ತಮವಾದ ಆಚರಣೆಗಳ ಒಂದು ಘಟ್ಟ ಆಗಿರುವುದರಿಂದ ಖಾಸಗಿ ಮತ್ತು ಸಾರ್ವಜನಿಕ ನೈತಿಕತಗಳೆರಡು ಉತ್ತಮಾಂಶಗಳ ಸಾಮ್ಯತೆ ಹೊಂದಿರುವಿಕೆಯ ಅರಿವಾಗುತ್ತದೆ. ಇವೆರಡರಲ್ಲಿ ವೈಷಮ್ಯವೆಂದರೆ ಖಾಸಗಿ ನೈತಿಕತೆಯು ಪ್ರತಿಯೊಬ್ಬ ಮಾನವರಲ್ಲಿ ಇರುವಂತಹದು. ಆದರೆ ಸಾರ್ವಜನಿಕ ನೈತಿಕತೆಯ ಸಾರ್ವಜನಿಕರಿಗೆ ಸೇವೆ ಸಲ್ಲಿಸುವುದರಲ್ಲಿ ಗೋಚರಿಸುವಂತಹುದಾಗಿದೆ.

ಮಾನವನ ನಡತೆಯ ಮೌಲ್ಯಗಳ ಕ್ರಿಯೆ ಪ್ರಕ್ರಿಯೆಗಳ, ಸರಿ ತಪ್ಪುಗಳನ್ನು ಕುರಿತು ಅಧ್ಯಯನ ಮಾಡುವ ತತ್ವಶಾಸ್ತ್ರದ ಒಂದು ಶಾಖೆಯೇ ನೀತಿಶಾಸ್ತ್ರ ETHICS ಎಂಬುದು ಗ್ರೀಕ್ ಪದವಾದ "ETHOS"ನಿಂದ ಬಂದಿದ್ದು. ಇದರರ್ಥ ಪದ್ದತಿ, ರೂಢಿ ಎಂದಾಗುತ್ತದೆ. ಒಬ್ಬ ವ್ಯಕ್ತಿಯ ನೈತಿಕ ಗುಣಲಕ್ಷಣಗಳನ್ನು ಸಾಮಾಜಿಕ ಒಡಂಬಡಿಕೆಯ ತತ್ವಗಳಿಗನುಸಾರವಾಗಿ ಮೌಲ್ಯೀಕರಣಗೊಳಿಸುವುದಾಗಿದೆ.

ನೈತಿಕತೆ ಎಂಬುದು ಸಾಮಾಜಿಕವಾದುದು. ಇದು ಸಂಘಟನೆಯ, ಸಂಸ್ಥೆಯ, ವ್ಯಕ್ತಿಯ ನಡತೆಯ ಸಂಹಿತೆಯಾಗಿದೆ. ನೈತಿಕತೆಯು ಮಾನವನ ಆಂತರಿಕ ಭಾವನೆ ಮತ್ತು ಬಾಹ್ಯಕ್ರಿಯೆಗೆ ಸಂಬಂಧಿಸಿದೆ. ಕಾನೂನಿಗಿಂತ ನೈತಿಕತೆಯು ವಿಶಾಲವಾದ ವ್ಯಾಪ್ತಿ ಹೊಂದಿದೆ.

**ನೈತಿಕತೆಯ ಪ್ರಮುಖವಾದ ಲಕ್ಷಣಗಳೆಂದರೆ:**

1) ಇದು ಮಾನವನ ಆಂತರಿಕ ಭಾವನೆ ಮತ್ತು ಬಾಹ್ಯ ಕ್ರಿಯೆಗೆ ಸಂಬಂಧಿಸಿದೆ.

2) ವ್ಯಕ್ತಿಯಿಂದ ವ್ಯಕ್ತಿಗೆ ನೈತಿಕತೆ ವ್ಯತ್ಯಾಸವಾಗುತ್ತದೆ.

3) ಕಾಲದಿಂದ ಕಾಲಕ್ಕೆ, ಸಂದರ್ಭದಿಂದ ಸಂದರ್ಭಕ್ಕೆ ಬದಲಾಗುತ್ತದೆ.

4) ಇದು ಸ್ಪಷ್ಟವೂ, ಖಚಿತವೂ ನಿರ್ದಿಷ್ಟವಾದುದಲ್ಲ. ಸಮಾಜದಿಂದ ಇದು ಅನುಕರಣೀಯ ರೂಪದಲ್ಲಿ ಬರುವಂತದ್ದು.

5) ನೈತಿಕತೆಯು ಐಚ್ಛಿಕವಾಗಿದ್ದು, ಇದು ಶಿಕ್ಷೆಯ ಬೆಂಬಲ ಹೊಂದಿಲ್ಲ.

6) ನೈತಿಕತೆಯು ಅಲಿಖಿತ ರೂಪದಲ್ಲಿದ್ದು ರಾಜ್ಯದ ವ್ಯಾಪ್ತಿಯನ್ನು ಮೀರಿದ್ದು ಕಾನೂನಿಗಿಂತ ವಿಶಾಲವಾದ ಕಲ್ಪನೆ ಮತ್ತು ವ್ಯಾಪ್ತಿ ಹೊಂದಿರುತ್ತದೆ.

ನೈತಿಕತೆಯು ಪ್ರಮುಖವಾಗಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನವನ್ನು ಮಾಡುತ್ತದೆ.

1) ಮಾನವನು ಬದುಕಲು ಇರುವ ಅತ್ಯಂತ ಉತ್ತಮವಾದಂತಹ ಮಾರ್ಗ ಯಾವುದು?

2) ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಧರಿಸುವಾಗ.

ಕೆಲವು ಪದಗಳ ವಿಶ್ಲೇಷಣೆಗಂತೂ ನೈತಿಕತೆ ಅವಶ್ಯವಾದ ಮಾನದಂಡವಾಗಿದೆ. ಉದಾಹರಣೆಗೆ ಒಳ್ಳೆಯದ್ದು, ಕೆಟ್ಟದ್ದು, ಸರಿ ಹಾಗೂ ತಪ್ಪು, ಸದ್ಗುಣ–ದುರ್ಗುಣ, ನ್ಯಾಯ ಹಾಗೂ ಅಪರಾಧ ಮುಂತಾದವುಗಳು.

**ನೈತಿಕತೆಯ ನಿರ್ಧರಿಸುವ ಅಂಶಗಳು:**

ನೈತಿಕತೆಯನ್ನು ವ್ಯಕ್ತಿ, ಸ್ಥಳ, ಸಮುದಾಯದ ಆಧಾರದ ಮೇಲೆ ಮಾರ್ಪಾಡಾಗುತ್ತಿರುತ್ತದೆ. ವಸ್ತುನಿಷ್ಠವಾಗಿ ನೈತಿಕ ತತ್ವಗಳು ಎಲ್ಲಾ ಜನರಿಗೂ ಒಂದೇ ಸಮಯದಲ್ಲಿ ಸಮಂಜಸ ಎಂದು ಹೇಳಲಾಗುವುದಿಲ್ಲ. ಹಾಗಾಗಿ ನೈತಿಕತೆಯನ್ನು ನಿರ್ಧರಿಸುವ ಪ್ರಮುಖ ಅಂಶಗಳೆಂದರೆ:

**1) ವೈಯಕ್ತಿಕ ಅಂಶಗಳು:**

* ವ್ಯಕ್ತಿಯ ಜೀವನದ ರೀತಿ

* ನಿರ್ಣಯ ಕೈಗೊಳ್ಳುವಿಕೆ

* ಮಾನಸಿಕ ಮತ್ತು ಮನೋವೈಜ್ಞಾನಿಕ ಅಂಶಗಳು

ಸಮಾಜದಲ್ಲಿ ಸರಿಯಾಗಿ ಸ್ಥಾಪಿಸಲ್ಪಟ್ಟ ಧರ್ಮ–ಕರ್ಮ, ಸರಿ, ತಪ್ಪು, ಗುಣ ಅವಗುಣಗಳಿಗೆ ಅನುಗುಣವಾದ ನಡವಳಿಕಾ ಆಯಾಮಗಳು ಮಾತ್ರ ವೈಯಕ್ತಿಕ ಅಂಶಗಳೆನಿಸುತ್ತವೆ.

**2) ಸಾಮಾಜಿಕ ಅಂಶಗಳು:**

* ಕುಟುಂಬ

* ಅಭ್ಯಸಿಸುವ ಶಾಲೆ

* ಭಾಷೆ, ಸಂಸ್ಕೃತಿ, ಸಂಘ ಸಂಸ್ಥೆಗಳು

* ಧರ್ಮ ಮತ್ತು ಜಾತಿ

* ಸಹಪಾಠಿಗಳು ಮತ್ತು ಸಹೋದ್ಯೋಗಿಗಳ ಪ್ರಭಾವ

**3) ಸಮಯದ ಅಂಶಗಳು:**

* ಭಿನ್ನವಾದ ಸಮಾಜದಲ್ಲಿ ಧರ್ಮ ಮತ್ತು ನೀತಿ ಸಂಹಿತೆಗಳು ಬೇರೆ ಬೇರೆ ಕಾಲದಲ್ಲಿ ಬೇರೆಯಾಗಿರುತ್ತದೆ. ಉದಾಹರಣೆಗೆ ಮಧ್ಯಕಾಲಿನ ಭಾರತೀಯರ ಆಚರಣೆ ಮತ್ತು ಆಧುನಿಕ ಆಚರಣೆಗಳು.

**4) ಪರಿಸ್ಥಿತಿ ನಿರ್ಣಯಾತ್ಮಕ ಅಂಶಗಳು:**

* ಜೀವನದ ಅನುಭವಗಳು

* ವ್ಯಕ್ತಿಗತ ಗ್ರಹಿಕೆ

* ಅಪಾಯವನ್ನು ಎದುರಿಸುವ ಇಚ್ಛೆ

* ಪರಿಸ್ಥಿತಿಗನುಗುಣವಾದ ದಯೆ ಕರುಣೆ ಸಹಾನುಭೂತಿ

ಕೆಲವು ಸಲ ಈ ಕೆಳಗಿನಂತಹ ವಿಷಯಗಳು ನೈತಿಕ ಮಾನದಂಡಗಳಾಗಿರುವುದಿಲ್ಲ. ಭಾವನೆಗಳ ಅನುಕರಣೆ ನೈತಿಕತೆ ಅಲ್ಲಾ. ಏಕೆಂದರೆ ಇವು ಕೆಲವು ಸಾರಿ ಅನೈತಿಕ ಮತ್ತು ತಾರ್ಕಿಕ ರಹಿತವಾಗಿರುತ್ತವೆ. ಧಾರ್ಮಿಕತೆ ಕೂಡ ಕೆಲವು ಸಾರಿ ನೈತಿಕತೆಗೆ ವಿರುದ್ದವಾಗಿರುತ್ತದೆ. ನ್ಯಾಯಿಕ ನಡವಳಿಕೆ ಕೂಡ ಸಂಪೂರ್ಣ ನೈತಿಕತೆಯಲ್ಲ. ಉದಾಹರಣೆಗೆ ವರ್ಣಭೇದ ನೀತಿ ಕಾನೂನು, ಸಾಮಾಜಿಕವಾಗಿ ಒಪ್ಪಿದ ಕೆಲವು ಪದ್ದತಿಗಳು ಕೂಡ ನೈತಿಕತೆ ಅಲ್ಲ ಎಂಬುದನ್ನು ಸತಿ ಪದ್ದತಿ ಮತ್ತಿತರ ಆಚರಣೆಗಳ ಮೂಲಕ ಹೇಳಬಹುದಾಗಿದೆ.

**ನೈತಿಕತೆ ಮತ್ತು ನೀತಿಬದ್ದತೆ ನಡುವಿನ ವ್ಯತ್ಯಾಸಗಳು:**

ನೈತಿಕತೆಯು ಮಾನದಂಡಗಳ ಅನುಸಾರವಾಗಿ ನಡೆಯುವ ಕ್ರಿಯೆಯಾಗಿದ್ದು, ಸಾಮಾಜಿಕ ವ್ಯವಸ್ಥೆಯ ಅನುಸಾರವಾಗಿರುತ್ತದೆ. ಇದು ವೈಯಕ್ತಿಕ ಸ್ವರೂಪದ ನೀತಿಬದ್ದತೆಯಾಗಿ, ಹೋಲಿಕೆಯಲ್ಲಿ ಹಲವಾರು ವ್ಯತ್ಯಾಸಿಕ ಅಂಶಗಳನ್ನು ಹೊಂದಿದೆ. ಅವುಗಳೆಂದರೆ:

| **ನೈತಿಕತೆ** | **ನೀತಿಬದ್ದತೆ** |
|---|---|
| ನೈತಿಕ ಮಾನದಂಡಗಳ ಅನುಸಾರವಾಗಿ ನಡೆಯುವ ನಡತಾ ಕ್ರಿಯೆ | ಸರಿ ಮತ್ತು ತಪ್ಪು ನಡವಳಿಕಾ ತತ್ವಗಳ ಪದ್ದತಿ ರೂಢಿ |
| ಸಾಮಾಜಿಕ ವ್ಯವಸ್ಥೆ ಮತ್ತು ಬಾಹ್ಯಸ್ವರೂಪದ್ದು | ವೈಯಕ್ತಿಕ ವ್ಯವಸ್ಥೆ ಮತ್ತು ಆಂತರಿಕ |
| ಸಾಮಾಜಿಕ ಬೇಡಿಕೆ | ವೈಯಕ್ತಿಕ ನಂಬಿಕೆ ಮತ್ತು ಅಭಿಪ್ರಾಯ |
| ಸಾಮಾಜಿಕ ಅನುಮೋದಿಕೆ ಶಿಕ್ಷೆ, ಪ್ರಶಂಸೆ | ಮಾನಸಿಕ ಭಾವನೆಗಳ ಮೇಲೆ ಪ್ರಭಾವ |
| ಸ್ಥಿತಿಸ್ಥಾಪಕತ್ವ ಗುಣ ಹೊಂದಿದ್ದು ಸಂಬಂಧ, ಸಮಯ, ವೃತ್ತಿಗೆ ಅನುಸಾರವಾಗಿ ಬದಲಾವಣೆ | ಸ್ಥಿರವಾಗಿದೆ ಆದರೆ ಸ್ವಲ್ಪ ಮಟ್ಟಿಗೆ ನಮ್ಯವಾಗಿದೆ |

ಹೀಗೆ ನೈತಿಕತೆ ಮತ್ತು ನೀತಿಬದ್ದತೆ ಅರ್ಥದಲ್ಲಿ ಒಂದೇ ಎನಿಸಿದರೂ ಕಾರ್ಯಾಚರಣೆಯಲ್ಲಿ ತದ್ವಿರುದ್ದವಾಗಿವೆ.

**ನೈತಿಕತೆಯ ತತ್ವಶಾಸ್ತ್ರ ಸಂಬಂಧಿತ ಆಯಾಮಗಳು ಮತ್ತು ವಿಧಾನಗಳು:**

ನೈತಿಕತೆಯು ತತ್ವಶಾಸ್ತ್ರದ ಒಂದು ಭಾಗವಾಗಿದ್ದು, ಇದು ಹಲವಾರು ತತ್ವಶಾಸ್ತ್ರ ಸಂಬಂಧಿತ ಆಯಾಮಗಳನ್ನು ಒಳಗೊಂಡಿದೆ. ಅವುಗಳೆಂದರೆ:

**1) ನೈತಿಕತೆ ಮತ್ತು ಆಧ್ಯಾತ್ಮಕತೆ:** ಆಧ್ಯಾತ್ಮಿಕತೆ ಎಂದರೆ ದೇವರಲ್ಲಿ ನಂಬಿಕೆ ಇಡು ಮತ್ತು ಭಕ್ತಿಯಿಂದ ಇರು ಎಂದರ್ಥವಾಗುತ್ತದೆ. ಭಕ್ತಿ ಯಾವಾಗಲೂ ನಮ್ಮ ನಡತೆಯನ್ನು ಶುಭ್ರಗೊಳಿಸಿ ನೈತಿಕತೆಯಿಂದ ಬದುಕಲು ಪ್ರೇರೇಪಿಸುತ್ತದೆ. ಆಧ್ಯಾತ್ಮಿಕತೆ ಒಬ್ಬ ವ್ಯಕ್ತಿಯ ಚಾರಿತ್ರ್ಯವನ್ನು ನಿರ್ಧರಿಸುತ್ತದೆ ಮತ್ತು ಸಾಮಾಜಿಕ ಮನ್ನಣೆ ಗಳಿಸಲು ಸಹಕಾರಿಯಾಗಿದೆ.

**2) ನೈತಿಕ ನೀರಂಕುಶತ್ವ ಮತ್ತು ಸಾಪೇಕ್ಷತ್ವ (Absolutism & Relationiom):** ಕ್ಯಾಂಟ್‌ನ ನೈತಿಕ ತತ್ವಶಾಸ್ತ್ರದ ಪ್ರಕಾರ ನೈತಿಕ ನಿರಂಕುಶತ್ವ ವಾದದ ನೈತಿಕ ಮೌಲ್ಯಗಳ ಸಾರ್ವತ್ರಿಕ ಸರ್ವಕಾಲಿಕ ಮತ್ತು ಸರ್ವ ಪರಿಸ್ಥಿತಿಯಲ್ಲಿ ಒಂದಾಗಿರುತ್ತದೆ. ಸಾಪೇಕ್ಷತ್ವ ವಾದದ ಪ್ರಕಾರ ನೈತಿಕ ಮೌಲ್ಯಗಳ ಸಂಸ್ಕೃತಿ, ಸಮಾಜ, ಸಮಯ, ಸ್ಥಳ ಪರಿಸ್ಥಿತಿಗಳಿಗನುಗುಣವಾಗಿ ಬದಲಾಗುತ್ತವೆ.

**3) ಸಾಂದರ್ಭಿಕ / ಪರಿಣಾಮ ಸಂಬಂಧಿತ ವಿಧಾನಗಳು:**

* **ಉಪಯುಕ್ತವಾದ ಪ್ರಯೋಜನಾ ತತ್ವ:** ಯಾವ ಕಾರ್ಯದಿಂದ ಹೆಚ್ಚು ಒಳ್ಳೆಯದಾಗಿ, ಕಡಿಮೆ ಹಾನಿಯಾಗುತ್ತದೋ ಅದು ಒಳ್ಳೆಯ ನಿರ್ಧಾರ. ಈ ತತ್ವದ ಪ್ರಕಾರ ಮಾರ್ಗಕ್ಕಿಂತ ಅಂತಿಮ ಫಲಿತಾಂಶವು ಮುಖ್ಯವಾದುದು. ಉದಾ: ಇದರ ಪ್ರಕಾರ ಮರಣದಂಡನ ಶಿಕ್ಷೆ ಸರಿ ಎನಿಸುತ್ತದೆ.

* **ಹಕ್ಕುಗಳ ವಾದ:** ಕೆಲವು ಇತಿಮಿತಗಳೊಂದಿಗೆ ಪ್ರತಿಯೊಬ್ಬ ಮಾನವನಿಗೂ ತನಗೆ ಇಷ್ಟ ಬಂದಂತೆ ಕೆಲಸ ಮಾಡುವ ಹಕ್ಕಿದೆ. ಬೇರೆ ವ್ಯಕ್ತಿಗಳಿಗಿರುವಂತಹ ಎಲ್ಲಾ ಹಕ್ಕುಗಳನ್ನು ನಾವು ಗೌರವಿಸಬೇಕು.

* **ನ್ಯಾಯವಾದ:** ಪ್ರತಿಯೊಬ್ಬ ವ್ಯಕ್ತಿಗೂ ಆತನಿಗೆ ನ್ಯಾಯಯುತವಾಗಿ ಸಿಗಬೇಕಾದುದು ನೀಡಬೇಕಾಗುತ್ತದೆ.

* **ಸಾರ್ವತ್ರಿಕ ಒಳಿತಿನ ವಿಧಾನ:** ಸ್ವ-ಆಸಕ್ತಿಗಿಂತ ಸಾಮಾನ್ಯರ ಒಳಿತಿನ ಕಡೆಗೆ ಚಿಂತಿಸುವ ಮೌಲ್ಯ.

* **ಸದ್ಗುಣಗಳ ವಿಧಾನ/ಸುಶೀಲ ನೈತಿಕತೆ:** ಪ್ರಾಮಾಣಿಕತೆ, ಸಹಾನುಭೂತಿ, ಉದಾರತೆ, ಸ್ವಯಂ ನಿಯಂತ್ರಣ

**4) ಮಾನವನ ಹಕ್ಕುಗಳ ನೈತಿಕತೆ**

**5) ಮಧ್ಯಸ್ಥಗಾರ ಫಲಾನುಭವಿ ನೈತಿಕತೆ**

ಹೀಗೆ ತತ್ವಶಾಸ್ತ್ರ ವಿಧಾನಗಳು ನೈತಿಕತೆ ಜೊತೆಗೆ ವಿವಿಧ ಆಯಾಮದಲ್ಲಿ ಬೆರೆತಿವೆ.

**ನೈತಿಕತೆಯ ಪರಿಣಾಮಗಳು:**

ನೈತಿಕತೆ ಮಾನವನ ಜೀವನ ಮತ್ತು ಸಮಾಜದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಇದು ವಿದ್ಯುತ್ ಶಕ್ತಿಯಂತೆ ಬರಿಗಣ್ಣಿಗೆ ಕಾಣುವುದಿಲ್ಲಾ. ಆದರೆ ನಿಶ್ಚಿತ ಪರಿಸ್ಥಿತಿಯಲ್ಲಿ ಕ್ಷಣ ಮಾತ್ರದಲ್ಲಿ ನಮ್ಮ ಅನುಭವಕ್ಕೆ ಬರುತ್ತದೆ. ನೈತಿಕತೆಯ ನಡತೆ ನಮ್ಮ ಸಮಗ್ರತೆಯಿಂದ ಕೂಡಿದ ಬದುಕಿಗೆ ಸಹಾಯ ಮಾಡುತ್ತದೆ.

ಇದರ ಒಟ್ಟಾರೆ ಪರಿಣಾಮ ನೋಡುವುದಾದರೆ,

1) ನೈತಿಕತೆಯು ಸಮಾಜವನ್ನು ರಕ್ಷಿಸುತ್ತದೆ. ನೈತಿಕತೆ ಸಮಾಜದ ರಕ್ಷಣೆಯಲ್ಲಿ ಕಾನೂನಿಗಿಂತ ಹೆಚ್ಚಾಗಿ ಕಾರ್ಯ ನಿರ್ವಹಿಸುತ್ತದೆ. ಕೆಲವು ಸಲ ಕಾನೂನು ಮತ್ತು ಆಜ್ಞೆಗಳು, ಸಮಾಜ ಮತ್ತು ಪರಿಸರ ರಕ್ಷಣೆಯಲ್ಲಿ ಮುಖ್ಯ ಪ್ರೇಕ್ಷಕಗಳಾಗುತ್ತವೆ. ಉದಾಹರಣೆಗೆ, ಸಂವಿಧಾನದ 17ನೇ ವಿಧಿಯ ಅಸ್ಪ್ರಶ್ಯತೆ ಆಚರಣೆ ಭಾರತದಲ್ಲಿ ಇನ್ನೂ ನಿಲ್ಲದೆ ಇರುವುದು.

2) ಮಾನವನಿಗೆ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತದೆ. ಮಗುವಿಗೆ ಸ್ವಚ್ಛಂದ ಪ್ರೀತಿ, ಆರೋಗ್ಯದಾಯಕ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತದೆ. ವಯಸ್ಕರಿಗೆ ಸಮಾಜದ ಬೆಂಬಲ, ನೀತಿಯುತ ನಡವಳಿಕಾ ನಿಯಮಗಳು ಮತ್ತು ನೌಕರರಿಗೆ ಆಶಾವಾದದ ದೃಷ್ಟಿಕೋನ ಮತ್ತು ಉತ್ತಮ ಪರಿಸರದ ಅವಕಾಶ ನೀಡುತ್ತದೆ.

3) ಸಮಾಜದಲ್ಲಿ ವಿಶ್ವಾಸಾರ್ಹ ಮನೋಭಾವನೆಯನ್ನು ಮೂಡಿಸುತ್ತದೆ.

4) ಇದು ಖಾಸಗಿ ಕಂಪನಿಗಳಲ್ಲೂ ಸಾರ್ವಜನಿಕ ಹೊಣೆಗಾರಿಕಾ ಮನೋಭಾವನೆ ಬೆಳೆಸುತ್ತದೆ. ಉದಾಹರಣೆಗೆ ಅಜೀಂ ಪ್ರೇಮ್‌ಜೀಯ ಶಿಕ್ಷಣ ಕೊಡುಗೆಗಳು.

5) ಇದು ಜನತೆಯನ್ನು ಮತ್ತು ನಾಯಕತ್ವವನ್ನು ಒಗ್ಗೂಡಿಸುತ್ತದೆ.

6) ಮೌಲ್ಯಯುತವಾದ ಕಾರ್ಯನಿರ್ವಹಣೆಗೆ ಸಹಕಾರಿ.

7) ನೈತಿಕ ಸಮಸ್ಯೆಗಳ ಪರಿಹಾರಕ್ಕೆ ಸಹಕಾರಿಯಾಗಿದೆ. ಉದಾಹರಣೆಗೆ ದಯಾಮರಣ, ಮರಣದಂಡನೆ, ಗರ್ಭಪಾತ ಇತರ ವಿಷಯಗಳು.

**ನೈತಿಕತೆ ಇರದಿದ್ದರೆ ಆಗಬಹುದಾದ ದುಷ್ಪರಿಣಾಮಗಳು:**

**1) ಸಾಮಾಜಿಕ ವಲಯ:** ಅಪರಾಧಗಳ ಸಂಖ್ಯೆಯಲ್ಲಿ ಹೆಚ್ಚಳ, ಸ್ತ್ರೀ, ಮಕ್ಕಳ ಮೇಲೆ ಹೆಚ್ಚಾದ ದೌರ್ಜನ್ಯ, ಭ್ರಷ್ಟಾಚಾರ ಸಾಮಾನ್ಯ ವಿಷಯವಾಗುತ್ತದೆ. ಹಿರಿಯ ನಾಗರಿಕ ಗೌರವ ಭಾವನೆ ಮಾಯವಾಗುತ್ತದೆ. ಮಾದಕ ವಸ್ತುಗಳಿಗೆ ಯುವ ಪೀಳಿಗೆ ಬಲಿಯಾಗುತ್ತದೆ. ಜಾತ್ಯಾತೀತ ಭಾವ ಮಾಯಾವಾಗುತ್ತದೆ.

**2) ರಾಜಕೀಯ ವಲಯ:** ರಾಜಕೀಯ ಅಸ್ಥಿರತೆ, ಅಪರಾಧ ಹಿನ್ನೆಲೆಯುಳ್ಳವರ ರಾಜಕೀಯ ಪ್ರವೇಶ, ಅಂತರಾಷ್ಟ್ರೀಯ ಮಟ್ಟದಲ್ಲಿ ಅಪನಂಬಿಕೆ, ಸ್ವಜನ ಪಕ್ಷಪಾತ, ಪರಿಣಾಮಕಾರಿ ಆಡಳಿತ ನಡೆಸುವುದು ಕುಂಠಿತವಾಗುತ್ತದೆ.

**3) ವೈಯಕ್ತಿಕ ವಲಯ:** ಅವಹೇಳನಕಾರಿ ಭಾಷೆ, ಬಯಲು ವಿಸರ್ಜನೆ, ಹಿರಿಯ ನಾಗರಿಕರಿಗೆ ದೌರ್ಜನ್ಯ ಮುಂತಾದವುಗಳು ಹೆಚ್ಚಾಗುತ್ತವೆ.

**4) ಪರಿಸರ ವಲಯ:** ಪರಿಸರ ಮಾಲಿನ್ಯ, ಪರಿಸರ ನಾಶ, ಗರ್ಭಪಾತ, ಮುಂತಾದ ವಿಷಯಗಳು ಸಾಮಾಜಿಕ ಮಾರಕವಾಗಿ ಪರಿಣಮಿಸುತ್ತವೆ.

**ನೈತಿಕತೆಯ ವಿವಿಧ ಮಗ್ಗಲುಗಳು / ನೀತಿಶಾಸ್ತ್ರದ ವಿವಿಧ ಆಯಾಮಗಳು:**

ಬದಲಾಗುತ್ತಿರುವ ಪ್ರಾಪಂಚಿಕ ಸನ್ನಿವೇಶಗಳಿಗೆ ಅನುಗುಣವಾಗಿ ನೈತಿಕತೆಯು ತನ್ನ ಮಗ್ಗುಲನ್ನು ಬದಲಿಸುತ್ತದೆ. ಇದು ತನ್ನ ಜ್ಞಾನವನ್ನು ಬಳಸಿಕೊಂಡು ಹಲವಾರು ವಿಭಾಗಗಳಿಗೆ ಅವಕಾಶವನ್ನು ಮಾಡಿಕೊಟ್ಟಿದೆ. ಇದರ ಪ್ರಮುಖವಾದ ಶಾಖೆಗಳೆಂದರೆ,

**1) ವಿವರಣಾತ್ಮಕ ನೀತಿಶಾಸ್ತ್ರ:** ಇದು ಮೌಲ್ಯಗಳ ಕುರಿತು ಜನರು ಹೊಂದಿರುವ ನಂಬಿಕೆಗಳ ಬಗ್ಗೆ ಅಧ್ಯಯನ ಮಾಡುತ್ತದೆ. ವಿವರಣಾತ್ಮಕ ನೀತಿಶಾಸ್ತ್ರವು ನೀತಿಶಾಸ್ತ್ರದ ಇತಿಹಾಸ ಮತ್ತು ವಿಕಾಸದ ಬಗ್ಗೆ ಅಧ್ಯಯನ ಮಾಡುತ್ತದೆ. ಖಚಿತವಾದ ಸಂಪ್ರದಾಯಗಳು ಮತ್ತು ಆ ಸಂಪ್ರದಾಯಗಳ ನಿಷೇಧ ಕುರಿತು ದಾಖಲೆಯನ್ನು ಒದಗಿಸುತ್ತದೆ. ಉದಾಹರಣೆಗೆ, ಕೊಹ್ಲಬರ್ಗ್‌ರವರ ನೈತಿಕ ಪ್ರಜ್ಞೆ ಸಿದ್ಧಾಂತ. ಒಟ್ಟಾರೆಯಾಗಿ ಇದು ಆಚರಣೆಯಲ್ಲಿನ ನೀತಿ ತತ್ವದ ಕಾರ್ಯಗಳ ವಾಸ್ತವಿಕತೆ ಕುರಿತು ಸ್ಪಷ್ಟೀಕರಣಕ್ಕೆ ಅನ್ವೇಷಣೆ ಮತ್ತು ಶೋಧನೆ ಮಾಡುತ್ತದೆ.

**2) ಪ್ರಮಾಣ ನೀತಿಶಾಸ್ತ್ರ:** ಇದು ನೈತಿಕ ನಡತೆಗಳು ಹೇಗಿರಬೇಕು ಎಂಬುದರ ಬಗ್ಗೆ ನಿಯಮಗಳನ್ನು ತಿಳಿಸುತ್ತದೆ. ಜನರು ಹೇಗೆ ವರ್ತಿಸಬೇಕು ಎಂಬ ನೈತಿಕ ಸಿದ್ಧಾಂತಗಳನ್ನು ಅಭ್ಯಸಿಸುತ್ತದೆ. ಅಂದರೆ ಖಚಿತವಾದಂತಹ ಕೆಲವು ನೈತಿಕ ವರ್ತನೆಗಳನ್ನು ಆಚರಿಸಲು ಮಾರ್ಗದರ್ಶನ ನೀಡಲು ಪ್ರಯತ್ನಿಸುತ್ತದೆ. ಉದಾಹರಣೆಗೆ, ಅರಿಸ್ಟಾಟಲ್‌ನ ಸದ್ಗುಣ ನೀತಿ, ಕಾಂಟ್‌ನ ಕರ್ತವ್ಯಶಾಸ್ತ್ರ, ಭಗವದ್ಗೀತೆಯ ಕರ್ಮಯೋಗ ಇತರೆ.

**3) ಸುವರ್ಣ ನಿಯಮಗಳ ನೀತಿಶಾಸ್ತ್ರ:** ಇತರರು ನಮಗೆ ಏನು ಮಾಡಬೇಕೆಂದು ಬಯಸುತ್ತೇವೆಯೋ ಅದೇ ರೀತಿಯಾಗಿ ಇತರರಿಗೆ ನಾವು ಮಾಡಲು ಸಿದ್ಧರಿರಬೇಕು. ಇದೇ ಸುವರ್ಣ ನಿಯಮ. ಉದಾಹರಣೆಗೆ, ಹಸಿದವರಿಗೆ ಆಹಾರ.

**4) ರೂಪಾಂತರ ನೀತಿಶಾಸ್ತ್ರ:** ಇದು ನೈತಿಕ ಪರಿಕಲ್ಪನೆಗಳ ಮೂಲ ಮತ್ತು ಅರ್ಥಗಳನ್ನು ಅಧ್ಯಯನ ಮಾಡುತ್ತದೆ. ಅದು ಎರಡು ರೀತಿಯಾಗಿ ಹೇಳಬಹುದು.

1) ಆಧ್ಯಾತ್ಮಿಕ ಅಂಶ – ವಿವಿಧ ವಸ್ತುಗಳ ಬಗ್ಗೆ ದೇವರ ಹೇಳಿಕೆ.

2) ಮನೋವೈಜ್ಞಾನಿಕ ಅಂಶ – ನೈತಿಕ ತೀರ್ಮಾನಗಳು ಮತ್ತು ನಡತೆಯನ್ನು ಮನೋವೈಜ್ಞಾನಿಕ ಅಂಶಗಳ ಆಧಾರದ ಮೇಲೆ ಅಧ್ಯಯನ ಮಾಡುತ್ತದೆ. ನೈತಿಕ ಪದಗಳ ಸಿದ್ಧಾಂತಗಳ ಅಧ್ಯಯನ ಮಾಡಿ ಸಿದ್ಧಾಂತದ ಸಿಂಧುತ್ವವನ್ನು ನಿರ್ಧರಿಸುತ್ತದೆ.

**5) ಅನ್ವಯಿಕ ನೀತಿಶಾಸ್ತ್ರ:** ಇದು ನೈತಿಕತೆಗೆ ಸಂಬಂಧಿಸಿದ ವಿವಾದಾತ್ಮಕ ವಿಷಯಗಳ ಕುರಿತು ಅಧ್ಯಯನ ಮಾಡುತ್ತದೆ. ನೈತಿಕ ವಿಷಯಗಳ ಅನ್ವಯಿಕ ನೀತಿಶಾಸ್ತ್ರವು ನೈತಿಕ ತತ್ವಜ್ಞಾನ ಬಳಸಿ ಪರಿಹಾರ ಸೂಚಿಸಲು ಸಹಾಯ ಮಾಡುತ್ತದೆ. ಉದಾಹರಣೆಗೆ ದಯಾಮರಣ ಅನೈತಿಕವೇ? ಪ್ರಾಣಿಗಳಿಗೂ ನಮ್ಮಂತೇ ಹಕ್ಕುಗಳಿಲ್ಲವೇ? ಇತರೆ.

**ಖಾಸಗಿ ಮತ್ತು ಸಾರ್ವಜನಿಕ ಸಂಬಂಧಗಳಲ್ಲಿ ನೈತಿಕತೆ:**

**ಖಾಸಗಿ ಸಂಬಂಧಗಳಲ್ಲಿ ನೈತಿಕತೆ:** ವ್ಯಕ್ತಿಯು ಸಮಾಜದಲ್ಲಿ ಗೌರವಯುತವಾದ ಜೀವನವನ್ನು ನಡೆಸಲು ಖಾಸಗಿ ಅಂದರೆ ತನ್ನ ವೈಯಕ್ತಿಕ ಬದುಕಿನಲ್ಲಿ ನೈತಿಕ ಮೌಲ್ಯ ಅನುಸರಿಸಬೇಕಾಗುತ್ತದೆ. ವ್ಯಕ್ತಿಯ ಖಾಸಗಿ ಸಂಬಂಧಗಳನ್ನು ತನ್ನ ಕುಟುಂಬ ಮತ್ತು ಸ್ನೇಹಿತರೊಂದಿಗೆ ಹೊಂದಿರುತ್ತಾನೆ. ಈ ಸಂಬಂಧವು ಯಾವುದೇ ನಿರ್ಬಂಧಗಳಿಗೆ ಸಿಲುಕದೆ ಅನೌಪಚಾರಿಕವಾಗಿರುತ್ತದೆ.

**ಖಾಸಗಿ ಸಂಬಂಧದಲ್ಲಿ ನೈತಿಕತೆಯ ಲಕ್ಷಣಗಳೆಂದರೆ:**

1) ಇಲ್ಲಿ ನೈತಿಕತೆ ಯಾವುದೇ ನಿರ್ಬಂಧಗಳಿಗೆ ಸಿಲುಕಿರದೆ ಅನೌಪಚಾರಿಕವಾಗಿರುತ್ತದೆ.

2) ಇಲ್ಲಿಯ ಸಂಬಂಧಗಳು ಭಾವನಾತ್ಮಕ ಬಂಧನ ಹೊಂದಿದ್ದು ವ್ಯಕ್ತಿಯು ತನ್ನ ನೈಜ ವ್ಯಕ್ತಿತ್ವವನ್ನು ಅಭಿವ್ಯಕ್ತಪಡಿಸುತ್ತಾನೆ.

3) ಆಂತರಿಕವಾಗಿ ನಿಯಂತ್ರಿಸಬಲ್ಲ ನೈತಿಕ ಮೌಲ್ಯಗಳ ಪ್ರಕಾರವೇ ವ್ಯಕ್ತಿ ವರ್ತಿಸುತ್ತಾನೆ.

4) ಬಾಹ್ಯ ಕಾನೂನು ನೀತಿ ಸಂಹಿತೆ ಮತ್ತು ಕಟ್ಟುಪಾಡಿಲ್ಲದ ಇದೊಂದು ರೀತಿಯಾದ ಜೈವಿಕ ಸಂಬಂಧವಾಗಿದೆ.

5) ಯಾರೂ ಭಾವನಾತ್ಮಕ ಬಂಧನಗಳನ್ನು ಈ ಸಂಬಂಧದಲ್ಲಿ ಕಡೆಗಣಿಸುವುದಿಲ್ಲ.

**ಖಾಸಗಿ ಸಂಬಂಧದಲ್ಲಿ ನೈತಿಕತೆಯ ಮಹತ್ವ:**

ಉತ್ತಮ ಖಾಸಗಿ ಸಂಬಂಧವನ್ನು ಹೊಂದಲು ನೈತಿಕ ವರ್ತನೆಯು ಬಹಳ ಪ್ರಭಾವ ಬೀರುತ್ತದೆ. ನೈತಿಕ ವರ್ತನೆಗಳ ವ್ಯವಸ್ಥೆಯೊಂದಿಗೆ ಮಗು ಜನಿಸುವುದಿಲ್ಲಾ, ಪೋಷಕರ, ಸ್ನೇಹಿತರ ವರ್ತನೆಗಳ ಮೂಲಕ ಮಗು ತನ್ನ ನೈತಿಕತೆಯನ್ನು ಅಳವಡಿಸಿಕೊಳ್ಳುತ್ತಾನೆ.

1) ಸಾಮಾಜಿಕ ವ್ಯವಸ್ಥೆಯಲ್ಲಿ ಮಗು ಒಳ್ಳೆಯ ನಾಗರಿಕನಾಗಿ ರೂಪಗೊಳ್ಳಲು ನೈತಿಕತೆ ಅವಶ್ಯ.

2) ಸ್ನೇಹಪರತೆ, ಪ್ರಾಮಾಣಿಕತೆ, ಸಮರ್ಪಣಾ ಮನೋಭಾವನೆಗಳು ರೂಪುಗೊಳ್ಳುತ್ತದೆ.

3) ಹಿರಿಯರಿಗೆ ಗೌರವ ಕೊಡುವುದು, ಸ್ತ್ರೀಯರಲ್ಲಿ ಸಮಾನತೆ, ಪರಸ್ಪರ ಸುಖ ದು:ಖ ಹಂಚಿಕೊಳ್ಳುವುದು ಇವೆಲ್ಲವೂ ಖಾಸಗಿ ಸಂಬಂಧದಲ್ಲಿ ನೈತಿಕತೆಯ ಮಹತ್ವದ ಮೌಲ್ಯಗಳಾಗಿವೆ.

**ಸಾರ್ವಜನಿಕ ಸಂಬಂಧದಲ್ಲಿ ನೈತಿಕತೆ:**

ಖಾಸಗಿ ಸಂಬಂಧದಲ್ಲಿ ವ್ಯಕ್ತಿ ಆಂತರಿಕ ನಿಯಂತ್ರಣದ ಪ್ರಕಾರ ವರ್ತಿಸಿದರೆ ಸಾರ್ವಜನಿಕ ಸಂಬಂಧದಲ್ಲಿ ಬಾಹ್ಯ ನಿಯಂತ್ರಣ, ಕಾನೂನು, ನೀತಿ ಸಂಹಿತೆ ಕಟ್ಟಳೆಗಳು ಮತ್ತು ಮೌಲ್ಯಗಳ ಪ್ರಕಾರವೇ ವರ್ತಿಸುತ್ತಾನೆ.

**ಲಕ್ಷಣಗಳು:**

1) ಇಲ್ಲಿ ನೈತಿಕತೆ ಔಪಚಾರಿಕವಾಗಿರುತ್ತದೆ.

2) ವ್ಯಕ್ತಿಯ ಸಂಬಂಧದ ಮೇಲೆ ಬಾಹ್ಯ ನಿಯಂತ್ರಣಗಳಿರುತ್ತವೆ.

3) ನೈತಿಕ ಮೌಲ್ಯಗಳನ್ನು ಧಿಕ್ಕರಿಸಿ ನಡೆದಾಗ ಸಮಾಜ, ಸರ್ಕಾರ ಶಿಕ್ಷೆ ನೀಡುವ ಸಂಭವವಿರುತ್ತದೆ.

4) ಆಯಾ ಸಮಾಜದ ಮೌಲ್ಯ, ಸಂಪ್ರದಾಯ, ವರ್ತನೆಗಳು, ಆಚರಣೆಗಳು ವ್ಯಕ್ತಿಯ ನೈತಿಕ ಮೌಲ್ಯ ರೂಪುಗೊಳ್ಳುವಲ್ಲಿ ಪ್ರಭಾವ ಬೀರುತ್ತವೆ.

5) ಅಂತರಾಷ್ಟ್ರೀಯ ನೈತಿಕತೆ: ವಿದೇಶಿ ರಾಷ್ಟ್ರದ ಸಾರ್ವಭೌಮತ್ವಕ್ಕೆ ಗೌರವ, ರಾಜತಾಂತ್ರಿಕ ಸಂಬಂಧಗಳಲ್ಲಿ ನೈತಿಕತೆ ವ್ಯಕ್ತಪಡಿಸುವುದು.

6) ಸಮಾಜೋ ಸಾಂಸ್ಕೃತಿಕ ನೈತಿಕತೆ: ಸರಳ ಜೀವನ, ಆರೋಗ್ಯಕರ ಸ್ಪರ್ಧೆ, ಶಾಂತಿ ಮತ್ತು ಸಾಮರಸ್ಯ ಇತರೆ.

7) ರಾಜಕೀಯ ನೈತಿಕತೆ.

8) ಸಾಂಸ್ಕೃತಿಕ ನೈತಿಕತೆ.

**ಖಾಸಗಿ ಮತ್ತು ಸಾರ್ವಜನಿಕ ಸಂಬಂಧಗಳಲ್ಲಿ ನೈತಿಕತೆಯ ನಡುವಿನ ಬಾಂಧವ್ಯ:**

ಈ ಎರಡು ಸಂಬಂಧಗಳ ನಡುವೆ ನೈತಿಕತೆ ವ್ಯತ್ಯಾಸವಿದ್ದರೂ ಎರಡೂ ಪರಸ್ಪರ ಪೂರಕವಾಗಿವೆ.

1) ಖಾಸಗಿ ಸಂಬಂಧದಲ್ಲಿನ ನೈತಿಕತೆಯು ಸಾರ್ವಜನಿಕ ಸಂಬಂಧಗಳನ್ನು ಮಾನವೀಯತೆಯ ಮೇಲೆ ಗಟ್ಟಿಗೊಳಿಸಲು ಸಹಾಯ ಮಾಡುತ್ತದೆ.

2) ಕೆಲವೊಮ್ಮೆ ಸಾರ್ವಜನಿಕ ಸಂಬಂಧಗಳು ಖಾಸಗಿ ಸಂಬಂಧದ ಆಧಾರದ ಮೇಲೆ ಬದಲಾಗುತ್ತದೆ. ಉದಾಹರಣೆಗೆ ಜಿಲ್ಲಾಧಿಕಾರಿ ಬುಡಕಟ್ಟು ಕಲ್ಯಾಣ ಕಾರ್ಯ ಮಾಡಿದಾಗ ಅವರೊಂದಿಗೆ ಪರೋಕ್ಷ ಸಂಬಂಧ ಬೆಳೆಸುತ್ತಾನೆ.

3) ಶಿಕ್ಷಕ ವಿದ್ಯಾರ್ಥಿ ಸಂಬಂಧ.

4) ಕೆಲವೊಮ್ಮೆ ಖಾಸಗಿ ಸಂಬಂಧಗಳು ಸಾರ್ವಜನಿಕ ಸಂಬಂಧಗಳಾಗಿ ಮಾರ್ಪಾಡಾಗುತ್ತವೆ. ಉದಾಹರಣೆಗೆ ಸರ್ಕಾರಿ ಕಛೇರಿಯಲ್ಲಿ ಒಂದೇ ಮನೆಯವರು ಕೆಲಸ ಮಾಡುವುದು.

5) ಇದು ಶಾಂತಿಯುತ ಸಮಾಜದ ರಚನೆಗೆ ಸಹಕಾರಿಯಾಗಿದೆ.

6) ವೈಯಕ್ತಿಕ ಬದುಕಿನಲ್ಲಿ ಪ್ರಾಮಾಣಿಕವಾಗಿದ್ದಾಗ ಸಾರ್ವಜನಿಕ ಸಂಬಂಧವನ್ನು ಧೈರ್ಯದಿಂದ ಮುನ್ನಡೆಸಬಹುದು. ಯಾಕೆಂದರೆ ಆತನ ಆಂತರಿಕವಾದ ನೈತಿಕ ಮೌಲ್ಯಗಳು ಆತನನ್ನು ಸದಾ ಎಚ್ಚರಿಸುತ್ತಾ ಇರುತ್ತದೆ.

7) ಖಾಸಗಿ ಮತ್ತು ಸಾಮಾಜಿಕ ಸಾರ್ವಜನಿಕ ಸಂಬಂಧಗಳನ್ನು ಋಣಾತ್ಮಕ ಹೊಂದಾಣಿಕೆಯಾದರೆ ಸಮಾಜವು ನಿಷ್ಕ್ರಿಯವಾಗುತ್ತದೆ.

8) ಸಾರ್ವಜನಿಕ ನೈತಿಕ ನಡತೆಗಳನ್ನು ಕೆಲವೊಮ್ಮೆ ಯಾರು ವ್ಯಾಖ್ಯಾನಿಸುತ್ತಾರೆ ಎಂಬುದು ಮುಖ್ಯವಾಗುತ್ತದೆ. ಉದಾಹರಣೆಗೆ, ಉತ್ತರ ಭಾರತದ ಖಾಪ್ ಪಂಚಾಯ್ತಿ, ಆಫ್ಘಾನಿನ ತಾಲಿಬಾನ್ ಇತ್ಯಾದಿ.

ಇದರಿಂದಾಗಿ ಖಾಸಗಿ ಮತ್ತು ಸಾರ್ವಜನಿಕ ನೈತಿಕತೆಯಲ್ಲಿ ಗೊಂದಲ ಮೂಡುತ್ತದೆ.

**ಖಾಸಗಿ ಮತ್ತು ಸಾರ್ವಜನಿಕ ನೈತಿಕತೆಯಲ್ಲಿ ಸಂಘರ್ಷ:**

ಖಾಸಗಿ ಮತ್ತು ಸಾರ್ವಜನಿಕ ನೈತಿಕತೆಯ ನಡುವಿನ ಸಂಘರ್ಷದಿಂದಾಗಿ ಸಮಾಜದಲ್ಲಿ ಅನೇಕ ಸಾಂಸ್ಕೃತಿಕ ಬದಲಾವಣೆಗಳಾಗಿ ಜ್ಞಾನ ಮತ್ತು ವಸ್ತುನಿಷ್ಠ ಬೆಳವಣಿಗೆಯಾಗಬಹುದು. ಅಶಾಂತಿ, ಅಪರಾಧ ಮತ್ತು ಗೊಂದಲಗಳು ಮೂಡಬಹುದು. ಉದಾಹರಣೆಗೆ, ಅರಬಸ್ಪ್ರಿಂಗ್, ಇರಾಕ್, ಸಿರಿಯಾ, ಆಫ್ಘಾನಿಸ್ತಾನ್ ಹೋರಾಟಗಳು ಇತ್ಯಾದಿ. ಅಂತರ್ಜಾತಿ ವಿವಾಹಗಳು ಖಾಸಗಿ ನೈತಿಕತೆಯನ್ನು ಸಾರ್ವಜನಿಕ ಅನೈತಿಕತೆಯೊಂದಿಗೆ ಘರ್ಷಣೆಯಲ್ಲಿ ದುರಂತ ಅಂತ್ಯ ಕಾಣುವುದನ್ನು ಕಾಣಬಹುದು. ಕೆಲವು ಸಂಪ್ರದಾಯಬದ್ದ ಹೋರಾಟದಿಂದ ಅನೇಕ ಮೌಢ್ಯಗಳ ಹೋಗಲಾಡಿಕೆಯನ್ನು ಸಹ ಕಾಣಬಹುದಾಗಿದೆ. ಒಟ್ಟಾರೆಯಾಗಿ ಖಾಸಗಿ ಮತ್ತು ಸಾರ್ವಜನಿಕ ನಡುವಿನ ಸಂಬಂಧದಲ್ಲಿನ ಸಾಮರಸ್ಯ ಮತ್ತು ಸಂಘರ್ಷವು ಸಮಾಜಕ್ಕೆ ಅನುಕೂಲತೆ ಮತ್ತು ಅನಾನುಕೂಲತೆಗಳೆರಡನ್ನೂ ನೀಡಿದೆ. ಇವೆರಡರ ನಡುವೆ ಸಮತೂಕ ಇರುವುದು ಅವಶ್ಯಕ. ಅದರಿಂದ ಸಮಾಜದ ಪ್ರಗತಿ ಉಂಟಾಗುತ್ತದೆ.

**ವೈಯಕ್ತಿಕ ನೈತಿಕತೆ ಮತ್ತು ವೃತ್ತಿಪರ ನೈತಿಕತೆಗಳಿಗಿರುವ ವ್ಯತ್ಯಾಸಗಳು:**

| **ವೈಯಕ್ತಿಕ** | **ವೃತ್ತಿಪರ** |
|---|---|
| ವ್ಯಕ್ತಿ ಆಧಾರಿತವಾದುದು ಬದಲಾಗುತ್ತದೆ | ವೃತ್ತಿ ಆಧಾರಿತವಾದುದು ಬದಲಾಗುವುದಿಲ್ಲ. |
| ಆಧ್ಯಾತ್ಮಿಕ ಸಂಸ್ಕೃತಿ ಸಮಾಜದ ಪ್ರಭಾವವಿದೆ | ಕಾನೂನು ನ್ಯಾಯಾಲಯ ನ್ಯಾಯದ ಪ್ರಭಾವವಿದೆ |
| ಕುಟುಂಬ ಪಾಲಕರಿಂದ ಗುರುಗಳಿಂದ ಕಲಿತದ್ದು | ವ್ಯವಸ್ಥಾಪನೆ ತಂಡದ ನಾಯಕ, ಸಹದ್ಯೋಗಿಗಳಿಂದ ಕಲಿತದ್ದು |
| ವೈಯಕ್ತಿಕ ಆಯ್ಕೆ ಮತ್ತು ಅಭಿರುಚಿ | ವೃತ್ತಿ ಬದ್ದತೆ |

**ಸಮರ್ಪಕವಾದ / ಸಮಂಜಸವಾದ ನೈತಿಕತೆಯ ಸಾರ್ವತ್ರಿಕ ಕೇಂದ್ರದ ಅಂಶಗಳು:**

ಸಮಂಜಸವಾದ ನೈತಿಕತೆಯು ಹಲವಾರು ಸಾರ್ವತ್ರಿಕ ಅಂಶಗಳನ್ನು ಒಳಗೊಂಡಿದ್ದು ಅವುಗಳೆಂದರೆ,

1) ವೈಯಕ್ತಿಕ ಹೊಣೆಗಾರಿಕೆ / ಜವಾಬ್ದಾರಿ

2) ಕಾಳಜಿ ಮತ್ತು ಹಂಚಿಕೆ

3) ಪ್ರಾಮಾಣಿಕತೆ

4) ಆತ್ಮಸ್ಥೈರ್ಯ

5) ಶಾಂತಿಯುತ ಬದುಕು

6) ಸಹಾನುಭೂತಿ ಮತ್ತು ಬದ್ಧತೆ

**ನೀತಿಶಾಸ್ತ್ರವು ಒಂದು ಪ್ರಾಮಾಣಿಕ ವಿಜ್ಞಾನವಾಗಿದೆ:**

ಭೌತಿಕ ವಿಜ್ಞಾನವು **"ಹೇಗಿದೆ"** ಎಂಬುವುದನ್ನು ಕುರಿತು ಅಧ್ಯಯನ ಮಾಡಿದರೆ ಪ್ರಾಮಾಣಿಕ ವಿಜ್ಞಾನವು **"ಹೇಗಿರಬೇಕು"** ಎಂಬುದರ ಕುರಿತು ಅಧ್ಯಯನ ಮಾಡುತ್ತದೆ. ಭೌತಿಕ ವಿಜ್ಞಾನವು ವಸ್ತುಗಳನ್ನು ಕುರಿತು ಅಧ್ಯಯನ ಮಾಡಿದರೆ, ಇದು ನೀತಿ ನಿಯಮಗಳು, ಮೌಲ್ಯಗಳನ್ನು ಕುರಿತು ಅಭ್ಯಸಿಸುತ್ತದೆ. ಇಲ್ಲಿ ಮೌಲ್ಯಗಳೇ ನಿರ್ಣಾಯಾತ್ಮಕ ತೀರ್ಮಾನಗಳಾಗಿದ್ದು ಮನೋನಿಷ್ಠತೆಯಿಂದ ಕೂಡಿದೆ. ಹಾಗಾಗಿ ನೀತಿಶಾಸ್ತ್ರ ಒಂದು ಪ್ರಾಮಾಣಿಕ ಶಾಸ್ತ್ರವಾಗಿದೆಯೇ ಹೊರತು ಭೌತಿಕ ವಿಜ್ಞಾನವಲ್ಲ.

* ನೀತಿಶಾಸ್ತ್ರ ಮೌಲ್ಯಗಳ ವಿಜ್ಞಾನವಾಗಿದೆ.

* ನೀತಿಶಾಸ್ತ್ರ ಮತ್ತು ತತ್ವಶಾಸ್ತ್ರಗಳ ನಡುವೆ ಯಾವುದೇ ರೀತಿಯಾದ ಸ್ಪಷ್ಟ ಸರಹದ್ದುಗಳಿಲ್ಲ.

* ನೀತಿಶಾಸ್ತ್ರವನ್ನು ಹಲವಾರು ತತ್ವಶಾಸ್ತ್ರದ ಒಂದು ಭಾಗವೆಂದು ಪರಿಗಣಿಸಲಾಗಿದೆ.

* ಇದರ ವ್ಯಾಪ್ತಿ ಮಾನವನ ನಡತೆ, ಕ್ರಿಯೆ, ಉದ್ದೇಶ, ವಿಧೇಯಕತೆ, ನೀತಿಬದ್ಧತೆ, ಹೊಣೆಗಾರಿಕೆ ಕುರಿತಾದ ಅಧ್ಯಯನ ಮಾಡುತ್ತದೆ.

* ಶಾಸನಬದ್ಧ ವ್ಯಾಖ್ಯಾನಿಸುವಿಕೆ.

* ನೀತಿಶಾಸ್ತ್ರದ ಮೇಲೆ ಪರಿಸರದ ಪ್ರಭಾವ.

**ಸ್ಕ್ವಾರ್ಟ್ಜ್‌ನ ಸಿದ್ಧಾಂತದ 6 ಪ್ರಮುಖ ಮೌಲ್ಯಗಳ ಲಕ್ಷಣಗಳು:**

1) ಮೌಲ್ಯಗಳು ಭಾವನೆಗಳಿಗೆ ಸಂಬಂಧಿಸಿದಂತಹ ನಂಬಿಕೆಗಳಾಗಿವೆ.

2) ಮೌಲ್ಯಗಳು ಅಪೇಕ್ಷಿತ ಗುರಿ ಸಾಧನಾ ಕ್ರಿಯೆಗೆ ಪ್ರಚೋದಿಸುತ್ತವೆ.

3) ಮೌಲ್ಯಗಳು ನಿಶ್ಚಿತ ಕ್ರಿಯೆ ಮತ್ತು ಪರಿಸ್ಥಿತಿಗಳನ್ನು ಹೊಂದಿರುತ್ತವೆ.

4) ಮೌಲ್ಯಗಳು ಮಾನದಂಡಗಳಾಗಿ ಗುಣಮಟ್ಟಗಳಾಗಿ ಕಾರ್ಯನಿರ್ವಹಿಸುತ್ತವೆ.

5) ಮೌಲ್ಯಗಳು ಒಂದಕ್ಕೊಂದು ಸಂಬಂಧಿತ ಸಾಪೇಕ್ಷ ಮಹತ್ವದ ಆಧಾರದ ಮೇಲೆ ಶ್ರೇಣೀಕೃತಗೊಂಡಿದೆ.

6) ಮೌಲ್ಯಗಳ ಸಾಪೇಕ್ಷ ಮಹತ್ವಗಳು ಕ್ರಿಯೆಯನ್ನು ನಿಯಂತ್ರಿಸುತ್ತದೆ.

ಇವರು 10 ವಿಶಾಲ ಮೌಲ್ಯಗಳನ್ನು ತಿಳಿಸಿದ್ದಾರೆ. ಅವುಗಳು, 1) ಬಲ, 2) ಸಾಧನೆ, 3) ಭೋಗವಾದ, 4) ಪ್ರೇರಕ, 5) ಸ್ವಂತ ನಿರ್ದೇಶನ, 6) ಸಾರ್ವತ್ರಿಕವಾದ, 7) ಔದಾರ್ಯ, 8) ಸಂಪ್ರದಾಯ, 9) ಅನುಮೋದಿತ, 10) ಭದ್ರತೆ.

**ಪ್ರತಿಯೊಬ್ಬರೂ ಹೊಂದಿರಲೇಬೇಕಾದ A to Z ಮೌಲ್ಯಗಳು:**

A - Appreciation

B - Belief in others

C - Caring, commitment, compassion courts

D - Dedication, Devotion

E - Effort, Enthusing, Empathy

F - Forgiveness, Friendship

G - Gender Equality, Gratitude

H - Honestly Hope

I - Integrity

J - Justice

K - Knowledge

L - Love

M - Morality

N - Neutrality

O - Optimism

P - Patience

Q - Quality

R - Respect

S - Silence

T - Tolerance

U - Unity

V - Virtue

W - "We" Concept

X - Extra kindness

Y - Yoga practice for world pease

Z - Zero anger.

# ಅಧ್ಯಾಯ – 2
# ಸಾರ್ವಜನಿಕ ಆಡಳಿತದಲ್ಲಿ ನೈತಿಕತೆ

ಸರ್ಕಾರದ ಅಭಿವೃದ್ಧಿಶೀಲ ನೀತಿಗಳು ಮತ್ತು ಕಾರ್ಯ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಗೆ ಬರಲು ನೈತಿಕತೆ ಅತ್ಯಂತ ಅಗತ್ಯವಾಗಿದೆ. ನಾಗರೀಕ ಸೇವಕರಲ್ಲಿ ನೈತಿಕತೆಯಿದ್ದರೆ ಮಾತ್ರ ದೇಶದ ಪ್ರಗತಿ ಸಾಧ್ಯವಾಗುತ್ತದೆ. ಆಗಲೇ ಸರ್ಕಾರದ ಸಕಲ ಯೋಜನೆಗಳು ಸಫಲವಾಗುತ್ತವೆ. ಆದ್ದರಿಂದ ಒಂದು ಆಡಳಿತದಲ್ಲಿ ಇರಲೇಬೇಕಾದಂತಹ ನೈತಿಕ ಮೌಲ್ಯಗಳನ್ನು ಈ ಕೆಳಗಿನಂತೆ ಹೇಳಬಹುದಾಗಿದೆ.

1) ಜವಾಬ್ದಾರಿ ಮತ್ತು ನೈತಿಕತೆ, ಹೊಣೆಗಾರಿಕೆ

2) ಕಾನೂನು ಬದ್ದತೆ

3) ಉಪಯುಕ್ತವಾದ (ಜನರಿಗೆ ಉಪಯುಕ್ತವಾದ ಯೋಜನೆ)

4) ಅನುಕಂಪ

5) ರಾಷ್ಟ್ರೀಯ ಹಿತಾಸಕ್ತಿ

6) ನ್ಯಾಯ

7) ಪಾರದರ್ಶಕತೆ

8) ಸಮಗ್ರತೆ

9) ವಸ್ತುನಿಷ್ಠತೆ ಮತ್ತು ನಿಸ್ವಾರ್ಥತೆ

10) ಸ್ಪಂದನೆ

11) ರಾಷ್ಟ್ರಕ್ಕೆ ನಿಷ್ಠಾವಂತಿಕೆ

12) ಪಕ್ಷಾತೀತ ಧೋರಣೆ

13) ಗೌಪ್ಯತೆ ಮತ್ತು ತಾಟಸ್ಥತೆ

14) ಅನಾಮಿಕತೆ

15) ನ್ಯಾಯ ನಡವಳಿಕೆ

16) ಸಾರ್ವಜನಿಕ ಒಳಿತಿನ ಬಗ್ಗೆ ಪ್ರಜ್ಞೆ

ಹೀಗೆ ಹಲವಾರು ಪ್ರಮುಖವಾದಂತಹ ಮೌಲ್ಯಗಳನ್ನು ಸಾರ್ವಜನಿಕ ಆಡಳಿತಗಾರ ಹೊಂದಿರಬೇಕು.

**ಸಾರ್ವಜನಿಕ ಆಡಳಿತದಲ್ಲಿ ನೈತಿಕತೆ ಸ್ಥಾನ:**

ಸಾರ್ವಜನಿಕ ನೀತಿಯನ್ನು ಪೂರೈಸಲು ಮತ್ತು ಅನುಷ್ಠಾನಗೊಳಿಸಲು ಇರುವ ಎಲ್ಲ ವಿಧಾನಗಳನ್ನು ಒಳಗೊಂಡಿರುವುದೇ ಸಾರ್ವಜನಿಕ ಆಡಳಿತ ಎಂದು 19ನೇ ಶತಮಾನದ ಅಂತ್ಯದಲ್ಲಿ "ವೃಡ್ರೋ ವಿಲ್ಸನ್"ರವರಿಂದ ಸಾರ್ವಜನಿಕ ಆಡಳಿತವು ಪ್ರತ್ಯೇಕವಾದ ಸ್ವರೂಪವನ್ನು ಪಡೆದುಕೊಂಡಿತು. ರಾಜ್ಯದ ವಿಕಾಸವೆಂದರೆ ರಾಜ್ಯದ ಕಾರ್ಯಕ್ಷೇತ್ರದ ಹೆಚ್ಚಳದ ಜೊತೆಗೆ ವ್ಯಕ್ತಿಯ ಮಾನವೀಯ ಸಂಬಂಧಿತ ಅಂಶಗಳು ಹಾಗೂ ನೈತಿಕ ಅಂಶಗಳಿಗೂ ಸಹ ಮಾನ್ಯತೆ ನೀಡಲಾಯಿತು. ನೈತಿಕ ಮೌಲ್ಯಗಳ ಮಹತ್ವವನ್ನು ಅರಿತ ವಿಶ್ವಸಂಸ್ಥೆಯ 2005ರಲ್ಲಿ ನೈತಿಕ ಕಛೇರಿಯನ್ನು ಸ್ಥಾಪನೆ ಮಾಡಿತು. ಇಲ್ಲಿ ಪ್ರಾಮುಖ್ಯತೆ ನೀಡುರುವಂತಹ ನೈತಿಕ ಅಂಶಗಳೆಂದರೆ,

1) ಜನರ ಮೇಲಿನ ನಿಯಂತ್ರಣಕ್ಕಿಂತ ಜನರೊಂದಿಗೆ ಬೆರೆತು ಅವರ ಬೇಡಿಕೆಗಳ ಕಡೆ4ಗೆ ಹೆಚ್ಚು ಒತ್ತು ನೀಡಲಾಗುತ್ತಿದೆ.

2) ಪರಿಣಾಮಕಾರಿ ಆಡಳಿತದ ಜೊತೆಗೆ ಸಾರ್ವಜನಿಕ ಸೇವೆಗಳ ಕಡೆ ಗಮನಹರಿಸುವುದಕ್ಕೆ ಮಹತ್ವ ನೀಡಲಾಗುತ್ತಿದೆ.

3) ಸಾರ್ವಜನಿಕ ಅಧಿಕಾರಿಗಳಿಗೆ ತರಬೇತಿ ಅವಧಿಯಲ್ಲಿಯೇ ಮೂಲಭೂತ ಮಾನವೀಯ ಮೌಲ್ಯಗಳು, ತಾಳ್ಮೆ, ಒತ್ತಡ ಪರಿಸ್ಥಿತಿಗಳ ನಿರ್ವಹಣಾ ಪಾಠ ಹೇಳಿಕೊಡಲಾಗುತ್ತಿದೆ.

4) ಅಧಿಕಾರಿಗಳಿಗೆ ಗೊಂದಲದ ಸಮಸ್ಯೆಗಳನ್ನು ಶಾಂತ ರೀತಿಯಿಂದ ಪರಿಣಾಮಕಾರಿಯಾಗಿ ಪರಿಹರಿಸಲು ಅವರಿಗೆ ನೈತಿಕ ಮೌಲ್ಯಗಳ ಜೊತೆಗೆ ಯೋಗ ಮತ್ತು ಪ್ರಾಣಾಯಾಮ ಹೇಳಿಕೊಡಲಾಗುತ್ತಿದೆ.

5) ವಿದಯಾರ್ಥಿಗಳಿಗೆ ನೀತಿ ಪಾಠಗಳ ಮೂಲಕ ನೈತಿಕ ಮೌಲ್ಯಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದ್ದು, ಇಂದು ಸುಸ್ಥಿರ ಅಭಿವೃದ್ದಿಯ ಪರಿಕಲ್ಪನೆ ಎಲ್ಲೆಡೆ ಚಾಲ್ತಿಯಲ್ಲಿದೆ. ಗಾಂಧೀಜಿಯವರು ಆಡಳಿತಕ್ಕೆ ಸಂಬಂಧಸಿದಂತೆ ನೈತಿಕತೆಯನ್ನು "ಅಂತರಾತ್ಮ" ಎಂದಿದ್ದಾರೆ.

6) ಸಾರ್ವಜನಿಕ ಸೇವಕರಲ್ಲಿ ನಿಷ್ಠೆ, ಸಚ್ಚಾರಿತ್ರ್ಯ, ದಕ್ಷತೆ, ಪ್ರಾಮಾಣಿಕತೆ, ವಿನಯ ಸಮಯಪ್ರಜ್ಞೆ ತರಲು ಸರ್ಕಾರ ನಾಗರಿಕ ನೀತಿ ಸಂಹಿತೆ ಜಾರಿಗೊಳಿಸಿದೆ. ಉದಾ:

ಅಖಿಲ ಭಾರತ ಸೇವೆಗಳ ನಡತೆ ನಿಯಮಗಳು – 1968.

ಕೇಂದ್ರೀಯ ಸೇವೆಗಳ ನಿಯಮಗಳು – 1964.

ರೈಲ್ವೆ ಸೇವೆಗಳ ನಡತೆ ನಿಯಮ – 1966.

ಈ ಆಡಳಿತದ ನೀತಿ ನಿಯಮಗಳ ಪ್ರಾಮುಖ್ಯತೆ ಎಂದರೆ,

1) ನಾಗರಿಕ ಸೇವಾ ನೌಕರರ ನಿರಂಕುಶ ಚಟುವಟಿಕೆಯನ್ನು ತಡೆಗಟ್ಟುತ್ತದೆ.

2) ಆಡಳಿತಾತ್ಮಕ ಹೊಣೆಗಾರಿಕಾ ಪ್ರಜ್ಞೆ,

3) ಪೌರರು ಮತ್ತು ಸೇವಾ ವರ್ಗದವರ ನಡುವೆ ಉತ್ತಮ ಬಾಂಧವ್ಯ.

4) ಸೇವಾ ವರ್ಗದವರಲ್ಲಿ ಉನ್ನತ ಮಟ್ಟದ ನಡತೆ.

**ಸಾರ್ವಜನಿಕ ಆಡಳಿತದಲ್ಲಿ ನೈತಿಕತೆಯ ನಿರ್ಧಾರಕ ಅಂಶಗಳು ಈ ಕೆಳಗಿನಂತಿವೆ:**

1) ಉನ್ನತ ಆಡಳಿತಗಾರರು ಹಾಕಿಕೊಟ್ಟ ಪೂರ್ವ ನಿದರ್ಶನಗಳು ಮತ್ತು ರೂಪಗಳು

2) ಆಡಳಿತ ವ್ಯವಸ್ಥೆಯಲ್ಲಿನ ಸಂಪರ್ಕ ಮಾದರಿಗಳು

3) ನಾಗರಿಕ ಸೇವಾ ನೌಕರರ ಮೇಲಿನ ಶಿಸ್ತು ಕ್ರಮದ ಪರಿಣಾಮಗಳು

4) ಸಮಾಜದ ಮೌಲ್ಯಗಳು ಮತ್ತು ನೈತಿಕ ಮಟ್ಟ

5) ರಾಜಕೀಯ ಮುಖಂಡರು ಆಡಳಿತಗಾರರ ಬಗ್ಗೆ ಹೊಂದಿರುವ ಧೋರಣೆ

6) ವೇತನ ಮತ್ತು ಸ್ಥಿತಿಗಳು

7) ಸಂಘಟನೆಯ ಆಂತರಿಕ ಸಂಬಂಧಗಳ ಕ್ರಿಯಾಶೀಲತೆ

8) ವೃತ್ತಿ ಪ್ರಜ್ಞೆಯ ಮುಕ್ತಾಮುಕ್ತತೆ

9) ಆಡಳಿತಗಾರರ ಬಗ್ಗೆ ಸಾರ್ವಜನಿಕರ ಧೋರಣೆ

**ಸಾರ್ವಜನಿಕ ಆಡಳಿತದಲ್ಲಿ ಎದುರಾಗುತ್ತಿರುವ ಹಲವು ನೈತಿಕ ಸಮಸ್ಯೆಗಳು ಈ ಕೆಳಗಿನಂತಿವೆ,**

ಸಾರ್ವಜನಿಕ ಆಡಳಿತವು ಹೆಚ್ಚು ದಕ್ಷವಾಗಿರಬೇಕಾಗಿದ್ದು ಅತ್ಯಂತ ಪ್ರಾಮುಖ್ಯವಾಗಿದೆ. ಆದರೆ ದಕ್ಷತೆಗಿಂತಲೂ ಅದು ನೈತಿಕವಾಗಿರಬೇಕಾಗಿದ್ದು ಇನ್ನೂ ಹೆಚ್ಚಿನ ಮಹತ್ವವಾಗಿದೆ. ಹೀಗೆ ದಕ್ಷತೆಯಿಂದ ಕಾರ್ಯನಿರ್ವಹಿಸುವಲ್ಲಿ ಆಡಳಿತಗಾರರು ತಮ್ಮದೇ ಆದ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಅವುಗಳನ್ನೊಮ್ಮೆ ನೋಡುವುದಾದರೆ,

1) ಹೊಣೆಗಾರಿಕೆಯ ಕೊರತೆ (ವೈಯಕ್ತಿಕ ಹಾಗೂ ಸಾಮೂಹಿಕ)

2) ಅಸಮ್ಮತಿಯ ವಿತರಣೆ ಮತ್ತು ಅಧಿಕಾರದ ದುರುಪಯೋಗ

3) ರಾಜಕೀಯ ಹಸ್ತಕ್ಷೇಪ (ಇದು "ರಾಜಕೀಯ ತಾಟಸ್ಥ್ಯ" ಮನೋಭಾವಕ್ಕೆ ಪೆಟ್ಟು ನೀಡುತ್ತಿದೆ)

4) ಸ್ವಜನ ಪಕ್ಷಪಾತ ಮತ್ತು ಸಮಗ್ರತೆಯ ಕೊರತೆ

5) ಭ್ರಷ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮದ ಕೊರತೆ

6) ಪರಿಣಾಮಕಾರಿ ನೀತಿ ಸಂಹಿತೆಯ ಕೊರತೆ

7) ಪಾರದರ್ಶಕತೆಯ ಕೊರತೆ

8) ಸಮಾನತೆ ರಹಿತವಾದ ಸಾಮಾಜಿಕ ವ್ಯವಸ್ಥೆ, ಲಿಂಗ ಶೋಷಣೆಗಳು

9) ಉತ್ತಮ ಗುಣಮಟ್ಟದ ಶಿಕ್ಷಿತರ ಅಭಾವ, ನುರಿತ ಕುಶಲಿಗಳು ಮತ್ತು ದುಡಿಮೆಗಾರರ ಸಂಖ್ಯೆ ಕಡಿಮೆ

10) ಜನರಲ್ಲಿ ಉತ್ತಮ ಕಾನೂನಿನ ಅರಿವಿನ ಕೊರತೆ

11) ಶಾಸಕಾಂಗ ಮತ್ತು ಕಾರ್ಯಾಂಗಗಳಲ್ಲಿ ಪಾಲ್ಗೊಳ್ಳುವುದರಲ್ಲಿ ಉತ್ತಮವಾದ ಸಂಸದೀಯ ನಾಯಕತ್ವದ ಕೊರತೆಯಿಂದ

12) ಅಧಕ್ಷರು ಮತ್ತು ದೇಶಾಭಿವೃದ್ಧಿ ಚಿಂತನೆಯಿಲ್ಲದವರು

13) ಧಾರ್ಮಿಕ ನಂಬಿಕೆಗಳು ಅಭಿವೃದ್ಧಿಗೆ ಪ್ರೋತ್ಸಾಹದಾಯಕವಾಗಿಲ್ಲ

14) ಉದಾಸೀನತೆ ಮತ್ತು ಬಾಹ್ಯ ಒತ್ತಡ

15) ಲಂಚಗುಳಿತನ ಮತ್ತು ಭ್ರಷ್ಟಾಚಾರ

ಹೀಗೆ ನೈತಿಕತೆ ವಿಚಾರದಲ್ಲಿ ಹಲವಾರು ಸಮಸ್ಯೆಗಳು ನಮ್ಮ ಆಡಳಿತದ ಮುಂದಿದೆ.

ಕೇಂದ್ರೀಯ ಜಾಗೃತಿ ಆಯೋಗವು ಭ್ರಷ್ಟಾಚಾರದ 27 ಬಗೆಗಳನ್ನು ಗುರುತಿಸಿದೆ. ಕ್ರಿ.ಪೂ. 400ರಲ್ಲೇ ಕೌಟಿಲ್ಯನು 40 ಬಗೆಯ ಭ್ರಷ್ಟಾಚಾರ ಗುರುತಿಸಿದ್ದ. "ನಾಲಿಗೆಯ ತುದಿಯಲ್ಲಿದ್ದ ಜೇನುಹನಿಯನ್ನು ನುಂಗದೆ ಬಿಡುವುದು ಹೇಗೆ ಸಾಧ್ಯವಿಲ್ಲವೋ ಹಾಗೇಯೇ ಹಣಕಾಸಿನ ವ್ಯವಹಾರದಲ್ಲಿ ತೊಡಗಿದವನು ಹಣವನ್ನು ಬಿಡುವುದಿಲ್ಲ" ಎಂಬುದು ಕೌಟಿಲ್ಯನು ಭ್ರಷ್ಟಾಚಾರದ ಕುರಿತು ಹೇಳಿದ ಮಾತು.

ಆಡಳಿತ ಸುಧಾರಣಾ ಆಯೋಗವು ಈ ಕೆಳಗಿನ ಅಂಶಗಳನ್ನು ಪಟ್ಟಿ ಮಾಡಿದೆ.

1) ತತ್ವರಹಿತ ರಾಜಕಾರಣಿಗಳು ಮತ್ತು ಅಧಿಕಾರಿಗಳ ನಡುವೆ ಅಪವಿತ್ರ ಮೈತ್ರಿಯಿಂದಾಗಿ ಆಡಳಿತ ಗುಣಮಟ್ಟ ಕಡಿಮೆಯಾಗುತ್ತಿದೆ.

2) ಆಗಾಗ್ಗೆ ಅಧಿಕಾರಿಗಳ ವರ್ಗಾವಣೆ ಮಾಡುವುದರಿಂದ ಹೊಣೆಗಾರಿಕೆ ಕುಸಿಯುತ್ತಿದೆ

3) ಅನಾವಶ್ಯಕ ಸಂಕೀರ್ಣ ಪ್ರಕ್ರಿಯೆಗಳು

4) ಜನರ ಸಮಸ್ಯೆ ಬಗೆಹರಿಸುವ ಬದ್ದತೆಯ ಕೊರತೆ

5) ಮೇಲಾಧಿಕಾರಿಗಳ ಕಳಪೆ ತನಿಖಾ ಕ್ರಮಗಳು

**ಆಡಳಿತದಲ್ಲಿ ನೈತಿಕತೆ ಸುಧಾರಣೆಗೆ ಭಾರತದಲ್ಲಿ ಬಂದಂತಹ ಸಮಿತಿಗಳು:**

1) ಬಂಗಾಳ ಆಡಳಿತಾತ್ಮಕ ವಿಚಾರಣಾ ಸಮಿತಿ–1944–45

2) ಎ.ಡಿ.ಗೊರವಾಲಾ ಸಾರ್ವಜನಿಕ ಆಡಳಿತದ ಮೇಲಿನ ವರದಿ–1951

3) ರೈಲ್ವೆ ಭ್ರಷ್ಟಾಚಾರ ವಿಚಾರಣಾ ಸಮಿತಿ–1953–55

4) ಸಂತಾನಂ ಭ್ರಷ್ಟಾಚಾರ ವಿರೋಧ ಸಮಿತಿ–1962–64

**ಸರ್ಕಾರಿ ಮತ್ತು ಖಾಸಗಿ ಆಡಳಿತದಲ್ಲಿ ನೈತಿಕತೆ ಕುರಿತಾದ ಮಾನಸಿಕ ಹೋಯ್ದಾಟಗಳು (ಮೌಲ್ಯಗಳ ಸಂಘರ್ಷ):**

ಧಾರ್ಮಿಕ ಸಾಂಸ್ಕೃತಿಕ ಆಚರಣೆಗಳಲ್ಲಿ ವ್ಯತ್ಯಾಸಗಳು ಇರುವುದರಿಂದ ಮೌಲ್ಯಗಳಲ್ಲಿ ಸಂಘರ್ಷ ಏರ್ಪಡುತ್ತದೆ. ಭಿನ್ನವಾದ ಆಚರಣೆಗಳನ್ನು ಅನುಸರಿಸುವಾಗ ವ್ಯಕ್ತಿಗಳು ಸಂಘ ಸಂಸ್ಥೆಗಳು ಆಳವಾದ ನಂಬಿಕೆಗಳನ್ನು ಹೊಂದಿರುತ್ತಾರೆ. ಆಗ ಬೇರೆಯವರ ನಂಬಿಕೆಗಳನ್ನು ಒಪ್ಪದೆ ಇದ್ದಾಗ ಮೌಲ್ಯಗಳ ಸಂಘರ್ಷ ಉಂಟಾಗುತ್ತದೆ.

ಸಾರ್ವಜನಿಕ ಜೀವನದಲ್ಲಿ ನೈತಿಕತೆಯು ಹಲವು ಆಯಾಮಗಳನ್ನು ಹೊಂದಿದ್ದು ಒಂದು ಕಡೆ ಹೆಚ್ಚಿನ ನೈತಿಕ ಮೌಲ್ಯಗಳನ್ನು ಅಭಿವ್ಯಕ್ತಿಪಡಿಸುವಂತೆ ಮಾಡಿದರೆ, ಮತ್ತೊಂದು ಕಡೆ ನಿಶ್ಚಿತ ಕ್ರಿಯೆಗಳು ಸಾಗುವಂತೆ ಮಾಡುವ ಜವಾಬ್ದಾರಿ ಇದೆ. ನೈತಿಕ ವರ್ತನೆಯ ಚೌಕಟ್ಟಿನ ಅಡಿಯಲ್ಲಿ ಸಾರ್ವಜನಿಕ ಅಧಿಕಾರಿ ಕಾರ್ಯನಿರ್ವಹಿಸಬೇಕಿದೆ.

**ನೈತಿಕ ಸಂಧಿಗ್ದತೆ:**

ಒಂದು ಸಮಸ್ಯೆಗೆ ಎರಡಕ್ಕಿಂತ ಹೆಚ್ಚು ಸಾಧ್ಯತೆಗಳನ್ನು ಹೊಂದುವ ಪರಿಸ್ಥಿತಿ ಮತ್ತು ಯಾವ ತತ್ವ ಆಯ್ಕೆಮಾಡಬೇಕೆಂಬ ಇಕ್ಕಟ್ಟು ಸಂಧಿಗ್ದತೆಗೆ ತಳ್ಳುತ್ತದೆ. ಈ ಹಂತದಲ್ಲಿ ಮುಖ್ಯವಾದ ವಿಷಯದ, ಪರಿಸ್ಥಿತಿಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕೆಂಬ ಗೊಂದಲ ಸೃಷ್ಟಿಯಾಗುತ್ತದೆ. ಇದೇ ನೈತಿಕ ಸಂದಿಗ್ದತೆ. ಇಲ್ಲಿ ನೈತಿಕ ತತ್ವಗಳ ಮಧ್ಯ ಹೊಂದಾಣಿಕೆ ಮಾಡಿಕೊಂಡು ನಿರ್ಣಯವನ್ನು ತೆಗೆದುಕೊಂಡರೂ ಅದು ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸುವುದಕ್ಕೆ ಆಗಲಾರದ ಸ್ಥಿತಿ ಉಂಟಾಗುತ್ತದೆ.

**ನೈತಿಕ ಸಂದಿಗ್ದತೆಯ ಪ್ರಕಾರಗಳು:**

ಆಸಕ್ತಿಗಳ ನಡುವಿನ ಸಂಘರ್ಷದಿಂದಾಗಿ ಒಬ್ಬ ಸಾರ್ವಜನಿಕ ಅಧಿಕಾರಿ ಅಥವಾ ಖಾಸಗಿ ವಲಯದ ನಾಯಕತ್ವ ನೈತಿಕ ಸಂದಿಗ್ದತೆಗೆ ಒಳಪಡುತ್ತದೆ. ಇದರ ಪ್ರಕಾರಗಳೆಂದರೆ,

1) ವೈಯಕ್ತಿಕ ಬೆಲೆ ತೆಗೆದುಕೊಳ್ಳುವ ನೈತಿಕ ಸಂದಿಗ್ದತೆ

2) ಒಂದುಗೂಡಿದ ನೈತಿಕ ಸಂದಿಗ್ದತೆ

3) Right v/s Right Ethical Dilemma

**ಉದಾಹರಣೆ:**

1) ಒತ್ತಡ ಗುಂಪುಗಳ ಉದ್ದೇಶಗಳ ಮೇಲಿನ ಕನಿಕರದಿಂದ ಸಾರ್ವಜನಿಕ ಅಧಿಕಾರಿಯು ಸಕ್ರಿಯವಾಗಿ ಒತ್ತಡ ಗುಂಪುಗಳ ಕಾರ್ಯದಲ್ಲಿ ತೊಡಗುವುದು.

2) ರಾಜಕೀಯ ಪಕ್ಷಗಳ ಚಟುವಟಿಕೆಯಲ್ಲಿ ಭಾಗವಹಿಸುವುದು

3) ಭ್ರಷ್ಟಾಚಾರ ಪಕ್ಷಪರತೆ ಕಂಡರೂ ಸುಮ್ಮನೆ ಕೂರುವ ಪರಿಸ್ಥಿತಿ

4) ಆಡಳಿತ ಮತ್ತು ಸರ್ಕಾರದಲ್ಲಿ ಹೊಸ ಬೆಳವಣಿಗೆಗಳು (ಒಲ್ಲದ ಮನಸ್ಸಿನಿಂದ ಉದ್ಯೋಗ ಕಡಿತ)

5) ಭೌತಿಕ ವಸ್ತು ಮತ್ತು ಸಂಪನ್ಮೂಲದ ಕಠಿಣತೆ

6) ನಾಗರಿಕರ ಕಡೆಗೆ ಹೆಚ್ಚು ಗಮನ ಕೊಡುವ ದೃಷ್ಟಿಕೋನ

**ನೈತಿಕ ಸಂದಿಗ್ದತೆ ಪರಿಹರಿಸುವ ಪ್ರಕ್ರಿಯೆ:**

ನೈತಿಕತೆಯ ಸಂಧಿಗ್ದತೆಯು ತುಂಬಾ ಸಂಕೀರ್ಣವಾದ ಸಮಸ್ಯೆಯಾಗಿದೆ. ಕೆಲವು ಸಂದರ್ಭದಲ್ಲಿ ಆಡಳಿತ ಸರ್ಕಾರಗಳೇ ಇಕ್ಕಟ್ಟಿನಲ್ಲಿ ಸಿಲುಕಿ ನಲುಗಿಸುವ ಇದನ್ನು ಕೆಳಗಿನ ಅಂಶಗಳ ಮೂಲಕ ತರ್ಕವಾಗಿ ಪರಿಹರಿಸಬಹುದು.

**1) ಹೊಣೆಗಾರಿಕೆ (Accountability):** ಆಡಳಿತವು ಯಾವಾಗಲೂ ರಾಜಕೀಯ ಅಧೀನಕ್ಕೆ ಒಳಪಟ್ಟಿರುತ್ತದೆ. ಮಂತ್ರಿಯು ಶಾಸಕಾಂಗಕ್ಕೆ ಜವಾಬ್ದಾರ. ಇಲ್ಲಿ ಸ್ವಂತ ವೈಯಕ್ತಿಕ ಆದ್ಯತೆಗಳನ್ನು ಬದಿಗೊತ್ತಿ ಜವಾಬ್ದಾರಿಯುಕ್ತವಾಗಿ ಕರ್ತವ್ಯ ನಿರ್ವಹಿಸಿ ಹೊಣೆಗಾರಿಕೆಯನ್ನು ಖಚಿತಪಡಿಸಬೇಕು.

**2) ನ್ಯಾಯಬದ್ದತೆ:** ನಿರ್ಧಾರ ತೆಗೆದುಕೊಳ್ಳುವಲ್ಲಿ ನ್ಯಾಯಬದ್ದತೆಯನ್ನು ಗೌರವಿಸಿ ಪ್ರಧಾನವಾಗಿ ಅನುಸರಿಸುವುದು ಅವಶ್ಯಕವಾಗಿದೆ. ನೈತಿಕ ಸಂದಿಗ್ದತೆ ಸುಧಾರಣೆಯಾಗಬೇಕಾದರೆ ಮೊದಲಿಗೆ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು.

**3) ಸಮಗ್ರತೆ:** ಇಲ್ಲಿ ಕಾನೂನಿನ ಪ್ರಕಾರ ಮಂತ್ರಿಗಳ, ಮೇಲಾಧಿಕಾರಿಗಳ ಮಾರ್ಗದರ್ಶನದ ಪ್ರಕಾರವೇ ನಿರ್ಧಾರ ತೆಗೆದುಕೊಂಡು ಆಡಳಿತ ಸಮಗ್ರತೆ ಮೆರೆಯಬೇಕು.

**4) ಸಂವೇಧನಾಶೀಲತೆ:** ಜನರ ಬೇಕು ಬೇಡಗಳಿಗೆ ತಕ್ಷಣ ಸ್ಪಂದಿಸುವ ಗುಣದಿಂದ ಆಡಳಿತದಲ್ಲಿ ಸಂದಿಗ್ದತೆಯನ್ನು ದೂರು ಮಾಡುತ್ತದೆ.

**ನೈತಿಕ ಮಾರ್ಗದರ್ಶನದ ಮೌಲ್ಯಗಳಾಗಿ ಕಾನೂನು, ನಿಯಮಗಳು, ನಿಬಂಧನೆಗಳು ಮತ್ತು ಆತ್ಮಸಾಕ್ಷಿ:**

ಮಾನವನ ನೈತಿಕತೆಗೆ 2 ಪ್ರಮುಖವಾದ ಅಂಶಗಳು ಮಾರ್ಗದರ್ಶನ ಮಾಡುತ್ತದೆ. ಕಾನೂನು, ನಿಯಮಗಳು, ನಿಬಂದನೆಗಳು ಬಾಹ್ಯವಾಗಿ, ನಿಯಂತ್ರಿಸಿದರೆ ಅಥವಾ ಪ್ರಭಾವ ಬೀರಿದರೆ ಆತ್ಮಸಾಕ್ಷಿಯು ಆಂತರಿಕವಾಗಿ ನೈತಿಕತೆಯನ್ನು ನಿಯಂತ್ರಿಸುತ್ತದೆ.

**ಕಾನೂನು:**

ಮಾನವನ ಬಾಹ್ಯ ವರ್ತನೆಗಳನ್ನು ನಿಯಂತ್ರಿಸುವ ನಿಯಮಗಳೇ ಕಾನೂನು ಅಥವಾ ನಿಯಮಗಳ ಕ್ರಮಬದ್ದ ಜೋಡಣೆಯೇ ಕಾನೂನು. ಕಾನೂನುಗಳನ್ನು ಸರ್ಕಾರ ಮತ್ತು ಸಂಸ್ಥೆಗಳ ಮೂಲಕ ಜಾರಿ ಮಾಡಲಾಗುತ್ತದೆ. ಕಾನೂನುಗಳು ಸಾಮಾನ್ಯವಾಗಿ ಒಂದು ವಿಷಯದ ಬಗ್ಗೆ ಸರ್ಕಾರದ ಅಭಿಪ್ರಾಯ ಮತ್ತು ಬಹುಮತದ ಆಧಾರದ ಮೇಲೆ ನಿಂತಿರುತ್ತದೆ. ಕಾನೂನು ಮತ್ತು ನೈತಿಕತೆ ಒಂದೇ ಆಗಿರಬೇಕಿಲ್ಲ.

**ಕಾನೂನಿನ ಪ್ರಮುಖವಾದ ಲಕ್ಷಣಗಳೆಂದರೆ,**

1) ಸ್ಥಿರತೆ

2) ಪರಸ್ಪರ ವಿರೋಧಾತ್ಮಕ ಕಾನೂನುಗಳಿಗೆ ಅವಕಾಶವಿಲ್ಲದಿರುವುದು

3) ಸಾರ್ವತ್ರಿಕತೆ

4) ಬಹುಮತದಿಂದ ಒಪ್ಪಿಗೆಯಾಗಿರುತ್ತದೆ

5) ಇದು ಜಾರಿಗೊಳಿಸಲ್ಪಟ್ಟಿರುತ್ತದೆ

6) ಇದನ್ನು ಮಾರ್ಪಾಡು ಮಾಡಲು ಬರುತ್ತದೆ

ಪ್ರತೀ ಮನುಷ್ಯನಿಗೂ ಹುಟ್ಟುವಾಗಲೇ ಆತನಿಗೆ ಅರಿವಿಲ್ಲದೆ ಹಲವಾರು ರೀತಿಯ ಕಾನೂನು ವ್ಯಾಪ್ತಿಗೆ ಒಳಪಡುತ್ತಾನೆ. ಆತನಿಗೆ ಕಾನೂನಿನ ಆಶ್ರಯದ ಅವಶ್ಯಕತೆ ಇರುತ್ತದೆ. ಏಕೆಂದರೆ ಮನುಷ್ಯ ಸಂಘಜೀವಿ ಸಾಮೂಹಿಕವಾಗಿ ಬಾಳಬೇಕಾದರೆ ಅದಕ್ಕೊಂದು ಚೌಕಟ್ಟು ನಿಯಮಾವಳಿ ಬೇಕೇಬೇಕು. ತತ್ವಜ್ಞಾನಿಯಾದ "ಸೇಂಟ್ ಥಾಮಸ್" ಪ್ರಕಾರ 2 ರೀತಿಯಾದ ಕಾನೂನುಗಳು ಅಸ್ತಿತ್ವದಲ್ಲಿರುತ್ತದೆ.

1) ನೈಸರ್ಗಿಕ ಕಾನೂನು

2) ಸಕಾರಾತ್ಮಕ ಕಾನೂನು

**ನೈಸರ್ಗಿಕ ಕಾನೂನು:**

ಇದು ನೈಸರ್ಗಿಕವಾಗಿ ಕಾಲದೊಂದಿಗೆ ಬೆಳವಣಿಗೆ ಹೊಂದುತ್ತದೆ. ಮಾನವನ ಸ್ವಭಾವವು ಕೂಡ ನೈಸರ್ಗಿಕ ಕಾನೂನಿಗೆ ಆಧಾರವಾಗಿ ಮಾನವನಿಗೆ ಯಾವುದು ಸರಿ / ಯಾವುದು ತಪ್ಪು ಎಂದು ಮಾರ್ಗದರ್ಶನ ನೀಡುತ್ತದೆ. ಆದರೆ ಇದರ ತತ್ವಗಳು ಅನಿಶ್ಚಿತವಾದ್ದರಿಂದ ಜನರು ಅರ್ಥ ಮಾಡಿಕೊಳ್ಳುವಲ್ಲಿ ವಿಫಲವಾಗುತ್ತಾರೆ. ಇದು ಎರಡು ಗುಣಗಳನ್ನು ಹೊಂದಿದೆ. ಅವುಗಳು–

1) ಸಾರ್ವತ್ರಿಕತೆ

2) ಮಾರ್ಪಾಡಾಗುವಿಕೆ

ಇದು ಸಾರ್ವತ್ರಿಕವಾಗಿ ಎಲ್ಲಾ ಮಾನವನಲ್ಲಿಯೂ ಪ್ರಾಥಮಿಕವಾಗಿ ಇರುವುದಾಗಿದೆ. ಎಲ್ಲಾ ಮಾನವರು ಒಂದು ರೀತಿಯಾದ ತರ್ಕ ಹೊಂದಿರುತ್ತಾರೆ.

**ಸಕಾರಾತ್ಮಕ ಕಾನೂನು:**

ಒಂದು ಸಮುದಾಯದ ಗಣ್ಯ ವ್ಯಕ್ತಿಗಳು ಆಯಾ ಸಂದರ್ಭಕ್ಕೆ ತಕ್ಕಂತೆ ನಿರ್ಧರಿಸಿದ ನಿಯಮಾವಳಿಗಳನ್ನು, ಆ ಸಮುದಾಯದ ಜನರು ಕಾನೂನಿನಂತೆ ಅನುಸರಿಸಿಕೊಂಡು ಬಂದರು. ಇವೇ ಮುಂದೆ ಸಕಾರಾತ್ಮಕ ಕಾನೂನಾದವು.

**ನಾಗರಿಕ ಕಾನೂನು:**

ನೈಸರ್ಗಿಕ ಮತ್ತು ಸಕಾರಾತ್ಮಕ ಕಾನೂನುಗಳು ಅನಿಶ್ಚಿತವಾದುದರಿಂದ ನಾಗರಿಕ ಕಾನೂನು ಸೃಷ್ಟಿಯಾಗುತ್ತದೆ. ಇದನ್ನು ಶಾಸಕಾಂಗದ ಸದಸ್ಯರು ಜಾರಿಗೆ ತರುತ್ತಾರೆ. ಇಲ್ಲಿ ಸಾರ್ವಜನಿಕ ಆಡಳಿತದಲ್ಲಿ ನೈತಿಕತೆ ರೂಪಿಸಲು ಇರುವಂತಹ ಕಾನೂನು ಕ್ರಮಗಳೆಂದರೆ,

* ಲೋಕಾಯುಕ್ತ
* ಆರ್.ಟಿ.ಐ
* ನಾಗರೀಕ ಸನ್ನದ್ದುಗಳು
* ನಿಗಾ ಆಯೋಗಗಳು
* ಪಂಚಾಯತ್ ರಾಜ್ ಸಂಸ್ಥೆಗಳು
* ರಕ್ಷಣಾ ಕಾಯ್ದೆ ಮತ್ತು ನಿಯಂತ್ರಣ

**ನೈಸರ್ಗಿಕ ಸಕಾರಾತ್ಮಕ ಮತ್ತು ನಾಗರಿಕ ಕಾನೂನುಗಳು ಪರಿಣಾಮಗಳು:**

ನೈಸರ್ಗಿಕ ಕಾನೂನುಗಳು ಮಾನವನ ವರ್ತನೆಯ ಮೇಲೆ ಎರಡು ರೀತಿಯಲ್ಲಿ ಪರಿಣಾಮ / ಪ್ರಭಾವ ಬೀರುತ್ತದೆ. ಇಲ್ಲಿ ಇದು ಮಾನವನಿಗೆ ಒಳ್ಳೆಯದು, ಕೆಟ್ಟದ್ದು ಎಂದು ಹೇಳುವುದಿಲ್ಲ. ಬದಲಿಗೆ ಒಳ್ಳೆಯದಾಗಿ ವರ್ತಿಸುವಂತೆ ಮತ್ತು ಕೆಟ್ಟದ್ದನ್ನು ತ್ಯಜಿಸುವಂತೆ ಆತನ ಮೇಲೆ ನೈತಿಕ ನಿರ್ಬಂಧ ವಿಧಿಸುತ್ತದೆ. ಧರ್ಮ, ಜಾತಿ, ಲಿಂಗದ ಭೇದವಿಲ್ಲದೆ, ನೈಸರ್ಗಿಕ ಕಾನೂನು ನೈತಿಕ ನಿರ್ಬಂಧವನ್ನು ವಿಧಿಸುತ್ತದೆ. ಎರಡನೆಯದಾಗಿ ಇದು ಕಾನೂನನ್ನು ಪಾಲಿಸದ ವ್ಯಕ್ತಿಗಳಿಗೆ ಶಿಕ್ಷಿಸುವಂತೆ ಮತ್ತು ಪಾಲಿಸುವ ವ್ಯಕ್ತಿಗಳಿಗೆ ಗೌರವಿಸುವಂತೆ ತಿಳಿಸುತ್ತದೆ.

ನೈಸರ್ಗಿಕ ಕಾನೂನು ಸಕಾರಾತ್ಮಕ ಕಾನೂನಿನಂತೆ ಪೂರಕವಾಗಿ ಕರ್ತವ್ಯವನ್ನು ನಿರ್ವಹಿಸುತ್ತದೆ. ಆದರೆ ನಾಗರಿಕ ಕಾನೂನು ಜಾರಿಗೆ ತರಲು ಸರ್ಕಾರ ಪ್ರಯತ್ನಿಸುತ್ತದೆ. ಸರ್ಕಾರವು ತನ್ನ ವಿಶೇಷವಾದ ಅಧಿಕಾರವನ್ನು ಬಳಸಿ ಜನರು ನಾಗರಿಕ ಕಾನೂನು ಪಾಲಿಸುವಂತೆ ನೋಡಿಕೊಳ್ಳುತ್ತದೆ. ಸಮಾಜದಲ್ಲಿ ಆರೋಗ್ಯಕರವಾಗಿ ಬಾಳಲು ಈ ಕಾಯ್ದೆ ಕಾನೂನು ಅವಶ್ಯಕವಾಗಿದೆ.

**ನಿಯಮಗಳು (Rules):**

ಮನುಷ್ಯ ಸಮೂಹವನ್ನು ನಿಯಂತ್ರಿಸಲು, ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಲು ಸೃಷ್ಟಿಸಿಕೊಂಡ ಚೌಕಟ್ಟನ್ನೇ ನಾವು ನಿಯಮಗಳು ಎಂದು ಕರೆಯಬಹುದು.

ನಿಯಮಗಳು ಹಲವಾರು ಲಕ್ಷಣಗಳನ್ನು ಹೊಂದಿವೆ. ಅವುಗಳೆಂದರೆ,

1) ಇವು ಮಾನವನ ಬಾಹ್ಯ ಚಟುವಟಿಕೆಗೆ ಸಂಬಂಧಿಸಿದವು
2) ಆಂತರಿಕ ಭಾವನೆಗಳನ್ನು ನಿಯಂತ್ರಿಸುವುದಿಲ್ಲ
3) ಭಾವನೆಗಳು ಕ್ರಿಯೆಗೆ ಇಳಿದಾಗ ಮಾತ್ರ ನಿಯಂತ್ರಣವಾಗುತ್ತವೆ
4) ನಿಯಮಗಳು ಸಾರ್ವತ್ರಿಕವಾದವು
5) ಸರ್ಕಾರದ ನಿಯಮಗಳು ಖಚಿತವೂ, ಸ್ಪಷ್ಟವೂ, ನಿರ್ದಿಷ್ಟವೂ ಆಗಿರುತ್ತದೆ
6) ನಿಯಮಗಳು ಲಿಖಿತ ಮತ್ತು ಅಲಿಖಿತ ರೂಪದಲ್ಲಿರುತ್ತದೆ
7) ಸರ್ಕಾರ ನಿಯಮ ರೂಪಿಸುವಾಗ ನೈತಿಕತೆಯನ್ನು ಪರಿಶೀಲಿಸಲಾಗುತ್ತದೆ.

ನಿಯಮಗಳು ಪರಿಸ್ಥಿತಿ ಮತ್ತು ಸಂದರ್ಭಕ್ಕೆ ಹೊಂದಿಕೊಳ್ಳುವಂತಿದ್ದು ಇವುಗಳಲ್ಲಿ 2 ವಿಧಗಳನ್ನು ಕಾಣಬಹುದು.

1) ನೈತಿಕತೆಯ ನಿಯಮ (Code of Ethic)

2) ವರ್ತನಾ ನಿಯಮ (Code of Conduct)

**1) ನೈತಿಕತೆಯ ನಿಯಮಗಳು:** ಇದೊಂದು ವಿಶಾಲ ಪರಿಕಲ್ಪನೆಯಾಗಿದ್ದು, ಒಂದು ಸಂಸ್ಥೆ ಮಾರ್ಗದರ್ಶನ ತತ್ವಗಳು ಹಾಗೂ ದೃಷ್ಟಿಕೋನವನ್ನು ಸೃಷ್ಟಿಸುತ್ತವೆ. ಉದಾಹರಣೆಗೆ ICC-No betting. No match fixing ಪತ್ರಿಕೋದ್ಯಮ–ಸತ್ಯವನ್ನೇ ತಿಳಿಸಬೇಕು. ವಿಷಯವನ್ನು ಬದಲಿಸಬಾರದು. ಆರೋಗ್ಯ ಸಂಸ್ಥೆ–ಜನರ ಆರೋಗ್ಯ ಉತ್ತಮಪಡಿಸುವುದು.

**2) ವರ್ತನೆ ನಿಯಮಗಳು (Code of Conduct):** ಇವು ಉದ್ಯೋಗಿಗಳ ವರ್ತನೆಯಲ್ಲಿ ಸರ್ಕಾರವು ನಿರೀಕ್ಷಿಸುವ ಅಂಶಗಳನ್ನು ಒಳಗೊಂಡಿರುತ್ತದೆ. ಇವು ವೃತ್ತಿ ಮತ್ತು ಖಾಸಗಿ ಜೀವನಗಳಿಗೂ ಅನ್ವಯಿಸುತ್ತದೆ. ಇದರ ಉಲ್ಲಂಘನೆ ಈ ಕೆಳಗಿನ ಅಂಶಗಳಿಗೆ ದಾರಿ ಮಾಡಿದೆ.

1) ಎಚ್ಚರಿಕೆ

2) ಪದೋನ್ನತಿಯ ತಡೆಹಿಡಿಕೆ

3) ನಷ್ಟ ಮರುಪಡೆಯುವಿಕೆ

4) ಶ್ರೇಣಿ ಇಳಿಕೆ

5) ಕಡ್ಡಾಯ ನಿವೃತ್ತಿ

**ನಿಬಂಧನೆಗಳು (Regulation):**

"ಅಧಿಕೃತ ನಿಯಮಗಳೇ ನಿಬಂಧನೆಗಳು". ಇದು ವ್ಯಕ್ತಿಯ ವರ್ತನೆಯನ್ನು ನಿಯಂತ್ರಿಸುವ ಷರತ್ತುಬದ್ಧ ತತ್ವವಾಗಿದೆ. ಇವುಗಳನ್ನೂ ಕೂಡ ಸರ್ಕಾರವೇ ರೂಪಿಸಿ ಜಾರಿಗೆ ತಂದು ನಿಯಂತ್ರಿಸುತ್ತದೆ.

**ಲಕ್ಷಣಗಳು:**

1) ಇವುಗಳು ಕಾನೂನಿನ ಬಲವನ್ನು ಹೊಂದಿದೆ

2) ಕಾನೂನನ್ನು ಸ್ಪಷ್ಟೀಕರಣಗೊಳಿಸುತ್ತದೆ

3) ವ್ಯಕ್ತಿಯ ವೈಯಕ್ತಿಕ ಹಿತದ ಕಡೆಗೆ ಗಮನ ಹರಿಸುತ್ತದೆ

4) ಇವುಗಳನ್ನು ಖಾಸಗಿ ಸಂಸ್ಥೆ, ಕುಟುಂಬ ಕೂಡ ರೂಪಿಸಬಹುದು

**ಪ್ರಾಮುಖ್ಯತೆ:**

1) ಇವುಗಳನ್ನು ವ್ಯಕ್ತಿಯ ಬಾಹ್ಯ ವರ್ತನೆಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ (ಉದಾ: ಗ್ರಂಥಾಲಯಗಳಲ್ಲಿ ಯಾರೂ ಮಾತನಾಡಬಾರದೆಂಬ ನಿಬಂಧನೆ)

2) ವ್ಯಕ್ತಿಯು ತಪ್ಪಾಗಿ ನಡೆಯದಂತೆ ಅಥವಾ ವರ್ತಿಸದಂತೆ ಸದಾ ಕಾಲ ಎಚ್ಚರಿಸುತ್ತಿರುತ್ತದೆ

3) ನಿಬಂಧನೆಗಳಿಗೆ ಗೌರವ ಕೊಡುವ ವ್ಯಕ್ತಿಗಳಿಗೆ ಸಾಮಾಜಿಕ ಬೆಲೆಯಿರುತ್ತದೆ

**ಆತ್ಮಸಾಕ್ಷಿ (Conscience):**

ನಿಮ್ಮನ್ನು ಯಾರೋ ಗಮನಿಸುತ್ತಿರುವರು ಎಂದು ಎಚ್ಚರಿಸುವ ಒಳದನಿಯೇ "ಆತ್ಮಸಾಕ್ಷಿ".

ಆತ್ಮಸಾಕ್ಷಿ ಎಂದರೆ, ಒಳಗಡೆಯಿಂದ ನಮ್ಮನ್ನು ಯಾರೋ ಎಚ್ಚರಿಸಿದಂತಾಗುವ ಧ್ವನಿ ಮತ್ತು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಯಲು ಸೂಚಿಸುವ ನಿರ್ದೇಶಿಸುವ ಮೌನಿ ಗುರು ಎನ್ನಬಹುದು.

ಆತ್ಮಸಾಕ್ಷಿ ಎಂಬುದು ನಮ್ಮನ್ನು ಸದಾ ಎಚ್ಚರಿಸುತ್ತಿರುತ್ತದೆ. ಅಂದರೆ ನಾವು ನಮ್ಮ ಜೀವನದ ಯಾವುದೋ ಹಂತದಲ್ಲಿ ಯಾವುದೇ ಕೆಲಸಗಳನ್ನು ಮಾಡುವಾಗ ಯಾವುದು ಸರಿ? ಯಾವುದು ತಪ್ಪು? ಎಂದು ನಿಖರವಾಗಿ ತಿಳಿಸುತ್ತದೆ. ಸರಿಯಾದ ಆಯ್ಕೆ ಯಾವುದೆಂದು ಗುರುತಿಸಲು ಪ್ರಯತ್ನಿಸುತ್ತದೆ.

ನಾವು ಮಾಡುವ ಕೆಲಸ ಕಾರ್ಯಗಳಿಗೆ ನಮ್ಮ ಆತ್ಮಸಾಕ್ಷಿಯೇ ನಿಜವಾದ ಕಾವಲುಗಾರನಿದ್ದಂತೆ. ಅಂದರೆ ನಮ್ಮ ಕೆಲಸದ ಫಲಿತಾಂಶವನ್ನು ಆತ್ಮಸಾಕ್ಷಿ ತಕ್ಷಣವೇ ಪ್ರಕಟಿಸಿರುತ್ತೇ ಎನ್ನಬಹುದು. ಸಮಾಜದಲ್ಲಿ ಯಾವುದೇ ಕೆಲಸ ಮಾಡುವಾಗ ಒಳ್ಳೆಯ ಕೆಲಸವಿದ್ದರೆ ನಮ್ಮನ್ನು ಕೆಲಸ ಮಾಡುವಂತೆ ಪ್ರೇರೇಪಿಸುತ್ತದೆ ಮತ್ತು ಕೆಟ್ಟ ಕೆಲಸವಿದ್ದರೆ ಅದರಿಂದ ದೂರ ಸರಿಯುವಂತೆ–ಮಾರ್ಗದರ್ಶನ ಮಾಡುತ್ತೆ. ಆದ್ದರಿಂದ ಆತ್ಮಸಾಕ್ಷಿಯೇ ನಮ್ಮ ನಿಜವಾದ ತೀರ್ಪುಗಾರ ಎನ್ನಬಹುದು.

**ಲಕ್ಷಣಗಳು:**

1) ಇದು ವ್ಯಕ್ತಿಯ ನೈತಿಕತೆ ನಿರ್ಧರಿಸುವ ಮತ್ತು ನಿರ್ದೇಶಿಸುವ ಆಂತರಿಕ ನಿಯಂತ್ರಣವಾಗಿದೆ

2) ವಿಷಯಗಳ ನಿರ್ಧಾರ ಪ್ರಕ್ರಿಯೆಯಲ್ಲಿ ಸರಿ ತಪ್ಪುಗಳ ವಿಮರ್ಶೆಯಲ್ಲಿ ಇದು ಸಹಾಯಕ

3) ಪ್ರಜ್ಞಾಪೂರ್ವಕವಾಗಿ ವರ್ತಿಸಿ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಇದು ಸಹಾಯಕ

4) ಕಾನೂನು–ಬಾಹ್ಯ ನಿಯಂತ್ರಕವಾದರೆ, ಇದು ಆಂತರಿಕ ನಿಯಂತ್ರಕ

5) ವ್ಯಕ್ತಿಯ ತಪ್ಪಿಗೆ ಪಶ್ಚಾತ್ತಾಪದ ಶಿಕ್ಷೆ ನೀಡುತ್ತದೆ

6) ತಪ್ಪಿನಿಂದ ಸರಿಯೆಡೆಗೆ ಸಾಗಲು ಆತ್ಮಸಾಕ್ಷಿಯ ಧ್ವನಿಯು ಸಹಾಯಕವಾಗಿದೆ

7) ನೈತಿಕ ಘರ್ಷಣೆಯಲ್ಲಿ ವಿವೇಕಯುತ ತೀರ್ಮಾನಕ್ಕೆ ಸಹಕಾರಿ

8) ಸರಿ ತಪ್ಪುಗಳ ನಿರ್ಧಾರದಲ್ಲಿ "ನೈತಿಕ ಧೈರ್ಯ" ತೆಗೆದುಕೊಳ್ಳಲು ಇದು ಸಹಾಯಕ

9) ಆತ್ಮಸಾಕ್ಷಿ ಬಿಕ್ಕಟ್ಟಿಗೆ ಇದರ ವಿರುದ್ದವಾಗಿ ಮಾಡಿದ ಕೆಲಸವು ಕಾರಣವಾಗುತ್ತದೆ

10) ಆತ್ಮಸಾಕ್ಷಿಯು ಒಂದು ಪ್ರಸಿದ್ದ ಖಾತೆಗಳ ಪುಸ್ತಕ. ಇದರಲ್ಲಿ ನಾವು ಮಾಡಿದ ತಪ್ಪುಗಳೆಲ್ಲವೂ ಸಂಗ್ರಹವಾಗಿರುತ್ತದೆ. ಈ ಆತ್ಮಸಾಕ್ಷಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

11) ಆತ್ಮಸಾಕ್ಷಿಯು ಸತ್ಯದ ಒಂದು ಪ್ರಕಾರವಾಗಿದೆ

12) ಕೆಲವು ಒತ್ತಡಗಳು ಆತ್ಮಸಾಕ್ಷಿಗೆ ಮೀರಿ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಮಾಡುತ್ತದೆ. ಆದರೆ ಆಂತರಿಕ ಧ್ವನಿಗೆ ಲಕ್ಷ್ಯಕೊಡಲು ಸಾಮಾಜಿಕ ಪ್ರವೃತ್ತಿ ಮತ್ತು ಸಮ ವಯಸ್ಕ ಒತ್ತಡಗಳನ್ನು ಅಪೇಕ್ಷಿಸಬಹುದು.

ಒಟ್ಟಾರೆಯಾಗಿ ಆತ್ಮಸಾಕ್ಷಿಯು ಆಂತರಿಕ ಧ್ವನಿಯಾಗಿದ್ದು ನೈತಿಕತೆ ನಿರ್ಧರಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಸತ್ಯ ಧರ್ಮಗಳಿಗೆ ಮತ್ತು ಸದ್ಗುಣಗಳಿಗೆ ಅಂಟಿಕೊಳ್ಳುವ ಮೂಲಕ ಆತ್ಮಸಾಕ್ಷಿಯನ್ನು ಪ್ರಕಾಶಮಾನವಾಗಿ ಮತ್ತು ತೀಕ್ಷ್ಣವಾಗಿ ಇಟ್ಟುಕೊಳ್ಳಬಹುದು.

# ಅಧ್ಯಾಯ – 3

# ಉತ್ತರದಾಯಿತ್ವ (ಹೊಣೆಗಾರಿಕೆ) ಮತ್ತು ನೈತಿಕ ಆಡಳಿತ

## (Accountability and Ethical Governance)

ಹೊಣೆಗಾರಿಕೆಯು ಮತ್ತು ನೈತಿಕತೆಯು ಸಾರ್ವಜನಿಕ ಆಡಳಿತದ ಪ್ರಮುಖವಾದ ಅಂಶಗಳಾಗಿವೆ. ಈ ಎರಡು ಅಂಶಗಳು ಆಡಳಿತದಲ್ಲಿ ನಿಕಟವಾಗಿ, ಸಂಬಂಧಗಳನ್ನು ಹೊಂದಿವೆ. ನೈತಿಕತೆಗೆ ಮಹತ್ವ ಇದ್ದಾಗ ಮಾತ್ರ ಹೊಣೆಗಾರಿಕೆಯು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಸಂವಿಧಾನಾತ್ಮಕ, ಶಾಸನಾತ್ಮಕ, ಆಡಳಿತಾತ್ಮಕ, ನ್ಯಾಯಿಕ, ನಿಯಮಗಳು ಮತ್ತು ಪೂರ್ವನಿದರ್ಶನಗಳ ಅನುಸಾರ ಕಾರ್ಯನಿರ್ವಹಿಸುವುದೇ ಹೊಣೆಗಾರಿಕೆಯಾಗಿದೆ. ಇದು ಬಹು ಉದ್ದೇಶಿತ ಹಾಗೂ ಕಾರ್ಯಾತ್ಮಕವಾದದ್ದಾಗಿದೆ. ವಿಶಾಲಾರ್ಥದಲ್ಲಿ ಇದು ಯಾವುದೇ ನೌಕರನು ತಾನು ಮಾಡುವ ಕೆಲಸಕ್ಕೆ ಜವಾಬ್ದಾರನಾಗಿರುವುದು.

**ಸ್ವರೂಪ:** ಇದು ವಿಶಾಲವಾದ ಸ್ವರೂಪವನ್ನು ಹೊಂದಿದ್ದು, ಇಂದಿಗೂ ಕೂಡ ಹಣಕಾಸಿನ ಆಡಳಿತದಲ್ಲಿ ಹೊಣೆಗಾರಿಕೆಯು ಅತೀ ಮುಖ್ಯವಾದ ಅಂಶವಾಗಿದೆ. ವಿಶ್ವಬ್ಯಾಂಕ್ ಆಡಳಿತಕ್ಕೆ ಸಂಬಂಧಿಸಿದ ಹೊಣೆಗಾರಿಕೆಯನ್ನು "ಸೂಕ್ಷ್ಮ ಮತ್ತು ಸಮಗ್ರ" ಹೊಣೆಗಾರಿಕೆ ಎಂದು ಎರಡು ಪ್ರಕಾರದ ಹೊಣೆಗಾರಿಕೆಯಾಗಿ ಗುರುತಿಸಿದೆ.

**ಹೊಣೆಗಾರಿಕೆಯ ಮಹತ್ವ:**

1) ಹೊಣೆಗಾರಿಕೆಯು ಸಾರ್ವಜನಿಕ ಹಿತದೃಷ್ಟಿಯಿಂದ ಕಾರ್ಯನಿರ್ವಹಣೆಗೆ ಸಹಾಯಕವಾಗಿದೆ

2) ಸಾರ್ವಜನಿಕ ಹಣವನ್ನು ಸರಿಯಾದ ರೀತಿಯಲ್ಲಿ ಬಳಸಲು ಸಹಾಯಕವಾಗುತ್ತದೆ

3) ಅಧಿಕಾರ ದುರುಪಯೋಗ ತಡೆಯುತ್ತದೆ

4) ಕಾನೂನಾತ್ಮಕವಾಗಿ ಕಾರ್ಯ ನಿರ್ವಹಿಸುವಂತೆ ಪ್ರೇರೇಪಿಸುತ್ತದೆ

5) ಆಡಳಿತದಲ್ಲಿ ನೈತಿಕ ಮೌಲ್ಯಗಳನ್ನು ಕಾಪಾಡಿಕೊಂಡು ಹೋಗುವಂತೆ ಮಾಡುತ್ತದೆ

6) ಪರಿಣಾಮಕಾರಿ ನೀತಿಗಳನ್ನು ಮತ್ತು ಯೋಜನೆಗಳನ್ನು ರೂಪಿಸಲು ಹೊಣೆಗಾರಿಕೆ ಸಹಾಯ ಮಾಡುತ್ತದೆ

7) ಅನವಶ್ಯಕ ಆರ್ಥಿಕ ವೆಚ್ಚಗಳನ್ನು ನಿಯಂತ್ರಿಸುತ್ತದೆ

8) ಸರ್ಕಾರದ ಸೌಲಭ್ಯಗಳು ಕೆಳಹಂತದವರೆಗೆ ಸರಿಯಾಗಿ ಸೋರಿಕೆಯಾಗದೆ ತಲುಪುತ್ತದೆ

9) ನಾಗರಿಕರಲ್ಲಿ ಆಡಳಿತಗಾರರ ಬಗ್ಗೆ ವಿಶ್ವಾಸವು ಮೂಡುತ್ತದೆ

10) ಅಧಿಕಾರಶಾಹಿ ನಡುವೆ ಬಾಂಧವ್ಯ ಬೆಳೆಯುತ್ತದೆ

**ಹೊಣೆಗಾರಿಕೆಯ ಆಯಾಮಗಳು:**

**1) ಶಾಸನಾತ್ಮಕ ಆಯಾಮಗಳು:** ಕಾನೂನಿನ ಅದಿಪತ್ಯವನ್ನು ಕಾಪಾಡಿಕೊಂಡು ಹೋಗುವ ಹೊಣೆಗಾರಿಕೆ

**2) ಆರ್ಥಿಕ ಆಯಾಮಗಳು:** ಸಾರ್ವಜನಿಕ ಹಣ ಅಥವಾ ನಿಧಿಯನ್ನು ಸಮರ್ಪಕವಾಗಿ ಬಳಸುವ ಹೊಣೆಗಾರಿಕೆಯಾಗಿದೆ

**3) ನೀತಿ ಮತ್ತು ಕಾರ್ಯನಿರ್ವಹಣೆ ಆಯಾಮಗಳು:** ನೀತಿಗಳನ್ನು ರೂಪಿಸುವ ಗುರಿಗಳನ್ನು ತಲುಪುವ ಹೊಣೆಗಾರಿಕೆ

**4) ಪ್ರಜಾಸತ್ತಾತ್ಮಕತೆ ಆಯಾಮಗಳು:** ಜನರಿಗೆ ಮತ್ತು ಜನಪ್ರತಿನಿಧಿಗಳಿಗೆ ಮಾಹಿತಿ ನೀಡುವ ಮತ್ತು ಸಲಹೆ ಕೇಳುವ ಹೊಣೆಗಾರಿಕೆ

**5) ನೈತಿಕ ಆಯಾಮಗಳು**

ಜವಾಬ್ದಾರಿ ಮತ್ತು ಹೊಣೆಗಾರಿಕೆಯು ನೋಡಲು ಒಂದೇ ಎನಿಸಿದರೂ ವ್ಯತ್ಯಾಸ ಗೋಚರಿಸುತ್ತದೆ. ಜವಾಬ್ದಾರಿಯು ನೌಕರನನ್ನು ಸಾರ್ವಜನಿಕ ಆಸಕ್ತಿಗಳಿಗನುಗುಣವಾಗಿ ವರ್ತಿಸುವ ಕ್ರಿಯೆಯಾದರೆ ಹೊಣೆಗಾರಿಕೆಯು ಅನುಷ್ಠಾನಗೊಳಿಸುವ ಕ್ರಿಯೆ. ಜವಾಬ್ದಾರಿಯು ವಿಷಯಾಧಾರಿತ ಮತ್ತು ಆಂತರಿಕವಾದದ್ದು. ಹೊಣೆಗಾರಿಕೆಯು ಬಾಹ್ಯ ಉದ್ದೇಶಿತ ಮತ್ತು ಕಾರ್ಯಾತ್ಮಕವಾದದ್ದು.

**ನೈತಿಕ ಆಡಳಿತ (Ethical Governance):**

ನೈತಿಕತೆಗೆ ಶಾಸನಾತ್ಮಕ ಸ್ಥಾನ ನೀಡುವುದು ಸಾಧ್ಯವಿಲ್ಲ. ಅದು ಮುಖ್ಯವಾಗಿ ಭಾವನಾತ್ಮಕ ಮೌಲ್ಯ. ನೈತಿಕತೆ ಎಂಬುದು ಜನರು ತಮ್ಮ ದೈನಂದಿನ ಬದುಕಿನಲ್ಲಿ ಪಾಲಿಸುವ ಸಂಗತಿಯಾಗಿದೆ. ನೌಕರರು ತಮ್ಮ ಆಡಳಿತದಲ್ಲಿ ನೈತಿಕ ಅಂಶಗಳೆಡೆಗೆ ಗಮನ ಹರಿಸುವುದೇ ನೈತಿಕ ಆಡಳಿತವಾಗಿದೆ.

**ನಾಗರಿಕ ಸೇವಕರ ನೈತಿಕ ನಿರ್ಧಾರಕ ಅಂಶಗಳು:**

1) ಮೇಲಾಧಿಕಾರಿಗಳು ಅನುಸರಿಸಿದ ಸಂಪ್ರದಾಯಗಳು ಮತ್ತು ನಿರ್ಧಾರಗಳು

2) ಆಡಳಿತಾತ್ಮಕ ವ್ಯವಸ್ಥೆ

3) ಶಿಸ್ತು ಕ್ರಮಗಳ ಪ್ರಭಾವ

4) ಸಮಾಜದಲ್ಲಿರುವ ನೈತಿಕ ಮೌಲ್ಯಗಳು

5) ಸಾರ್ವಜನಿಕ ಸೇವಕರ ಬಗ್ಗೆ ರಾಜಕೀಯ ವ್ಯಕ್ತಿಗಳ ಪ್ರವೃತ್ತಿ

6) ಸಾರ್ವಜನಿಕ ಸೇವಕರ ಸಂಬಳ ಮತ್ತು ಭತ್ಯೆ

7) ಆಡಳಿತ ವ್ಯವಸ್ಥೆಯಲ್ಲಿ ಸಂಬಂಧಗಳ ಪ್ರವೃತ್ತಿ

8) ಸಾರ್ವಜನಿಕ ಸೇವಕರ ತರಬೇತಿ

ಮೇಲ್ಕಾಣಿಸಿದ ಅಂಶಗಳು ನೈತಿಕತೆಯ ಮಟ್ಟವನ್ನು ನಿರ್ಧರಿಸುವ ಅಂಶಗಳಾಗಿವೆ.

**ನೈತಿಕ ಆಡಳಿತಕ್ಕೆ ತೊಡಕುಗಳು:** ನೈತಿಕ ಆಡಳಿತಕ್ಕೆ ಹಲವಾರು ಮೂಲಗಳಿಂದ ತೊಡಕುಗಳಿದ್ದು ಅವುಗಳೆಂದರೆ,

* ರಾಜಕೀಯ ಪ್ರಭಾವ
* ಬಾಹ್ಯ ಒತ್ತಡ
* ಅರಾಜಕತೆ
* ಬದ್ಧತೆ ಕೊರತೆ
* ಸ್ವಜನ ಪಕ್ಷಪಾತ
* ಅನಾಸಕ್ತತೆ

* ರಹಸ್ಯತೆ
* ಭ್ರಷ್ಟಾಚಾರ
* ನಿಷ್ಪಕ್ಷಪಾತದ ಅವನತಿ
* ಅಪಾರದರ್ಶಕತೆ
* ಸೇವಾ ಬದ್ದತೆಯ ಕೊರತೆ
* ಹೊಣೆಗಾರಿಕಾ ಕೊರತೆ

**ಆಡಳಿತದಲ್ಲಿ ನೀತಿ ನೈತಿಕ ಮೌಲ್ಯಗಳ ಬಲಪಡಿಸುವಿಕೆ:**

ವಸಾಹತುಶಾಹಿ ಆಡಳಿತದಿಂದ 1947ರಲ್ಲಿ ಸ್ವತಂತ್ರ್ಯವಾದ ಕ್ಷಣದಿಂದಲೂ ಭಾರತವು ತನ್ನ ಆಡಳಿತ ವ್ಯವಸ್ಥೆಯನ್ನು ನೈತಿಕ ಮೌಲ್ಯಗಳನ್ನು ಬಲಪಡಿಸಲು ಪ್ರಯತ್ನಿಸುತ್ತಿದೆ. ಇದಕ್ಕಾಗಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. 1950ರ ಗೊರ್ವಾಲಾ ಸಮಿತಿಯಿಂದ ಮೊದಲುಗೊಂಡು ಶ್ರೀವೀರಪ್ಪ ಮೊಹ್ಲಿಯವರು ಎರಡನೇ ಆಡಳಿತ ಸುಧಾರಣಾ ಆಯೋಗಗಳು ನೈತಿಕ ಬಲಪಡಿಸುವಿಕೆ ಕುರಿತು ಹಲವಾರು ಶಿಫಾರಸ್ಸು ಮಾಡಿದ್ದಾರೆ. ಅವುಗಳೆಂದರೆ,

1) ಸಾರ್ವಜನಿಕ ಸೇವಕರ ಅಧಿಕಾರ ಮತ್ತು ಜವಾಬ್ದಾರಿಗಳ ಮೇಲೆ ಸರ್ಕಾರವು ವಿಶೇಷ ಗಮನ ಕೇಂದ್ರೀಕರಿಸುವುದು

2) ಸರ್ಕಾರವು ಬಾಹ್ಯ ಬದಲಾವಣೆಗಳು ಮತ್ತು ವೈವಿಧ್ಯಮಯ ವಿಷಯಗಳಿಗೆ ಸಂಬಂಧಿಸಿದಂತೆ ಶೀಘ್ರವಾಗಿ ಪ್ರತಿಕ್ರಯಿಸಲು ಸಾಧ್ಯವಾಗುವಂತಹ ಕಾರ್ಯತಂತ್ರ ರೂಪಿಸುವುದು

3) ವೆಚ್ಚ ಮತ್ತು ಫಲಿತಾಂಶಕ್ಕೆ ಸಂಬಂಧಿಸಿದ ವರದಿಗಳನ್ನು ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಕತೆಯಿಂದ ಪರೀಕ್ಷಿಸುವುದು

4) ನಾಗರಿಕ ಕುಂದು ಕೊರತೆ ವ್ಯವಸ್ಥೆಯನ್ನು ಬಲಪಡಿಸುವುದು

5) ವೃತ್ತಿ ಸಂಸ್ಕೃತಿ ಬೆಳೆಸುವಿಕೆ (ಸಂವೇದನಾಶೀಲತೆ, ಹೊಣೆಗಾರಿಕೆ, ಭಾಗವಹಿಸುವಿಕೆ ಮತ್ತು ನಾಗರಿಕ ಸ್ನೇಹಿ ಆಡಳಿತ ನಿರ್ಮಾಣ)

6) ಗುಣಮಟ್ಟದ ನಾಯಕತ್ವ ಬೆಳೆಸುವಿಕೆ

7) ನೀತಿ ಸಂಹಿತೆ ಮತ್ತು ಇತರೆ ಮೌಲ್ಯಗಳನ್ನು ಕಟ್ಟು ನಿಟ್ಟಾಗಿ ಜಾರಿಗೆ ತರುವುದು

8) ನೈತಿಕ ಮೌಲ್ಯಗಳ ಕುರಿತು ತರಬೇತಿ ನೀಡುವುದು

9) ಆಡಳಿತಾತ್ಮಕ ಅಪಾಯಗಳನ್ನು ನಿರ್ವಹಿಸುವ ಕುರಿತು ಜಾಗೃತಿ ಮೂಡಿಸುವುದು

10) ಮುಕ್ತ ಮತ್ತು ಪಾರದರ್ಶಕ ತೀರ್ಮಾನ ಕೈಗೊಳ್ಳುವ ವ್ಯವಸ್ಥೆಯನ್ನು ಅನುಷ್ಟಾನಗೊಳಿಸುವುದು

11) ನೈತಿಕವಾಗಿ ವರ್ತಿಸುವ ಅಧಿಕಾರಿಗಳಿಗೆ ಸೂಕ್ತವಾದ ಶಿಕ್ಷೆ ನೀಡುವುದು

12) ಸಾರ್ವಜನಿಕ ಸೇವೆಗಳ ನೈತಿಕ ಮಾನದಂಡಗಳನ್ನು ಸ್ಪಷ್ಟಪಡಿಸುವುದು

13) ಆಡಳಿತದ ಕುರಿತು ನಾಗರಿಕ ಸಮಾಜವು ಜಾಗರೂಕರಾಗಿರುವಂತೆ ಮಾಡುವುದು

**ನಾಗರಿಕ ಸಮಾಜದ ಪಾಲ್ಗೊಳ್ಳುವಿಕೆ:**

1990ರಿಂದಲೂ ಆಡಳಿತದಲ್ಲಿ ನಾಗರಿಕ ಸಮಾಜದ ಪಾಲ್ಗೊಳ್ಳುವಿಕೆಯು ಹೆಚ್ಚಾಗುತ್ತಿದೆ. ಇದರಿಂದಾಗಿ ಸಾರ್ವಜನಿಕ ಸೇವಕರು ಬಹಳ ಜಾಗರೂಕತೆಯಿಂದ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಇಲ್ಲಿ ವಿದ್ಯಾವಂತ ಜನರು, ಮಾಧ್ಯಮಗಳು ಮಹತ್ವವಾದ ಪಾತ್ರವನ್ನು ನಿರ್ವಹಿಸುತ್ತದೆ. ಉದಾ: ಅಣ್ಣಾ ಹಜಾರೆ ನೇತೃತ್ವದ ಭ್ರಷ್ಟಾಚಾರ ವಿರುದ್ದ ಭಾರತ ಸಂಘಟನೆಯ ಪ್ರಬಲ ಲೋಕಪಾಲ ಕಾಯ್ದೆ ಜಾರಿಗೆ ಯಶಸ್ವಿ ಹೋರಾಟ ನಡೆದುದು. ಮಾಧ್ಯಮಗಳ ಕುಟುಕು ಕಾರ್ಯಾಚರಣೆಗಳು ಅನೇಕ ಭ್ರಷ್ಟಾಚಾರ ಪ್ರಕರಣವನ್ನು ಬಯಲಿಗೆಳೆದಿದೆ. ಪರಿವರ್ತನೆ ಎಂಬ NGO ಹೋರಾಟದ ಫಲವಾಗಿ ಮಾಹಿತಿ ಹಕ್ಕು ಕಾಯ್ದೆ ಜಾರಿಯಾಗಲು ಸಾಧ್ಯವಾಯಿತು. ಒಟ್ಟಾರೆಯಾಗಿ ಆಡಳಿತದಲ್ಲಿ ನೈತಿಕ ಮೌಲ್ಯ ಬಲಪಡಿಸುವಲ್ಲಿ ಜಾಗೃತ ನಾಗರಿಕ ಸಮಾಜದ ಪಾಲ್ಗೊಳ್ಳುವಿಕೆ ಪ್ರಮುಖವಾಗಿದೆ.

**ಪೂರ್ವಭಾವಿ ಜಾಗರೂಕತೆಯ ಅಂಶಗಳು:**

ಪೂರ್ವಭಾವಿ ಜಾಗರೂಕತೆಯ ಆಡಳಿತದಲ್ಲಿ ಅನೈತಿಕ ಚಟುವಟಿಕೆಗಳನ್ನು ತಡೆಗಟ್ಟುವ ಪ್ರಮುಖ ಸಾಧನವಾಗಿದೆ. ಇಲ್ಲಿ ಮುಂಗಡ ಅನುಸರಿಸಬೇಕಾದ ಕ್ರಮಗಳೆಂದರೆ,

1) ಅಕ್ರಮ ವ್ಯವಹಾರಗಳಲ್ಲಿ ಭಾಗಿಯಾದ ಅಧಿಕಾರಿಗಳ ಪಟ್ಟಿ ಪ್ರಕಟಿಸುತ್ತಾ ಇರಬೇಕು ಮತ್ತು ಅಂತಹವರಿಗೆ ತ್ವರಿತವಾಗಿ ಶಿಕ್ಷೆಗೆ ಒಳಪಡಿಸಬೇಕು

2) ಸಂದೇಹಾತ್ಮಕ ಅಧಿಕಾರಿಗಳ ಮೇಲೆ ಯಾವಾಗಲೂ ನಿಗಾ ಇಡಬೇಕು

3) ಮಧ್ಯವರ್ತಿಗಳ ಮೇಲೆ ನಿಗಾ ಇಟ್ಟು ಅಂತಹವರ ಹೆಸರನ್ನು ಒಳಗೊಂಡ ಪಟ್ಟಿ ಪ್ರಕಟಿಸಬೇಕು

4) ವಾರ್ಷಿಕ ಆದಾಯ ಮತ್ತು ಸಂಪತ್ತುಗಳ ಮಾಹಿತಿ ಸಲ್ಲಿಸುವಂತೆ ಕ್ರಮ ಕೈಗೊಳ್ಳಬೇಕು

5) ಸರ್ಕಾರ ಯಾವುದೇ ನೇಮಕಾತಿ ಸಮಿತಿಗಳಲ್ಲಿ ಅಕ್ರಮಗಳ, ವ್ಯವಹಾರಗಳ ಆರೋಪ ಹೊಂದಿದ ವ್ಯಕ್ತಿಯನ್ನು ನೇಮಿಸಬಾರದು

6) ಅಕ್ರಮ ಬಹಿರಂಗಪಡಿಸುವ ವ್ಯಕ್ತಿಗಳಿಗೆ ರಕ್ಷಣೆ

**"ಸರ್ಕಾರಿ ನೌಕರರೆಂದರೆ"** ತಲೆ ಇಲ್ಲದ ಮೊಳೆಯಂತೆ. ಅದನ್ನು ಗೋಡೆಯೊಳಗೆ ಹೊಡೆಯಬಹುದು. ಆದರೆ ತೆಗೆಯಲಾರದು ಎಂಬ ಮಾತನ್ನು ಹುಸಿ ಮಾಡಬೇಕು.

# ಅಧ್ಯಾಯ – 4
# ಅಂತರ ರಾಷ್ಟ್ರೀಯ ನೈತಿಕತೆ

**ಅಂತರಾಷ್ಟ್ರೀಯ ಸಂಬಂಧಗಳಲ್ಲಿನ ನೈತಿಕ ವಿಷಯಗಳು:**

ಒಂದು ಸಮಾಜದಲ್ಲಿ ಮಾನವನ ವರ್ತನೆಯು ಹೇಗೆ ನೈತಿಕ ನಿಯಮಗಳಿಂದ ನಿಯಂತ್ರಿಸಲ್ಪಡುತ್ತವೆಯೋ ಹಾಗೆಯೇ ಪ್ರತಿಯೊಂದು ರಾಷ್ಟ್ರಗಳ ವರ್ತನೆಯು ಅಂತರಾಷ್ಟ್ರೀಯ ನೈತಿಕ ನಿಯಮಗಳ ಪ್ರಕಾರ ನಿಯಂತ್ರಿಸಲ್ಪಡುತ್ತದೆ. ಯಾವ ಮೌಲ್ಯಗಳು ಉತ್ತಮವಾದ ಅಂತರಾಷ್ಟ್ರೀಯ ಸಮುದಾಯವನ್ನು ರೂಪಿಸಲು ನೆರವಾಗುತ್ತವೆಯೋ ಅವುಗಳೇ ಅಂತರಾಷ್ಟ್ರೀಯ ನೈತಿಕ ಮೌಲ್ಯಗಳು.

"ಮಾನವನು ಸ್ವಾಭಾವಿಕವಾಗಿ ಸಮಾಜ ಜೀವಿ" ಎನ್ನುವ ಅರಿಸ್ಟಾಟಲ್‌ರವರ ಹೇಳಿಕೆಯಂತೆ ಯಾವುದೇ ರಾಷ್ಟ್ರವು ಏಕಾಂಗಿಯಾಗಿ ಹಾಗೂ ಸಂಪೂರ್ಣ ಸ್ವಾವಲಂಬಿಗಳಾಗಿ ಅಂತರಾಷ್ಟ್ರೀಯ ವ್ಯವಸ್ಥೆಯಲ್ಲಿ ಉಳಿಯಲಾರವು. ಈ ಜಾಗತೀಕರಣ ಯುಗದಲ್ಲಂತೂ ಇದು ಅಸಾಧ್ಯ. ಅಂತರಾಷ್ಟ್ರೀಯ ವಿಷಯದಲ್ಲಿ ನೈತಿಕತೆಯು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನ ಮಾಡುತ್ತದೆ.

1) ಒಂದು ದೇಶದ ಜನರು ಮತ್ತೊಂದು ದೇಶದ ಜನರನ್ನು ಹೇಗೆ ಕಾಣುತ್ತಾರೆ?
2) ಅಂತರಾಷ್ಟ್ರೀಯ ವಿಷಯದಲ್ಲಿ ನೈತಿಕತೆ ಏಕೆ ಬೇಕು?
3) ಪ್ರಪಂಚಕ್ಕೆಲ್ಲಾ ಕಾನೂನನ್ನು ಯಾರು ರೂಪಿಸಬೇಕು?
4) ಹಿಂಸೆಯನ್ನು ಹಿಂಸೆಯಿಂದ ನಾಶ ಮಾಡುವುದು ಸರಿಯೇ?
5) ದೇಶೀಯ ನೀತಿಗಳು ಹೇಗಿರಬೇಕು?
6) ವಲಸಿಗರ ಮೇಲಿನ ನಿರ್ಬಂಧ ಸರಿಯೇ?
7) ಸುಸ್ಥಿರ ಅಭಿವೃದ್ಧಿ ಸರಿಯೇ?

ಮುಂತಾದ ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನ ಮಾಡುತ್ತದೆ.

**ವಿವಿಧ ದೃಷ್ಟಿಕೋನಗಳಲ್ಲಿ ಅಂತರರಾಷ್ಟ್ರೀಯ ನೈತಿಕತೆ:**

ಅಂತರರಾಷ್ಟ್ರೀಯ ಸಂಬಂಧಗಳನ್ನು ಕುರಿತು ಹಲವಾರು ದೃಷ್ಟಿಕೋನ ಸಿದ್ಧಾಂತಗಳಿದ್ದು ಅವುಗಳೆಂದರೆ,

**ಆದರ್ಶವಾದ ಮತ್ತು ಅಂತರರಾಷ್ಟ್ರೀಯ ನೈತಿಕತೆ:** ಇದರ ಪ್ರಕಾರ ಮಾನವನು ನಿಸ್ವಾರ್ಥಿ, ಸ್ನೇಹಮಯಿ, ಸಹಬಾಳ್ವೆ ಬಯಸುವನು, ಯುದ್ದ ಮತ್ತು ದಬ್ಬಾಳಿಕೆಗಳಿಂದ ಮುಕ್ತವಾದ, ವೈಚಾರಿಕತೆಗಳಿಂದ ಹಾಗೂ ಮಾನವ ಕಲ್ಯಾಣಕ್ಕೆ ಒತ್ತುಕೊಡುವ ಅಂತರಾಷ್ಟ್ರೀಯ ವ್ಯವಸ್ಥೆಯನ್ನು ಇವರು ಪ್ರತಿಪಾದಿಸುತ್ತಾರೆ. ಇದು 18ನೇ ಶತಮಾನದ ಜೆರಿಮಿ ಬೆಂಥಮ್‌ರವರ ವೈಚಾರಿಕತೆಯಿಂದಲೂ ಪ್ರೇರಣೆ ಪಡೆಯಿತು. ವಿಶ್ವದ ಜಟಿಲ ಸಮಸ್ಯೆಗಳನ್ನು ಹಾಗೂ ಕಲಹಗಳನ್ನು ಸಂಧಾನದ ಮೂಲಕವೇ ನಿವಾರಿಸಿ ಯುದ್ದರಹಿತ ವಾತಾವರಣ ನಿರ್ಮಾಣದ ಆಶಯವನ್ನು ಇದು ಹೊಂದಿದೆ.

**ನೈಜವಾದ ಮತ್ತು ಅಂತರಾಷ್ಟ್ರೀಯ ನೈತಿಕತೆ:** ಇದು ಆದರ್ಶವಾದಕ್ಕೆ ವಿರುದ್ದವಾಗಿ ಬೆಳೆದು ಬಂದ ಸಂಪ್ರದಾಯವಾಗಿದೆ. ಈ ಸಿದ್ಧಾಂತದ ಪ್ರಕಾರ ಮಾನವನು ಸ್ವಭಾವತ: ದುಷ್ಟ, ಕ್ರೂರಿ, ಸ್ವಾರ್ಥ ಮತ್ತು ಹಿಂಸಾ ಮನೋಭಾವವುಳ್ಳವನು. ತನ್ನ ಸ್ವಾರ್ಥಕ್ಕಾಗಿ ಮತ್ತು ರಕ್ಷಣೆಗಾಗಿ ಯಾವ ಮಾರ್ಗವನ್ನು ಬೇಕಾದರೂ ಅನುಸರಿಸುತ್ತಾನೆ. ಪ್ರಪಂಚದ ಎರಡು ಮಹಾಯುದ್ದಗಳು ಮತ್ತು ಇವಕ್ಕೆ ಸಂಬಂಧಿಸಿದ ನಾಯಕರ ವರ್ತನೆ ಇದನ್ನು ಪುಷ್ಟೀಕರಿಸುತ್ತದೆ. ನೈಜವಾದದ ಪ್ರಮುಖ ತತ್ವಗಳೆಂದರೆ (ಮಾರ್ಗೊಂಥ್‌ರ ಪ್ರಕಾರ)

* ಬದಲಾವಣೆಗೆ ಒಳಪಡದ, ಸ್ವಾರ್ಥವನ್ನು ಧರಿಸಿದ ಮಾನವ ಸ್ವಭಾವದ ಬುನಾದಿ ಮೇಲೆ ರಾಜಕಾರಣ ನಿಂತಿದೆ

* ಇದು ರಾಷ್ಟ್ರೀಯ ಹಿತಾಸಕ್ತಿಯಾಗಿರುತ್ತದೆ

* ನೈತಿಕ ತತ್ವಗಳನ್ನು ಕಡೆಗಣಿಸಿ ಅವುಗಳಲ್ಲಿ ಮಾರ್ಪಾಡು ಮಾಡಿಕೊಂಡು ರಾಷ್ಟ್ರಗಳು ನೈಜವಾದುದನ್ನು ಅನುಸರಿಸುತ್ತವೆ

* ನೈಜವಾದದ ಹಿತಾಸಕ್ತಿ ತಟಸ್ಥವಲ್ಲ. ರಾಜಕೀಯ ಪರಿಸರಕ್ಕೆ ಅನುಗುಣವಾಗಿ ಹಿತಾಸಕ್ತಿ ಚಲನಶೀಲವಾಗುತ್ತದೆ.

**ರಚನಾತ್ಮಕವಾದ ಮತ್ತು ಅಂತರಾಷ್ಟ್ರೀಯ ನೈತಿಕತೆ:** ಇದರಲ್ಲಿ ಅಂತರಾಷ್ಟ್ರೀಯ ಸಂಬಂಧವು "ಮಾನವ ಪ್ರಜ್ಞೆ ಮತ್ತು ತಿಳುವಳಿಕೆಯನ್ನು ಆಧರಿಸಿದೆ ಎಂಬುದನ್ನು ತಿಳಿಸುತ್ತದೆ. ಇದರ ಪ್ರಕಾರ ವಿಶ್ವವು ಭೌತಿಕ ಮತ್ತು ಬಾಹ್ಯ ಅಂಶಗಳಿಂದ ಕೂಡಿದ್ದಲ್ಲಾ. ಅದು ಮಾನವನ ಆತ್ಮಸಾಕ್ಷಿ ಮತ್ತು ವಿಮೋಚನಾ ಶಕ್ತಿಯಿಂದ ಕೂಡಿದೆ. ಇದರ ಪ್ರಕಾರ ಸಾರ್ವಭೌಮತ್ವ ಒಂದು ಸಾರ್ವಜನಿಕ ಸಂಸ್ಥೆ, ಪ್ರಜೆಗಳು, ಗಣ್ಯರು, ಎಲ್ಲರೂ ಅಂತರಾಷ್ಟ್ರೀಯ ರಾಜಕಾರಣದ ಪಾತ್ರಧಾರಿಗಳು.

**ಸಮಾನತೆಯ ಜೀವನ ಮತ್ತು ಅಂತರಾಷ್ಟ್ರೀಯ ನೈತಿಕತೆ:** ವಿಶ್ವದ ಪ್ರತಿಯೊಬ್ಬ ವ್ಯಕ್ತಿಯು ನೈತಿಕ ಮೌಲ್ಯಗಳನ್ನು ಹೊಂದಿದ್ದು ಒಬ್ಬ ವ್ಯಕ್ತಿ ಬೇರೆ ದೇಶದಲ್ಲಿ ನೆಲೆಸಿದಾಗ ಆ ದೇಶದ ಸೌಲಭ್ಯ ಮತ್ತು ಕಾನೂನಿನಡಿ ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. ಆದರೆ ಈ ಸಿದ್ಧಾಂತದ ಪ್ರಕಾರ ಜಗತ್ತಿನ ಎಲ್ಲಾ ದೇಶಗಳ ಜನರನ್ನು ಒಂದೇ ರೀತಿಯಾಗಿ ಪರಿಗಣನೆ ಮಾಡುವುದಾಗಿದೆ.

**ವಿಶ್ವಪ್ರಜ್ಞೆ ಕಲ್ಪನೆ:** ಇತರರ ಸಂಸ್ಕೃತಿ ಭಾಷೆ, ಧರ್ಮ, ಜನಾಂಗಗಳನ್ನು ಪರಸ್ಪರ ಗೌರವಿಸಿ ಪ್ರೀತಿ ತೋರಿಸುವುದೇ "ವಾಸುದೈವ ಕುಟುಂಬಕಂ". ಈ ಸಿದ್ಧಾಂತವು ಎಲ್ಲಾ ಜನಾಂಗಗಳನ್ನು ರಕ್ತ ಸಂಬಂಧಿಗಳಂತೆ ಪರಿಗಣಿಸುವಂತೆ ಪ್ರತಿಪಾದಿಸುತ್ತದೆ.

**ಅಂತರಾಷ್ಟ್ರೀಯ ಸಂಬಂಧಗಳಲ್ಲಿ ನೈತಿಕತೆಯ ಅಗತ್ಯತೆ:**

1) ಪ್ರಸ್ತುತವಾಗಿ ಅಂತರರಾಷ್ಟ್ರೀಯ ಸಂಬಂಧಗಳು ಕೇವಲ ವ್ಯಾಪಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ದೇಶದ ಆರ್ಥಿಕ, ಸಾಮಾಜಿಕ, ಅಂಶಗಳ ಮೇಲೆ ಪ್ರಭಾವವನ್ನು ಬೀರುತ್ತದೆ

2) ಆರ್ಥಿಕ ಪ್ರಗತಿಯ ಜೊತೆಗೆ ಮಾನವನ ಹಕ್ಕುಗಳ ಸುಧಾರಣೆಗಾಗಿ

3) ಜಾಗತೀಕರಣವೆಂಬುದು ತನ್ನಷ್ಟಕ್ಕೆ ತಾನೆ ಸ್ಥಾಪನೆಯಾದಂತೆ ಯಾಂತ್ರಿಕ ಪ್ರಕ್ರಿಯೆಯೆಲ್ಲವೂ ಇಲ್ಲಿ ಉದ್ಯಮಗಳ, ದೇಶದ ಸರಕುಗಳ, ಗ್ರಾಹಕರ ಶ್ರಮದ ಪ್ರತಿಫಲವಿದ್ದು ಇದರಲ್ಲಿ ಎಲ್ಲದರಲ್ಲಿ ಸಂತೃಪ್ತಿ ಭಾವನೆ ಬೆಳೆಸಲು

4) ಹಲವಾರು ಮಹತ್ವವುಳ್ಳ ಅಂತರಾಷ್ಟ್ರೀಯ ಸಂಬಂಧಗಳಲ್ಲಿ ನೈತಿಕತೆ ನೀತಿ ನಿಯಮಗಳು ಇಲ್ಲದೆ ದೇಶಗಳ ಮಧ್ಯೆ ಹಗೆತನ ಹೋರಾಟ ಇವುಗಳಿಂದ ಮಾನವ ನಾಶವನ್ನು ತಪ್ಪಿಸಲು

5) ಅಪಾಯಕಾರಿ ಶಸ್ತ್ರಾಸ್ತ್ರಗಳ ಬಳಕೆ ಕಡಿಮೆ ಮಾಡುವಲ್ಲಿ

6) ಸುಸ್ಥಿರ ಅಭಿವೃದ್ಧಿಯೆಡೆಗೆ ಜಗತ್ತನ್ನು ಹೊರಳಿಸುವಲ್ಲಿ

7) ಇತರ ದೇಶಗಳ ಸಾರ್ವಭೌಮತ್ವಕ್ಕೆ ಅಡ್ಡಿ ಬರದಂತೆ ತಡೆಯುವಲ್ಲಿ

8) ಆಂತರಿಕ ಹಸ್ತಕ್ಷೇಪ ತಡೆಯುವ ನಿಟ್ಟಿನಲ್ಲಿ

9) ವ್ಯವಸ್ಥಿತ ಅಪರಾಧ ಮಾದಕ ವಸ್ತುಗಳ ಮತ್ತು ಮಾನವ ಕಳ್ಳಸಾಗಾಣಿಕೆ ತಡೆಯುವಲ್ಲಿ

10) ಸಂಪನ್ಮೂಲಗಳ ನಡುವೆ ಆರೋಗ್ಯದಾಯಕ ಸ್ಪರ್ಧೆ ಏರ್ಪಡಿಸಲು

11) ಆರ್ಥಿಕ ಸಾಮಾಜಿಕ ಅಸಮಾನತೆಗಳ ಸಂಪೂರ್ಣ ನಿವಾರಣೆಗಾಗಿ

**ಪ್ರಪಚಕ್ಕೆಲ್ಲಾ ನೈತಿಕ ಕಾನೂನುಗಳನ್ನು ಯಾರು ರೂಪಿಸಬೇಕು?:–**

ಪ್ರಪಂಚವು ಅತ್ಯಂತ ವೈವಿಧ್ಯತೆಯಿಂದ ಕೂಡಿರುವ ಸಾಮಾಜಿಕ ಮೌಲ್ಯಗಳು ಹಾಗೂ ಸಂಸ್ಕೃತಿಗಳಿಂದ ಕೂಡಿದೆ. ಹಾಗಾಗಿ ಯಾವುದೋ ಒಂದು ಅಧಿಕಾರ ವ್ಯವಸ್ಥೆ ಪ್ರಪಂಚಕ್ಕೆಲ್ಲಾ ನ್ಯಾಯವನ್ನು ರೂಪಿಸಿ ಅದನ್ನು ಜಾರಿಗೊಳಿಸುವುದು ಕಷ್ಟ ಸಾಧ್ಯ. ಇಂದಿನ ಅಭಿಪ್ರಾಯದಲ್ಲಿ ಆಯಾ ದೇಶದ ಸ್ಥಳೀಯ ಸರ್ಕಾರಗಳು ಮಾತ್ರ ಅತೀ ಹೆಚ್ಚು ದಕ್ಷತೆಯಿಂದ ಕಾನೂನುಗಳನ್ನು ರೂಪಿಸಬಹುದು.

**ವಿಶ್ವಾದ್ಯಂತ ನೀತಿ ನಿಯಮ ರೂಪಿಸಲು ಈ ಕೆಳಕಂಡ ಆಯ್ಕೆಗಳಿವೆ,**

1) ಒಂದು ಪ್ರಬಲವಾದ ದೇಶ ತಾನು ರೂಪಿಸಿದ ಕಾನೂನನ್ನು ಇತರ ದೇಶಗಳ ಮೇಲೆ ಹೇರಬಹುದು. ಪ್ರತಿಯೊಂದು ದೇಶದ ಸಾಮಾಜಿಕ, ಸಾಂಸ್ಕೃತಿಕ ಭಿನ್ನತೆಗಳನ್ನು ನಿರ್ಲಕ್ಷಿಸುತ್ತದೆ

2) ಎಲ್ಲಾ ದೇಶಗಳು ಸೇರಿ ತಮ್ಮ ಸಮಾನ ಆಸಕ್ತಿಗಳಿಗೆ ಅನುಗುಣವಾಗಿ ಗುರುತಿಸಿ, ಅದಕ್ಕೆ ತಕ್ಕಂತೆ ಕಾನೂನು ರೂಪಿಸಬಹುದು. ಇದನ್ನು ಕಾರ್ಯಾರೂಪಕ್ಕೆ ತರುವುದು ಅಸಾಧ್ಯ

3) ಪ್ರತಿಯೊಂದು ದೇಶವೂ ತನ್ನ ಸಾರ್ವಭೌಮ ಮತ್ತು ವಿದೇಶೀ ನೀತಿಗೆ ಪ್ರಾಮುಖ್ಯತೆ ನೀಡುತ್ತದೆ

**ಜಾಗತಿಕ ಸಾಮಾನ್ಯಗಳು:**

**ಸಾಮಾನ್ಯ ಸರಕುಗಳ ನಿರ್ವಹಣೆ:** ಯಾವುದೇ ದೇಶದ ರಾಜಕೀಯ ಸರಹದ್ದಿನ ಹೊರಗಿನ ಸಂಪನ್ಮೂಲಗಳನ್ನು "ಜಾಗತಿಕ ಸಾಮಾನ್ಯ ಸಂಪನ್ಮೂಲಗಳು" ಎಂದು ಕರೆಯುತ್ತಾರೆ. ಅಂತರಾಷ್ಟ್ರೀಯ ಕಾನೂನು 4 ಸಾಮಾನ್ಯ ಸಂಪನ್ಮೂಲ ಗುರುತಿಸಿದೆ. ಅವುಗಳೆಂದರೆ,

1) ಮುಖ್ಯ ಸಮುದ್ರ

2) ವಾಯು ಮಂಡಲ

3) ಅಂಟಾರ್ಟಿಕ

4) ಬಾಹ್ಯಾಕಾಶ

ಈ 4 ಸಾಮಾನ್ಯ ಸಂಪನ್ಮೂಲ ಹಂಚಿಕೆಯಲ್ಲಿ ವಿಶ್ವವು ಎದುರಿಸುತ್ತಿರುವ ನೈತಿಕ ಸಮಸ್ಯೆಗಳ ನಿವಾರಣೆ ಹೀಗಿದೆ.

**1) ಮುಖ್ಯ ಸಮುದ್ರಗಳು:** ಪ್ರಸ್ತುತ ಸನ್ನಿವೇಶದಲ್ಲಿ ಅನೇಕ ದೇಶಗಳು ತಮ್ಮ ನೆರೆಹೊರೆಯ ಮುಖ್ಯ ಸಮುದ್ರಗಳ ಮೇಲೆ ಸಾರ್ವಭೌಮತ್ವವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿವೆ. ಸಮುದ್ರಗಳನ್ನು ದೇಶದ ಭೌಗೋಳಿಕ ರಾಜಕೀಯ ತಂತ್ರಗಳಿಗೆ ಮತ್ತು ವಾಣಿಜ್ಯ ದೃಷ್ಟಿಯಲ್ಲಿ ಬಳಸಿಕೊಳ್ಳಲು ಪ್ರಾರಂಭಿಸಿವೆ. ಉದಾ: ದಕ್ಷಿಣ ಚೀನಾ ಸಮುದ್ರದ ನಡುವೆ, ಚೀನಾ+ವಿಯಟ್ನಾಂ ದೇಶಗಳ ಕಲಹ.

**2) ವಾಯುಗುಣ ಬದಲಾವಣೆ / ವಾತಾವರಣ:** ಹಸಿರು ಮನೆ ಅನಿಲಗಳ ಹೆಚ್ಚಳದಿಂದ ಜಾಗತಿಕ ತಾಪಮಾನ ಏರುತ್ತಲೇ ಸಾಗಿದೆ. ಇದರಿಂದ ಅತೀವೃಷ್ಟಿ ಮತ್ತು ಅನಾವೃಷ್ಟಿ ಸಮಸ್ಯೆಗಳು ಉದ್ಭವವಾಗುತ್ತದೆ. ಜನರು ಆಧುನಿಕ ಜೀವನ ಶೈಲಿಗೆ ಮಾರುಹೋಗಿ ಪರಿಸರ ಮೌಲ್ಯವನ್ನು ಕಡೆಗಣಿಸುತ್ತಿದ್ದಾರೆ. ತಂತ್ರಜ್ಞಾನ ಬಳಕೆಯಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಹೊಂದದ ದೇಶಗಳ ನಡುವೆ ಪೈಪೋಟಿ ನಡೆಯುತ್ತಿದೆ.

**3) ಅಂಟಾರ್ಕಟಿಕ್:** ಹಿಮದಿಂದ ಆವೃತ್ತವಾದ ಖಂಡವಾಗಿದ್ದು ಎಲ್ಲಾ ದೇಶಗಳ ವಿವೇಚನಾ ರಹಿತ ಮಾಲಿನ್ಯದಿಂದ ಜಾಗತಿಕ ತಾಪಮಾನದ ಏರಿಕೆಯಾಗಿ ಹಿಮಕರಗಿ ಸಮುದ್ರಮಟ್ಟ ಮೇಲೇರುತ್ತಿದೆ. ಇದು ಜಾಗತಿಕವಾಗಿ ನೈತಿಕ ಸಮಸ್ಯೆಯಾಗಿ ಪರಿಣಮಿಸಿದೆ.

**4) ಬಾಹ್ಯಾಕಾಶ:** ಉಪಗ್ರಹಗಳ ಉಡಾವಣೆಯಲ್ಲಿ ದೇಶಗಳ ನಡುವೆ ಸ್ಪರ್ಧೆ ಉಂಟಾಗಿದ್ದು ಬಾಹ್ಯಾಕಾಶದಲ್ಲಿ ಉಪಗ್ರಹಗಳ ಸಂಖ್ಯೆ ಹೆಚ್ಚಾಗಿದೆ. ಕೆಲವು ವರ್ಷಗಳ ನಂತರ ಇವುಗಳು ಅಲ್ಲೇ ಉಳಿದು ನಿಷ್ಕ್ರಿಯವಾಗಿ ತ್ಯಾಜ್ಯವಾಗಿ ಬದಲಾಗುತ್ತದೆ. ಬೇರೆ ಉಪಗ್ರಹಗಳಿಗೆ ಡಿಕ್ಕಿ ಹೊಡೆಯುವ ಸಂಭವವಿರುತ್ತದೆ. ಚೀನಾ ದೇಶವು ಉದ್ದೇಶ ಪೂರ್ವಕವಾಗಿಯೇ ಬೇರೆ ದೇಶಗಳ ಉಪಗ್ರಹ ನಾಶ ಮಾಡುವ ತಂತ್ರಜ್ಞಾನ ಅಭಿವೃದ್ಧಿಪಡಿಸಿದೆ.

ಇವುಗಳ ಜೊತೆಗೆ ಆಂತರಿಕ ಹಸ್ತಕ್ಷೇಪ, ನಿಶ್ಯಸ್ತ್ರೀಕರಣದ ಹೆಸರಿನಲ್ಲಿ ಶಸ್ತ್ರಾಸ್ತ್ರಗಳ ದಾಸ್ತಾನು, ಬೌದ್ಧಿಕ ಆಸ್ತಿ ಹಕ್ಕನ್ನು ಪಡೆದು ಬಡ ರಾಷ್ಟ್ರಗಳಿಗೆ ತಂತ್ರಜ್ಞಾನ ಹಂಚದೇ ತಾರತಮ್ಯದ ವರ್ತನೆ ನಡೆಸುತ್ತಿವೆ. WTO ನಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ಪ್ರಬಲತೆ, ಬಡರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯಲ್ಲಿ ಹಸ್ತಕ್ಷೇಪ, ಮುಂತಾದವು ನೈತಿಕ ಅಧಃಪತನವನ್ನು ತೋರಿಸುತ್ತಿದೆ. ಇಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ನೈತಿಕತೆಯಿಂದ ವರ್ತಿಸಿದ್ದೇ ಆದಲ್ಲಿ ರಾಷ್ಟ್ರಗಳ ಮಧ್ಯೆ ಘರ್ಷಣೆಗಳು ತಪ್ಪಿ ಜಾಗತಿಕ ಶಾಂತಿ ಮತ್ತು ನೆಮ್ಮದಿ ನೆಲೆಗೊಳ್ಳುತ್ತದೆ.

**ನಮ್ಮ ದೇಶೀಯ ನೀತಿ ಹೇಗಿರಬೇಕು:–**

ಭಾರತವನ್ನೇ ಉದಾಹರಣೆಯಾಗಿ ನೋಡುವುದಾದರೆ 1954ರಲ್ಲಿ ಚೀನಾದೊಡನೆ ಮಾಡಿಕೊಂಡ ಪಂಚಶೀಲ ತತ್ವಗಳು 6 ದಶಕ ಕಳೆದರೂ ಈ ತತ್ವಗಳು ಇಂದಿಗೂ ಹಾಗೇ ಇದ್ದು ವಿವಿಧ ದೇಶಗಳಿಗೆ ಮಾದರಿಯಾಗಿದೆ.

1) ಸಾರ್ವಭೌಮತ್ವ ಮತ್ತು ಗಡಿ ಸಮಗ್ರತೆಯಲ್ಲಿ ಪರಸ್ಪರ ಗೌರವ

2) ಪರಸ್ಪರ ಆಕ್ರಮಣ ಮತ್ತು ದಾಳಿ ಮಾಡದಿರುವುದು

3) ಪರಸ್ಪರ ದೇಶದೊಳಗಿನ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡದಿರುವುದು

4) ಸಮಾನ ಹಾಗೂ ಪರಸ್ಪರ ಪ್ರಯೋಜನ

5) ಶಾಂತಿಯುತವಾದ ಸಹಬಾಳ್ವೆ

ಜಾಗತೀಕರಣದ ನಂತರ ಭಾರತವೂ ಕೂಡ ಈ ಕೆಳಗಿನ ತತ್ವಗಳನ್ನು ಪಾಲಿಸುತ್ತಿದೆ.

* ಪ್ರಪಂಚದ ವೈವಿಧ್ಯತೆಯನ್ನು ಗೌರವಿಸುವುದು
* ವಿವಿಧ ನಾಗರೀಕತೆ ಧರ್ಮ ಸಂಸ್ಕೃತಿ ಪ್ರೋತ್ಸಾಹಿಸುವುದು
* ಬಹುಧ್ರುವೀಯ ಪ್ರಪಂಚದಲ್ಲಿ ವಿಶಾಲ ಪ್ರಾತಿನಿಧ್ಯಕ್ಕೆ ಬೆಂಬಲ ನೀಡುವುದು
* ಮಾನವ ಹಕ್ಕುಗಳ ಮಾನ್ಯತೆ
* ಅಂತರರಾಷ್ಟ್ರೀಯ ನ್ಯಾಯ
* ಜಾಗತೀಕರಣ, ಉದಾರೀಕರಣ
* ಚಿರಸ್ಥಾಯಿ ಶಾಂತಿ

**ಅಂತರಾಷ್ಟ್ರೀಯ ಹಣಕಾಸಿನ ನೆರವಿನ ನೈತಿಕ ವಿಷಯಗಳು:**

ಅಂತರಾಷ್ಟ್ರೀಯ ವ್ಯಾಪಾರದಲ್ಲಿ ದೀರ್ಘಕಾಲಿನ ಸಮತೂಕದ ಪ್ರಗತಿಯನ್ನು ಸಾಧಿಸಲು, ಎಲ್ಲಾ ದೇಶಗಳ ಉತ್ಪಾದಕ ಸಂಪನ್ಮೂಲಗಳನ್ನು ಅಭಿವೃದಿದಪಡಿಸಲು ಅಂತರಾಷ್ಟ್ರೀಯ ಹೂಡಿಕೆಗೆ ಪ್ರೋತ್ಸಾಹಿಸಲು ಹಲವಾರು ಹಣಕಾಸು ನಿಧಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಈ ಹಣಕಾಸು ಸಂಸ್ಥೆಗಳು ಸಹಕಾರ ಮತ್ತು ಸಹಬಾಳ್ವೆಯ ಆಧಾರದ ಮೇಲೆ ಜನರ ಜೀವನಮಟ್ಟವನ್ನು ಸುಧಾರಿಸುವ ಧ್ಯೆರ್ಯವನ್ನು ಹೊಂದಿದೆ.

ಅಂತರಾಷ್ಟ್ರೀಯ ಹಣಕಾಸಿನ ನೆರವಿನ ನೈತಿಕ ಅವಶ್ಯಕತೆಗಳೆಂದರೆ:

1) ಅಂತರಾಷ್ಟ್ರೀಯ ವ್ಯಾಪಾರದಲ್ಲಿ ದೀರ್ಘಕಾಲದ ಪ್ರಗತಿಯನ್ನು ಸಾಧಿಸಲು

2) ಅಂತರಾಷ್ಟ್ರೀಯ ಹೂಡಿಕೆಗೆ ಪ್ರೋತ್ಸಾಹ

3) ಹಿಂದುಳಿದ ದೇಶಗಳ ಬಡತನ ಮತ್ತು ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು

4) ಪಾವತಿ ಶಿಲ್ಕಿನ ಸಮಸ್ಯೆ ಮತ್ತು ವಿದೇಶಿ ವಿನಿಮಯದ ಸಮಸ್ಯೆಗಳನ್ನು ಪರಿಹರಿಸಲು

5) ಸಹಕಾರ ಮತ್ತು ಸಹಬಾಳ್ವೆ ಆಧಾರದ ಮೇಲೆ ಜೀವನ ಮಟ್ಟವನ್ನು ಸುಧಾರಿಸಲು

ಇಲ್ಲಿನ ನೈತಿಕ ವಿಷಯಗಳೆಂದರೆ:

1) ಈ ಹಣಕಾಸು ಸಂಸ್ಥೆಗಳ ಬಿಗಿ ಧೋರಣೆಗಳು ಮತ್ತು ತಾರತಮ್ಯ ನೀತಿಗಳು ಕೆಲವು ಸೌಲಭ್ಯಗಳಡಿ ನೀಡುವ ಸಾಲವನ್ನು ಪಡೆಯುವುದು ಬಡ ದೇಶಗಳಿಗೆ ತುಂಬಾ ಕಠಿಣವಾಗಿದೆ

2) ಷರತ್ತುಗಳು ಕೆಲವೊಮ್ಮೆ ಆ ದೇಶದ ಪ್ರಜಾಪ್ರಭುತ್ವ ಮತ್ತು ಸಾರ್ವಭೌಮತೆಯನ್ನು ಅತಿಕ್ರಮಿಸುತ್ತದೆ

3) ವಿಪರೀತ ಬಡ್ಡಿ ದರ, ಮುಕ್ತ ವ್ಯಾಪಾರ ನೀತಿಗೆ ಒತ್ತಡ ಸಾರ್ವಜನಿಕ ರಂಗಗಳ ನಿರ್ವಹಣೆ ಮುಂತಾದ ವಿಚಾರದಲ್ಲಿ ಬಡ ರಾಷ್ಟ್ರಗಳ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ

4) ನಿರ್ದಿಷ್ಟ ಯೋಜನೆಗಳಿಗೆ ಮಾತ್ರ ಸಾಲ ನೀಡುವುದರಿಂದ ಒಟ್ಟಾರೆ ಅಭಿವೃದ್ಧಿ ಕಡೆಗಣಿಸಿದಂತಾಗುತ್ತದೆ

5) ಸಾಲ ಪಡೆದ ದೇಶಗಳ ಅಭಿವೃದ್ಧಿಯಲ್ಲಿ ಅಸಮತೋಲನ

ಹಾಗಾಗಿ ಇಲ್ಲಿ ಗಮನಿಸಬೇಕಾದ ನೈತಿಕ ಅಂಶಗಳೆಂದರೆ,

1) ಒಟ್ಟಾರೆ ಅಭಿವೃದ್ಧಿ ಚಟುವಟಿಕೆಗಳಿಗೆ ಸಾಲ ನೀಡಬೇಕು

2) ಸಾಲ ನೀಡುವಾಗ ಅನುಸರಿಸುತ್ತಿರುವ ನೀತಿಯಲ್ಲಿ ಬದಲಾವಣೆ ತರಬೇಕು

3) ಮರುಪಾವತಿಸುವ ಸಾಮರ್ಥ್ಯದ ಆಧಾರದ ಮೇಲೆ ಸಾಲ ನೀಡದೆ ಅಭಿವೃದ್ಧಿ ಮಾನದಂಡ ಅನುಸರಿಸಿ ಸಾಲ ನೀಡಿಕೆ ನೈತಿಕವಾಗಿ ಸರಿಯೆನಿಸುತ್ತದೆ

4) ಹಣಕಾಸು ಸಂಸ್ಥೆಗಳು ಶ್ರೀಮಂತ ದೇಶಗಳ ಬಿಗಿಮುಷ್ಟಿಯಿಂದ ಹೊರಬರಬೇಕು

5) ಹಲವಾರು NGO ಗಳು ನೀಡುವ ಹಣ ಮುಂದುವರೆದ ದೇಶಗಳಿಂದ ಬರುವುದರಿಂದ ಇವರ ಸ್ವಾತಂತ್ರ ಪ್ರಶ್ನಾರ್ಥಕವಾಗಿದೆ.

# ಅಧ್ಯಾಯ – 5

## ಕಾರ್ಪೊರೇಟ್ ಆಡಳಿತ (ಸಾಂಸ್ಥಿಕ ಆಡಳಿತ)

ಸಾಂಸ್ಥಿಕ ಆಡಳಿತವೆಂಬುದು ಬಹುಮುಖ ವಿಷಯವಾಗಿದ್ದು ಇದು ಕಾರ್ಯನೀತಿಗಳು ಪ್ರಕ್ರಿಯೆಗಳು ಮತ್ತು ಜನರನ್ನು ಒಳಗೊಂಡ ಒಂದು ಆಂತರಿಕ ವ್ಯವಸ್ಥೆಯಾಗಿದೆ. ದೃಢವಾದ ಸಾಂಸ್ಥಿಕ ಆಡಳಿತವು ಬಾಹ್ಯ ಮಾರುಕಟ್ಟೆಯ ಬದ್ದತೆ ಹಾಗೂ ಕಾನೂನಿನ ಮೇಲೆ ಅವಲಂಬಿತವಾಗಿದೆ. "ಒಂದು Corporate ಸಂಸ್ಥೆಯ ನಿರ್ದೇಶನ ಹಾಗೂ ನಿಯಂತ್ರಣ ವ್ಯವಸ್ಥೆಯನ್ನು Corporate ಆಡಳಿತ ಎನ್ನುವರು".

ಈ ಪದವನ್ನು ಮೊದಲು "ರಾಬರ್ಟ್ ಇಯಾನ" ಎಂಬುವವರು ಪರಿಚಯಿಸಿದರು. ಇದು ಅತ್ಯುತ್ತಮ ಕಾರ್ಯನಿರ್ವಹಣಾ ಆಚರಣೆಗಳು, ಸ್ಫೂರ್ತಿದಾಯಕ ಪಾಲನೆ, ಪರಿಣಾಮಕಾರಿ ಆಡಳಿತ ಹಾಗೂ ಸಂಪತ್ತಿನ ಹಂಚಿಕೆ ಪಾಲುದಾರಕ ಸಾಮಾಜಿಕ ಜವಾಬ್ದಾರಿಯನ್ನು ಒಳಗೊಂಡಿದೆ. ಭಾರತದಲ್ಲಿ ಸಾಂಸ್ಥಿಕ ಆಡಳಿತ ನಿಯಂತ್ರಿಸಲು SEBI 1990ರಲ್ಲಿ ಪ್ರಾರಂಭವಾಯಿತು. ಇದು ನೈತಿಕತೆ ಕುರಿತು "ಕುಮಾರ ಮಂಗಳಮ್ ಬಿರ್ಲಾ" ನೇತೃತ್ವದಲ್ಲಿ ಸಮಿತಿ ರಚಿಸಿತು. 2003ರಲ್ಲಿ ನಾರಾಯಣಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸಿತು. 2011ರಲ್ಲಿ ಸಾಂಸ್ಥಿಕ ಆಡಳಿತಕ್ಕೆ ಸಂಬಂಧಿಸಿದ "ಭಾರತ ಸರ್ಕಾರ ಕಂಪನಿ ಕಾಯ್ದೆ" ಜಾರಿ ಆಯಿತು.

**ಸಾಂಸ್ಥಿಕ ಆಡಳಿತ ಒಳಗೊಂಡ ಅಂಶಗಳು:**

1) ಸಾಂಸ್ಥಿಕ ಘಟಕಗಳು ಅಧಿಪತ್ಯ ನಡೆಸಲ್ಪಡುವ ರೀತಿ
2) ಮೇಲಾಡಳಿತ ಮತ್ತು ಸಿಬ್ಬಂದಿ ಸಂಬಂಧ
3) ಸಾಂಸ್ಥಿಕ ಕಂಪನಿಗಳ ನೀತಿ ಮತ್ತು ಧೋರಣೆಗಳು
4) ಕಂಪನಿಗಳು ಪಾಲಿಸಬೇಕಾದ ನೀತಿ ನಿಯಮಗಳು
5) ಕಂಪನಿಗಳೊಂದಿಗೆ ಪಾಲುದಾರರ ಮತ್ತು ಹೂಡಿಕೆದಾರರ ಸಂಬಂಧಗಳು
6) ನಿರ್ದೇಶಕ ಮಂಡಳಿ ಎದುರಾಗಬೇಕಾದ ಸಮಸ್ಯೆಗಳು

**ಸಾಂಸ್ಥಿಕ ಆಡಳಿತದ ಉದ್ದೇಶಗಳು:**

1) ಷೇರುದಾರರ ಪರಿಸ್ಥಿತಿಗಳು / ಅವಕಾಶಗಳ ಸುಧಾರಣೆ
2) ವ್ಯವಹಾರಗಳಲ್ಲಿ ಪಾರದರ್ಶಕತೆ ತರುವುದು
3) ಶಾಸನ ಮತ್ತು ಕಾನೂನುಗಳ ಪಾಲನೆಯಲ್ಲಿ ಶಿಸ್ತು ತರುವುದು
4) ಷೇರುದಾರರ ಹಿತಾಸಕ್ತಿ ರಕ್ಷಣೆ
5) ವ್ಯಾಪಾರ ವ್ಯವಹಾರಗಳಲ್ಲಿ ಮೌಲ್ಯಗಳು ಮತ್ತು ನೈತಿಕಾಂಶಗಳನ್ನು ಪಾಲಿಸುವಲ್ಲಿ ಬದ್ದತೆ
6) ಪರಿಣಾಮಕಾರಿ ತೀರ್ಮಾನ ಕೈಗೊಳ್ಳುವಿಕೆ
7) ಉನ್ನತ ಸಾಂಸ್ಥಿಕ ಆಡಳಿತ ಸಮಾಜ ನಿರ್ಮಾಣ

**ಸಾರ್ವಜನಿಕ ಆಡಳಿತ ಗುಣಮಟ್ಟ ಹೆಚ್ಚಿಸುವಲ್ಲಿ ಪ್ರೇರಿತ ಅಂಶಗಳು:**

1) ಆಡಳಿತ ವರ್ಗದ ಬದ್ಧತೆ

2) ಮಂಡಳಿಯ ಸಾಮರ್ಥ್ಯ

3) ಸಾಂಸ್ಥಿಕ ವರದಿಯ ಗುಣಮಟ್ಟ

4) ಪಾಲುದಾರರ ಭಾಗವಹಿಸುವಿಕೆ

5) ಲೆಕ್ಕ ಪರಿಶೋಧನಾ ಗುಣಮಟ್ಟ

**ಸಾಂಸ್ಥಿಕ ಆಡಳಿತ ಸಾರ್ವಜನಿಕ ಉದ್ಯಮಗಳಲ್ಲಿ ಸವಾಲುಗಳು:**

ಸರ್ಕಾರದ ನಿಯಂತ್ರಣ ಮತ್ತು ಒಡೆತನಕ್ಕೆ ಒಳಪಟ್ಟಿರುವ ಉದ್ಯಮಗಳಿಗೆ ಸಾರ್ವಜನಿಕ ಉದ್ಯಮಗಳೆಂದು ಕರೆಯುತ್ತಾರೆ. ಭಾರತವು ಮಿಶ್ರ ಆರ್ಥಿಕ ವ್ಯವಸ್ಥೆ ಅನುಸರಿಸುತ್ತಿರುವುದರಿಂದ ತೀವ್ರ ಕೈಗಾರಿಕಾಭಿವೃದ್ಧಿಯ ಸಾಧನೆಗೆ ಸಾರ್ವಜನಿಕ ಉದ್ಯಮಗಳಲ್ಲಿ ಸಾಂಸ್ಥಿಕ ಆಡಳಿತ ಜಾರಿಗೆ ತಂದಿದೆ.

**ಸ್ಥಾಪನಾ ಉದ್ದೇಶ:**

1) ಆರ್ಥಿಕ ಅಸಮಾನತೆ ತಗ್ಗಿಸಲು

2) ಬಂಡವಾಳ ಹೂಡಿಕೆ ಹೆಚ್ಚಳ

3) ಪ್ರಾದೇಶಿಕ ಅಸಮತೋಲನ ನಿವಾರಣೆ

4) ಖಾಸಗಿ ವಲಯದ ಅವ್ಯವಹಾರ ಕ್ರಮಗಳ ನಿಯಂತ್ರಣಕ್ಕೆ

5) ಖಾಸಗಿ ಏಕಸ್ವಾಮ್ಯ ನಿಯಂತ್ರಿಸಲು

**ಸಾರ್ವಜನಿಕ ಉದ್ಯಮದ ಸವಾಲುಗಳು:**

1) ರಾಜಕೀಯ ಹಸ್ತಕ್ಷೇಪ

2) ಅದಕ್ಷ ನಿರ್ವಹಣೆ

3) ಅಧಿಕ ಸಾಮಾಜಿಕ ವೆಚ್ಚ

4) ಹಳೆಯ ತಂತ್ರಜ್ಞಾನದ ಸಮಸ್ಯೆ

5) ಗುಣಮಟ್ಟದ ಅರಿವಿನ ಸಮಸ್ಯೆ

6) ದೋಷಪೂರಿತ ನಿಯಂತ್ರಣ

7) ಸಾಮರ್ಥ್ಯದ ಅಪೂರ್ಣ ಉಪಯೋಗ

8) ಅಧಿಕಗೊಳ್ಳುತ್ತಿರುವ ನಷ್ಟ

9) ಇಳಿಮುಖವಾಗುತ್ತಿರುವ ಪಾಲು

10) ಗುರಿ ತಲುಪುವಲ್ಲಿ ವಿಫಲ

11) ವೃತ್ತಿಪರವಲ್ಲದ ನಿರ್ದೇಶಕರ ಮಂಡಳಿ

**ಭಾರತದಲ್ಲಿ ಸಾಂಸ್ಥಿಕ ಆಡಳಿತ ಸಮಿತಿಗಳು:**

1) ಭಾರತೀಯ ಕೈಗಾರಿಕಾ ಸಮ್ಮೇಳನ 1995

2) ರಾಹುಲ್ ಬಜಾಜ್ 1998

3) ಕುಮಾರ ಮಂಗಳಂ ಬಿರ್ಲಾ ಸಮಿತಿ

4) 1999 ಕಂಪನಿ ಕಾಯ್ದೆ ತಿದ್ದುಪಡಿ

5) ಸುರೇಶ್ಚಂದ್ರ ಕಮಿಟಿ 2002

6) SEBI–ನಾರಾಯಣಮೂರ್ತಿ ಸಮಿತಿ

**ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ:**

ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಅಧಿನಿಯಮದ ಪ್ರಕಾರ ನಿರ್ದಿಷ್ಟ ವರ್ಗದ ಕಂಪನಿಗಳು ಸಾಮಾಜಿಕ ಜವಾಬ್ದಾರಿ ಯೋಜನೆಗಳಿಗೆ ವೆಚ್ಚ ಮಾಡಬೇಕು. ಇಂತಹ ಕಂಪನಿಗಳು ತಮ್ಮ ಮೂರು ವರ್ಷಗಳ ವಾರ್ಷಿಕ ನಿವ್ವಳ ಲಾಭದಲ್ಲಿ ಕನಿಷ್ಠ ಸರಾಸರಿ ಶೇ.2ರಷ್ಟನ್ನು ಸಾಮಾಜಿಕ ಅಭಿವೃದ್ದಿ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ನೀಡಬೇಕಾಗುತ್ತದೆ. ಇಲ್ಲಿ C.S.R (Corporate Social Responsibility) ಸಮಿತಿ ರಚನೆಗೆ ನಿಯಮಾವಳಿಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಈ ಸಮಿತಿಯು C.S.R ನೀತಿಯ ಬಗ್ಗೆ ಪರಿಶೀಲಿಸುತ್ತದೆ.

ಕಂಪನಿಯೊಂದು ಕನಿಷ್ಠ 500 ಕೋಟಿ ರೂ. ಮೌಲ್ಯ ಹೊಂದಿದ್ದರೆ ಅಥವಾ 1000 ಕೋಟಿ ರೂ. ವಹಿವಾಟು ನಡೆಸುತ್ತಿದ್ದರೆ ಅಥವಾ ಕನಿಷ್ಠ 5 ಕೋಟಿ ನಿವ್ವಳ ಲಾಭ ಪಡೆಯುತ್ತಿದ್ದರೆ ಕಡ್ಡಾಯವಾಗಿ C.S.R ಚಟುವಟಿಕೆಗೆ ವೆಚ್ಚ ಮಾಡಬೇಕಾಗುತ್ತದೆ.

# ಅಧ್ಯಾಯ – 6

# ಸಾರ್ವಜನಿಕ ಸೇವೆಯ ಪರಿಕಲ್ಪನೆ–Probitry in Governance (ಆಡಳಿತದಲ್ಲಿ ಸತ್ಯನಿಷ್ಠೆ)

ಸತ್ಯನಿಷ್ಠೆಯೆಂಬುದು "ನಿರ್ದಿಷ್ಟ ಪ್ರಕ್ರಿಯೆಯಲ್ಲಿ ನೈತಿಕವಾಗಿ ವರ್ತಿಸುವುದಾಗಿದೆ". ಇದರ ಮೇಲೆ ಸ್ಪರ್ಶಕ್ಕೆ ಗೋಚರವಾಗದ ಸಾಮಾಜಿಕ ಮತ್ತು ವೈಯಕ್ತಿಕ ಮೌಲ್ಯಗಳ ಪ್ರಭಾವ ಬೀರುತ್ತವೆ. ಈ ಮೌಲ್ಯಗಳು ವ್ಯಕ್ತಿಯ ಸತ್ಯನಿಷ್ಠತೆಯನ್ನು ರೂಪಿಸುವ ನಿರ್ಧಾರಕ ಅಂಶಗಳಾಗಿವೆ.

**ಆಡಳಿತದಲ್ಲಿ ಸತ್ಯನಿಷ್ಠತೆಯ ಉದ್ದೇಶ:**

1) ಆಡಳಿತದಲ್ಲಿ ಹೊಣೆಗಾರಿಕೆಯನ್ನು ಹೆಚ್ಚಿಸಲು
2) ಸಾರ್ವಜನಿಕ ಸೇವೆಯಲ್ಲಿ ಸಮಗ್ರತೆ ಕಾಪಾಡಲು
3) ಆಡಳಿತ ಕಾರ್ಯಕಲಾಪಗಳು ಮತ್ತು ಪ್ರಕ್ರಿಯೆಗಳು ಸುಗಮವಾಗಿ ಸಾಗಲು
4) ಸರ್ಕಾರದ ಪ್ರಕ್ರಿಯೆಗಳಲ್ಲಿ ಸಾರ್ವಜನಿಕ ವಿಶ್ವಾಸ ಉಳಿಸಿಕೊಂಡು ಹೋಗಲು
5) ಆಡಳಿತದಲ್ಲಿ ದುರಾಚಾರ ವಂಚನೆ ಮತ್ತು ಭ್ರಷ್ಟಾಚಾರ ತಪ್ಪಿಸಲು

ಇಲ್ಲಿ ಹೊಣೆಗಾರಿಕೆ ಮತ್ತು ದೇಶಭಕ್ತಿಗೆ ಹೊರತಾಗಿ ನಾಗರಿಕ ಹಕ್ಕುಗಳಿಗೆ ಗೌರವ ಮತ್ತು ಶೋಷಿತರ ಬಗೆಗೆ ಅನುಕಂಪದ ಮೌಲ್ಯಗಳಿರಬೇಕೆಂದು ಎರಡನೇ ಆಡಳಿತ ಸುಧಾರಣಾ ಆಯೋಗದ ಹೇಳಿಕೆಯಾಗಿದೆ.

**ಸಾರ್ವಜನಿಕ ಸೇವೆಯ ಅರ್ಥ:**

ಸಾರ್ವಜನಿಕ ಸೇವೆಯ ಪರಿಕಲ್ಪನೆ ಹೊಸದೇನಲ್ಲ. ಪುರಾತನ ಕಾಲದಲ್ಲಿ ತತ್ವಜ್ಞಾನ, ಧಾರ್ಮಿಕ ಅಂಶ, ಕಂದಾಯ, ಸೈನ್ಯ, ಆಡಳಿತದಂತಹ ಅಂಶಗಳಿಗೆ ಮಾತ್ರ ಸಾರ್ವಜನಿಕ ಸೇವೆಯ ವ್ಯಾಪ್ತಿಯಿತ್ತು. ಆದ್ದರಿಂದ ಆಧುನಿಕ ರಾಜ್ಯಗಳು ಕಲ್ಯಾಣ ರಾಜ್ಯಗಳಾಗಿವೆ. ರಾಜ್ಯ ಕಾರ್ಯಕ್ಷೇತ್ರ ವಿಸ್ತಾರವಾಗಿ ಬೆಳೆದಿದೆ. ಹಾಗಾಗಿ ಸಾರ್ವಜನಿಕ ಸೇವೆಯ ಪ್ರಮಾಣದ ಗಾತ್ರ ಪುರಾತನ ಸೇವೆಗಿಂತ ವಿಶಾಲವಾಗಿದೆ. "ಸಾರ್ವಜನಿಕ ಸೇವೆ" ಎಂದರೆ ಸರ್ಕಾರ ಅಥವಾ ಸಾರ್ವಜನಿಕ ಸಂಸ್ಥೆಯು ಸಾರ್ವಜನಿಕರಿಗೆ ಒದಗಿಸುವ ಸರಕು ಮತ್ತು ಸೇವೆ. ಇದು ನಾಗರಿಕರು ಮತ್ತು ಆಡಳಿತದ ನಡುವೆ ಸಂಪರ್ಕವನ್ನು ಒಳಗೊಂಡಿದೆ.

**ಸಾರ್ವಜನಿಕ ಸೇವೆಯ ಮಹತ್ವ:**

1) ಅಗತ್ಯ ಸೇವೆಗಳನ್ನು ಪೂರೈಸುವುದು
2) ಸಾರ್ವಜನಿಕ ಉಪಯೋಗದ ಕೆಲಸ ನಡೆಸುವುದು
3) ಸಾಮಾಜಿಕ ನ್ಯಾಯ ದೊರಕಿಸುವುದು
4) ಅಧಿಕ ಉತ್ಪಾದನೆ ಕೈಗೊಳ್ಳುವುದು

5) ರಾಷ್ಟ್ರೀಯ ಉದ್ದೇಶಿತ ಸಾಧನೆ ನೆರವೇರಿಕೆ

6) ಮಾನವನ ವ್ಯಕ್ತಿತ್ವ ಬೆಳೆಸುವುದು

7) ರಾಷ್ಟ್ರೀಯ ಸಮಸ್ಯೆಗಳ ಪರಿಹಾರ

**ಆಡಳಿತದ ತಾತ್ವಿಕ ತಳಹದಿ:**

ನೈತಿಕ ಆಡಳಿತವು ತತ್ವಶಾಸ್ತ್ರದ ಒಂದು ಭಾಗವಾಗಿದ್ದು ಹಲವಾರು ತತ್ವಗಳ ತಳಹದಿಯ ಮೇಲೆ ನಿಂತಿದೆ. ಯಾವ ರಾಷ್ಟ್ರದ ಆಡಳಿತ ರಾಷ್ಟ್ರದ ಪ್ರಾದೇಶಿಕ ಸಮಗ್ರತೆ ಕಾಯ್ದುಕೊಂಡು ವೈಯಕ್ತಿಕ ಭದ್ರತೆಯನ್ನೊದಗಿಸಿ ಕಾನೂನಿನ ಪರಿಪಾಲನೆ ಮಾಡುವುದೋ, ಅದು ತಾತ್ವಿಕ ತಳಹದಿಯ ಮೇಲೆ ನಿಂತಿದೆ ಎಂದು ಭಾವಿಸಬಹುದು. ನೈತಿಕ ತಳಹದಿಯ ಆಡಳಿತದ ಕುರಿತು ರಾಮಾಯಣ, ಮಹಾಭಾರತ, ಭಗವದ್ಗೀತೆ, ಬುದ್ಧಚರಿತೆ, ಕೌಟಿಲ್ಯನ ಅರ್ಥಶಾಸ್ತ್ರ, ಪಂಚತಂತ್ರ, ಮನುಸ್ಮೃತಿ, ಶುಕ್ರನೀತಿ ಕಾದಂಬರಿ, ರಾಜತರಂಗಿಣಿ ಮುಂತಾದವು ನೈತಿಕ ಚೌಕಟ್ಟನ್ನು ಒತ್ತಿ ಹೇಳಿವೆ.

ಪ್ಲೇಟೋಗಿಂತ ಮೊದಲೇ ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಆಡಳಿತದ ಬಗ್ಗೆ ಸತ್ಯ, ನೈತಿಕತೆ, ಸರ್ವಾಧಿಕಾರತ್ವ, ಮನೋಭಾವದಂಥ ನೆಲೆಗಳೆಂಬ ವಿಶಾಲ ಚೌಕಟ್ಟಿನಲ್ಲಿ ಆಡಳಿತ ನಡೆಯಬೇಕೆಂದು ಹೇಳಿದ್ದಾನೆ.

ಪಾಶ್ಚಿಮಾತ್ಯರಲ್ಲೂ ಆಡಳಿತದ ನೈತಿಕತೆ ಕುರಿತು 3 ಪ್ರಮುಖ ಪಂಥಗಳಿವೆ.

1) ಅರಿಸ್ಟಾಟಲ್‌ನ–ನ್ಯಾಯ, ದಯೆ, ಸದ್ಗುಣ, ಔದಾರ್ಯಾಡಳಿತ

2) ಕಾಂಟ್–ಸ್ವಯಂ ನಿಯಂತ್ರಣ, ನೈತಿಕ ಮೌಲ್ಯದ ಅನುಸರಣೆ ಮತ್ತು ಧಾರ್ಮಿಕತೆ ಮೂಲಕ ಆಡಳಿತ

3) ಬೆಂತ್ಯಾಮ್–ವಿಷಯ ಯುಕ್ತವಾದದ ಪ್ರಕಾರ ಆಡಳಿತ ನಡೆಸಿ ಹೆಚ್ಚು ಜನರ ಸಂತೋಷ ಉಂಟುಮಾಡುವುದು

**ಪಾಶ್ಚಿಮಾತ್ಯ ತತ್ವಜ್ಞಾನಿಗಳ ಅಭಿಪ್ರಾಯವೆಂದರೆ:**

"ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರಲಿ ಅಥವಾ ರಾಜಪ್ರಭುತ್ವ ವ್ಯವಸ್ಥೆ ಹೊಂದಿರಲಿ ಅದು ನೈತಿಕ ಮೌಲ್ಯಗಳಿಂದ ಕೂಡಿರಬೇಕೆಂಬುದು ಇವರ ವಾದವಾಗಿದೆ". ಕೈಗಾರಿಕಾ ಜಗತ್ತಿನ ಏಳ್ಗೆಯ ಅವಧಿಯಲ್ಲಿ ವೈಜ್ಞಾನಿಕ ನಿರ್ವಹಣೆಯ ಆಡಳಿತದ ಸಂದರ್ಭದಲ್ಲಿ ಆಡಳಿತಾತ್ಮಕ ಜವಾಬ್ದಾರಿ ಕುರಿತು ಹೇಳಲಾಗಿತ್ತು. ಜಾನ್ ಕೆನಡಿಯವರು ಜವಾಬ್ದಾರಿ ಕುರಿತು ಹೇಳುವಾಗ ಆಡಳಿತದಲ್ಲಿ ನೈತಿಕ ವರ್ತನೆಗಳ ಮಟ್ಟವನ್ನು ಕಾಪಾಡಿಕೊಂಡು ಹೋಗಬೇಕಾದ ಅವಶ್ಯಕತೆಯಿದೆ ಎಂದು ಹೇಳಿದ್ದಾರೆ. ಮ್ಯಾರ್ಕ್ಸ್ ವೆಬರ್‌ನ ನೌಕರಶಾಹಿಯ ಸಿದ್ಧಾಂತವು ನೌಕರಶಾಹಿ ಆಡಳಿತದ ಜೊತೆಗೆ ಸಮಾಜಕ್ಕೆ ಅಗತ್ಯವಾದಂತಹ ಮಾನವೀಯತೆ ಹೊಂದಿದ ಅಂಶಗಳು ಆಡಳಿತದ ತಾತ್ವಿಕ ತಳಹದಿಗಳಾಗಿವೆ. ಅವುಗಳು–

1) ರಾಷ್ಟ್ರದ ಪ್ರಾದೇಶಿಕ ಸಮಗ್ರತೆ ಕಾಪಾಡಿಕೆ

2) ಕಾನೂನಿನ ಪರಿಪಾಲನೆ

3) ನ್ಯಾಯಾಂಗ, ಶಾಸಕಾಂಗ, ರಾಜಕೀಯ ಕಾರ್ಯಾಂಗ, ಮಾಧ್ಯಮ ಮತ್ತು ಸಮಾಜದ ಕಾವಲಿಗೆ ಒಳಗಾಗುವ ಅಗತ್ಯತೆ

4) ನ್ಯಾಯ ಸ್ವತಂತ್ರ ಸಮಾನತೆ

5) ಜವಾಬ್ದಾರಿ ಆಡಳಿತ ಇತ್ಯಾದಿ.

**ಆಡಳಿತದಲ್ಲಿ ಪಾರದರ್ಶಕತೆ:** ಪಾಶ್ಚಿಮಾತ್ಯ ಮುಂದುವರೆದ ರಾಷ್ಟ್ರಗಳ ಯಶೋಗಾಥೆಯ ಹಿಂದಿರುವ ಪ್ರಾಥಮಿಕ ಕಾರಣ ಉತ್ತಮ ಆಡಳಿತ ಮತ್ತು ಪಾರದರ್ಶಕ ಆಡಳಿತ. ಭಾರತದ ಆರ್ಥಿಕಾಭಿವೃದ್ಧಿ ಕುಂಠಿತಕ್ಕೆ ಕಾರಣವೇ ಕಳಪೆ ಮತ್ತು ಅಪಾರದರ್ಶಕ ಸಾರ್ವಜನಿಕ ಆಡಳಿತವೆಂಬುದು ಸಾರ್ವತ್ರಿಕ ಗ್ರಹಿಕೆಯಾಗಿದೆ. ಎರಡನೇ ಆಡಳಿತ

ಸುಧಾರಣಾ ಆಯೋಗವು ತನ್ನ ವರದಿಯಲ್ಲಿ ವ್ಯವಸ್ಥೆಯೊಳಗಿನ ಕಟ್ಟುನಿಟ್ಟುಗಳು, ಅನಾವಶ್ಯಕ ಸಂಕೀರ್ಣತೆಗಳು, ಅತಿಯಾದ ಕೇಂದ್ರಿಕರಣ, ಅಪಾರದರ್ಶಕತೆಯೇ ಸಾರ್ವಜನಿಕ ಆಡಳಿತದ ಲೋಪ ಎಂದು ಹೇಳಿವೆ. "ರಾಜ್ಯದಲ್ಲಿ ಯಾವುದೇ ವ್ಯಕ್ತಿ ಹಸಿವಿನಿಂದ ಸತ್ತರೆ ರಾಜನೇ ಸತ್ತಂತೆ" ಎಂಬ ಮಾತು ರಾಜ್ಯದ ಜವಾಬ್ದಾರಿಯನ್ನು ಎತ್ತಿ ತೋರಿಸುತ್ತದೆ.

**ಪಾರದರ್ಶಕ ಆಡಳಿತದ ಅನುಕೂಲಗಳು:**

1) ಇದು ಪರಿಣಾಮಕಾರಿ ನ್ಯಾಯ ಸಮ್ಮತಿ ಮತ್ತು ಕಾನೂನು ಪಾಲನೆಯನ್ನು ಉತ್ತೇಜಿಸುತ್ತದೆ

2) ರಾಜಕೀಂಯ, ಸಾವಮಾಜಿಕ ಮತ್ತು ಆರ್ಥಿಕ ಆದ್ಯತೆಗಳನ್ನು ಖಾತರಿ ಪಡಿಸುತ್ತದೆ
3) ಉತ್ತಮ ಕಾರ್ಯತಂತ್ರದ ದೃಷ್ಟಿಕೋನವನ್ನು ಎತ್ತಿ ತೋರಿಸುತ್ತದೆ

4) ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಉತ್ತಮವಾದ ಬಾಂಧವ್ಯ ಮೂಡುತ್ತದೆ

5) ಸರ್ಕಾರ ತೆಗೆದುಕೊಳ್ಳುವ ನಿರ್ಧಾರಗಳು, ಅವುಗಳನ್ನು ಜಾರಿಗೊಳಿಸುವ ನೀತಿ ನಿಯಮಗಳ ಅರಿವು ಸಾರ್ವಜನಿಕರಿಗೆ ಇರಬೇಕಾಗುತ್ತದೆ

6) ಬಡ ಮತ್ತು ಅತ್ಯಂತ ದುರ್ಬಲ ಜನರ ಧ್ವನಿಯ ಆಧಾರದ ಮೇಲೆ ಅಭಿವೃದ್ದಿ ಸಂಪನ್ಮೂಲಗಳ ಹಂಚಿಕೆಯಾಗುತ್ತದೆ

7) ಇದು ಸರ್ಕಾರದಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಉತ್ತೇಜನ ಮಾಡುತ್ತದೆ

8) ಜನಸಾಮಾನ್ಯರಿಗೆ ಹಣದುಬ್ಬರ, ಬೆಳವಣಿಗೆ ದರಗಳು ಮುಂತಾದ ಸೂಕ್ಷ್ಮ ಅಂಶಗಳ ಅರಿವು ಮೂಡಿ ಸರ್ಕಾರವನ್ನು ದೂಷಿಸುವುದು ತಪ್ಪುತ್ತದೆ.

**ಯಾವ ಯಾವ ಮಾಹಿತಿಗಳಲ್ಲಿ ಪಾರದರ್ಶಕತೆ ಕಾಯಬಹುದು:**

1) ಯೋಜನೆಗಳ ರಚನೆ

2) ಹಣದ ಹಂಚಿಕೆ

3) ಆಯವ್ಯಯ ವಿಷಯಗಳು

4) ರಾಷ್ಟ್ರೀಯ ಒಪ್ಪಂದಗಳು

5) ಕಾರ್ಯತಂತ್ರ

6) ಮೇಲ್ವಿಚಾರಣಾ ಕ್ರಮಗಳು

ಹೀಗೆ ಹಲವಾರು ವಿಚಾರಗಳಲ್ಲಿ ಮಾಹಿತಿ ನೀಡಿ ಪಾರದರ್ಶಕತೆ ತರಬಹುದು. 1992ರಲ್ಲಿ ವಿಶ್ವಬ್ಯಾಂಕ್ ತನ್ನ ವರದಿಯಲ್ಲಿ ಉತ್ತಮ ಆಡಳಿತ ಸಾಧನೆಗೆ ಪಾರದರ್ಶಕತೆಯ ಅವಶ್ಯಕತೆಯನ್ನು ತಿಳಿಸಿದೆ. ಪಾರದರ್ಶಕತೆಯೆಂದರೆ "ಮುಕ್ತವಾಗಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಮತ್ತು ಸಾರ್ವಜನಿಕರಿಗೆ ಮಾಹಿತಿ ದೊರಕುವ ಸ್ವಾತಂತ್ರತೆ" ಆಗಿದೆ.

**ಆಡಳಿತದಲ್ಲಿ ಪಾರದರ್ಶಕತೆ ತರಲು ತಂತ್ರಗಳು:**

1) ಆಡಳಿತಗಾರರು ಸಾರ್ವಜನಿಕ ನಿಧಿಯನ್ನು ಕಾಳಜಿಪೂರ್ವಕವಾಗಿ ಉಪಯೋಗಿಸಬೇಕು

2) ಕಾರ್ಯನಿರ್ವಹಣೆಯಲ್ಲಿ ಜಾತಿ ಮತ್ತು ವ್ಯಕ್ತಿ ಕುರಿತು ಪೂರ್ವಗ್ರಹ ಪೀಡನೆ ಇರಬಾರದು

3) ಸಾರ್ವಜನಿಕ ಹಣ ಮತ್ತು ಸಮಯದ ದುರ್ಬಳಕೆಗೆ ಅಧಿಕಾರಿಗಳನ್ನೇ ಹೊಣೆ ಮಾಡಬೇಕು

4) ನಿಧಾನಗತಿಯ ಆಡಳಿತಕ್ಕೆ ಕಾರಣವಾಗುವ ಅಸಂಬದ್ದವಾದ ಕಾನೂನುಗಳನ್ನು ತೆಗೆಯಬೇಕು

5) ಜನಸ್ನೇಹಿ ಆಡಳಿತ

**ಈ ಕೆಳಗಿನ ಸಂಸ್ಥೆಗಳ ಮೂಲಕ ಪಾರದರ್ಶಕತೆ:**

1) ಸಂಸದೀಯ ಮತ್ತು ಶಾಸಕಾಂಗ ನಿಯಂತ್ರಣ (ಪ್ರಶ್ನಾವಳಿ ಚರ್ಚೆ)

2) ಶಾಸನಾತ್ಮಕ ರಚನೆಗಳು

3) ಸಾರ್ವಜನಿಕ ತನಿಖಾ ಸಂಸ್ಥೆಗಳು (ಲೋಕಪಾಲ, ಲೋಕಾಯುಕ್ತ)

4) ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ

5) ಇ–ಆಡಳಿತ (ಬೆಂಗಳೂರು ನಾಗರಿಕ ಸೇವಾ ಕೇಂದ್ರ)

6) ಸ್ವತಂತ್ರ ಮಾಧ್ಯಮಗಳು

ಹೀಗೆ ಹಲವಾರು ಸಂಸ್ಥೆಗಳ ಮೂಲಕವಾಗಿ ಆಡಳಿತದಲ್ಲಿ ಪಾರದರ್ಶಕತೆ ತರಬಹುದಾಗಿದೆ.

**ನೈತಿಕ ಸಂಹಿತೆಗಳು (Code of Ethick) ಮತ್ತು ನೀತಿ ಸಂಹಿತೆ (ವರ್ತನಾ ಸಂಹಿತೆ) (Code of Conduct):**

**ನೈತಿಕ ಸಂಹಿತೆ (Code of Ethick):** ಆಧುನಿಕ ಆಡಳಿತ ವ್ಯವಸ್ಥೆಯಲ್ಲಿ ಸಾರ್ವಜನಿಕ ಆಡಳಿತದ ವ್ಯಾಪ್ತಿ ಹೆಚ್ಚಾಗಿದ್ದು ಆಡಳಿತವರ್ಗವು ಅಧಿಕಗೊಂಡಿದೆ. ಈ ನಿಟ್ಟಿನಲ್ಲಿ ಒಂದು ಸಂಸ್ಥೆಯು ತನ್ನ ಪ್ರಾಥಮಿಕ ಮೌಲ್ಯಗಳ ಮತ್ತು ನೈತಿಕ ಮಟ್ಟಗಳ ಅನುಸಾರ ವರ್ತಿಸುವಂತೆ ತನ್ನ ಉದ್ಯೋಗಿಗಳಿಗೆ ಹೊರಡಿಸಿದ ಲಿಖಿತ ಮಾರ್ಗಸೂಚಿಯೇ ನೈತಿಕ ಸಂಹಿತೆಯಾಗಿದೆ. ಇದು ಸಂಬಂಧಪಟ್ಟ ಉದ್ಯೋಗಿಯ ಸಂಸ್ಥಾ ಮೌಲ್ಯಗಳ ಮತ್ತು ನೈತಿಕ ಮಟ್ಟಗಳ ಮತ್ತು ನಿರ್ಧಾರ ಕೈಗೊಳ್ಳುವಿಕೆಯನ್ನು ಖಾತ್ರಿಪಡಿಸುತ್ತದೆ.

**ಇದು ಒಳಗೊಂಡಿರುವ ಮೌಲ್ಯಗಳೆಂದರೆ:**

* ಸಮಗ್ರತೆ
* ನಿಷ್ಪಕ್ಷಪಾತತೆ
* ಹೊಣೆಗಾರಿಕೆ
* ಕರ್ತವ್ಯ ನಿಷ್ಠತೆ
* ವೃತ್ತಿ ಬದ್ದತೆ
* ಆದರ್ಶಪ್ರಾಯ ವರ್ತನೆ
* ಮಾನವೀಯತೆ
* ವಸ್ತುನಿಷ್ಠತೆ
* ಅನುಕಂಪ

**ಆಡಳಿತದಲ್ಲಿ ನೈತಿಕ ಸಂಹಿತೆಗಳ ಮಹತ್ವ:**

1) ಇದು ಆಡಳಿತಗಾರರನ್ನು ಮತ್ತು ಉದ್ಯೋಗಿಗಳನ್ನು ಹೆಚ್ಚು ಹೊಣೆಗಾರಿಕೆಯಾಗುವಂತೆ ಮಾಡುತ್ತದೆ

2) ನಾಗರಿಕ ಸೇವಾ ವರ್ಗವು ಅಧಿಕಾರವನ್ನು ದುರುಪಯೋಗ ಪಡಿಸದಂತೆ ನಿರ್ಬಂಧಿಸುತ್ತದೆ

3) ಆಡಳಿತದಲ್ಲಿ ಮತ್ತು ವೈಯಕ್ತಿಕ ಜೀವನದಲ್ಲಿ ನೈತಿಕ ಜೀವನದುದ್ದಕ್ಕೆ ಆದ್ಯತೆ ಕೊಡುವಂತೆ ಮಾಡುತ್ತದೆ

4) ಅಧಿಕಾರಿಗಳು ಜನತೆಗೆ ಸ್ಪಂದಿಸುವಂತಾಗುತ್ತದೆ

5) ಅಧಿಕಾರಿಗಳ ತೀರ್ಮಾನದಲ್ಲಿ ನಿರಂಕುಶತ್ವ ಕಡಿಮೆಯಾಗುತ್ತದೆ

6) ಆಡಳಿತದಲ್ಲಿ ಸಾರ್ವಜನಿಕರ ಭಾಗವಹಿಸುವಿಕೆ

7) ಸಾರ್ವಜನಿಕ ಸೇವಕರಲ್ಲಿ ಮಾನವೀಯ ಮೌಲ್ಯ ಬೆಳೆಸಲು ಸಹಕರಿಸುತ್ತದೆ

8) ವೃತ್ತಿ ಬದ್ದತೆ ಹೆಚ್ಚಳ.

**ನೀತಿ ಸಂಹಿತೆ (Code of Conduct):**

ಸಾರ್ವಜನಿಕ ಆಡಳಿತದಲ್ಲಿ ನೀತಿ ಸಂಹಿತೆಗಳು ಬಹಳ ಮುಖ್ಯವಾದವು. ಇವು ಸಮಾಜ ಮತ್ತು ಆಡಳಿತದ ಮೇಲೆ ಪರಿಣಾಮವನ್ನು ಬೀರುವಂತಹವು. "ನೀತಿ ಸಂಹಿತೆಯು ನಡತೆಯ ನಿಯಮಗಳಾಗಿದ್ದು ಸಂಸ್ಥೆಗಳು ತನ್ನ ಉದ್ಯೋಗಿಗಳಿಂದ ನಿರೀಕ್ಷಿಸುವ ವರ್ತನೆಗಳಾಗಿವೆ. ಇವನ್ನು ಸದಾಚಾರ ಸಂಹಿತೆ ಎಂದು ಕರೆಯಲಾಗುತ್ತದೆ. "ಸಾರ್ವಜನಿಕ ಸೇವಕರು ತಮಗಿಷ್ಟ ಬಂದಂತೆ ವರ್ತಿಸಿ ಏನನ್ನಾದರೂ ಮಾಡಬಹುದು ಎಂಬ ಮನೋಧೋರಣೆ ಹೋಗಲಾಡಿಸಲು ಸರ್ಕಾರವು ನೀತಿ ಸಂಹಿತೆ ಜಾರಿಗೆ ತಂದಿದೆ. ಸಾಮಾನ್ಯವಾಗಿ ಸರ್ಕಾರವು ಪ್ರತಿಯೊಂದು ಇಲಾಖೆಯ ಉದ್ಯೋಗಿಗಳಿಗೆ ನೀತಿ ಸಂಹಿತೆಗಳನ್ನು ರೂಪಿಸಿ ಜಾರಿಗೆ ತಂದಿರುತ್ತದೆ.

ಉದಾ:

1) ಅಖಿಲ ಭಾರತ ಸೇವಾ ನಿಯಮ 1954

2) ಕೇಂದ್ರ ನಾಗರಿಕ ಸೇವಾ ನಿಯಮ 1955

3) ರೈಲ್ವೆ ಸೇವೆಗಳ ನಿಯಮ 1956

4) ಕರ್ನಾಟಕ ನಾಗರಿಕ ಸೇವಾ ನಿಯಮ 1956

ನೀತಿ ಸಂಹಿತೆಗಳಲ್ಲಿ ಕಂಡು ಬರುವ ಅಂಶಗಳೆಂದರೆ:

1) ಸಾರ್ವಜನಿಕ ಸೇವಕರು ಮತ್ತು ಮೇಲಾಧಿಕಾರಿಗಳ ನಡುವಿನ ಸಂಬಂಧ

2) ರಾಷ್ಟ್ರಕ್ಕೆ ವಿಧೇಯತೆ

3) ರಾಜಕೀಯ ತಟಸ್ಥತೆ

4) ಖಾಸಗಿ ಮತ್ತು ಕೌಟುಂಬಿಕ ಜೀವನದ ನೀತಿಗಳು

5) ಸೇವಾ ನಿಷ್ಠತೆ

6) ಅಧಿಕಾರದ ಸಮಗ್ರತೆ

7) ಸರ್ಕಾರದ ಆದೇಶಗಳು

8) ಪರಿಸ್ಥಿತಿ ನಿರ್ಣಾಯಕ ಅಂಶಗಳು

**ಆಡಳಿತದಲ್ಲಿ ನೀತಿ ಸಂಹಿತೆ ಮಹತ್ವ:**

1) ಸಾರ್ವಜನಿಕ ಸೇವಕರು ಸರ್ಕಾರದ ನಿಯಮಗಳಿಗೆ ಮತ್ತು ಆದೇಶಗಳಿಗೆ ವಿಧೇಯರಾಗಿರುವಂತೆ ಮಾಡುವುದು

2) ಮೇಲಾಧಿಕಾರಿಗಳ ಜೊತೆ ಉತ್ತಮವಾದ ನಡತೆಯಿಂದ ವರ್ತಿಸುವಂತೆ ಮಾಡುತ್ತದೆ

3) ಸರ್ಕಾರದ ಸೇವಾ ರಹಸ್ಯ ಕಾಯ್ದುಕೊಳ್ಳಲು

4) ಅಧಿಕಾರ ವ್ಯಾಪ್ತಿ ಮೀರದಂತೆ ತಡೆಯಲು

5) ಸಾರ್ವಜನಿಕ ಸೇವಕರ ಆಸ್ತಿ ಮಾರಾಟ

6) ಆಡಳಿತದಲ್ಲಿ ಸ್ವಜನ ಪಕ್ಷಪಾತ ತಡೆಯಲು

7) ಆಡಳಿತದಲ್ಲಿ ಕರ್ತವ್ಯ ಲೋಪ ಮತ್ತು ಅದಕ್ಷತೆ ತಪ್ಪಿಸಲು

8) ಸಾರ್ವಜನಿಕ ಸೇವಕರಲ್ಲಿ ಪಾರದರ್ಶಕತೆ ಮತ್ತು ಮಾಹಿತಿ ಹಂಚಿಕೆ ಕಾಯ್ದುಕೊಂಡು ಹೋಗಲು. ಒಟ್ಟಾರೆಯಾಗಿ ನೈತಿಕ ಸಂಹಿತೆಯು ಒಳ್ಳೆಯ ವರ್ತನೆಗೆ ಮತ್ತು ಆಡಳಿತ ಮಾರ್ಗದರ್ಶನ ನೀಡುವ ತತ್ವ ಪಟ್ಟಿಯಾಗಿದೆ. ಆದರೆ ನೀತಿ ಸಂಹಿತೆಯು ಹೀಗೆ ವರ್ತಿಸಬೇಕು ಎಂದು ಗೊತ್ತು ಮಾಡಿದ ನಡವಳಿಕಾ ಸಂಗ್ರಹ ಪಟ್ಟಿಯಾಗಿದೆ.

**ನಾಗರಿಕ ಸನ್ನದ್ದು (Citizen Charter):**

ಆಡಳಿತದಲ್ಲಿ ಸಾರ್ವಜನಿಕರ ಸಹಭಾಗಿತ್ವವು ಪ್ರಜಾಪ್ರಭುತ್ವದ ಜೀವಾಳವಾಗಿದೆ. "ಆಧುನಿಕ ರಾಷ್ಟ್ರಗಳು ಕಲ್ಯಾಣ ರಾಷ್ಟ್ರಗಳಾಗಿದ್ದು ನಾಗರಿಕರಿಗೆ ಶಿಕ್ಷಣ, ಆರೋಗ್ಯ, ವಸತಿ ಮುಂತಾದ ಸೇವೆಗಳನ್ನು ನೀಡುತ್ತದೆ. ಈ ಸೇವೆಗಳು ಸಕಾಲದಲ್ಲಿ ಜನರಿಗೆ ತಲುಪುವಲ್ಲಿ ಇರುವ ತೊಂದರೆಗಳನ್ನು ದೂರ ಮಾಡಲು ನಾಗರಿಕ ಸನ್ನದ್ದು ರೂಪಿಸಲಾಗಿದೆ.

ಕೇಂದ್ರ ಸರ್ಕಾರವು ನಾಗರಿಕ ಸನ್ನದ್ದು ಕಾಯ್ದೆಯನ್ನು 2011ರಲ್ಲಿ ಜಾರಿಗೆ ತಂದಿಜದೆ. ಕರ್ನಾಟಕವೂ ಸೇರಿದಂತೆ 15 ರಾಜ್ಯಗಳು ಈಗಾಗಲೇ ಕಾನೂನು ಜಾರಿಗೊಳಿಸಿದ್ದು ಜನರ ಮನ್ನಣೆ ಗಳಿಸಿದೆ. ವಿಶ್ವಮಟ್ಟದಲ್ಲಿ ನೋಡುವುದಾದರೆ ಬ್ರಿಟೀಷ್ ಸರ್ಕಾರವು 1991ರಲ್ಲಿ ಇದನ್ನು ರೂಪಿಸಿತು. ಜಾನ್ ಮೇಯರ್‌ನನ್ನು ನಾಗರಿಕ ಸನ್ನದ್ದಿನ ಪಿತಾಮಹ ಎಂದು ಕರೆಯಲಾಗುತ್ತಿದೆ.

**ನಾಗರಿಕ ಸನ್ನದ್ದಿನ 6 ಲಕ್ಷಣಗಳು ಅಥವಾ ಮಹತ್ವಗಳು:**

1) ಸಾರ್ವಜನಿಕ ಸಂಸ್ಥಾ ಕಾರ್ಯನಿರ್ವಹಣೆ ಜಾಹಿರು ಮಾಡುವುದು

2) ಸೇವೆಗಳ ಗುಣಮಟ್ಟದ ಭರವಸೆ

3) ಸೌಜನ್ಯ ಮತ್ತು ಸಹಾಯಕ ಮನೋಭಾವದಿಂದ ಮಾಹಿತಿ ದೊರೆಯುವ ವ್ಯವಸ್ಥೆ

4) ದೂರು ಸ್ವೀಕಾರ ಪ್ರಕ್ರಿಯೆ ಭರವಸೆ ಸರಳೀಕರಣ

5) ನಾಗರೀಕರ ಸಲಹೆ ಪರಿಗಣನೆ

**ನಾಗರಿಕ ಸನ್ನದ್ದಿನ ಅಂಶಗಳು:**

1) ದೃಷ್ಟಿಕೋನ ಹಾಗೂ ಗುರಿ

2) ಉದ್ಯಮ ವಹಿವಾಟಿನ ವಿವರ

3) ಗ್ರಾಹಕರ ಬಗೆಗೆ ವಿವರ

4) ನಿರ್ದಿಷ್ಟ ಸಮಯದ ವಿವರ

5) ದೂರು ನಿವಾರಣಾ ವ್ಯವಸ್ಥೆ

**ನಾಗರಿಕ ಸನ್ನದ್ದಿನ ಅಳವಡಿಕೆಯಲ್ಲಿ ತೊಡಕುಗಳು:**

1) ಜ್ಞಾನದ ಮತ್ತು ತಿಳುವಳಿಕೆಯ ಅಭಾವ

2) ಅಸಮರ್ಪಕ ಪ್ರಚಾರ

3) ಫಲಾನುಭವಿಗಳ ನಿರಾಸಕ್ತಿ

4) ನಂಬಿಕೆಯ ಖೋತಾ

5) ಕಾರ್ಯಕಾರಿ ಮತ್ತು ಮೇಲ್ವಿಚಾರಣಾ ಸಿಬ್ಬಂದಿ ನಿರಂಕುಶತ್ವ

6) ತಂಡ ಕಾರ್ಯದ ಕೊರತೆ

7) ಹೊಣೆಗಾರಿಕೆ ಮತ್ತು ಜವಾಬ್ದಾರಿ ಕೊರತೆ

8) ದೀರ್ಘ ಮತ್ತು ಸಂಕೀರ್ಣ ಕಾರ್ಯ ವಿಧಾನಗಳು

**ವೃತ್ತಿ ಸಂಸ್ಕೃತಿ ಶ್ರಮ ಸಂಸ್ಕೃತಿ (Work Culture):**

ಕೆಲವು ನಿರ್ದಿಷ್ಟ ಗುರಿ ಹಾಗೂ ಉದ್ದೇಶಗಳನ್ನು ಹೊಂದಿದೆ, ಅದರ ಸಾಧನೆಗಾಗಿ ಕೆಲವು ವ್ಯಕ್ತಿಗಳನ್ನು ಒಂದು ವೇದಿಕೆಯ ಮೇಲೆ ತಂದು ಅವರನ್ನು ಒಗ್ಗೂಡಿಸಿ, ಪ್ರೇರೇಪಿಸಿ ಅವರೆಲ್ಲ ಉತ್ತಮ ಚಿಂತನೆ ಮತ್ತು ಕ್ರಿಯಾ ಪರಿಸರ ಸೃಷ್ಟಿಸುವುದೇ ವೃತ್ತಿ ಸಂಸ್ಕೃತಿ.

**ಆರೋಗ್ಯಕರ ವೃತ್ತಿ ಸಂಸ್ಕೃತಿಯ ಗುಣಲಕ್ಷಣಗಳು:**

1) ಸಾಮಾನ್ಯವಾಗಿ ಇದು ಅನೌಪಚಾರಿಕವಾದದ್ದು

2) ಪ್ರತಿ ಉದ್ಯೋಗಿ ತಮ್ಮ ಸಹೋದ್ಯೋಗಿಗಳನ್ನು ಗೌರವಿಸುತ್ತಾರೆ. ಅಂದರೆ ಅವರ ಜೊತೆ ಸೌಹಾರ್ದಯುತ ವರ್ತನೆಯಿಂದಿರುತ್ತಾರೆ

3) ಘರ್ಷಣೆಗಳ ಸಂಖ್ಯೆ ಕಡಿಮೆ

4) ಮೇಲಾಧಿಕಾರಿಗಳಿಂದ ಎಲ್ಲಾ ಉದ್ಯೋಗಿಗಳು ಒಂದೇ ರೀತಿಯಲ್ಲಿ ಪರಿಗಣಿಸಲ್ಪಡುತ್ತಾರೆ (ನಿಷ್ಪಕ್ಷಪಾತತೆ)

5) ಅವರ ಕೆಲಸದಿಂದ ಮಾತ್ರ ಸಾಮರ್ಥ್ಯ ಅಳೆಯಲಾಗುತ್ತದೆ ಹೊರತು ಜಾತಿ ಧರ್ಮದ ಹಿನ್ನೆಲೆಯಿಂದಲ್ಲ

6) ಕೆಲಸ ಮಾಡುವವರನ್ನು ಇಲ್ಲಿ ಹುರಿದುಂಬಿಸಲಾಗುತ್ತದೆ

7) ಉದ್ಯೋಗಿಗಳ ಧನಾತ್ಮಕ ಮತ್ತು ಋಣಾತ್ಮಕ ಪ್ರತ್ಯುತ್ತರಗಳೆರಡೂ ಸರಿಯಾಗಿ ಪರಿಗಣಿಸಲಾಗುತ್ತದೆ

8) ಎಲ್ಲಾ ಉದ್ಯೋಗಿಗಳಿಗೆ ತಮ್ಮ ವೃತ್ತಿಯ ಬಗ್ಗೆ ಒಲವು, ಆಸಕ್ತಿ, ಗೌರವ ಮತ್ತು ನಿಷ್ಠೆ ಇರುತ್ತದೆ

9) ಪ್ರೀತಿಯ ಮಾರ್ಗದರ್ಶನ

**ವೃತ್ತಿ ಸಂಸ್ಕೃತಿ ಹೆಚ್ಚಿಸಲು ಕ್ರಮಗಳು:**

* ಹಲವು ಮಟ್ಟದ ಶ್ರೇಣಿಕೃತ ವ್ಯವಸ್ಥೆ ಕಡಿತಗೊಳಿಸಿ, ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳಲು ಅನುವಾಗುವಂತೆ ಒಂದೇ ಅಧಿಕಾರಿಯ ನೇಮಕ

* ನೀತಿ ನಿರೂಪಣಾ ಸಂಸ್ಥೆಗಳಲ್ಲಿ ಮತ್ತು ಸಚಿವಾಲಯಗಳಲ್ಲಿ ವಿವಿಧ ವಿಭಾಗ ರದ್ದುಗೊಳಿಸಿ **"ಡೆಸ್ಕ್"** ಅಧಿಕಾರಿ ವ್ಯವಸ್ಥೆ ಜಾರಿ

* ಸಚಿವಾಲಯ ಹುದ್ದೆಗಳಾದ U.D.C L.D.C ಮುಂತಾದ ಹುದ್ದೆ ರದ್ದುಗೊಳಿಸಿ ಇದರ ಬದಲು ಹಲವು ಕೌಶಲ್ಯ ಹೊಂದಿರುವ ಕಂಪ್ಯೂಟರ್ ಬಳಕೆ ನಿಪುಣರಾದ ಕಾರ್ಯನಿರ್ವಾಹಕ ಸಹಾಯಕ ಎಂಬ ಒಂದೇ ಹುದ್ದೆ ತರಬೇಕು

* ಸರ್ಕಾರಿ ಕಛೇರಿಗಳ ಕಂಪ್ಯೂಟರೀಕರಣ

* ನಿಯೋಜಿತ ಅಧಿಕಾರ

* 'ಬಾಬು ಪರಿಸ್ಥಿತಿ' ಬದಲು ಕಡಿಮೆ ಸಿಬ್ಬಂದಿ ಮತ್ತು ನೇರ ಸಮರ್ಥ ಕಾರ್ಯ ವಿಧಾನಗಳು

* ಪ್ರತಿಯೊಬ್ಬ ಉದ್ಯೋಗಿಗೂ ತನ್ನ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ನೀಡಿಕೆ

ಹೀಗೆ ಹಲವಾರು ಕ್ರಮಗಳ ಅನುಕರಣೆಯಿಂದ ವೃತ್ತಿ ಸಂಸ್ಕೃತಿಯಲ್ಲಿ ಶ್ರೇಷ್ಠತೆ ತರಬಹುದು.

**ವೃತ್ತಿ ನೈತಿಕತೆ (Work Ethics):**

ಇದು ಆಡಳಿತಗಾರರಲ್ಲಿ ವೃತ್ತಿಯ ಬಗ್ಗೆ ಸಮರ್ಪಣಾ ಮನೋಭಾವ ಬರುವಂತೆ ಪ್ರೇರೇಪಿಸುತ್ತದೆ.

**ವೃತ್ತಿ ನೈತಿಕತೆಯ ಗುಣಗಳೆಂದರೆ:**

1) ಉತ್ತಮ ಮೌಲ್ಯಗಳು

2) ಪರಿಣಾಮಕಾರಿ ನಾಯಕತ್ವ

3) ಮಧ್ಯಸ್ಥಗಾರರ ಸಮತೋಲನ

4) ಪ್ರಕ್ರಿಯೆ ಸಮಗ್ರತೆ ಇರಬೇಕು

5) ದೀರ್ಘಾವಧಿ ದೃಷ್ಟಿಕೋನ

**ವೈಯಕ್ತಿಕ ಮತ್ತು ವೃತ್ತಿ ನೈತಿಕತೆ:**

ವೈಯಕ್ತಿಕ ನೈತಿಕತೆಯು ವ್ಯಕ್ತಿ ಆಧಾರಿತ ಮತ್ತು ವ್ಯಕ್ತಿಗಳಿಗನುಗುಣವಾಗಿ ಬದಲಾಗುತ್ತಿರುತ್ತದೆ. ಆಧ್ಯಾತ್ಮಿಕ, ಸಾಂಸ್ಕೃತಿಕ ಅಂಶಗಳು ವೈಯಕ್ತಿಕ ನೈತಿಕತೆಯ ಮೇಲೆ ಪ್ರಭಾವ ಬೀರುತ್ತವೆ. ಇಲ್ಲಿ ವ್ಯಕ್ತಿಯು ನೈತಿಕತಾ ಅಂಶಗಳನ್ನು ಕುಟುಂಬ, ಶಿಕ್ಷಕರು ಮತ್ತು ಮಾದರಿ ವ್ಯಕ್ತಿಗಳಿಂದ ಕಲಿಯುತ್ತಾನೆ. ಆತ್ಮಸಾಕ್ಷಿಯ ಪ್ರಭಾವವು ವೈಯಕ್ತಿಕ ನೈತಿಕತೆ ಮೇಲಿರುತ್ತದೆ. ಇನ್ನೊಂದೆಡೆ ವೃತ್ತಿಪರ ನೈತಿಕತೆಯು ಬದಲಾಗುತ್ತಾ ಹೋಗುವುದಿಲ್ಲ. ಕಾನೂನು ನಿಬಂಧನೆಗಳು, ನಿಯಮಗಳು, ನ್ಯಾಯಾಲಯ ಮುಂತಾದವು ವೃತ್ತಿಪರ ನೈತಿಕತೆಯ ಮೇಲೆ ಪ್ರಭಾವ ಬೀರುತ್ತದೆ.

**ವೃತ್ತಿ ಸ್ಥಳದಲ್ಲಿ ನೈತಿಕ ಸಮಸ್ಯೆಗಳೆಂದರೆ:** ಸ್ವಂತ ಹಿತಾಸಕ್ತಿ, ಆರ್ಥಿಕ ಗಳಿಕೆ, ಕೆಲಸ ಕಳೆದುಕೊಳ್ಳುವ ಭಯ, ಹಣಕಾಸಿನ ಅತೃಪ್ತಿ, ಲೈಂಗಿಕ ಕಿರುಕುಳ, ಮಾನಸಿಕ ಒತ್ತಡ, ಕಳಪೆ ದರ್ಜೆ ಸೌಲಭ್ಯ, ತಾರತಮ್ಯ, ಸಂಬಳ, ನಾಯಕತ್ವ ಮುಂತಾದವು.

**ಸೇವೆಗಳ ವಿತರಣೆಯ ಗುಣಮಟ್ಟ:**

ಭಾರತೀಯ ಆಡಳಿತದ ಪ್ರಮುಖ ಉದ್ದೇಶವೇ **"**ಕಲ್ಯಾಣ ರಾಜ್ಯದ ಸೃಷ್ಟಿ**"**. ಇದಕ್ಕಾಗಿ ಇದು ಮಕ್ಕಳಿಂದ–ವೃದ್ದರವರೆಗೂ ಹಲವಾರು ಸೇವೆಗಳನ್ನು ಒದಗಿಸಿಕೊಡುತ್ತಿದೆ. ಈ ನಿಟ್ಟಿನಲ್ಲಿ ಈ ಸೇವೆಗಳ ಗುಣಮಟ್ಟದ ವಿತರಣೆಯ ಮೇಲೆ ಕಲ್ಯಾಣ ರಾಜ್ಯದ ಯಶಸ್ಸು ನಿಂತಿದೆ. ಭಾರತದಲ್ಲಿ ಸಾರ್ವಜನಿಕ ಸೇವೆಗಳ ವಿತರಣೆಯನ್ನು ಉತ್ತಮಪಡಿಸಲು ಗುರುತಿನ ಪಾತ್ರ ವಹಿಸುವ ಮೂರು ಸಂಸ್ಥೆಗಳೆಂದರೆ,

1) ನ್ಯಾಯಾಂಗ

2) ಮಾಧ್ಯಮಗಳು

3) ನಾಗರಿಕ ಸಮೂಹ

**ಸೇವೆಗಳ ವಿತರಣೆಯ ಮಹತ್ವ:**

* ಇದು ಉತ್ತಮ ಆಡಳಿತದ ಪ್ರಮುಖವಾದ ಅಂಶವಾಗಿದೆ
* ಕಲ್ಯಾಣ ರಾಜ್ಯದ ಸೃಷ್ಟಿಯು ಸೇವೆಗಳ ಗುಣಮಟ್ಟದ ಮೇಲೆ ಅವಲಂಬಿತವಾಗಿದೆ
* ದೇಶದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಇದರಿಂದ ಮಾತ್ರ ಸಾಧ್ಯ
* ಸೇವೆಗಳನ್ನು ಪಡೆಯಲು ಅಲೆದಾಡುವ ನಾಗರಿಕರ ಹಣ ಮತ್ತು ಸಮಯದ ಉಳಿತಾಯವಾಗುತ್ತದೆ
* ಸರ್ಕಾರದ ಮೇಲೆ ನಾಗರಿಕ ವಿಶ್ವಾಸ
* ಆಡಳಿತದಲ್ಲಿ ಗುಣಮಟ್ಟ ಮತ್ತು ಅಭಿವೃದ್ಧಿ

**ಸೇವೆಗಳ ವಿತರಣೆ ಸುಧಾರಿಸುವಲ್ಲಿನ ಸವಾಲುಗಳು:**

ಭಾರತೀಯ ಆಡಳಿತ ವ್ಯವಸ್ಥೆಯ ಚಿತ್ರಣದಲ್ಲಿ ಸಾರ್ವಜನಿಕ ಸೇವೆಗಳ ವಿತರಣೆಯಲ್ಲಿ ಕಾರ್ಯ ವಿಧಾನಗಳ ಕೊರತೆ ಎದ್ದುಕಾಣುವಂತಹ ಅಂಶವಾಗಿದೆ. ಇದಕ್ಕೆ ಕಾರಣಗಳೆಂದರೆ,

* ತಳಮಟ್ಟ ಸ್ತರದಲ್ಲಿ ರಾಜಕೀಯ ಮುಖಂಡರ ಗುಂಪು ಹಿತಾಸಕ್ತಿಗಳು

* ರಾಜಕೀಯ ಅಪರಾಧೀಕರಣ ಮತ್ತು ರಾಜಕಾರಣಿ+ವಾಣಿಜ್ಯೋದ್ಯಮಿ+ಸರ್ಕಾರಿ ಅಧಿಕಾರಿಗಳ ಅಪವಿತ್ರ ಸಂಬಂಧ

* ಭ್ರಷ್ಟಾಚಾರವನ್ನು ಶಿಕ್ಷಿಸುವಲ್ಲಿ ವ್ಯವಸ್ಥೆಯಲ್ಲಿನ ದೌರ್ಬಲ್ಯಗಳು

* ಮತಧರ್ಮ ಮತ್ತು ಸಂಸ್ಕೃತಿಗಳು

* ಶ್ರೀಮಂತ ಮತ್ತು ಸಂಘಟಿತ ವಲಯದ ಬೇಡಿಕೆಗಳನ್ನು ಮನ್ನಿಸುತ್ತಾ ದುರ್ಬಲರು ಮತ್ತು ಮಹಿಳೆಯರನ್ನು ಉಪೇಕ್ಷಿಸುತ್ತಿರುವುದು

* ಮಾಹಿತಿ ತಂತ್ರಜ್ಞಾನದ ದೊಡ್ಡ ಮಟ್ಟದ ಅವಿಷ್ಕಾರವಾಗಿದ್ದರೂ ಅಳವಡಿಕೆಯಲ್ಲಿ ಜ್ಞಾನದ ಕೊರತೆ

* ಆಡಳಿತದ ಸಂಕೀರ್ಣ ಕಾನೂನು

* ಗ್ರಾಮ ಪಂಚಾಯಿತಿ ಮಟ್ಟದ ಅದಕ್ಷ ಆಡಳಿತ

* ಅರ್ಹ ಫಲಾನುಭವಿಗಳ ಗುರುತಿಸುವಲ್ಲಿ ವೈಫಲ್ಯ

* ಸಿಬ್ಬಂದಿಗೆ ತರಬೇತಿ ನ್ಯೂನತೆ

**ಸೇವೆಗಳ ವಿತರಣೆ ಸುಧಾರಣಾ ಸಲಹೆಗಳು:**

1) ಮೂರು ಮುಖ್ಯ ಪಾತ್ರಗಳಾದ ಸರ್ಕಾರ, ಮಾರುಕಟ್ಟೆ, ನಾಗರಿಕ ಸಮಾಜಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು

2) ಸರ್ಕಾರ ಕೈಗೊಳ್ಳುವ ತೀರ್ಮಗಳು ರಚಿಸುವ ನೀತಿ ಮತ್ತು ಯೋಜನೆಗಳಲ್ಲಿ ನಾಗರಿಕ ಪಾಲ್ಗೊಳ್ಳುವಿಕೆ ಹೆಚ್ಚಿಸುವುದು

3) ಆಡಳಿತ ವಿಕೇಂದ್ರೀಕರಣ ಪ್ರಬಲವಾಗಬೇಕು

4) ಸೇವೆಗಳ ವಿಲೇವಾರಿ ತಡವಾದರೆ ಪರಿಹಾರ

5) ಸರ್ಕಾರದ ಸೌಲಭ್ಯ ಕುರಿತು ಜನತೆಗೆ ಪ್ರಚಾರ

6) ಸಿಬ್ಬಂದಿ ನಡವಳಿಕಾ ಬದಲಾವಣೆ ತರಬೇತಿ

7) ಅತ್ಯುತ್ತಮ ಸೇವಾ ನಿರ್ವಾಹಕರನ್ನು ಗುರುತಿಸಿ ಸನ್ಮಾನಿಸಿ ಮರಸ್ಕರಿಸಬೇಕು

8) ಅಭಿವೃದ್ದಿ ಮತ್ತು ಸೇವಾ ವಿತರಣೆಗೆ ಅಡ್ಡಿಯಾಗುವ ಕಾನೂನು ತೆಗೆದು ಹಾಕಬೇಕು

9) ಸರ್ಕಾರಿ ಸೇವಾ ವಿತರಣೆಗೆ ಕಾಲ ಮಿತಿಯನ್ನು ನಿಗದಿಪಡಿಸಬೇಕು

10) ಸೇವಾ ವಿತರಣೆಯಲ್ಲಿ ಏಕನವಾಕ್ಷಿ ವ್ಯವಸ್ಥೆ ಬಲಪಡಿಸುವಿಕೆ.

ಹೀಗೆ ಹಲವಾರು ಸುಧಾರಣಾ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು.

**ಸಾರ್ವಜನಿಕ ಹಣಕಾಸಿನ ಸದ್ಬಳಕೆ:**

ಸಾರ್ವಜನಿಕ ನಿಧಿಯು ಸಾರ್ವಜನಿಕ ಆಡಳಿತಕ್ಕೆ ಅನಿವಾರ್ಯವಾಗಿದೆ. ಸಾರ್ವಜನಿಕ ಆಡಳಿತದ ಸಾಧನೆ ಸಾರ್ವಜನಿಕ ಹಣಕಾಸಿನ ಸೂಕ್ತ ವ್ಯವಸ್ಥೆಯನ್ನು ಅವಲಂಬಿಸಿದೆ.

ಸಾರ್ವಜನಿಕ ಆಡಳಿತ ವ್ಯವಸ್ಥೆಯ ಮಂತ್ರವೆಂದರೆ ಸಾರ್ವಜನಿಕ ನಿಧಿಯು "ಇಂಧನ"ದಂತೆ. ಸರ್ಕಾರ ಖರ್ಚು ಮಾಡುವ ಹಣ ಸಾರ್ವಜನಿಕರದ್ದು. ಹಾಗಾಗಿ ಇದರ ಮೇಲೆ ಸರಿಯಾದ ನಿಯಂತ್ರಣ ಅವಶ್ಯಕ. ಇಲ್ಲಿ ಎರಡು ವಿಧಾನಗಳ ಮೂಲಕ ನಿಯಂತ್ರಣ.

1) ಆಂತರಿಕ

2) ಬಾಹ್ಯ

**ಆಂತರಿಕ ನಿಯಂತ್ರಣ:** ಹಣಕಾಸು ಮಂತ್ರಾಲಯವು ಸಾರ್ವಜನಿಕ ನಿಧಿಯನ್ನು ಆಂತರಿಕವಾಗಿ ನಿಯಂತ್ರಿಸುತ್ತದೆ. ಇದು ಹಣಕಾಸು ನಿರ್ವಹಣೆಯೊಂದಿಗೆ ರಾಷ್ಟ್ರದ ಆರ್ಥಿಕ ವ್ಯವಸ್ಥಾಪನೆ ಮಾಡುತ್ತದೆ. ಇತರ ಇಲಾಖೆಗಳಿಗೆ ವೆಚ್ಚಗಳಿಗೆ ಮಂಜೂರು ಮಾಡುವ, ಅನುದಾನಗಳ ಪುನರ್ವಿನಿಯೋಗ ಮತ್ತು ಲೆಕ್ಕ ಪರಿಶೋಧನೆ ಮೂಲಕ ನಿಯಂತ್ರಣ ಮಾಡುತ್ತದೆ.

**ಬಾಹ್ಯ ನಿಯಂತ್ರಣ:**

1) ಲೆಕ್ಕ ಪರಿಶೋಧನೆ

2) ಶಾಸಕಾಂಗ ಸಮಿತಿಗಳ ಮೂಲಕ;

* ಸಾರ್ವಜನಿಕ ಲೆಕ್ಕ ಸಮಿತಿ
* ಅಂದಾಜು ಸಮಿತಿ
* ಸಾರ್ವಜನಿಕ ಉದ್ಯಮ ಸಮಿತಿ
* ಬಜೆಟ್ ಅಧಿವೇಶನದಲ್ಲಿ

**ಭ್ರಷ್ಟಾಚಾರದ ಕಾರಣಗಳು:**

1) ಮನುಷ್ಯನ ಸ್ವಭಾವ, ಸ್ವಾರ್ಥ, ಅಹಂಭಾವ ತೃಪ್ತಿಯಾಗದ ಕೀಳು ಮನಸ್ಥಿತಿ

2) ಬದುಕಿಗಿರುವ ಭಯ ಸುರಕ್ಷೆ ಅನೈತಿಕ ಸಮಾಜ

3) ಆರ್ಥಿಕ ಕೊರತೆ

4) ಸಾಮಾಜಿಕ ಪರಿಸರ ಅಧಿಕಾರ ಅಂತಸ್ತು

5) ನೈತಿಕತೆ ಕೊರತೆ

6) ರಾಜಕೀಯ ಭ್ರಷ್ಟಾಚಾರ

7) ಜಾತಿಪದ್ಧತಿ

8) ಭ್ರಷ್ಟಾಚಾರದ ಸಾರ್ವಜನಿಕ ಒಪ್ಪಿಗೆ

9) ವಿಳಂಬ ಆಡಳಿತ ನೀತಿ

10) ಸಂಕೀರ್ಣ ಶಾಸನಾತ್ಮಕ ಕಾರ್ಯ ವಿಧಾನ

11) ತಂತ್ರಜ್ಞಾನದ ಸಮಸ್ಯೆ

12) ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆಯ ಕೊರತೆ

**ಭಾರತದಲ್ಲಿ ಭ್ರಷ್ಟಾಚಾರದ ಕಾನೂನುಗಳು:**

1) ಕೇಂದ್ರ ಸರ್ಕಾರವು 1948 / 1988ರಲ್ಲಿ ಭ್ರಷ್ಟಾಚಾರ ತಡೆಯುವ ಕಾಯ್ದೆ ಜಾರಿಗೆ ತಂದಿದೆ

2) 1963 ಸಿ.ಬಿ.ಐ

3) 1964 ವಿಚಕ್ಷಣಾ ದಳ

4) 1985 ಆರ್ಥಿಕ ಬೇಹುಗಾರಿಕೆ ದಳ

5) ಕೇಂದ್ರ ನಾಗರಿಕ ಸೇವೆಗಳ ನಡತೆ ಸಂಹಿತೆ

6) ಸೇವೋತ್ತಮ

7) ಬೇನಾಮಿ ವ್ಯವಹಾರ ನಿಷೇಧ ಕಾಯ್ದೆ 1988

8) ಶಿಳ್ಳೆ ನಡೆಸುವವರ ರಕ್ಷಣಾ ಮಸೂದೆ 2011

9) ಐ.ಪಿ.ಸಿ. ಕಾಯ್ದೆಗಳು

10) ಲೋಕಪಾಲ್ ಮತ್ತು ಲೋಕಾಯುಕ್ತ

**ಭ್ರಷ್ಟಾಚಾರ ತಡೆ ಕಾಯ್ದೆ 1968:**

ಇದರ ಸೆಕ್ಷನ್ 8ರ ತಿದ್ದುಪಡಿ ಮೂಲಕ ಇದು ಸೇವಕರಷ್ಟೇ ಅಲ್ಲದೆ ನಾಗರಿಕರನ್ನು ಒಳಗೊಳ್ಳುತ್ತದೆ. ಸೆಕ್ಷನ್ 12ರ ಪ್ರಕಾರ ಲಂಚವನ್ನು ಕೊಡುವುದು ಮತ್ತು ತೆಗೆದುಕೊಳ್ಳುವುದು ಶಿಕ್ಷೆಗೆ ಗುರಿಯಾಗುತ್ತದೆ.

**ಬೆನಾಮಿ ವ್ಯವಹಾರ ನಿಷೇಧ ಕಾಯ್ದೆ 1980:**

ಇಲ್ಲಿ ಬೆನಾಮಿ ಸಂಪತ್ತು ಕುರಿತು ವಿಸ್ತೃತವಾದ ವ್ಯಾಖ್ಯೆ ನೀಡಲಾಗಿದೆ. ದಾಯಾದಿಗಳು, ಹಿಸ್ಸೆದಾರರು ಸಂಪತ್ತು ಆಸ್ತಿಯನ್ನು ಹೊಂದಿದ್ದರೆ ಅವನ್ನು ಈ ಕಾಯ್ದೆಯಡಿ ತರಲಾಗಿದೆ. ತೆರಿಗೆ ವಂಚನೆ ಮಾಡಲು ಬೆನಾಮಿ ಆಸ್ತಿ ಮಾಡಿದ್ದರೆ ದಂಡ ಮತ್ತು ಶಿಕ್ಷೆ ಮತ್ತು ಸರ್ಕಾರ ಆ ಆಸ್ತಿ ವಶಪಡಿಸಿಕೊಳ್ಳಬಹುದು. ಇದೊಂದು ಜಾಗತಿಕ ಸಮಸ್ಯೆಯಾಗಿದ್ದು ಯು.ಎನ್.ಓ ಒಪ್ಪಂದದಡಿ ಭಾರತ ಸರ್ಕಾರ ಈ ಕಾಯ್ದೆ ಜಾರಿಗೆ ತಂದಿದೆ. ಇದರಲ್ಲಿ "ಇನ್‌ಕಮ್ ಟ್ಯಾಕ್ಸ್", ಕಸ್ಟಮ್ ಆಕ್ಟ್, ಫೆಮಾ ಎಲ್ಲವನ್ನು ಸೇರಿಸಲಾಗಿದೆ.

**ಭ್ರಷ್ಟಾಚಾರ ನಿಯಂತ್ರಣ ತಂತ್ರಗಳು:**

1) ಹೆಚ್ಚಿನ ಹೊಣೆಗಾರಿಕೆ ದೃಢಪಡಿಸುವುದು

2) ಮಾಹಿತಿ ಪ್ರಸರಣೆ

3) ಸೇವೆಯ ಗುಣಮಟ್ಟ ಗುರುತಿಸುವುದು

4) ಸ್ಥಳೀಯ ಸರ್ಕಾರ ಭದ್ರಗೊಳಿಸುವುದು

5) ವಿಕೇಂದ್ರೀಕರಣ

6) ನಾಗರಿಕ ಸಹಭಾಗಿತ್ವದಲ್ಲಿ ನಿರ್ಧಾರ ತೆಗೆದುಕೊಳ್ಳುವುದರ ಮೂಲಕ

7) ನ್ಯಾಯಾಂಗದಲ್ಲಿ ಸುಧಾರಣೆ

8) ಆಸ್ತಿ ಬಹಿರಂಗ

**ಭ್ರಷ್ಟಾಚಾರದ ಪ್ರಮುಖ ಕ್ಷೇತ್ರಗಳು:**

1) ರಾಜಕೀಯ

2) ಪೋಲಿಸ್

3) ಖಾಸಗಿ ಕಂಪನಿ

4) ಮಾಧ್ಯಮ

5) ನಾಗರಿಕ ಸೇವಾಧಿಕಾರಿ

6) ನ್ಯಾಯಾಲಯ

**ನೈತಿಕತೆಗೆ ಸಂಬಂಧಿಸಿದಂತೆ ಎರಡನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳು:** ವೀರಪ್ಪ ಮೊಯ್ಲಿಯವರ ನೇತೃತ್ವದ ಎರಡನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳು ಈ ಕೆಳಕಂಡಂತಿವೆ.

1) ಚುನಾಯಿತ ಪ್ರತಿನಿಧಿಗಳ ನೀತಿ ಪಾಲನೆಗಾಗಿ ನೈತಿಕ ಆಯೋಗದ ರಚನೆ

2) ನ್ಯಾಯಾಧೀಶರ ನಡತೆ ನಿಯಂತ್ರಣಕ್ಕಾಗಿ ನೀತಿ ಸಂಹಿತೆ ರಚನೆ

3) ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಮೂಲಕ ಸರ್ಕಾರಿ ಅಧಿಕಾರಿಗಳ ನೀತಿ ಸಂಹಿತೆ

4) ಭ್ರಷ್ಟಾಚಾರ ವಿರುದ್ದ ವಿದ್ಯುನ್ಮಾನ ತಂತ್ರದ ಮೂಲಕ ದೂರು ಸಲ್ಲಿಕೆ

5) ರಾಷ್ಟ್ರೀಯ ನ್ಯಾಯ ಮಂಡಳಿ ರಚನೆ

6) ಸರ್ಕಾರದ ಲೆಕ್ಕಪತ್ರದಲ್ಲಿಯ ಮೋಸವನ್ನು ಜನರು ಪ್ರಶ್ನಿಸುವಂತೆ ಜನತೆ ಸರ್ಕಾರದ ಲೆಕ್ಕ ಕೇಳುವ ಕಾನೂನು ಜಾರಿ

7) ಲೋಕಪಾಲ್ ಮತ್ತು ಲೋಕಾಯುಕ್ತ ನೇಮಕಾತಿಗಾಗಿ ಪ್ರತ್ಯಕ್ಷ ಸಮಿತಿ ರಚನೆ

8) ಸಂಪುಟ ಸಚಿವರ ವರ್ತನೆ ನಿಯಂತ್ರಣದ ನೈತಿಕ ನಿಯಮ ರಚನೆ

9) ನಷ್ಟ ಮಾಡಿದ ಅಧಿಕಾರಿಗಳಿಂದ ನಷ್ಟವನ್ನು ಭರ್ತಿ ಮಾಡಿಕೊಳ್ಳುವುದು

10) ತ್ವರಿತವಾಗಿ ಭ್ರಷ್ಟಾಚಾರ ದೂರುಗಳ ವಿಚಾರಣೆ

11) ಅಂಬುಡ್ಸಮನ್ ಸ್ಥಾಪನೆ

12) ಪ್ರಮಾಣಿಕ ಸಾರ್ವಜನಿಕ ಸೇವಕರ ರಕ್ಷಣೆ

13) ಪ್ರತ್ಯೇಕ ಚುನಾವಣಾ ನ್ಯಾಯ ಮಂಡಳಿ ರಚನೆ

14) ಗಂಭೀರ ಸ್ವರೂಪ ವಂಚನಾ ತನಿಖಾ ಸಂಸ್ಥೆ ರಚನೆ

ಹೀಗೆ ಹಲವಾರು ಶಿಫಾರಸ್ಸುಗಳನ್ನು ಎರಡನೇ ಆಡಳಿತ ಸುಧಾರಣಾ ಆಯೋಗ ಮಾಡಿದೆ.

# ಅಧ್ಯಾಯ – 7
# ಮಾನವೀಯ ಮೌಲ್ಯಗಳು

ಒಬ್ಬ ವ್ಯಕ್ತಿಯಲ್ಲಿನ ಅಪೇಕ್ಷಿತ ಮತ್ತು ನಿರ್ದಿಷ್ಟದ ವರ್ತನೆಯನ್ನು ಮೌಲ್ಯಗಳು ಎನ್ನುವರು. ಮೌಲ್ಯಗಳು ಆರಂಭದಲ್ಲಿ ಬಾಹ್ಯವಾಗಿ ನಂತರ ಅಂತರಂಗದಲ್ಲಿ ತೆರೆದುಕೊಳ್ಳುತ್ತವೆ. ಅಂತರಂಗದಲ್ಲಿ ರೂಪವಾದಂತಹ ಮೌಲ್ಯವು ಆತ್ಮಸಾಕ್ಷಿ ಮತ್ತು ಮನ:ಸಾಕ್ಷಿಯಾಗಿ ಪರಿಣಮಿಸುವುದು. ಮೌಲ್ಯಗಳು ನೈತಿಕ ತತ್ವಗಳಾಗಿದ್ದು ವ್ಯಕ್ತಿಗಳಿಗೆ ಮತ್ತು ಗುಂಪುಗಳಿಗೆ ತೀರ್ಪು ಮತ್ತು ವರ್ತನೆಗಳಿಗೆ ಮಾರ್ಗದರ್ಶನ ನೀಡುತ್ತದೆ. ಮೌಲ್ಯ ಎನ್ನುವುದು ಮನೋವೈಜ್ಞಾನಿಕ ಸಾಮಾಜಿಕ ನೈತಿಕ ಸೌಂದರ್ಯ ಉಪಾಸಕವಾಗಿದೆ.

ಮೌಲ್ಯಗಳನ್ನು ಸ್ವಭಾವದ ಆಧಾರದ ಮೇಲೆ ಎರಡು ರೀತಿಯಲ್ಲಿ ವಿಂಗಡಣೆ ಮಾಡಲಾಗಿದೆ.

1) ಸಹಜ ಮೌಲ್ಯಗಳು

2) ಸಾದಕ ಮೌಲ್ಯಗಳು

**ಸಹಜ ಮೌಲ್ಯಗಳು:** ಸಹಜ ಮೌಲ್ಯಗಳನ್ನು ಸಮಗ್ರ ಸಂಪೂರ್ಣ ಮೌಲ್ಯಗಳೆಂದು ಕರೆಯಲಾಗುತ್ತದೆ. ಸತ್ಯ, ಸೌಂದರ್ಯ, ಒಳ್ಳೆಯತನ, ಎದೆಗಾರಿಕೆ ಮುಂತಾದವು ಆಂತರಿಕ ಮೌಲ್ಯಗಳಾಗಿವೆ. ಇಲ್ಲಿನ ವಿವಿಧ ಮೌಲ್ಯಗಳೆಂದರೆ,

1) ಪಾರಮಾರ್ಥಿಕ ಮೌಲ್ಯಗಳು

2) ಆಧ್ಯಾತ್ಮಿಕ ಮೌಲ್ಯಗಳು

3) ನೈತಿಕ ಮೌಲ್ಯಗಳು

4) ಸಾಮಾಜಿಕ ಮೌಲ್ಯಗಳು

ಇಲ್ಲಿ ಮೌಲ್ಯಯುತವಾದ ಗುರಿಗಳೇ ಸಹಜವಾದ ಮೌಲ್ಯಗಳಾಗಿರುತ್ತವೆ.

**ಸಾದಕ ಮೌಲ್ಯಗಳು:** ಇವು ಇತರೆ ಮೌಲ್ಯಗಳಿಗೆ ಸಾಧನಗಳಾಗಿ ಕಾರ್ಯವನ್ನು ನಿರ್ವಹಿಸುತ್ತದೆ.

**ಮೌಲ್ಯಗಳ ಮೂಲಗಳು:**

1) ಕುಟುಂಬ

2) ಸಮವಯಸ್ಕರು

3) ಕಾರ್ಯಸ್ಥಳ

4) ಶೈಕ್ಷಣಿಕ ಸಂಸ್ಥೆಗಳು

5) ಜೀವನಾನುಭವ

6) ಧರ್ಮ

7) ಸಮೂಹ ಮಾಧ್ಯಮ

8) ಸಂಗೀತ

9) ನೆರೆಹೊರೆಯವರು

10) ತಂತ್ರಜ್ಞಾನ

11) ಸಂಸ್ಕೃತಿ

12) ಐತಿಹಾಸಿಕ ಘಟನೆ

**ನಮ್ಮ ಜೀವನದಲ್ಲಿ ಮೌಲ್ಯಗಳ ಮಹತ್ವ:**

ನಮ್ಮ ಜೀವನದಲ್ಲಿ ನಂಬಿಕೆಗಳು ಮತ್ತು ಸಿದ್ಧಾಂತಗಳು ಮಹತ್ವಪೂರ್ಣ ಸ್ಥಾನವನ್ನು ಪಡೆದಿದೆ. ಈ ಮೌಲ್ಯಗಳು ನಮ್ಮ ವ್ಯಕ್ತಿತ್ವ ಮತ್ತು ಧೋರಣೆಗಳನ್ನು ರೂಪಿಸುತ್ತದೆ. ಇವುಗಳ ಪ್ರಾಮುಖ್ಯತೆ ಈ ಕೆಳಗಿನಂತಿವೆ.

1) ಸರಿಯಾದ ಮಾರ್ಗದಲ್ಲಿ ಸನ್ಮಾರ್ಗದಲ್ಲಿ ನಡೆಯುವುದು

2) ಖಚಿತತೆ ಮತ್ತು ಸೌಂದರ್ಯತೆ

3) ಜೀವನಕ್ಕೆ ಮಾರ್ಗದರ್ಶನ

4) ತೃಪ್ತಿ ಮನೋಭಾವ

5) ಶಾಂತಿ ಮತ್ತು ನೆಮ್ಮದಿ

6) ಚರಿತ್ರೆಯ ರಚನೆ

7) ಸಂಸ್ಕೃತಿ ಮತ್ತು ಪರಂಪರೆ ಏಳಿಗೆ

8) ಸಕಾರಾತ್ಮಕ ಚಿಂತನೆ

9) ಶಾಂತಿ ಮತ್ತು ಸಹನೆ

10) ಜೀವನದಲ್ಲಿ ಶಿಸ್ತು

11) ಪ್ರಾಮಾಣಿಕತೆ, ಸ್ವಾಮಿನಿಷ್ಠೆ, ನ್ಯಾಯ, ಸ್ವಾತಂತ್ರ್ಯಗಳ ಬಗೆಗೆ ಕಲ್ಪನೆ ಮೂಡುತ್ತದೆ

12) ಸಕಾರಾತ್ಮಕ ಶಕ್ತಿ ಬೆಳೆಸಲು ಮತ್ತು ದುರಾಭ್ಯಾಸಗಳಿಂದ ದೂರವಿರಲು ಸಹಾಯ ಮಾಡುತ್ತದೆ

13) ಸುಂದರ ಜೀವನಕ್ಕೆ ಮತ್ತು ಆಡಳಿತಕ್ಕೆ ಅವಕಾಶ ಮಾಡಿಕೊಡುತ್ತದೆ.

**ಮೂಲಭೂತವಾದ ಮಾನವೀಯ ಮೌಲ್ಯಗಳು:**

1) ಸತ್ಯ ಗುಣಗಳ ತಾಯಿ ಸತ್ಯಮೇವ ಜಯತೆ

2) ಪ್ರತಿ (ಸ್ವಾರ್ಥರಹಿತ ಕಾಳಜಿ) ಅಸಂಖ್ಯಾತ ಭಾವನೆ

3) ಶಾಂತಿ (ಸಾರ್ವತ್ರಿಕ ಧನಾತ್ಮಕ ಮೌಲ್ಯ) ಸೆಪ್ಟೆಂಬರ್ 21 ಶಾಂತಿ ದಿನ

4) ಜವಾಬ್ದಾರಿ

5) ನ್ಯಾಯ (ಯೋಗ್ಯ ಮತ್ತು ಉಚಿತ)

6) ಪ್ರಾಮಾಣೀಕತೆ

7) ತಮಾಷೆ / ವಿನೋದ

8) ಗಂಭೀರತೆ / ಜಾಣತನ

9) ದಯಾಪರ / ಕಳಕಳಿಯುಳ್ಳ

10) ಸಾಹಸಮಯ / ಸೃಜನಾತ್ಮಕ

11) ಗೌರವಯುತ

12) ಕಲಾತ್ಮಕ

13) ಶುದ್ಧಹಸ್ತ

14) ತೆರೆದ ಮನಸ್ಸು

**ಶ್ರೇಷ್ಟ ನಾಯಕರ ಸಂದಾರಕರ ಆಡಳಿತಗಾರರ ಜೀವನ ಮೌಲ್ಯಗಳು ಮತ್ತು ಬೋಧನೆಗಳು ಪಾಠಗಳು:**

**ನಾಯಕ:**

ನಾಯಕನು ಜೀವನದಲ್ಲಿ ಶಿಸ್ತು, ಶ್ರಮ, ಸಮಯ ಪಾಲನೆ ಮತ್ತು ಸೇವಾ ಮನೋಭಾವನೆಯನ್ನು ಅಳವಡಿಸಿಕೊಂಡು ಇತರರಿಗೆ ಮಾದರಿಯಾಗಿ ಪ್ರಭಾವ ಬೀರುವ ವ್ಯಕ್ತಿಯಾಗಿದ್ದಾನೆ. ಇವರಲ್ಲಿ ಸೃಜನಾತ್ಮಕ ಮತ್ತು ಕ್ರಿಯಾತ್ಮಕ ಕೌಶಲಗಳಿರುತ್ತವೆ. ಬದುಕು ಅರಿಯುವ ವಿಧಾನ ಹಾಗೂ ಕಲಿಕೆ ಮುಂದುವರೆದಂತೆ ನಾಯಕತ್ವ ಗುಣ ಇನ್ನಷ್ಟು ಗಟ್ಟಿಯಾಗುತ್ತದೆ.

**ನಾಯಕನ ಪ್ರಮುಖ ಗುಣಲಕ್ಷಣಗಳು:**

1) ನಾಯಕನ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಸಕಾರಾತ್ಮಕವಾಗಿ ಇತರರು ಪಾಲ್ಗೊಳ್ಳುವಂತೆ ಮಾಡಿ ಒಂದು ವ್ಯವಸ್ಥೆಯ ಪರಿವರ್ತಿಸುವ ಸಾಮರ್ಥ್ಯ ಹೊಂದಿರುತ್ತಾರೆ

2) ಈತನು ಭವಿಷ್ಯದ ಬಗ್ಗೆ ಅರಿತವನಾಗಿರುತ್ತಾನೆ

3) ಕಠಿಣ ಪರಿಸ್ಥಿತಿಯಲ್ಲಿ ಎದೆಗುಂದದೆ ಜಾಣ್ಮೆಯಿಂದ ಎದುರಿಸುವವನಾಗಿರುತ್ತಾನೆ

4) ಮಾನವೀಯ ಮೌಲ್ಯಗಳನ್ನು ಜೀವನ ಪರ್ಯಂತ ಅನುಸರಿಸಿಕೊಂಡು ಹೋಗುತ್ತಾನೆ

5) ತನ್ನ ಅನುಯಾಯಿಗಳ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಾ ಅದರ ಮನೋಭಾವ ಬದಲಿಸುವ ಸಾಮರ್ಥ್ಯ ಹೊಂದಿರುತ್ತಾನೆ

6) ಸಂವೇದನಾ ಶೀಲ ಗುಣವನ್ನು ಹೊಂದಿದ್ದ ಯಾವುದೇ ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸುತ್ತಾನೆ

7) ತನ್ನ ಮನವನ್ನು ಅರ್ಪಿಸಿ ಪ್ರಾಮಾಣಿಕತೆಯಿಂದ ದುಡಿದು ಶ್ರೇಷ್ಟ ಸಾಧನೆ ಮಾಡುತ್ತಾನೆ

ಉದಾ: ಅಬ್ರಾಹಂ ಲಿಂಕನ್, ಗಾಂಧಿ ಇತರೆ.

**ನಾಯಕರ ಮೌಲ್ಯ:**

* ನ್ಯಾಯ ಪರತೆ
* ನಿಸ್ವಾರ್ಥತೆ
* ಎಲ್ಲರಿಗೂ ಗೌರವ
* ಪ್ರೀತಿ ಮತ್ತು ದಯಾ ವರ್ತನೆ
* ಅನುಕಂಪ
* ಶಾಂತಿಪ್ರಿಯ
* ಪರೋಪಕಾರ

**ಸುಧಾರಕರು:**

ಯಾವ ವ್ಯಕ್ತಿಯ ಪ್ರಚಲಿತ ಸಮಾಜದ ವ್ಯವಸ್ಥೆಯನ್ನು ಪರಿವರ್ತಿಸಿ ಸುಧಾರಿಸುತ್ತಾನೆಯೋ ಆತನು ಸಾಧಾರಕ ಎನಿಸಿಕೊಳ್ಳುತ್ತಾನೆ. ಸಮಾಜದಲ್ಲಿನ ರಾಜಕೀಯ ಧಾರ್ಮಿಕ ಆಚರಣೆಗಳಂತಹ ಮಾನವ ವಿಷಯಗಳಲ್ಲಿ ಸುಧಾರಣೆ ಮಾಡುವುದಾಗಿದೆ. ಸಮಾಜ ಸುಧಾರಕನು ಸಮಾಜದಲ್ಲಿ ಅನಿಷ್ಟ ಪದ್ದತಿಗಳನ್ನು ತೊಡೆದು ಹಾಕಲು ಶ್ರಮಿಸುತ್ತಾನೆ. ಬಾಲ್ಯವಿವಾಹ, ಹೆಣ್ಣು ಭ್ರೂಣ ಹತ್ಯೆ, ವರದಕ್ಷಿಣೆ ಮುಂತಾದ ಕೆಟ್ಟ ಆಚರಣೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಿ ಆಚರಿಸದಂತೆ ಪ್ರಭಾವವನ್ನು ಬೀರುತ್ತಾನೆ. (ರಾಜರಾಮ್, ಅಂಬೇಡ್ಕರ್, ನಾರಾಯಣಗುರು)

ರಾಜಕೀಯ ಸುಧಾರಕರು ರಾಜಕೀಯ ವ್ಯವಸ್ಥೆಯಲ್ಲಿನ ಪಾರದರ್ಶಕತೆ, ಹೊಣೆಗಾರಿಕೆ, ಮಾಹಿತಿ ಹಂಚುವಿಕೆ, ಮುಂತಾದ ವಿಷಯಗಳನ್ನು ಸುಧಾರಿಸುವಲ್ಲಿ ಶ್ರಮಿಸುತ್ತಾನೆ. ಆಡಳಿತದಲ್ಲಿ ಭ್ರಷ್ಟಾಚಾರ ನಿರ್ಮೂಲನೆಗೆ ಜನಾಂದೋಲನ ನಿರ್ಮಿಸುತ್ತಾನೆ. (ಅಣ್ಣಾ ಹಜಾರೆ)

ಧಾರ್ಮಿಕ ಸುಧಾರಕರು ಧಾರ್ಮಿಕ ವ್ಯವಸ್ಥೆಯಲ್ಲಿನ ಪಾರದರ್ಶಕತೆ, ಹೊಣೆಗಾರಿಕೆ, ದೇವರ ಹೆಸರಿನಲ್ಲಿ ನಡೆಯುವಂತಹ ಮೋಸವನ್ನು ತಡೆಯಲು ಯತ್ನಿಸುತ್ತಾರೆ. ಧರ್ಮದಲ್ಲಿನ ಕರ್ಮ ಕಾಂಡ ಹೊರ ತೆಗೆದು ಜನರಲ್ಲಿ ತಿಳಿವಳಿಕೆ ಮೂಡಿಸುತ್ತಾರೆ.

ಸುಧಾರಕರು **ಉಪಕಾರವಿದ್ದೆಡೆ ಉದ್ದಾರ, ಉದ್ದಾರವಿದ್ದೆಡೆ ಸಹಕಾರ** ಎನ್ನುವ ತತ್ವ ಅಳವಡಿಸಿಕೊಂಡು ಸಮಾಜದಲ್ಲಿ ಉತ್ತಮ ಕೆಲಸ ಮಾಡುತ್ತಾರೆ.

**ಆಡಳಿತಗಾರ:**

ಜನತೆಯ ಜೀವ, ಅವರ ಹಕ್ಕುಗಳು ಮತ್ತು ನ್ಯಾಯಬದ್ಧ ಹಿತಾಸಕ್ತಿಗಳ ಸಂರಕ್ಷಣೆ ಆಡಳಿತಗಾರನ ಪ್ರಮುಖವಾದ ಕರ್ತವ್ಯವಾಗಿದೆ. ಉತ್ತಮ ಆಡಳಿತಗಾರನು ಅಧಿಕಾರವನ್ನು ಒಂದು ಪವಿತ್ರ ಜವಾಬ್ದಾರಿಯಾಗಿ ಪರಿಗಣಿಸುತ್ತಾರೆ. ತನ್ನನ್ನು ಜನತೆಯ ಒಡೆಯನೆಂದು ಭಾವಿಸುವ ಬದಲು ಜನ ಸೇವಕನೆಂದು ಭಾವಿಸುತ್ತಾನೆ.

ತನಗೆ ಸಲಹೆಗಳನ್ನು ನೀಡಲು, ತನ್ನ ತಪ್ಪುಗಳನ್ನು ಖಂಡಿಸಲು, ಅವಶ್ಯ ಬಿದ್ದರೆ ತನ್ನ ಸ್ಥಾನದಲ್ಲಿ ತನಗಿಂತ ಯೋಗ್ಯವಾದ ಬೇರೊಬ್ಬ ವ್ಯಕ್ತಿಯನ್ನು ಕೂರಿಸಲು ಪ್ರಯತ್ನಿಸುತ್ತಾನೆ. ಸಂಸ್ಥೆಯ ಉದ್ದೇಶಿತ ಗುರಿ ಸಾಧನೆಗೆ ಮಾರ್ಗದರ್ಶನ ನೀಡುತ್ತಾನೆ ಮತ್ತು ಗುರಿ ಸಾಧನೆಗೆ ಎಲ್ಲರೊಂದಿಗೆ ಹೊಂದಿಕೊಂಡು ಹೋಗುತ್ತಾನೆ.

ನಾಯಕನಾದವನು ನೀತಿಗಳನ್ನು ರೂಪಿಸಿದರೆ ಆಡಳಿತಗಾರ ನೀತಿಗಳನ್ನು ಜಾರಿಗೆ ತಂದು ಯಶಸ್ವಿಗೊಳಿಸುತ್ತಾನೆ. ಆಡಳಿತಗಾರ ಯಾವುದೇ ಜಾತಿ, ಧರ್ಮದ ಭೇದ ಭಾವವಿಲ್ಲದೆ ಜಾತ್ಯಾತೀತ ಮನೋಭಾವದಿಂದ ಕಾರ್ಯ ನಿರ್ವಹಿಸುತ್ತಾನೆ.

**ಆಡಳಿತಗಾರನಿಗಿರಬೇಕಾದ ಲಕ್ಷಣಗಳೆಂದರೆ:**

1) ತನ್ನ ಕಾರ್ಯಗಳ ಬಗ್ಗೆ ಅರಿವಿರಬೇಕು

2) ಕಾನೂನು ಕಟ್ಟಳೆಗಳು ಸ್ಥಳೀಯ ಸಂಪ್ರದಾಯಗಳ ಬಗ್ಗೆ ತಿಳಿದಿರಬೇಕು

3) ದೃಢತೆ ಮತ್ತು ಸಾಧಿಸುವ ವಿಶ್ವಾಸವಿರಬೇಕು

4) ಪ್ರಾಮಾಣಿಕ ಮತ್ತು ಪಕ್ಷಪಾತಿಯನಾಗಿರಬಾರದು

5) ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸೌಲಭ್ಯ ಸಿಗುವಂತಿರಬೇಕು.

(ಸರ್. ಎಂ.ವ್ಹಿ.ಜಗಜೀವನರಾಮ್, ವರ್ಗೀಸ್ ಕುರಿಯನ್, ಕಿರಣ್ ಬೇಡಿ ಇತರೆ.)

* ಸಮಗ್ರತೆ

* ಪಕ್ಷಪಾತ ಮಾಡದಿರುವಿಕೆ

* ಶಿಸ್ತು
* ನಾಗರಿಕ ಸೇವೆ
* ಸಾಮಾಜಿಕ ಸಮಾನತೆ

**ಮೌಲ್ಯಗಳನ್ನು ಬೋಧಿಸುವಲ್ಲಿ ಕುಟುಂಬ ಸಮಾಜ ಶೈಕ್ಷಣಿಕ ಸಂಸ್ಥೆಗಳ ಪಾತ್ರ:**

**ಕುಟುಂಬದ ಪಾತ್ರ:**

**ಮನೆಯೇ ಮೊದಲ ಪಾಠಶಾಲೆ**. ಕುಟುಂಬವು ಮಗುವಿನ ಮೇಲೆ ಪ್ರಾಥಮಿಕವಾಗಿ ಪ್ರಭಾವ ಬೀರುವ ಸಾಮಾಜಿಕವಾಗಿ ಸಂಸ್ಥೆಯಾಗಿದೆ.

1) ಮಗು ಪ್ರಾರಂಭದಲ್ಲಿ ತನ್ನ ಹಿರಿಯರಿಂದ ಪ್ರತಿಕ್ರಯಿಸುವ ವಿಧಾನ ಕಲಿತು ಅದನ್ನು ರೂಢಿಮಾಡಿಕೊಳ್ಳುತ್ತದೆ

2) ಪೂರ್ವ ಬಾಲ್ಯಾವಸ್ಥೆಯಲ್ಲಿ ಮನೆಯ ಹಿರಿಯರು ಒಪ್ಪಿಕೊಂಡ ಮೌಲ್ಯಗಳ ಪರಿಚಯವಾಗುತ್ತದೆ. (ದೇವರಿಗೆ ಕೈ ಮುಗಿಯುವುದು, ಹಿರಿಯರಿಗೆ ಗೌರವ)

3) ಪ್ರಶಂಸೆ ಮತ್ತು ತೆಗಳಿಕೆಯಿಂದಾಗಿ ಮಗುವಿಗೆ ಒಳ್ಳೆಯದು, ಕೆಟ್ಟದ್ದು, ಪಾಪ–ಪುಣ್ಯ, ಸರಿ–ತಪ್ಪು ಮುಂತಾದವುಗಳ ತಿಳುವಳಿಕೆಯಾಗಿ ಮೌಲ್ಯ ರೂಪಣೆ

4) ಮೌಲ್ಯಗಳ ಆದರ್ಶ ಎಂದು ಭವಿಷ್ಯತ್ತಿನ ಜೀವನದಲ್ಲಿ ಅಳವಡಿಕೆ

5) ಮೌಲ್ಯಗಳು ಆರಂಭದಲ್ಲಿ ಬಾಹ್ಯವಾಗಿ ಅನಂತರ ಅಂತರಂಗದಲ್ಲಿ ನಂತರ ಆತ್ಮಸಾಕ್ಷಿಯಾಗಿ ಪರಿಣಮಿಸುವುದು

6) ಮಗು ಕುಟುಂಬದ ಆದರ್ಶಗಳನ್ನೇ ವೈಯಕ್ತಿಕ ಆದರ್ಶಗಳನ್ನು ಮಾಡಿಕೊಳ್ಳುವನು.

ಹೀಗೆ ಮೌಲ್ಯಗಳನ್ನು ಬೋಧಿಸುವಲ್ಲಿ ಕುಟುಂಬದ ಮಹತ್ವವಿದೆ.

**ಸಮಾಜದ ಪಾತ್ರ:**

ಜನನದಿಂದ ಆರಂಭಿಸಿ ಮರಣದವರೆಗೂ ಮಗು ಸಮಾಜದಲ್ಲಿ ಇರಬೇಕಾಗುತ್ತದೆ. ಮಗು ಸಮಾಜದಿಂದ ಆಕರ್ಷಿತ ಮತ್ತು ಪ್ರಭಾವಿತನಾಗಿ ಆ ಸಮಾಜದ ಆದರ್ಶಗಳನ್ನೇ ಮೌಲ್ಯವೆಂದು ಪರಿಗಣಿಸಿ ಅವುಗಳನ್ನು ತನ್ನ ವೈಯಕ್ತಿಕ ಆದರ್ಶಗಳನ್ನಾಗಿ ಮಾಡಿಕೊಳ್ಳುವುದು.

* ಸಮಾಜವು ನಂಬಿಕೊಂಡು ಬಂದಿರುವಂತಹ ತತ್ವಗಳನ್ನು ನೀತಿ ನಿಯಮಗಳನನು ಮತ್ತು ಸಂಪ್ರದಾಯಗಳನ್ನು ಅಂಗೀಕರಿಸಿ ಅವುಗಳನ್ನು ಆದರ್ಶಗಳನ್ನಾಗಿ ಮಾಡಿಕೊಳ್ಳುತ್ತಾನೆ

* ಮೌಲ್ಯವಿಲ್ಲದ ವ್ಯಕ್ತಿಗೆ ಸಮಾಜದಲ್ಲಿ ಗೌರವವಿಲ್ಲ ಎಂಬ ಅರಿವು ಮಾಡಿ ಮೌಲ್ಯ ಅನುಕರಣೆ ಪ್ರಾರಂಭ

* ಹೊಂದಾಣಿಕೆ ಮನೋಭಾವ, ಪರೋಪಕಾರ ಗುಣ, ಪ್ರೀತಿ, ಅಹಿಂಸೆ, ಗೌರವ, ಕರುಣೆ ಮುಂತಾದ ಮೌಲ್ಯಗಳನ್ನು ವ್ಯಕ್ತಿಯು ಸಮಾಜದಿಂದ ಕಲಿಯುತ್ತಾನೆ

ವ್ಯಕ್ತಿ ಬೆಳೆಯುತ್ತಾ ಹೋದಂತೆ ಮೌಲ್ಯಗಳು ಬೆಳೆಯುತ್ತಾ ಹೋಗುತ್ತದೆ.

# ಭಾಗ – 2

# ಪ್ರಾಮಾಣಿಕ ನಿಷ್ಠುರತೆ / ಸಮಗ್ರತೆ

ಸಮಗ್ರತೆ ಮತ್ತು ಪ್ರಾಮಾಣಿಕ ನಿಷ್ಠುರತೆಯು ಪ್ರಮುಖವಾದ ನೈತಿಕ ತತ್ವವಾಗಿದ್ದು ಸದ್ಗುಣ, ಸತ್ಯಸಂಧತೆ, ಪ್ರಾಮಾಣಿಕತೆ ಮತ್ತು ನಿಷ್ಕಪಟತೆಯ ಸಮಗ್ರ ಗುಣಗಳಾಗಿವೆ.

"Integrity Refer to the Quality of person's character"

a) Integrity as the integration of self.

b) Integrity as the maintenance of identity.

c) Integrity as standing for something.

ಯಾವುದಾದರೊಬ್ಬ ವ್ಯಕ್ತಿ Integrity ಹೊಂದಿದ್ದಾರೆಂದರೆ,

* ಅವರು ಹೇಳಿದಂತೆ ಮಾಡುತ್ತಾರೆ, ಅದೂ ಸರಿಯಾದ ಸಮಯಕ್ಕೆ ಮಾಡುತ್ತಾರೆ
* ಅವರು ತಮಗೆ ತಿಳಿದಂತೆ ಮಾಡುತ್ತಾರೆ
* ಬೇರೆಯವರ ಬೇಡಿಕೆಗಳನ್ನು ಸ್ವಂತಿಕೆಯಿಂದ ಮಾಡುತ್ತಾರೆ
* ಅವರು ಬೇರೆಯವರು ನಮ್ಮಿಂದ ಏನನ್ನು ನಿರೀಕ್ಷಿಸುತ್ತಿದ್ದಾರೋ ಅದನ್ನೇ ಮಾಡುತ್ತಾರೆ

ಒಟ್ಟಾರೆಯಾಗಿ ಕಾಯಾ, ವಾಚಾ, ಮನಸಾ ಸ್ಥಿರವಾದ ಅಭಿಪ್ರಾಯವಿರುವ ಸ್ಥಿತಿಯೇ ಸಮಗ್ರತೆ.

ನಮ್ಮ ಆಲೋಚನೆ ಮಾತುಗಳು ಹಾಗೂ ಮಾಡುವ ಕೆಲಸಗಳ ನಡುವಿನ ಅಂತರವನ್ನು ಕಡಿಮೆ ಮಾಡುವಂತಹ ಗುಣವೇ ಸಮಗ್ರತೆ.

ಸಮಗ್ರತೆಯಲ್ಲಿ ಮೂರು ಪ್ರಕಾರಗಳಿವೆ.

1) ವ್ಯಕ್ತಿಗತ

2) ವೃತ್ತಿಪರ

3) ಸಾಮಾಜಿಕ

**ನಾಗರಿಕ ಸೇವೆ ಹಾಗೂ ಪ್ರಾಮಾಣಿಕ ನಿಷ್ಠರತೆ:**

ನಾಗರಿಕ ಸೇವಕರು ಸಮಗ್ರತೆ ಕಾಪಾಡಿಕೊಂಡು ಹೋಗಲು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.

1) ಕೆಳಹಂತದ ನೌಕರರಿಂದ ಬೇರೆಯವರಿಂದ ತಮ್ಮ ವೈಯಕ್ತಿಕ ಕೆಲಸ ಮಾಡಿಸಿಕೊಂಡು ಅವರಿಗೆ ವಿಧೇಯರಾಗಿರಬೇಕು

2) ಅಕ್ರಮಗಳಲ್ಲಿ ಭಾಗಿಯಾದ ಸಂಘ ಸಂಸ್ಥೆ, ಕಂಪನಿಗಳಿಗೆ ಸಹಾಯ ಮಾಡಲು ತಮ್ಮನ್ನು ದುರ್ಬಳಕೆ ಮಾಡಿಕೊಳ್ಳದೆ ಕಾನೂನು ರೀತಿ ಅಧಿಕಾರ ಚಲಾವಣೆ ಮಾಡುವುದು

3) ನಿರಂತರವಾಗಿ ಸಾರ್ವಜನಿಕ ಸೇವಾ ಮೌಲ್ಯಗಳನ್ನು ಅನುಸರಿಸಬೇಕು

4) ವೈಯಕ್ತಿಕವಾಗಿ ಬೆಲೆ ತೆರಬೇಕಾದರೂ ಧೈರ್ಯದಿಂದ ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು

5) ಪ್ರಾಮಾಣಿಕ ಮತ್ತು ನಿಷ್ಪಕ್ಷಪಾತ ಸಲಹೆ ನೀಡಬೇಕು

6) ಬಲಶಾಲಿಯುತ ವ್ಯಕ್ತಿಗಳ ಪ್ರಭಾವಕ್ಕೆ ಮಣಿಯದೆ ಸಾರ್ವಜನಿಕರಿಗೆ ಹೊಣೆಯಾಗಿ ಕರ್ತವ್ಯ ನಿರ್ವಹಿಸಬೇಕು

7) ಸ್ವಂತ ನಿರ್ಧಾರಗಳಿಗೆ ತಾನೆ ಹೊಣೆಗಾರಿಕೆ ಮತ್ತು ಜವಾಬ್ದಾರಿ ತೆಗೆದುಕೊಂಡು ಇತರರಿಗೆ ಮಾದರಿಯಾಗಬೇಕು.

**ಬೌದ್ಧಿಕ ಸಮಗ್ರತೆ:**

ಬೌದ್ಧಿಕ ಸಮಗ್ರತೆ ಎಂದರೆ "ನುಡಿದಂತೆ ನಡೆಯುವುದು". ಒಂದು ವೇಳೆ ಇದನ್ನು ಅನುಸರಿಸಿದರೆ ಸಮಾಜದಲ್ಲಿ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ. ಉದಾ: ಸರ್ದಾರ್ ವಲ್ಲಭಬಾಯಿ ಪಟೇಲರು ಅಖಿಲ ಭಾರತ ಸೇವೆಗಳನ್ನು ಸೃಷ್ಟಿಸಿದ್ದು.

**ನಿಷ್ಪಕ್ಷಪಾತತೆ:**

ಯಾವುದೇ ಒಂದು ಪಕ್ಷ, ಜಾತಿ, ಧರ್ಮ, ಭಾಷೆ, ಲಿಂಗ ಪ್ರದೇಶ ಮೊದಲಾದವುಗಳ ಪರವಾದ ಮತ್ತು ವಿರುದ್ದವಾದ ರೀತಿಯಲ್ಲಿ ಪಕ್ಷಪಾತ ಮಾಡದೆ ತನ್ನ ಕಾರ್ಯನಿರ್ವಹಿಸುವುದೇ ನಿಷ್ಪಕ್ಷಪಾತತೆ. ಭಾರತ ಸರ್ಕಾರವು ತನ್ನ ಆಂಶಗಳಲ್ಲೂ ಸಮಾನತೆ ತತ್ವವನ್ನೇ ಪಾಲಿಸುತ್ತದೆ. ಹಾಗೂ ಸಾಮಾನ್ಯ ಜನರೂ ಪಾಲಿಸುವಂತೆ ನೋಡಿಕೊಳ್ಳುತ್ತದೆ. ಯಾವುದೇ ಪಕ್ಷದ ಸರ್ಕಾರವಿದ್ದರೂ ಪಕ್ಷಪಾತ ಮಾಡದೆ ಕಾರ್ಯನಿರ್ವಹಿಸಬೇಕು. ಸಾರ್ವಜನಿಕ ಸೇವೆಯಲ್ಲಿರುವವರು ರಾಜಕೀಯ ಪಕ್ಷಗಳಿಂದ ತಟಸ್ಥವಾಗಿದ್ದು ಸಂವಿಧಾನ ಮತ್ತು ಕಾನೂನಿಗೆ ಅನುಗುಣವಾಗಿರಬೇಕು. ಕಾನೂನಾತ್ಮಕವಾಗಿ ಮಂತ್ರಿಗಳಿಗೆ ಸಲಹೆ ನೀಡಿ ಅವನ್ನು ಕಾರ್ಯಗತಗೊಳಿಸಬೇಕು.

**ನಿಷ್ಪಕ್ಷಪಾತತೆ ಮಹತ್ವ:**

1) ಪರಿಣಾಮಕಾರಿ ಸೇವೆ

2) ಸಂಪನ್ಮೂಲಗಳ ಸದ್ಬಳಕೆ

3) ಸರ್ಕಾರದ ನೀತಿಗಳು ಯೋಜನೆಗಳನ್ನು ಪರಿಣಾಮಕಾರಿಯಾಗಿ ಯಶಸ್ವಿಗೊಳಿಸಬೇಕು

4) ಆಡಳಿತವು ಅಸಂವಿಧಾನಿಕ ದಾರಿ ಹಿಡಿಯದಂತೆ ಕಾರ್ಯವನ್ನು ಮಾಡುವುದು

5) ವೃತ್ತಿಪರ ಸಲಹೆಗೆ ಇದು ಅತಿ ಅವಶ್ಯಕ

6) ಮಂತ್ರಿಗಳಿಗೆ ನಿಷ್ಪಕ್ಷಪಾತ ಸಲಹೆ ನೀಡಿ ಅವರು ಶಾಸಕಾಂಗದ ಮತ್ತು ನಾಗರೀಕರ ಹೊಣೆಗಾರಿಕೆಯ ಕಾರ್ಯವನ್ನು ಯಶಸ್ವಿಗೊಳಿಸಲು ಸಹಾಯ ಮಾಡುತ್ತದೆ

7) ರಾಜಕೀಯ ತಾಟಸ್ಥ್ಯತೆ

**ರಾಜಕೀಯದಲ್ಲಿ ನಿಷ್ಪಕ್ಷಪಾತತೆ:**

1) ನಾಗರೀಕ ಸೇವಾಧಿಕಾರಿಗಳು ಸಾಧ್ಯವಾದಷ್ಟು ರಾಜಕೀಯ ಚಟುವಟಿಕೆಗಳಿಂದ ದೂರವಿರಬೇಕು

2) ಅವರು ಯಾವುದೇ ರಾಜಕೀಯ ಪಕ್ಷಕ್ಕೆ ಸೇರುವಂತಿಲ್ಲ

3) ರಾಜಕೀಯ ನಾಯಕತ್ವಗಳು, ಬದಲಾಗುವ ಯಾವುದೇ ಪಕ್ಷ ಅಧಿಕಾರವಿಲ್ಲದಿದ್ದರೂ ತನ್ನಿಂದ ಸಾಧ್ಯವಾಗುವ ಅತ್ಯುತ್ತಮ ಕೆಲಸವನ್ನು ಸೇವಾಧಿಕಾರಿಗಳು ಮಾಡಬೇಕು

4) ಪ್ರಾವಿಣ್ಯತೆ ಕೊರತೆ ಇರುವ ರಾಜಕಾರಣಿಗಳಿಗೆ ನಿಷ್ಪಕ್ಷಪಾತ ಸಲಹೆ

5) ದಕ್ಷತೆಯಿಂದ ಕೂಡಿದ ನಿರ್ವಹಣೆಗಾಗಿ ಇವರಿವರ ನಡುವೆ ಉತ್ತಮ ಸಂಬಂಧದ ಅವಶ್ಯಕತೆ ಇದೆ

6) ಸಾರ್ವಜನಿಕ ಅಧಿಕಾರಿಗಳು ರಾಜಕೀಯ ವ್ಯಕ್ತಿಗಳೊಂದಿಗೆ ಖಾಸಗಿ ಸಂಬಂಧ ಹೊಂದಿರಬಾರದು

ಇಲ್ಲಿ ಸೇವೆಗೆ ಸೇರುವ ಮುನ್ನ ನಾವು ಮಾಡಬೇಕಾದ ಪ್ರತಿಜ್ಞಾ ಅಂಶಗಳೆಂದರೆ,

1) ಯಾರ ಸಹಾಯವು ಇಲ್ಲದೆ ನಾನು ಈ ಸಾರ್ವಜನಿಕ ಸೇವೆಗೆ ಸೇರುತ್ತೇನೆ

2) ನಾನು ಯಾವುದೇ ಸಂಸ್ಥೆ, ಖಾಸಗಿ ಜನರೊಂದಿಗೆ ಖಾಸಗಿ ಸಂಬಂಧದಲ್ಲಿ ಉಡುಗೊರೆ ಪಡೆಯುವುದಿಲ್ಲ

3) ಯಾವುದೇ ಜಾತಿ ವರ್ಗಗಳಿಗೆ ಸಂಬಂಧಿಸಿದ ಸಮಾರಂಭಗಳಲ್ಲಿ ಭಾಗಿಯಾಗುವುದಿಲ್ಲ. ಸೇವೆಗೆ ಸಂಬಂಧಿಸಿದ ಹೊರತು ಯಾವುದೇ ಸಂಬಂಧ ಹೊಂದಿರುವುದಿಲ್ಲ

4) ಮನೆಯಲ್ಲಿ ರಾಜಕೀಯ ವ್ಯಕ್ತಿಗಳಿದ್ದರೂ ನನ್ನ ಆಡಳಿತದ ಬಗ್ಗೆ ಚರ್ಚೆ ಮಾಡುವುದಿಲ್ಲ

5) ಪಾರದರ್ಶಕ ಆಡಳಿತ ನೀಡಲು ಶ್ರಮಿಸುತ್ತೇನೆ

6) ನಾನು ತೆಗೆದುಕೊಳ್ಳುವ ನಿರ್ಧಾರ ನನ್ನ ಆತ್ಮಸಾಕ್ಷಿಗೆ ತಕ್ಕಂತೆ ಕೆಲಸ ನಿರ್ವಹಿಸಲು ಪ್ರಯತ್ನಿಸುತ್ತೇನೆ

7) ನಾನು ಲಂಚ ತೆಗೆದುಕೊಳ್ಳುವುದಿಲ್ಲ, ನನ್ನ ಅಧೀನ ಅಧಿಕಾರಿಗಳಿಗೆ ಲಂಚ ತೆಗೆದುಕೊಳ್ಳಲು ಬಿಡುವುದಿಲ್ಲ.

**ವಸ್ತುನಿಷ್ಠತೆ:**

ಯಾವುದೇ ತೀರ್ಮಾನ ಕೈಗೊಳ್ಳುವಾಗ ವೈಯಕ್ತಿಕ ನಿಲುವಿಗೆ ಅಂಟಿಕೊಳ್ಳದೆ ನಿಷ್ಪಕ್ಷಪಾತದಿಂದ ಕಾನೂನಿನ ನೆಲೆಗಟ್ಟಿನಡೆಯಲ್ಲಿ ನಿರ್ಧಾರ ತೆಗೆದುಕೊಳ್ಳುವುದು ವಸ್ತುನಿಷ್ಠತೆ ಎನಿಸಿಕೊಳ್ಳುತ್ತದೆ. ವಸ್ತುನಿಷ್ಠತೆಯು ವ್ಯಕ್ತಿನಿಷ್ಠತೆಯಿಂದ ಸಂಪೂರ್ಣವಾಗಿ ಭಿನ್ನವಾದ ಅಂಶವಾಗಿದೆ.

ಸಂಪೂರ್ಣ ವಸ್ತುನಿಷ್ಠತೆ ಸಾಧಿಸುವುದು ಸಾಧ್ಯವೆ ಎಂಬುದು ಇಂದಿಗೂ ವಿಶ್ವಾದ್ಯಂತ ನಾಗರಿಕ ವಲಯದಲ್ಲಿ ಚರ್ಚೆಯಾಗುತ್ತಿರುವ ವಿಷಯ. ಆದರೆ ನಾಗರಿಕ ಸೇವಕರಿಗೆ ವಸ್ತುನಿಷ್ಠ ಅಗತ್ಯ ಎಂಬುದರಲ್ಲಿ ಎರಡು ಮಾತಿಲ್ಲ.

**ನಾಗರಿಕ ಸೇವಾ ವರ್ಗದಲ್ಲಿ ವಸ್ತು ನಿಷ್ಠತೆ ಮಹತ್ವ:**

1) ಸಮಾಜದ ಮೌಲ್ಯಗಳ ಶ್ರೇಷ್ಠತೆಯನ್ನು ಹೆಚ್ಚಿಸಲು

2) ಪಕ್ಷಪಾತ ಮತ್ತು ಪೂರ್ವಗ್ರಹ ತೀರ್ಪುಗಳ ವಿರುದ್ದದ ರಕ್ಷಣೆ

3) ರಾಜಕೀಯದ ನಿರ್ಧಾರಗಳು

4) ಸಮಾಜದ ಶ್ರೇಯೋನ್ನತಿಗಾಗಿ

5) ಕರ್ತವ್ಯ ಸನ್ನಿವೇಶವನ್ನು ಭಾವನಾತ್ಮಕ ಸನ್ನಿವೇಶದಿಂದ ದೂರವಿಡುವುದರಿಂದ ನ್ಯಾಯಯುತ ಯೋಜನೆಗಳು ಮತ್ತು ತೀರ್ಮಾನಗಳು ಹೊರಗೆಡುವಿಕೆ ಸಾಧ್ಯ

6) ವಾಸ್ತವಿಕತೆಗೆ ಪ್ರಾಮುಖ್ಯತೆ

ಸಂಪೂರ್ಣ ವಸ್ತುನಿಷ್ಠತೆ ಸಾಧ್ಯವಾಗದು ಎಂಬ ವಾದವಿದೆ. ಕಾರಣ ನಾಗರಿಕ ಸೇವಕನೂ ಸಮಾಜದ ಅವಿಭಾಜ್ಯ ಅಂಗ. ಸಮಾಜದಲ್ಲಿ ನಡೆಯುವ ಘಟನೆಗಳು ಒಂದಲ್ಲಾ ಒಂದು ರೀತಿ ಅವನ ಮೇಲೂ ಪರಿಣಾಮ

ಬೀರುವಾಗ ನಾಗರಿಕ ಸೇವಕನು ವಸ್ತುನಿಷ್ಠವಾಗಿರಲು ಹೇಗೆ ಸಾಧ್ಯ? ಆದರೂ ನಾಗರಿಕ ಸೇವಕನು ಸ್ವಾರ್ಥಮೀರಿ ವಸ್ತುನಿಷ್ಠತೆಗೆ ಆದ್ಯತೆ ನೀಡಬೇಕೆಂಬುದು ಅಪೇಕ್ಷನೀಯ.

**ಪರಾನುಭೂತಿ:**

ವ್ಯಕ್ತಿಯು ಇತರರ ಭಾವನೆಗಳನ್ನು, ಬಯಕೆಗಳನ್ನು, ಕಲ್ಪನೆಗಳನ್ನು ಮತ್ತು ಕರ್ತವ್ಯಗಳನ್ನು ಅವರ ಸ್ಥಾನದಲ್ಲಿ ತಾನು ಇದ್ದುಕೊಂಡು ಕಲ್ಪಿಸಿಕೊಂಡು ಅರ್ಥೈಸಿಕೊಳ್ಳುವ ಸಾಮರ್ಥ್ಯವೇ ಪರಾನುಭೂತಿ. ಇಲ್ಲಿ ವ್ಯಕ್ತಿಯು ಇತರರ ಭಾವನೆ ಮತ್ತು ಆಲೋಚನೆಗಳನ್ನು ಅವರು ಪ್ರಕಟಿಸಿದ್ದರೂ ಅರ್ಥೈಸಿಕೊಳ್ಳುವ ಸಾಮರ್ಥ್ಯವಾಗಿದೆ.

**ಪರಾನುಭೂತಿಗೆ ಈ ಕೆಳಗಿನ ಅಂಶಗಳು ಅನುಸರಿಸಬೇಕು.**

1) ಅಡ್ಡಿಪಡಿಸದ ತನಿಖಾ ಪ್ರಶ್ನೆಗಳ ಮುಖಾಂತರ

2) ಕ್ರಿಯಾಶೀಲ ಸಂವಹನ ಮುಖಾಂತರ

3) ಅಂಗಿಕ ಭಾಷೆ ಮುಖಭಾವ ಮತ್ತು ಧ್ವನಿಯ ಏರಿಳಿತಗಳನ್ನು ಗುರುತಿನ, ಮಾತನಾಡದ ವಿಷಯವನ್ನು ತಿಳಿಯಲು ಪ್ರಯತ್ನ ಮಾಡಬೇಕು

4) ವ್ಯಕ್ತಪಡಿಸದ, ಸ್ವಲ್ಪ ವ್ಯಕ್ತಿಪಡಿಸದ ಭಾವನೆ, ಆಲೋಚನೆ ಮತ್ತು ಕಳವಳಗೊಂಡಿರುವುದನ್ನು ಗುರುತಿಸಬೇಕು

5) ಇತರರ ಅಹಿತಕರದ ಭಾವನಾ ಸಂಕೇತ ಗುರುತಿಸಬೇಕು.

**ಮಹತ್ವ:**

ಇದೊಂದು ಸಾರ್ವತ್ರಿಕ ಗುಣವಾಗಿದ್ದು ಎಲ್ಲಾ ಮಾನವೀಯ ಮೌಲ್ಯಗಳೊಂದಿಗೆ ಸಂಬಂಧ ಹೊಂದಿದೆ. ಇದು ನೈತಿಕ ಮೌಲ್ಯಗಳ ಬೆಳವಣಿಗೆಗೆ ಪೂರಕವಾಗಿದೆ. ಉದಾ: ಬಡ ರೈತನ ಕಷ್ಟವನ್ನು ತಾನೇ ಊಹಿಸಿ ಅರಿತು ಜಿಲ್ಲಾಧಿಕಾರಿ ಸಹಾಯ ಮಾಡುವುದು.

**ಸಹಿಷ್ಣುತೆ ಸಹನೆ:**

ಸಹನೆಯೆಂಬುದು "ಇತರರ ಅಭಿಪ್ರಾಯಗಳು ಸಂಸ್ಕೃತಿ ಆಚರಣೆ, ವಿಚಾರ, ಭಾಷೆ, ಜನಾಂಗ, ಧರ್ಮ, ರಾಷ್ಟ್ರೀಯತೆ ಇತ್ಯಾದಿಗಳ ಕುರಿತು ವಸ್ತುನಿಷ್ಠತೆ ಮತ್ತು ಅನುಮೋದಕ ಮನೋಭಾವನೆ ವ್ಯಕ್ತಪಡಿಸುವುದಾಗಿದೆ. ವಿಶ್ವದ ವಿವಿಧ ಸಂಸ್ಕೃತಿಯನ್ನು ಗೌರವಿಸುವ, ಪ್ರಶಂಸಿಸುವ, ಸ್ವೀಕರಿಸುವ ಮನೋಧೋರಣೆಯೇ ಸಹನೆಯಾಗಿದೆ. ಸಹಷ್ಣುತೆಯಿಂದ ಮಾತ್ರ ನಮ್ಮ ಸಮಾಜದಲ್ಲಿ ಶಾಂತಿ ಹಾಗೂ ಸಾಮರಸ್ಯ ತರಲು ಸಾಧ್ಯ ಎಂದು ಗಾಂಧಿ ಹೇಳಿದ ಮಾತು ಅರ್ಥಪೂರ್ಣವಾಗಿದೆ. ನಾಗರಿಕ ಸಮಾಜಾಧಿಕಾರಿಗಳು ಭಾರತದ ವೈವಿಧ್ಯತೆಯನ್ನು ಕಾಪಾಡುವ ಹೊಣೆ ಹೊಂದಿದ್ದಾರೆ. ಇವರುಗಳು ಪ್ರತಿ ಧರ್ಮವನ್ನು ಸಮನಾಗಿ ಕಾಣಬೇಕು ಹಾಗೂ ಪ್ರತಿಧರ್ಮದಿಂದ ಸಮದೂರದಲ್ಲಿ ಉಳಿಯಬೇಕು.

**ಸಹಿಷ್ಣುತೆ ಮಹತ್ವ:**

1) ಸಮಾಜ ಮತ್ತು ದೇಶದಲ್ಲಿ ಸಹನೆ ಇದ್ದಾಗ ಮಾತ್ರ ಮಾನವ ಹಕ್ಕುಗಳು ಬಹುತ್ವವಾದ ಪ್ರಜಾಪ್ರಭುತ್ವದಲ್ಲಿ ಸಾಮರಸ್ಯ ಮತ್ತು ಕಾನೂನುಗಳು ಚಲಾವಣೆಯಲ್ಲಿರಲು ಸಾಧ್ಯ.

2) ಎಲ್ಲಿ ಸಹನೆ ಇರುತ್ತದೆಯೋ ಅಲ್ಲಿ ಅಭಿವೃದ್ದಿಗೆ ಪೂರಕವಾದ ವಾತಾವರಣವಿರುತ್ತದೆ

3) ಸಹನೆಯುಳ್ಳ ದೇಶದಲ್ಲಿ ಧರ್ಮಾಂಧತೆ ಮತ್ತು ನಿರಂಕುಶತ್ವಕ್ಕೆ ಅವಕಾಶವಿರುವುದಿಲ್ಲ

4) ಸಹನೆಯುಳ್ಳ ಸಮಾಜದಲ್ಲಿ ಮುಕ್ತ ಆಯ್ಕೆಗಳಿರುತ್ತವೆ

5) ಬಲವಂತವಾಗಿ ತಮ್ಮ ಅಭಿಪ್ರಾಯ ಮತ್ತು ಆಚರಣೆಗಳನ್ನು ಬೇರೊಬ್ಬರ ಮೇಲೆ ಹೇರಲು ಆಸ್ಪದವಿರುವುದಿಲ್ಲ

6) ಜನರಿಗೆ ತಮಗಿಷ್ಟವಾದುದನ್ನು ಅನುಸರಿಸುವ ಮುಕ್ತ ಸ್ವಾತಂತ್ರ್ಯವಿರುತ್ತದೆ

7) ಸಮಾಜದ ಸಾಮರಸ್ಯ ಸಾರ್ವಜನಿಕ ಆಡಳಿತಗಾರರ ಸಹಿಷ್ಣುತೆ ಮೇಲೆ ಅವಲಂಬಿತವಾಗಿದೆ

ಹೀಗೆ ಸಹಿಷ್ಣುತೆಯು ಸಾರ್ವಜನಿಕ ಆಡಳಿತಗಾರರ ಪ್ರಮುಖ ಮೌಲ್ಯವಾಗಿದೆ.

**ಅನುಕಂಪ ಮತ್ತು ಸಹಾನುಭೂತಿ:**

ಅನುಕಂಪವೆಂಬುದು ಇತರರ ನೋವುಗಳನ್ನು ತಿಳಿದುಕೊಂಡು ಅವರ ನೋವುಗಳನ್ನು ಶಮನಗೊಳಿಸಲು ನಡೆಸುವ ಪ್ರಯತ್ನವಾಗಿದೆ.

ಸಹಾನುಭೂತಿ ಎಂಬುದು ಇತರರ ನೋವುಗಳನ್ನು ಅರ್ಥಮಾಡಿಕೊಂಡು ತಾನು ಅನುಭವಿಸುತ್ತಿರುವಂತೆ ಭಾವಿಸಿ ಅವರಿಗೆ ಅವುಗಳಿಂದ ಹೊರಬರುವಂತೆ ಸಹಾಯ ಹಸ್ತವನ್ನು ಚಾಚುವುದಾಗಿದೆ. 12ನೇ ಶತಮಾನದಲ್ಲಿ ನಮ್ಮ ಶರಣರು "ದಯವೇ ಧರ್ಮದ ಮೂಲ" ಎಂದು ತಮ್ಮ ವಚನಗಳಲ್ಲಿ ಸಾರುವ ಮೂಲಕ ಸದ್ಗುಣಗಳಲ್ಲಿ ಅನುಕಂಪವು ದೊಡ್ಡದಾದ ಸ್ಥಾನವನ್ನು ನೀಡಿದ್ದಾರೆ. ಇಲ್ಲಿ ಎಷ್ಟೋ ಬಾರಿ ಒಂದು ಮೃದುಸ್ಪರ್ಷ, ಕಿರುನಗೆ, ಪ್ರೀತಿಯ ಮಾತು, ಪ್ರಾಮಾಣಿಕ ಮೆಚ್ಚುಗೆ, ಮತ್ತೊಬ್ಬ ವ್ಯಕ್ತಿಯ ಜೀವನದಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುತ್ತದೆ.

ಇದು ಸ್ವಾಭಾವಿಕವಾಗಿದ್ದು ಅಲ್ಪಕಾಲಿಕವಾಗಿರುತ್ತದೆ. ಸಹಾನುಭೂತಿ ಹೊಂದಿರುವ ವ್ಯಕ್ತಿಯನ್ನು ಈ ಕೆಳಗಿನ ಗುಣಲಕ್ಷಣಗಳ ಮೂಲಕ ತಿಳಿದುಕೊಳ್ಳಬಹುದು.

1) ಬೇರೆಯವರ ನೋವುಗಳು ಶಮನಗೊಳಿಸಲು ಹಾತೊರೆಯುತ್ತಾರೆ

2) ಇತರರಿಗೆ ಸಹಾಯದ ಅವಶ್ಯಕತೆ ಇದ್ದಾಗ ಸಹಾಯ ಮಾಡುತ್ತಾರೆ

3) ಇತರರ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ

4) ಇತರರ ವ್ಯಕ್ತಿಗಳ ಬಗ್ಗೆ ಪರಾನುಭೂತಿ ಹೊಂದಿರುತ್ತಾರೆ

5) ಪ್ರತಿಫಲವಿಲ್ಲದ ದಯೆ

6) ಬೇರೆಯವರ ಸಹಾಯ ಬಯಸುವ ಸನ್ನಿವೇಶ ಗುರುತಿಸುತ್ತಾರೆ

7) ಅಪಾರ ಕಾಳಜಿ

8) ದುರ್ಬಲ ವರ್ಗದವರ ರಕ್ಷಣೆಗೆ ಸದಾ ಕಂಕನಬದ್ದರಾಗಿರುತ್ತಾರೆ.

ವಿಶೇಷವೆಂದರೆ ಪರಾನುಭೂತಿಯು ಅನುಕಂಪಕ್ಕಿಂತ ಮೊದಲೇ ಸಂಭವಿಸುತ್ತದೆ. ಅನುಕಂಪವು ದೇಹ ಮತ್ತು ಮಿದುಳಿನ ಜೈವಿಕ ಅವಲಂಬನೆ ಹೊಂದಿದ್ದು ಮುಖದ ಭಾವನೆಗಳ ಮೂಲಕ ಸ್ಪರ್ಶದ ಮೂಲಕ ಮಾನವನು ಅನುಕಂಪ ವ್ಯಕ್ತಪಡಿಸುತ್ತಾನೆ.

**ಸಾರ್ವಜನಿಕ ಸೇವೆಗೆ ಸಮರ್ಪಣೆ:**

ಒಂದು ದೇಶದ ಆಡಳಿತದ ಯಶಸ್ಸು ನಾಗರಿಕ ಸೇವಾ ವರ್ಗದವರು ಎಷ್ಟರ ಮಟ್ಟಿಗೆ ಸಾರ್ವಜನಿಕ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ ಎಂಬುದರ ಮೇಲೆ ಅವಲಂಬಿತವಾಗಿದೆ. ಸಂವಿಧಾನಾತ್ಮಕವಾಗಿ ಗೌರವ, ಪ್ರತಿಷ್ಠೆ ಮುಂತಾದವನ್ನು ಹೊಂದಿರುವ ನಾಗರಿಕ ಸೇವಾ ವರ್ಗವು ವಿಶಾಲ ರಾಷ್ಟ್ರೀಯ ಮನೋಭಾವ ಹೊಂದಿ ಸಾರ್ವಜನಿಕ ಸೇವೆಗೆ ತಮ್ಮನ್ನು ಹೃದಯ ಪೂರ್ವಕವಾಗಿ ಸಮರ್ಪಣೆ ಮಾಡಿಕೊಳ್ಳುವ ಅಗತ್ಯವಿದೆ.

ಬದ್ಧತೆ ಮತ್ತು ಸಮರ್ಪಣೆ ಒಂದೇ ಆದರೂ ಸ್ವಲ್ಪ ಮಟ್ಟಿನ ವ್ಯತ್ಯಾಸವಿದೆ. ಔಪಚಾರಿಕವಾಗಿ ಪ್ರಮಾಣ ಮಾಡಿ ಕಾರ್ಯನಿರ್ವಹಿಸುವುದು ಬದ್ದತೆ. ಆದರೆ ಸ್ವ-ಆಸಕ್ತಿಯ ಕಾರ್ಯವಲ್ಲದಿದ್ದರೂ ವೈಯಕ್ತಿಕವಾಗಿ ತೊಡಗಿಕೊಳ್ಳುವುದು ಸಮರ್ಪಣೆಯಾಗಿದೆ.

ಯಶಸ್ಸಿನ ಗುರಿಮುಟ್ಟಲು ಮೊದಲು ಕರ್ತವ್ಯಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳಬೇಕಾದ ಅಗತ್ಯವಿದೆ.

**ಸಮರ್ಪಣೆಯ ಮಹತ್ವ:**

1) ಆಡಳಿತಾತ್ಮಕ ಜವಾಬ್ದಾರಿ ಹೆಚ್ಚಿಸುತ್ತದೆ

2) ನಾಗರಿಕ ಸೇವೆ ಮತ್ತು ನಾಗರಿಕ ನಡುವೆ ಉತ್ತಮ ಸಂಬಂಧಕ್ಕೆ ಸಹಾಯಕವಾಗಿದೆ

3) ಆಡಳಿತದಲ್ಲಿ ದಕ್ಷತೆಯಿಂದ ಕರ್ತವ್ಯ ನಿರ್ವಹಿಸಲು ಸಹಾಯ ಮಾಡುತ್ತದೆ

4) ವೃತ್ತ ಬದ್ದತೆ ಮತ್ತು ನ್ಯಾಯ ಬದ್ದತೆಯನ್ನು ಹೆಚ್ಚಿಸುತ್ತದೆ

5) ಸಾರ್ವಜನಿಕ ಹಿತಾಸಕ್ತಿ ರಕ್ಷಿಸಲು ಸಹಾಯಕವಾಗಿದೆ

6) ಸಾರ್ವಜನಿಕ ಸೇವೆ ಮತ್ತು ಕಾರ್ಯಾಂಗದ ನಡುವೆ ಸಾಮರಸ್ಯ ತರುತ್ತದೆ

7) ಸಾರ್ವಜನಿಕ ಸೇವೆಗಳ ಮೇಲೆ ನಾಗರಿಕರಿಗೆ ನಂಬಿಕೆ ಮತ್ತು ವಿಶ್ವಾಸ ಬೆಳೆಯುತ್ತದೆ

8) ಆಡಳಿತದಲ್ಲಿ ಪಾರದರ್ಶಿಕತೆ

9) ಉತ್ತಮ ತೀರ್ಮಾನ ಕೈಗೊಳ್ಳಬಹುದು

10) ಸರ್ಕಾರದ ಯೋಜನೆಗಳು ಅವಧಿಗಿಂತ ಪೂರ್ವದಲ್ಲಿ ಯಶಸ್ವಿಯಾಗುವ ಸಂಭವನೀಯತೆ ಹೆಚ್ಚು.

**ದುರ್ಬಲ ವರ್ಗಗಳ ಬಗ್ಗೆ ಸಹನೆ ಮತ್ತು ಅನುಕಂಪ:**

**"ಸಮಾಜವಾದಿ"** ಎಂಬ ತತ್ವವನ್ನು ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿಯೇ ಅಳವಡಿಸಿಕೊಂಡಿರುವುದರಿಂದ ಎಲ್ಲರಿಗೂ ಸಮಾನ ಸ್ಥಾನ ದೊರಕಿಸುವ ಕಲ್ಯಾಣ ಕಾರ್ಯ ಸರ್ಕಾರದ್ದು.

ಸಮಾಜದಲ್ಲಿ ಎಲ್ಲ ಜನರೂ ಸಮನಾಗಿಲ್ಲ. ಆರ್ಥಿಕ ಸಾಮಾಜಿಕ, ರಾಜಕೀಯ, ಧಾರ್ಮಿಕ ಮುಂತಾದ ತಾರತಮ್ಯಗಳಿಲ್ಲದೆ ಇಲ್ಲಿ ದುರ್ಬಲ ವರ್ಗಗಳೆಂದರೆ ಬಡವರು / ಮಹಿಳೆ. ಇವರು ನಿರಂತರವಾಗಿ ಸಮಾಜದ ನಿರ್ಲ್ಯಕ್ಷಕ್ಕೆ ಒಳಗಾಗುತ್ತಿದ್ದಾರೆ. ಇಂತಹ ದುರ್ಬಲ ವರ್ಗಗಳಿಗೆ ಸಾಮಾಜಿಕ, ಆರ್ಥಿಕ, ನ್ಯಾಯ ಒದಗಿಸುವ ಸಂಪೂರ್ಣವಾದ ಹೊಣೆ ನಾಗರಿಕ ಸೇವಾ ವರ್ಗದ ಮೇಲಿದೆ.

**ಮಹತ್ವ:**

1) ಸಹನೆ ಮತ್ತು ಅನುಕಂಪವಿದ್ದರೆ ದುರ್ಬಲ ವರ್ಗಗಳ ಬೇಕು ಬೇಡಿಕೆಗಳನ್ನು ತಿಳಿದುಕೊಳ್ಳಬಹುದು

2) ಸಂವೇದನಾಶೀಲತೆ ಬೆಳೆದು ಅವರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬಹುದು

3) ಸೇವೆಗಳ ವಿತರಣೆಯ ಮೇಲೆ ಪ್ರಭಾವ ಬೀರುತ್ತಿರುವ ಅಂಶಗಳನ್ನು ಪತ್ತೆ ಹಚ್ಚಬಹುದು

4) ದುರ್ಬಲ ವರ್ಗಗಳ ಬಗ್ಗೆ ಸಕಾರಾತ್ಮಕ ಕ್ರಿಯಾ ಮೌಲ್ಯ ಬೆಳೆಯುತ್ತದೆ

5) ಸಮಾಜದ ಸುಸ್ಥಿರ ಅಭಿವೃದ್ದಿಗೆ ಸಹಕಾರಿಯಾಗುತ್ತದೆ

6) ದುರ್ಬಲ ವರ್ಗಗಳಿಗೆ ಸಂಬಂಧಪಟ್ಟ ಯೋಜನೆಗಳನ್ನು ದುರ್ಬಳಕೆಯಾಗದಂತೆ ತಡೆಯಲು ನೆರವಾಗುತ್ತದೆ

7) ಮೀಸಲಾತಿಯಂತಹ ಸೌಲಭ್ಯಗಳ ಪರಿಣಾಮಕಾರಿ ಜಾರಿಯಾಗುತ್ತದೆ

8) ದೇಶದ ಅತಿ ಹೆಚ್ಚು ಅನಕ್ಷರಸ್ಥ ಜನರು ದುರ್ಬಲ ವರ್ಗಕ್ಕೆ ಸೇರಿದವರಾಗಿದ್ದು ಅದಕ್ಕಾಗಿ ಅವರಲ್ಲಿ ಸಾಕ್ಷರತೆ, ಆರೋಗ್ಯ, ಕಾನೂನಿನ ತಿಳುವಳಿಕೆಯಂತಹ ವಿಷಯಗಳ ಮೇಲೆ ವಿಶೇಷ ಗಮನದ ಅಗತ್ಯಕ್ಕೆ ನೆರವಾಗುತ್ತದೆ

9) ಆದಿವಾಸಿ ಜನರ ಸಂಕೀರ್ಣ ಸಮಸ್ಯೆಗೆ ಪರಿಹಾರ ನೀಡಬಹುದಾಗಿದೆ.

ಹೀಗೆ ದುರ್ಬಲ ವರ್ಗದವರ ಬಗ್ಗೆ ಸಹನೆ ಮತ್ತು ಅನುಕಂಪ ತನ್ನದೇ ಆದ ಮಹತ್ವವನ್ನು ಹೊಂದಿದೆ.

# ಭಾಗ – 3

# ಅಧ್ಯಾಯ – 1

# ಅಭಿವೃತ್ತಿ, ಮನೋಧೋರಣೆ (Attitude)

"ಒಬ್ಬ ವ್ಯಕ್ತಿ, ಒಂದು ವಸ್ತು, ಸಮಾವೇಶದ ಬಗ್ಗೆ ಇನ್ನೊಬ್ಬರು ಹೊಂದಿರುವ ಮಾನಸಿಕ ಸ್ಥಿತಿಯೇ ಮನೋಧೋರಣೆ". ಫ್ರಿಮನ್‌ರವರ ಪ್ರಕಾರ "ನಿರ್ದಿಷ್ಟ ಸನ್ನಿವೇಶಗಳು, ವ್ಯಕ್ತಿಗಳು, ವಸ್ತುಗಳು ಇಂಥವುಗಳ ನಿರ್ದಿಷ್ಟ ಅನುಕ್ರಿಯೆ ತೋರುವಂತೆ ಮಾಡುವ ಪೂರ್ವಸಿದ್ಧ ಸ್ಥಿತಿಯೇ ಮನೋಧೋರಣೆ.

**ಸ್ವರೂಪ:**

1) ಇದು ಮಾನವನ ವರ್ತನೆಯ ಪೂರ್ವಸಿದ್ಧತೆಯಾಗಿದೆ

2) ಅನುವಂಶೀಯತೆಯ ಪ್ರಭಾವ ಅಷ್ಟೊಂದಿರುವುದಿಲ್ಲ

3) ಮನೋಭಾವನೆಗಳು ಅನುಭವದಿಂದ ರೂಪಗೊಳ್ಳುತ್ತದೆ

4) ಇವು ಬಹಿರಂಗವಾಗಿ ಸ್ಥಿರವಾಗಿರುವಂತೆ ಕಂಡರೂ ಸ್ವಬಲವಾದ ಕಾರಣಗಳಿದ್ದಾಗ ಬದಲಾಗುತ್ತದೆ

5) ಪ್ರತ್ಯಕ್ಷ ಮತ್ತು ಪರೋಕ್ಷ ರೂಪದಲ್ಲಿ ಪ್ರಕಟ

6) ವ್ಯಕ್ತಿಗತ ಮನೋಧೋರಣೆಯ ಮೂಲಕ ಅಭಿರುಚಿ ತಿಳಿಯಬಹುದಾಗಿದೆ

**ಆಯಾಮಗಳು:**

1) ತೀವ್ರತೆ: ವ್ಯಕ್ತಿಯ ವರ್ತನೆಯನ್ನು ಎಷ್ಟರ ಮಟ್ಟಿಗೆ ಪ್ರೇರಣೆ ಮಾಡುತ್ತದೆ ಎನ್ನುವುದನ್ನು ಸೂಚಿಸುತ್ತದೆ

2) ದಿಕ್ಕು: ಧನಾತ್ಮಕ ಋಣಾತ್ಮಕ ತಟಸ್ಥ್ಯತೆ

3) ವ್ಯಾಪಕತೆ: ವ್ಯಕ್ತಿಗತ ಎಲ್ಲಾ ವರ್ತನೆ / ನಿರ್ದಿಷ್ಟ ವರ್ತನೆ ಮೇಲೆ ಮಾತ್ರ ಪ್ರಭಾವ

4) ಅವಧಿ: ಮನೋಧೋರಣೆಗಳ ಅವಧಿ ಅವುಗಳ ತೀವ್ರತೆ ಮೇಲೆ ಅವಲಂಬಿಸಿದೆ

ಮನೋಧೋರಣೆಯು ಮೂರು ಅಂಶಗಳನ್ನು ಹೊಂದಿದೆ. ಅವುಗಳು ಭೌದ್ಧಿಕ ಅಂಶ, ಭಾವುಕ ಅಂಶ, ವರ್ತನಾ ಅಂಶ.

**ಮನೋಧೋರಣೆಯ ವಿಂಗಡಣೆ:**

1) ವ್ಯಕ್ತ ಮನೋಧೋರಣೆ

2) ಅಂತರ್ಗತ ಮನೋಧೋರಣೆ

**1) ವ್ಯಕ್ತ ಮನೋಧೋರಣೆ:** ಇಲ್ಲಿ ವ್ಯಕ್ತಿ ತನ್ನ ಮನೋಧೋರಣೆಯ ಕುರಿತು ಜಾಗೃತಿಯನ್ನು ಹೊಂದಿರುತ್ತಾನೆ

**2) ಅಂತರ್ಗತ ಮನೋಧೋರಣೆ:** ನೆನಪುಗಳು ಅಜಾಗೃತ ಸಂವೇಧನೆಯಿಂದ ಕೂಡಿರುತ್ತವೆ. ಕೆಲವು ಸಲ ವಸ್ತು ವಿಷಯಗಳ ಬಗ್ಗೆ ತಿಳಿಯದೇ ವಿಚಾರಿಸದೆ ಮನೋಧೋರಣೆ ವ್ಯಕ್ತಪಡಿಸುತ್ತವೆ.

**ಮನೋಧೋರಣೆಯ ಸಿದ್ಧಾಂತಗಳು:**

**1) ಶಾಸ್ತ್ರೀಯ ಪರಿಸ್ಥಿತಿ ಸಿದ್ಧಾಂತ:** ಸ್ವಂತ ಅನುಭವದಿಂದ ಮನೋಧೋರಣೆ ರೂಪಿಸಿಕೊಂಡು ಬದಲಾಗಿ ನೆರೆಯವರು ಮಾತನಾಡುವ ವಿಷಯದಿಂದ ರೂಪವಾಗುವುದು

**2) ಸಹಾಯಕ ಪರಿಸ್ಥಿತಿ ಸಿದ್ಧಾಂತ:** ಉತ್ತಮ ಸಾಧನೆ ಮಾಡಿದ ವ್ಯಕ್ತಿಯನ್ನು ಪ್ರಶಂಸಿಸಿದರೆ ಆತ ಮತ್ತೆ ಅದಕ್ಕಿಂತಲೂ ಉತ್ತಮ ಸಾಧನೆ ಮಾಡುವ ಧನಾತ್ಮಕವಾದ ಮನೋಭಾವ ಬೆಳೆಸಿಕೊಳ್ಳುತ್ತಾನೆ

**3) ವೀಕ್ಷಣಾ ಸಿದ್ಧಾಂತ:** ಜೀವನಪರ್ಯಂತ ನೋಡಿ ಕಲಿಯುವುದರ ಮೂಲಕ ತನ್ನ ಮನೋಧೋರಣೆ ನಿರ್ಮಿಸಿಕೊಳ್ಳುತ್ತಾನೆ

**ಮನೋಧೋರಣೆಯ ರಚನೆ ಮತ್ತು ಚಲನಾತ್ಮಕ ಗುಣಧರ್ಮಗಳು:**

1) ಮನೋಧೋರಣೆಯ ಶಕ್ತಿ

2) ಮನೋಧೋರಣೆಯ ಸಮ್ಮತಿ (ಹಿಂದಿನ ಅನುಭವ ಮೂಲಕ ವ್ಯಕ್ತವಾಗಿರುವುದು)

3) ಮನೋಧೋರಣೆಯ ಚಂಚಲತೆ (ನಿರ್ಧಾರದಲ್ಲಿ)

**ನೈತಿಕ ಮನೋಧೋರಣೆಗಳು:**

ಯಾವುದು ಸರಿ? ಯಾವುದು ತಪ್ಪು? ಎಂದು ನಿರ್ಧರಿಸುವ ಭಾವನೆಗಳೆಲ್ಲಾ ನೈತಿಕ ಮನೋಧೋರಣೆಗಳಾಗಿವೆ. ಇವು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ಮತ್ತು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ.

ಉದಾ: ಸ್ವಾರ್ಥವಿಲ್ಲದ ಪ್ರೀತಿ, ಕ್ಷಮೆ, ಹಿರಿಯರ ಗೌರವ, ತತ್ವಗಳು, ಸಾಮರಸ್ಯ ಜೀವನ ಇತ್ಯಾದಿ.

**ರಾಜಕೀಯ ಮನೋಧೋರಣೆ:**

ರಾಜಕೀಯ ವಿವಾದಗಳು, ರಾಜಕೀಯ ಅಭ್ಯರ್ಥಿಗಳು, ರಾಜಕೀಯ ಪಕ್ಷಗಳು, ರಾಜಕೀಯ ಸಂಘಟನೆಗಳಂತಹ ವಿಷಯಗಳ ಬಗ್ಗೆ ಹೊಂದಿರುವ ಮನಸ್ಸಿನ ಪೂರ್ವಸಿದ್ದ ಸ್ಥಿತಿಯಾಗಿದೆ.

**ಉತ್ತಮ ಮನೋಧೋರಣೆಯ ಐದು ಅಂಶಗಳು ಈ ಕೆಳಗಿನಂತಿವೆ,**

1) ಬಹಿರ್ಮುಖಿ

2) ಹಿತವಾಗಿರುವಿಕೆ

3) ಆತ್ಮಸಾಕ್ಷಿ

4) ಭಾವನೆಗಳ ಸ್ಥಿರತೆ

5) ಕ್ರಿಯಾತ್ಮಕ ಗುಣ

**ಮನೋಧೋರಣೆಯ ಮಹತ್ವ:**

1) ಮನೋಧೋರಣೆಗಳು ನಮ್ಮ ಗುರುತಾಗಿದ್ದು ನಮ್ಮನ್ನು ವ್ಯಾಖ್ಯಾನಿಸುತ್ತದೆ

2) ನಮ್ಮ ನಡತೆಗೆ ಮಾರ್ಗದರ್ಶಿಗಳು

3) ಸಂವೇಧನಾತ್ಮಕ ರಚನೆ ಹೊಂದಿರುತ್ತದೆ

4) ಪ್ರಚೋದಕಗಳಿಗೆ ಪ್ರತಿಕ್ರಯಿಸಲು ಸಹಕರಿಸುತ್ತದೆ

5) ರೂಢಿಗಳ, ವರ್ತನೆಗಳ ಬಲವಾದ ನಂಬಿಕೆಯನ್ನು ಹೊಂದಿರುತ್ತದೆ

6) ನಮ್ಮ ಅಹಂಭಾವಕ್ಕೆ ರಕ್ಷಣಾ ಕಾರ್ಯ ಮಾಡುತ್ತದೆ

7) ನಮ್ಮ ಒಲವು ನಿಲುವು ವ್ಯಕ್ತಿತ್ವಕ್ಕೆ ಸಹಕಾರ ನೀಡುತ್ತದೆ

8) ಸ್ವ–ಪ್ರತೀಕ್ಷೆ ಮತ್ತು ರಕ್ಷಣೆ ನೀಡುತ್ತದೆ.

# ಅಧ್ಯಾಯ – 2

# ಸಾಮಾಜಿಕ ಪ್ರಭಾವ ಮತ್ತು ಘುಸಲಾಯಿಸುವುದು

ಸಾಮಾಜಿಕ ಪ್ರಭಾವವು ಸಾಮಾಜಿಕ ಮನೋವಿಜ್ಞಾನದ ಪ್ರಮುಖ ಅಧ್ಯಯನ ವಿಷಯವಾಗಿದ್ದು ಇದು ವ್ಯಕ್ತಿಯ ವಿಚಾರಗಳು, ವರ್ತನೆಗಳು ಮತ್ತು ಭಾವನೆಗಳು ಸಾಮಾಜಿಕ ಗುಂಪುಗಳಿಂದ ಹೇಗೆ ಪ್ರಭಾವಕ್ಕೆ ಒಳಗಾಗುತ್ತದೆ ಎಂಬುದರ ಕುರಿತು ಚರ್ಚಿಸುತ್ತದೆ.

ಪ್ರಸ್ತುತ ಸಮಾವೇಶದಲ್ಲಿ ಜನತೆಯನ್ನು ಭಾವಿಸುತ್ತಿರುವ ಯಾವೊಂದು ಸಮಸ್ಯೆಗೂ ನಿಶ್ಚಿತ ಪರಿಹಾರ ಕಂಡು ಬರುತ್ತಿಲ್ಲ. ಸಾಮಾಜಿಕ ಮನೋವಿಜ್ಞಾನವು ಮಾನವನ ವೈಯಕ್ತಿಕ ಮತ್ತು ಸಾಮಾಜಿಕ ಜೀವನವನ್ನು ಉತ್ತಮಗೊಳಿಸಲು ಪ್ರಯತ್ನಿಸುತ್ತದೆ. ಪರಸ್ಪರರಲ್ಲಿ ಪ್ರೀತಿ ವಿಶ್ವಾಸಗಳು ಬೆಳೆಯಲು ಸಹಾಯವಾಗಬಲ್ಲ ಪರಿಸರ ನಿರ್ಮಾಣದ ಬಗ್ಗೆ ಮಾರ್ಗದರ್ಶನ ನೀಡುತ್ತದೆ.

ಇಲ್ಲಿ ಕುಟುಂಬ, ಕುಟುಂಬದ ನಂಬಿಕೆಗಳು, ಆದರ್ಶ ವ್ಯಕ್ತಿಗಳು, ಯಜಮಾನ ಹೀಗೆ ಹಲವಾರು ರೀತಿಯ ಪ್ರಭಾವ ಬೀರುತ್ತವೆ.

**ಸಾಮಾಜಿಕ ಪ್ರಭಾವದ ಪ್ರಕಾರಗಳು:**

**1) ಪ್ರಾಮಾಣಿಕ ಪ್ರಭಾವ:** ಸಾಮಾಜಿಕ ಗುಂಪುಗಳನ್ನು ಅನುಸರಿಸಿ ಅವರಂತೆ ನಡೆಯಲು ಪ್ರಯತ್ನಿಸುವುದು

**2) ತಿಳುವಳಿಕೆ ಪ್ರಭಾವ:** ಅಸ್ಪಷ್ಟ ಸನ್ನಿವೇಶಗಳ ಸಂದರ್ಭದಲ್ಲಿ ಮಾತ್ರ ಏನೂ ಗೊತ್ತಾಗದ ಸನ್ನಿವೇಶಗಳಲ್ಲಿ ಅನುಸರಿಸುವುದು.

**ಸಾಮಾಜಿಕ ಪ್ರಭಾವದ ತತ್ವಗಳೆಂದರೆ:**

1) ಪರಸ್ಪರ ಸಂಬಂಧ

2) ಸ್ಥಿರತೆ

3) ಸಾಮಾಜಿಕ ಪುರಾವೆ

4) ಆಜ್ಞೆ ಮತ್ತು ಅನುಭವ

5) ಇಷ್ಟಪಡುವಿಕೆ

**ಮನವೊಲಿಕೆ:**

ವ್ಯಕ್ತಿಯ ಮನೋಭಾವವನ್ನು ಬದಲಾಯಿಸಲು ಮಾಡುವ ಪ್ರಯತ್ನವೇ ಮನವೊಲಿಕೆ. ಮನವೊಲಿಕೆಯ ಗುಣ ಸಾರ್ವಜನಿಕ ಆಡಳಿತಗಾರನಿಗೆ ಅವಶ್ಯಕವಾಗಿ ಇರಬೇಕು. ಏಕೆಂದರೆ ಆಡಳಿತ ನಡೆಸುವಾಗ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ಸರ್ಕಾರದ ವಿರುದ್ಧ ಆಕ್ರೋಶಗಳು, ಮನೋಭಾವಗಳು ಬದಲಾಗದ ಆ ಜನರ ಜೊತೆ ಪರಿಣಾಮಕಾರಿಯಾಗಿ ಸಂವಹನ ನಡೆಸಿ ಅವರ ಮನವೊಲಿಸಬೇಕಾಗುತ್ತದೆ. ಮನವೊಲಿಕೆಯು ಒಂದು ಕೌಶಲ್ಯವಾಗಿದೆ.

**ಮನವೊಲಿಕೆಯ ವಿಧಗಳು:**

**1) ಸ್ವ–ಮನವೊಲಿಕೆ:** ವ್ಯಕ್ತಿ ಕೆಲವು ಸಂಧಿಗ್ದತೆಯ ಸನ್ನಿವೇಶಗಳಲ್ಲಿ ಮನಸ್ಸಿನ ಮೇಲೆ ಸ್ವ ಮನವೊಲಿಸಿಕೊಂಡು ಮನಪರಿವರ್ತಿಸಿಕೊಳ್ಳುವ ವಿಧಾನ

**2) ಪರ ಮನವೊಲಿಕೆ:** ಇದು ಇತರರ ಮನೋಭಾವವನ್ನು ಪರಿವರ್ತಿಸುವುದಾಗಿದೆ.

**ಮನವೊಲಿಸುವ ತಂತ್ರಗಳು:**

**1) ತರ್ಕಕ್ಕೆ ಮನವಿ:** ತಾಂತ್ರಿಕತೆ, ಮಾತುಗಾರಿಕೆ, ವೈಜ್ಞಾನಿಕ ಸಾಕ್ಷಾಧಾರಳು ಮತ್ತು ವೈಜ್ಞಾನಿಕ ವಿಧಾನಗಳ ಮೂಲಕ

**2) ಭಾವನೆಗಳಿಂದ ಮನವಿ:** ನಂಬಿಕೆ, ಪ್ರಸ್ತುತತೆ, ಕರುಣೆ, ಕಾಲ್ಪನಿಕ ಪ್ರಚಾರ, ಧರ್ಮದ ಮುಖಾಂತರ

**3) ದಬ್ಬಾಳಿಕೆ:** ಒತ್ತಾಯ, ಚಿತ್ರಹಿಂಸೆ, ಭಯದ ಮುಖಾಂತರ

**4) ಇನ್ನುಳಿದ ತಂತ್ರ:** ಮೋಸ, ವಂಚನೆ, ಜಾಹಿರಾತು ಸಂವಹನಗಳ ಮೂಲಕ ಇಲ್ಲಿ ವ್ಯಕ್ತಿಯ ಹಾವಭಾವಗಳು ಸಂವಹನ ಕೌಶಲ್ಯಗಳು ಮಾತುಗಾರಿಕೆ ಪ್ರಮುಖ ಪಾತ್ರ ವಹಿಸುತ್ತದೆ.

**ಮನವೊಲಿಸುವ ತಂತ್ರಗಳು:**

1) ಅನಕ್ಷರತೆ ಹೆಚ್ಚಾಗಿರುವ ಈ ನಾಡಿನಲ್ಲಿ ಇದು ಬಹಳ ಅವಶ್ಯಕ

2) ಜನರ ಮನೋ ಬದಲಾವಣೆಯಾದಾಗ ಮಾತ್ರ ಸಮಾಜದ ಬದಲಾವಣೆ ಸಾಧ್ಯ

3) ಮೂಢನಂಬಿಕೆಗಳ ವಿರುದ್ದ ವಿರೋಧಿಸಲು

4) ಅಸ್ಪಷ್ಟತೆ ವಿರುದ್ದ ಮನವೊಲಿಸಲು

5) ಕಾನೂನುಗಳ ಸೂಕ್ಷ್ಮತೆಯನ್ನು ಪರೀಕ್ಷಿಸಲು

6) ಭಾವನಾತ್ಮಕ ಸಂಬಂಧಗಳನ್ನು ಬಲಗೊಳಿಸಲು

7) ಪರಿಸರದ ಬಗ್ಗೆ ಜಾಗೃತಿಗೆ

8) ಸರ್ಕಾರ ಮತ್ತು ಜನರ ನಡುವೆ ರಾಜತಂತ್ರ

ಒಟ್ಟಾರೆಯಾಗಿ ಸಾರ್ವಜನಿಕ ಅಧಿಕಾರಿಯ ಮನವೊಲಿಕೆ ತಂತ್ರಗಳನ್ನು ಬೆಳೆಸಿಕೊಂಡಷ್ಟು ಸರ್ಕಾರಕ್ಕೆ ಅದರಲ್ಲೂ ಉತ್ತಮ ಆಡಳಿತಕ್ಕೆ ಅನುಕೂಲಕರವಾಗಿರುತ್ತದೆ.

# ಅಧ್ಯಾಯ – 3

# ಅಭಿಕ್ಷಮತೆ ಮತ್ತು ನಾಗರಿಕ ಸೇವೆಯ ಮೌಲ್ಯಗಳು

ಅಭಿಕ್ಷಮತೆಯನ್ನು ಸಾಮಾನ್ಯವಾಗಿ ಒಲವು ಎಂದು ಕರೆಯುತ್ತಾರೆ. Aptitude-Latin ಭಾಷೆಯ "ಆಪ್ಟಿಟ್ಯೂಡೊ" ಎಂದರೆ ಸಾಮರ್ಥ್ಯ ಅಥವಾ ಸ್ವಾಭಾವಿಕವಾಗಿ ಕಲಿಯುವ ಸಾಮರ್ಥ್ಯ ಎಂದರ್ಥ. ಒಂದು ಕಾರ್ಯ ಕ್ಷೇತ್ರದಲ್ಲಿ, ಕೌಶಲದಲ್ಲಿ, ವ್ಯಕ್ತಿಯು ತೋರುವ ವಿಶೇಷವಾದ ಸಾಮರ್ಥ್ಯವೇ ಅಭಿಕ್ಷಮತೆ. ಅಂದರೆ ಸಾಮಾನ್ಯ ಬುದ್ದಿಯ ಹೊರತಾಗಿ ಒಂದು ಕಾರ್ಯದಲ್ಲಿ ತೋರಿಸಲಾಗುವ ದಕ್ಷತೆ ಮತ್ತು ಪರಿಣತಿಗಳಿಗೆ ಕಾರಣವಾಗುವ ಅರ್ಹತೆ ಸಾಮರ್ಥ್ಯವನ್ನು ಅಭಿಕ್ಷಮತೆ ಎನ್ನಬಹುದು. ಎನ್.ಎಲ್.ಮನುರವರ ಪ್ರಕಾರ "ಒಂದು ನಿರ್ದಿಷ್ಟ ಕ್ಷೇತ್ರದಲ್ಲಿನ ವಿಶೇಷ ಗುಣವೇ ಅಭಿಕ್ಷಮತೆ".

**ಸ್ವರೂಪ:**

1) ಇದು ಅನುವಂಶೀಯತೆ ಮತ್ತು ಪರಿಹಾರಗಳೆರಡು ಅಂಶವನ್ನು ಹೊಂದಿದೆ. ಆದ್ದರಿಂದ ಇವೆರಡೂ ಅಭಿಕ್ಷಮತೆಗೆ ಪೂರಕವಾಗಿದೆ

2) ಅಭಿಕ್ಷಮತೆ ಒಂದು ಸಾಮರ್ಥ್ಯವಾಗಿದ್ದು ವ್ಯಕ್ತಿಯ ಒಲವುಗಳನ್ನು ತೋರಿಸುತ್ತದೆ

3) ಅಭಿಕ್ಷಮತೆಯು ನಿರ್ದಿಷ್ಟತೆ, ಏಕರೂಪದ ಸೌಲಭ್ಯ ಮತ್ತು ಸ್ಥಿರತೆ ಎಂಬ ನಾಲ್ಕು ಗುಣ ಹೊಂದಿದೆ

4) ಅರ್ಹತೆ ವರ್ತಮಾನವನ್ನು ಸೂಚಿಸಿದರೆ ಅಭಿಕ್ಷಮತೆ ಭವಿಷ್ಯವನ್ನು ಸೂಚಿಸುತ್ತದೆ

5) ಅಭಿಕ್ಷಮತೆ ಬುದ್ದಿಶಕ್ತಿಗಿಂತಲೂ ಭಿನ್ನವಾಗಿದೆ

6) ಇದು ಸಾಧನೆಗಿಂತಲೂ ಭಿನ್ನ

7) ಅಭಿರುಚಿ ಅಸ್ಥಿರವಾಗಿದ್ದರೆ ಇದು ಸ್ಥಿರವಾಗಿರುತ್ತದೆ

8) ಅಭಿಕ್ಷಮತೆ ಸಾಮಾನ್ಯವಾಗಿ ಮೌಲ್ಯಗಳನ್ನು ಸಂಬಂಧ ಹೊಂದಿದೆ

9) ವ್ಯಾಪ್ತಿ ನಿಮಿತವಾಗಿದ್ದು ನಿರ್ದಿಷ್ಟ ವಿಷಯದಲ್ಲಿ ಸಾಮರ್ಥ್ಯ ಸೂಚಿಸುತ್ತದೆ.

**ಅಭಿಕ್ಷಮತಾ ನಿಹಿತಾರ್ಥ:**

1) ಅನುವಂಶೀಯ ಸಾಮರ್ಥ್ಯ

2) ಪರಿಸರ ಪ್ರಭಾವ

3) ಕ್ಷೇತ್ರದಲ್ಲಿನ ಆಸಕ್ತಿ ಅಭಿರುಚಿ

**ಅಭಿಕ್ಷಮತೆ ಪ್ರಯೋಜನಗಳು:**

1) ವೃತ್ತಿಯ ಆಯ್ಕೆ, ಮಾರ್ಗದರ್ಶನ ಮತ್ತು ಮನೋರಂಜನೆ ಮಾರ್ಗದರ್ಶನಗಳಿಗೆ ಇದು ಪ್ರಯೋಜನಕಾರಿ

2) ವೈಯಕ್ತಿಕ ಪರಾಮರ್ಶನಕ್ಕೆ ಪ್ರಯೋಜನಕಾರಿ

3) ಸಮಸ್ಯೆಗಳ ನಿವಾರಣೆ ಮತ್ತು ಸಂಘಟನೆಯಲ್ಲಿ ಸಹಾಯಕವಾಗಿದೆ

4) ಸಾರ್ವಜನಿಕ ಸೇವಕರ ದೌರ್ಬಲ್ಯಗಳನ್ನು ಮತ್ತು ಉತ್ತಮಾಂಶಗಳನ್ನು ಪರಿಶೀಲಿಸಿ ಅಭಿವೃದ್ಧಿಪಡಿಸಲು

5) ನೌಕರರ ವೃತ್ತಿ ಸಾಧನಾ ಸೂಚಿಯಾಗಿದೆ

6) ಉದ್ಯೋಗಕ್ಕೆ ಸೂಕ್ತ ವ್ಯಕ್ತಿ ಆಯ್ಕೆಗೆ ಸಹಾಯಕವಾಗಿದೆ

7) ಭವಿಷ್ಯದ ಮುನ್ನುಡಿಯಾಗಿದೆ

**ನಾಗರಿಕ ಸೇವೆಯ ಮೂಲಭೂತ ಮೌಲ್ಯಗಳು:**

ನಾಗರಿಕ ಸೇವೆಯ ಮೂಲಭೂತ ಮೌಲ್ಯಗಳು ಈ ಕೆಳಕಂಡಂತಿವೆ.

1) ಜವಾಬ್ದಾರಿ ಮತ್ತು ಹೊಣೆಗಾರಿಕೆ

2) ಕಾನೂನು ಬದ್ದತೆ

3) ವೃತ್ತಿಪರ ಬದ್ದತೆ (ಕಾಯಕವೇ ಕೈಲಾಸ)

4) ಉಪಯುಕ್ತವಾದ

5) ಅನುಕಂಪ

6) ರಾಷ್ಟ್ರೀಯ ಹಿತಾಸಕ್ತಿ

7) ನ್ಯಾಯ

8) ಪಾರದರ್ಶಕತೆ

9) ಸಮಗ್ರತೆ

10) ವಸ್ತುನಿಷ್ಠತೆ

11) ನಿಸ್ವಾರ್ಥತೆ

12) ಸ್ಪಂದನೆ

13) ಪ್ರಾಮಾಣಿಕ

14) ಸಮರ್ಪಣಾ ಭಾವ

ಇತರೆ.

# ಅಧ್ಯಾಯ – 4
# ಸಂವೇಗಾತ್ಮಕ ಬುದ್ದಿಶಕ್ತಿ

ಸಂವೇಗವು ನಾವು ಒಂದು ಸನ್ನಿವೇಶಕ್ಕೆ ತೋರುವ ಸಂಕೀರ್ಣ ಪ್ರಕ್ರಿಯೆಯಾಗಿದೆ. ಇದು ಸಂವೇಗಾತ್ಮಕ ಚಟುವಟಿಕೆ, ಅಭಿವೃದ್ಧಿ, ಅನೈಚ್ಛಿಕ ಪ್ರತಿಕ್ರಿಯೆ ಮತ್ತು ಭಾವನೆ ಒಳಗೊಂಡಿದೆ. ಸಂವೇಗಾತ್ಮಕ ಬುದ್ದಿಶಕ್ತಿ ಪರಿಕಲ್ಪನೆಯನ್ನು ಜಾನ್ ಮೇಯರ್ ಮತ್ತು ಪಟರ್ ಸಾಲೋವೈರವರು ಪರಿಚಯಿಸಿದರು. ಇವರ ಪ್ರಕಾರ ನಮ್ಮ ಹಾಗೂ ಇತರರು ಭಾವನೆಗಳನ್ನು ಗುರುತಿಸುವ ಸಾಮರ್ಥ್ಯ ಸ್ವಯಂಪ್ರೇರಿತವಾಗಿ ನಮ್ಮ ಭಾವನೆಗಳನ್ನು ನಿಯಂತ್ರಿಸಿಕೊಳ್ಳಲು ಹಾಗೂ ಸಂಬಂಧಗಳನ್ನು ಸಮರ್ಥವಾಗಿ ನಿರ್ವಹಿಸುವಂತಹ ಸಾಮರ್ಥ್ಯಕ್ಕೆ ಸಂಬಂಧಿಸಿದೆ. ಸಂವೇಗಾತ್ಮಕ ಬುದ್ದಿಶಕ್ತಿಯ ಕಾರ್ಯ ಮೆದುಳಿನಲ್ಲಿ ಸಿಬಕಾರ್ಟೆಕ್ಸ್ ಭಾಗದ ಕಾರ್ಯದ ಮೇಲೆ ಅವಲಂಬಿಸಿರುತ್ತದೆ. ಈ ಬುದ್ದಿಶಕ್ತಿಯ ನಿರ್ವಹಣೆಯು ಭಾವನಾತ್ಮಕ ಮತ್ತು ಭೌದ್ಧಿಕ ಅಂಶಗಳೆರಡನ್ನು ಒಳಗೊಂಡಿರುತ್ತದೆ.

**ಮೇಯರ್ ಮತ್ತು ಸಾಲೋವೈ ಪ್ರಕಾರ ಇದು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ.**

1) ಸಂವೇಗಗಳನ್ನು ಗುರುತಿಸುವಿಕೆ

2) ಸಂವೇಗಗಳ ಬಳಕೆ

3) ಸಂವೇಗಗಳ ಅರ್ಥಮಾಡಿಕೊಳ್ಳುವಿಕೆ

**ಸಂವೇಗಾತ್ಮಕ ಬುದ್ದಿಶಕ್ತಿಯ ಲಕ್ಷಣಗಳು (ಗೋಲಮನ್ ಡೇನಿಯಲ್ ಪ್ರಕಾರ):**

1) ಸ್ವಯಂ ಅರಿವು: ಪ್ರತಿ ಕ್ಷಣದಲ್ಲೂ ಉಂಟಾದ ಭಾವನೆಯನ್ನು ತಿಳಿಯುವುದು ಮತ್ತು ತನ್ನ ಸಾಮರ್ಥ್ಯಗಳ ನೈಜ ಅಳತೆ ಆತ್ಮವಿಶ್ವಾಸ ಸ್ವಯಂ ಮಾಪನೆ ಮಾಡುವುದು

2) ಸ್ವಯಂ ನಿಯಂತ್ರಣ: ಗುರಿ ಸಾಧನೆಯವರೆಗೆ ಭಾವೋದ್ವೇಗಗಳ ನಿಯಂತ್ರಣ, ಭಾವನಾತ್ಮಕವಾಗಿ ವಿಚಲಿತವಾಗದಿರುವುದು

3) ಅಭಿಪ್ರೇರಣೆ: ಹಿಂಜರಿತ ಸೋಲು ಮತ್ತು ಆಶಾಭಂಗಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಾಗಿದೆ

4) ಪರಾನುಭೂತಿ: ರಾಜಕೀಯ ಪ್ರಜ್ಞೆ, ಸೇವಾ ಭಾವ ವೈವಿಧ್ಯತೆಯ ಸಾಧನೆ

5) ಸಾಮಾಜಿಕ ಕೌಶಲ್ಯಗಳು: ನಾಯಕತ್ವ ಜೊತೆಗೂಡಿ ಕಾರ್ಯ, ತಂಡ ಸಾಮರ್ಥ್ಯ ರೂಪಿಸುವುದು.

**ಸಂವೇಗಾತ್ಮಕ ಬುದ್ದಿಶಕ್ತಿಯ ಅಧಿಕಾರಿಯ ಲಕ್ಷಣಗಳು:**

1) ಸಂಘರ್ಷಗಳನ್ನು ರಚನಾತ್ಮಕವಾಗಿ ನಿರ್ವಹಿಸುತ್ತಾನೆ

2) ಪರ–ವಿರೋಧ ಗುಂಪುಗಳ ಮಧ್ಯ ವಸ್ತುನಿಷ್ಠ ಕಾರ್ಯ ನಿರ್ವಹಿಸುತ್ತಾನೆ

3) ಸಹಕಾರ ಮನೋಭಾವ ಹೊಂದಿರುತ್ತಾರೆ

4) ಅನಿಶ್ಚಿತ ಮತ್ತು ಶೀಘ್ರ ಬದಲಾವಣೆಗಳನ್ನು ಉತ್ತಮವಾಗಿ ವ್ಯವಹರಿಸುತ್ತಾನೆ

5) ಇತರರ ಜೊತೆ ಅನುಭೂತಿಯಿಂದ ವರ್ತಿಸುತ್ತಾನೆ

6) ಸ್ವಯಂ ನಿಯಂತ್ರಣ

7) ತನ್ನ ಉದ್ದೇಶಿತ ಯೋಜನೆಗಳನ್ನು ಯಶಸ್ವಿಗೊಳಿಸಲು ಜನರು ಪಾಲ್ಗೊಳ್ಳುವಂತೆ ಮಾಡುತ್ತಾನೆ

**ನಾಗರಿಕ ಸೇವೆಗಳ ಪ್ರಸಕ್ತ ಪರಿಸರದಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯ ಪ್ರಸ್ತುತತೆ:**

ನಾಗರಿಕ ಸೇವೆಗಳ ಪ್ರಸಕ್ತ ಪರಿಸರದಲ್ಲಿ ಹಲವಾರು ಸಮಸ್ಯೆ ಮತ್ತು ಸವಾಲುಗಳಿವೆ. ಅವುಗಳೆಂದರೆ,

1) ತ್ವರಿತವಾಗಿ ಬದಲಾಗುತ್ತಿರುವ ಸಮಾಜದ ರಚನಾ ಮೌಲ್ಯಗಳು

2) ಹೆಚ್ಚುತ್ತಿರುವ ಜನಸಂಖ್ಯೆ

3) ಪ್ರಾದೇಶಿಕ ಅಸಮತೋಲನದ ಬೆಳವಣಿಗೆ

4) ಆರ್ಥಿಕ ಅಸಮತೋಲನ

5) ಶೋಷಿತ ಮತ್ತು ಶ್ರೀಮಂತರು

6) ಬೆಳೆಯುತ್ತಿರುವ ತಂತ್ರಜ್ಞಾನಕ್ಕೆ ಹೊಂದದ ಜನರು

73 ಮತ್ತು 74ನೇ ತಿದ್ದುಪಡಿಯ ನಂತರ ವಿಕೇಂದ್ರೀಕರಣದಿಂದ ನಾಗರಿಕ ಸೇವಕರ ಮೇಲೆ ಕಾರ್ಯಭಾರವಾಗಿದೆ.

## ಸಾಮಾನ್ಯ ಅಧ್ಯಯನ ಪತ್ರಿಕೆ 4ರ ಪಕ್ಷಿನೋಟ

## Ethics, Integrity, Aptitude at a Glance

* ನೈತಿಕತೆ ಎಂದರೆ ಸಾಮಾಜಿಕ, ಸಂಘಟನೆಯ, ಸಂಸ್ಥೆಯ, ವ್ಯಕ್ತಿಯ ನಡತೆ ಸಂಹಿತೆಯಾಗಿದೆ
* ನೈತಿಕತೆಯು ಮಾನವನ ಆಂತರಿಕ ಭಾವನೆ ಮತ್ತು ಬಾಹ್ಯಕ್ರಿಯೆಗೆ ಸಂಬಂಧಿಸಿದೆ
* ಕಾನೂನಿಗಿಂತ ನೈತಿಕತೆಯು ವಿಶಾಲವಾದ ವ್ಯಾಪ್ತಿ ಹೊಂದಿದೆ

**ನೈತಿಕತೆಯ ನಿರ್ಧಾರಗಳು (Determinants):**

1) ವೈಯಕ್ತಿಕ ಅಂಶಗಳು

2) ಸ್ಥಳ

3) ಸಮಯ

**ನೈತಿಕತೆಯ ಪರಿಣಾಮಗಳು (Consequences):**

1) ನೈತಿಕತೆಯು ಸಮಾಜವನ್ನು ರಕ್ಷಿಸುತ್ತದೆ

2) ಮಾನವನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತದೆ

3) ವಿಶ್ವಾಸಾರ್ಹತೆಯನ್ನು ಮೂಡಿಸುತ್ತದೆ

4) ಜನರನ್ನು ಮತ್ತು ನಾಯಕತ್ವವನ್ನು ಒಗ್ಗೂಡಿಸುತ್ತದೆ

5) ನೈತಿಕ ಸಮಸ್ಯೆಗಳ ಪರಿಹಾರಕ್ಕೆ ಸಹಕಾರಿಯಾಗಿದೆ

**ನೈತಿಕತೆ ಇರದ ಅಪಾಯಕಾರಿ ದುಷ್ಪರಿಣಾಮದ ವಲಯಗಳು:**

1) ಸಾಮಾಜಿಕ ವಲಯ

2) ರಾಜಕೀಯ ವಲಯ

3) ವೈಯಕ್ತಿಕ ವಲಯ

4) ಪರಿಸರ ವಲಯ

**ನೀತಿಶಾಸ್ತ್ರದ ಆಯಾಮಗಳು (Dimensions of ethics):**

1) ವಿವರಣಾತ್ಮಕ (Descriptive) ನೀತಿಶಾಸ್ತ್ರ–ಇದು ನಂಬಿಕೆಗಳ ಬಗ್ಗೆ ಅಧ್ಯಯನ ಮಾಡುತ್ತದೆ

2) ಪ್ರಮಾಣಕ ನೀತಿಶಾಸ್ತ್ರ–ನಡತೆಗಳು ಹೇಗೆ ಇರಬೇಕು ಎಂದು ಹೇಳುತ್ತವೆ. ಸುವರ್ಣ ನಿಯಮಗಳು (Normative)

3) ರೂಪಾಂತರ ಶಾಸ್ತ್ರ–(Meta)-ನೈತಿಕ ಪರಿಕಲ್ಪನೆಗಳ ಮೂಲ ಮತ್ತು ಅರ್ಥಗಳನ್ನು ಅಧ್ಯಯನ ಮಾಡುತ್ತದೆ

4) ಅನ್ವಯಿಕ ನೀತಿಶಾಸ್ತ್ರ–(Applied)-ವಿವಾದಾತ್ಮಕ ವಿಷಯಗಳ ವಿಶ್ಲೇಷಣೆ

**ನಾಗರಿಕ ಸೇವೆಯ ಮೌಲ್ಯಗಳು:**

1) ಜವಾಬ್ದಾರಿ ಮತ್ತು ಹೊಣೆಗಾರಿಕೆ

2) ಕಾನೂನು ಬದ್ದತೆ

3) ವೃತ್ತಿಪರ ಬದ್ದತೆ

4) ಉಪಯುಕ್ತವಾದ

5) ಸಹಾನುಭೂತಿ / ಅನುಕಂಪ

6) ರಾಷ್ಟ್ರೀಯ ಶಕ್ತಿ

7) ನ್ಯಾಯ

8) ಪಾರದರ್ಶಕತೆ

9) ಸಮಗ್ರತೆ

10) ವಸ್ತು ನಿಷ್ಟತೆ

11) ನಿಸ್ವಾರ್ಥತೆ

12) ಸ್ಪಂದನೆ

13) ಪ್ರಾಮಾಣಿಕತೆ

**ನೈತಿಕ ಸಂದಿಗ್ಧತೆ ಪರಿಹರಿಸುವ ಪ್ರಕ್ರಿಯೆ ಅಂಶಗಳು:**

1) ಹೊಣೆಗಾರಿಕೆ

2) ನ್ಯಾಯಬದ್ಧತೆ

3) ಸಮಗ್ರತೆ

4) ಸಂವೇಧನಾಶೀಲತೆ

**ಹೊಣೆಗಾರಿಕೆ ಆಯಾಮಗಳು:**

1) ಶಾಸನಾತ್ಮಕ ಆಯಾಮಗಳು

2) ಆರ್ಥಿಕ ಆಯಾಮಗಳು

3) ನೀತಿ ಮತ್ತು ಕಾರ್ಯನಿರ್ವಹಣೆ ಆಯಾಮಗಳು

4) ಪ್ರಜಾಸತ್ತಾತ್ಮಕತೆ ಆಯಾಮಗಳು

5) ನೈತಿಕ ಆಯಾಮಗಳು

**ವಿವಿಧ ದೃಷ್ಟಿಕೋನಗಳಲ್ಲಿ ಅಂತರರಾಷ್ಟ್ರೀಯ ನೈತಿಕತೆ:**

1) ಆದರ್ಶವಾದ ಮತ್ತು ಅಂತರರಾಷ್ಟ್ರೀಯ ನೈತಿಕತೆ

2) ನೈಜವಾದ ಮತ್ತು ಅಂತರರಾಷ್ಟ್ರೀಯ ನೈತಿಕತೆ

3) ರಚನಾತ್ಮಕವಾದ ಅಂತರರಾಷ್ಟ್ರೀಯ ನೈತಿಕತೆ

4) ಸಮಾನತೆಯ ಜೀವನ ಮತ್ತು ಅಂತರರಾಷ್ಟ್ರೀಯ ನೈತಿಕತೆ

5) ಬಹು ಸಂಸ್ಕೃತಿಯಂತೆ ಪ್ರೇಮಿತತ್ವ ಅಂತರರಾಷ್ಟ್ರೀಯ ನೈತಿಕತೆ

**ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ನೈತಿಕ ವಿಷಯಗಳು:**

1) ಸಾಮಾನ್ಯ ಸರಕುಗಳು ನಿರ್ವಹಣೆ

   * ಮುಖ್ಯ ಸಮುದ್ರಗಳು
   * ವಾಯುಮಂಡಲ
   * ಅಂಟಾರ್ಕ್‌ಟಿಕ್
   * ಬಾಹ್ಯಾಕಾಶ

2) ಆಂತರಿಕ ಹಸ್ತಕ್ಷೇಪ

3) ನಿಶ್ಯಸ್ತ್ರೀಕರಣ

4) ಬೌದ್ಧಿಕ ಆಸ್ತಿ ಹಕ್ಕು

5) ವ್ಯಾಪಾರಿ ಮಾತುಕತೆ

**ಸಾಂಸ್ಥಿಕ ಆಡಳಿತ ಸಾರ್ವಜನಿಕ ಉದ್ಯಮಗಳಲ್ಲಿನ ಸವಾಲುಗಳು:**

1) ರಾಜಕೀಯ ಹಸ್ತಕ್ಷೇಪ

2) ಅದಕ್ಷ ನಿರ್ವಹಣೆ

3) ಅಧಿಕ ಸಾಮಾಜಿಕ ವೆಚ್ಚ

4) ಹಳೆಯ ತಂತ್ರಜ್ಞಾನದ ಸಮಸ್ಯೆ

5) ಗುಣಮಟ್ಟದ ಅರಿವಿನ ಸಮಸ್ಯೆ

6) ದೋಷಪೂರಿತ ನಿಯಂತ್ರಣ

7) ಸಾಮರ್ಥ್ಯದ ಅಪೂರ್ಣ ಉಪಯೋಗ

8) ಅಧಿಕಗೊಳ್ಳುತ್ತಿರುವ ನಷ್ಟ

9) ಇಳಿಮುಖವಾಗುತ್ತಿರುವ ಪಾಲು

10) ಗುರಿ ತಲುಪುವಲ್ಲಿ ವಿಫಲ

11) ವೃತ್ತಿಪರವಲ್ಲದ ನಿರ್ದೇಶಕ ಮಂಡಳಿ

**ಸಾರ್ವಜನಿಕ ಸೇವೆಯ ಮಹತ್ವ:**

1) ಅಗತ್ಯ ಸೇವೆಗಳನ್ನು ಪೂರೈಸುವುದು–ಆರೋಗ್ಯ ಆಹಾರ

2) ಸಾರ್ವತ್ರಿಕ ಉಪಯೋಗದ ಕೆಲಸಗಳನ್ನು ನಡೆಸುವುದು

3) ಸಾಮಾಜಿಕವಾಗಿ ನ್ಯಾಯ ದೊರಕಿಸುವುದು

4) ಅಧಿಕ ಉತ್ಪಾದನೆ ಕೈಗೊಳ್ಳುವುದು

5) ರಾಷ್ಟ್ರದ ಉದ್ದೇಶಿತ ಸಾಧನೆ ನೆರವೇರಿಸುವುದು

6) ಮಾನವನ ವ್ಯಕ್ತಿತ್ವ ಬೆಳೆಸುವುದು

7) ರಾಷ್ಟ್ರೀಯ ಸಮಸ್ಯೆಗಳ ಪರಿಹಾರ

**ವೃತ್ತಿ ನೈತಿಕತೆಯ ವಿಶೇಷ ಗುಣಗಳು:**

1) ಮೌಲ್ಯಗಳು

2) ಪರಿಣಾಮಕಾರಿ ನಾಯಕತ್ವ

3) ಮಧ್ಯಸ್ಥಗಾರರ ಸಮತೋಲನ

4) ಪ್ರಕ್ರಿಯೆ ಸಮಗ್ರತೆ

5) ದೀರ್ಘಾವಧಿಯ ದೃಷ್ಟಿಕೋನ

**ಸಾರ್ವಜನಿಕ ನಿಧಿಯ ನಿಯಂತ್ರಣ:**

1) ಆಂತರಿಕ – ಹಣಕಾಸು ಇಲಾಖೆ ತನಿಖೆ ವರದಿ ನಿಯಮ

2) ಬಾಹ್ಯ – ನಿಯಂತ್ರಣ

ಎ) ಲೆಕ್ಕಾಚಾರ

ಬಿ) ಲೆಕ್ಕ ಪರಿಶೋಧನೆ

ಸಿ) ಮಹಾ ಲೆಕ್ಕ ನಿಯಂತ್ರಕ ಮತ್ತು ಪರಿಶೋಧಕ

ಡಿ) ಶಾಸಕಾಂಗ ಸಮಿತಿಗಳು – ಅಂದಾಜು ಸಮಿತಿ

**ಭ್ರಷ್ಟಾಚಾರದ ಕಾರಣಗಳು:**

1) ದುರಾಸೆ

2) ಸಾಮಾಜಿಕ ಪರಿಸರ

3) ಸ್ವಾರ್ಥ ಪರತೆ

4) ನೈತಿಕತೆ ಕೊರತೆ

5) ರಾಜಕೀಯ ಭ್ರಷ್ಟಾಚಾರ

6) ಜಾತಿ ಪದ್ದತಿ

7) ಸಾರ್ವಜನಿಕ ಒಪ್ಪಿಗೆ

8) ವಿಳಂಬ ಆಡಳಿತ ನೀತಿ

9) ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆಯ ಕೊರತೆ

10) ಪರವಾನಿಗೆ

11) ನಿರುದ್ಯೋಗ

ಇತ್ಯಾದಿ.

**ಭ್ರಷ್ಟಾಚಾರದ ಸವಾಲುಗಳು:**

1) ಕಡಿದು ಉತ್ಪಾದಕತೆ

2) ಸಾರ್ವಜನಿಕ ನ್ಯಾಯದ ಉಲ್ಲಂಘನೆ

3) ಅಧಿಕಾರಶಾಹಿ ಅನೈತಿಕತೆ

4) ರಾಜಕೀಯ ಅಪರಾಧೀಕರಣ

5) ಕಪ್ಪು ಹಣ

6) ಅಭಿವೃದ್ದಿಗೆ ಅಡ್ಡಿ

**ಭಾರತದಲ್ಲಿ ಭ್ರಷ್ಟಾಚಾರದ ನಿಯಂತ್ರಣದ ಕಾನೂನುಗಳು:**

1) 1947 ಮತ್ತು 1988 ಭ್ರಷ್ಟಾಚಾರದ ತಡೆಗಟ್ಟುವ ಕಾಯ್ದೆ
2) 1963 – ಸಿಬಿಐ
3) 1964 – ಸಿವಿಸಿ
4) 1985 – ಆರ್ಥಿಕ ವೇಹುಗಾರಿಕೆ ದಳ
5) 1988 – ಬೆನಾಮಿ ವ್ಯವಹಾರ ನಿಷೇದ ಕಾಯ್ದೆ
6) ಶಿಳ್ಳೆ ನುಡಿಸುವವರ ರಕ್ಷಣಾ ಮಸೂದೆ – 2011
7) ಐಪಿಸಿ – ಭಾರತೀಯ ದಂಡ ಸಂಹಿತೆ

**ಮನೋಧೋರಣೆಯ ಆಯಾಮಗಳು:**

1) ತೀವ್ರತೆ
2) ದಿಕ್ಕು
3) ವ್ಯಾಪಕತೆ
4) ಅವಧಿ

**ಮನೋಧೋರಣೆಯ ಅಂಶಗಳು:**

1) ಬೌದ್ದಿಕ ಅಂಶ
2) ಭಾವುಕ ಅಂಶ
3) ವರ್ತನೆಯ ಅಂಶ

**ಮನೋಧೋರಣೆಯ ವಿಂಗಡಣೆ:**

1) ವ್ಯಕ್ತ – Explicit
2) ಅಂತರ್ಗತ – Implicit

**ಮನೋಧೋರಣೆಯ ನಿರ್ಮಾಣದ ಸಿದ್ದಾಂತಗಳು:**

1) ಶಾಸ್ತ್ರೀಯ ಪರಿಸ್ಥಿತಿ
2) ಸಹಾಯಕ ಪರಿಸ್ಥಿತಿ
3) ವೀಕ್ಷಕ ಕಲಿಕೆ
4) ಅನುವಂಶಿಕ ಅಂಶಗಳು

**ರಾಜಕೀಯ ಮನೋಧೋರಣೆ ಮತ್ತು ವ್ಯಕ್ತಿತ್ವ ಲಕ್ಷಣಗಳು:**

1) ಬಹಿರ್ಮುಖತೆ

2) ಹಿತವಾಗಿರುವಿಕೆ

3) ಆತ್ಮ ಸಾಕ್ಷಿಯತೆ

4) ಭಾವನೆಗಳ ಸ್ಥಿರತೆ

**ಸಾಮಾಜಿಕ ಪ್ರಭಾವದ ಪ್ರಕಾರಗಳು:**

1) ಪ್ರಮಾಣದ ಪ್ರಭಾವ

2) ತಿಳಿವಳಿಕೆ ಪ್ರಭಾವ

3) ಸಾಮಾಜಿಕ ಪ್ರಭಾವದ ತತ್ವಗಳು

**ಮನವೊಲಿಸುವ ತಂತ್ರಗಳು:**

1) ತರ್ಕಕ್ಕೆ ಮನವಿ

2) ಭಾವನೆಗಳಿಗೆ ಮನವಿ

3) ದಬ್ಬಾಳಿಕೆ

4) ಇನ್ನುಳಿದವು–ಮೋಸ, ವಂಚನೆ

**ನಾಗರಿಕ ಸೇವೆಯ ಮೂಲಭೂತ ಮೌಲ್ಯಗಳು:**

1) ಜವಾಬ್ದಾರಿ ಮತ್ತು ಹೊಣೆಗಾರಿಕೆ

2) ಕಾನೂನು ಬದ್ಧತೆ

3) ವೃತ್ತಿಪರ ಬದ್ಧತೆ

4) ಉಪಯುಕ್ತವಾದ

5) ಅನುಕಂಪ

6) ರಾಷ್ಟ್ರೀಯ ಹಿತಾಸಕ್ತಿ

7) ನ್ಯಾಯ

8) ಪಾರದರ್ಶಕತೆ

9) ಸಮಗ್ರತೆ

10) ವಸ್ತುನಿಷ್ಠತೆ

11) ನಿಸ್ವಾರ್ಥತೆ

12) ಸ್ಪಂದನೆ

13) ಪ್ರಾಮಾಣಿಕತೆ

14) ನಿಷ್ಪಕ್ಷಪಾತ

15) ಸಾರ್ವಜನಿಕ ಸೇವೆಗೆ ಸಮರ್ಪಣೆ

**ಸಂವೇಗಾತ್ಮಕ ಬುದ್ಧಿಶಕ್ತಿಯ ನಾಲ್ಕು ಪ್ರಮುಖ ಅಂಶಗಳು:**

1) ಸಂವೇಗಗಳನ್ನು ಗುರುತಿಸುವಿಕೆ

2) ಸಂವೇಗಗಳ ಬಳಕೆ

3) ಸಂವೇಗಗಳನ್ನು ಅರ್ಥಮಾಡಿಕೊಳ್ಳುವಿಕೆ

4) ಸಂವೇಗಗಳ ನಿರ್ವಹಣೆ

**ಸಂವೇಗಾತ್ಮಕ ಬುದ್ಧಿಶಕ್ತಿಯ ಲಕ್ಷಣಗಳು:**

1) ಸ್ವಯಂ ಅರಿವು

2) ಸ್ವಯಂ ನಿಯಂತ್ರಣ

3) ಅಭಿಪ್ರೇರಣೆ

4) ಪರಾನುಭೂತಿ ಶಕ್ತಿ

5) ಸಾಮಾಜಿಕ ಕೌಶಲ್ಯಗಳು

**ವಿಶ್ವದ ನೈತಿಕ ಚಿಂತಕರು ಮತ್ತು ತತ್ವಜ್ಞಾನಿಗಳ ಕೊಡುಗೆಗಳು:**

* ಸಾಕ್ರಟೀಸ್ – ಅರಿವೆ ಗುರು ಎಂದು ಹೇಳಿ ಮಾಡಿದ ತಪ್ಪನ್ನು ಒಪ್ಪಿಕೊಳ್ಳುವಂತೆ ಸೂಚಿಸುತ್ತಾರೆ
* ಪ್ಲೇಟೋ – ಆತ್ಮಸಾಕ್ಷಿ, ನ್ಯಾಯ, ಆದರ್ಶ ರಾಜ್ಯ ಸಮತಾವಾದದ ಪರಿಕಲ್ಪನೆ, ಶಿಕ್ಷಣದ ಕುರಿತು ವಿವರಿಸಿದ್ದಾರೆ
* ಅರಿಸ್ಟಾಟಲ್ – ನ್ಯಾಯದ ಪರಿಕಲ್ಪನೆಯನ್ನು ನಾಲ್ಕು ಭಾಗದಲ್ಲಿ ಹೇಳಿದ್ದಾರೆ

    1) ಸಂಪೂರ್ಣ ನ್ಯಾಯ

    2) ವಿನಿಯೋಗಿಸುವ

    3) ನಿರ್ದಿಷ್ಟ

    4) ಶುದ್ಧ

**ನೈತಿಕತೆಗೆ ಸಂಬಂಧಿಸಿದಂತೆ ವಿಶ್ವದ ಮಹಾನ್ ವ್ಯಕ್ತಿಗಳ ಸಿದ್ಧಾಂತಗಳು:**

* ಥಾಮಸ್ ಹಾಬ್ಸ್ – ಮನೋವೈಜ್ಞಾನಿಕ ಅಹಂಭಾವ
* ಇಮ್ಯಾನುಯಲ್ ಕಾಂಟ್ – ಕ್ಯಾಂಟಿಯನಿಸಂ ಸಿದ್ದಾಂತ – ಇದರ ಮೂಲ ಪರಿಕಲ್ಪನೆ ಕರ್ತವ್ಯವಾಗಿದೆ
* ಜೀನ್ ಪಿಯಾಜೆ – ನೈತಿಕ ವಿಕಾಸ

* ಲಾರೆನ್ಸ್ ಕೋಹ್ಲಬರ್ಗ್ – ನೈತಿಕ ವಿಕಾಸ ಸಿದ್ಧಾಂತ

1) ಕರಾರಿನ ಪೂರ್ವ ಹಂತ

2) ಕರಾರಿನ ಹಂತ

3) ಕರಾರಿನ ನಂತರದ ಹಂತ

* ಜೆರಮಿ ಬೆಂತ್ಯಾಮ್ – ಉಪಯುಕ್ತವಾದ, ಪ್ರಯೋಜಕವಾದ

* ಈಯಾನ್ ರಾಂಡ್ – ಪರೋಪಕಾರ ನೈತಿಕ ಅಹಂಭಾವ

* ಜಾರ್ಜ್ ವಿಲಿಯಂ ಫೆಟರಿಕ್ ಹೆಗಲ್ – ಆದರ್ಶವಾದ ನೈತಿಕತೆ

* ಜೆ.ಎಸ್.ಮಿಲ್ – ಉಪಯುಕ್ತತಾವಾದ ಸ್ವಾತಂತ್ರ್ಯದ ಬಗೆಗಿನ ಅಭಿಪ್ರಾಯ

* ಕಾರ್ಲ್‌ಮಾರ್ಕ್ಸ್ – ಭೌತಿಕ ದ್ವಂದ್ವವಾದ ಐತಿಹಾಸಿಕ ಭೌತಿಕವಾದ ಹೆಚ್ಚುವರಿ ಮೌಲ್ಯದ ಸಿದ್ಧಾಂತ ಸಮತಾವಾದ.

**ಕೆಲವು ವ್ಯಾಖ್ಯೆಗಳು:**

**ಆಡಳಿತದಲ್ಲಿ ಸತ್ಯ ನಿಷ್ಟೆ:** ಶುದ್ಧ ಚಾರಿತ್ರ್ಯವಂತನಿಗೆ ನೀತಿ ಸಂಹಿತೆಗೆ ವಿಧೇಯಕನಾಗಿ, ಪ್ರಾಮಾಣಿಕನಾಗಿ, ಸಮಗ್ರತೆಯಿಂದ ನಿರ್ದಿಷ್ಟ ಪ್ರಕ್ರಿಯೆಯಲ್ಲಿ ನೈತಿಕತೆಯಿಂದ ವರ್ತಿಸುವುದು ಸತ್ಯ ನಿಷ್ಟ.

**ಆಡಳಿತದಲ್ಲಿ ಸತ್ಯನಿಷ್ಟೆಯ ಉದ್ದೇಶ:**

* ಆಡಳಿತದಲ್ಲಿ ಹೊಣೆಗಾರಿಕೆಯನ್ನು ಹೆಚ್ಚಿಸಲು

* ಸಮಗ್ರತೆಯನ್ನು ಕಾಪಾಡಲು

* ಕಾರ್ಯಕಲಾಪಗಳು ಪ್ರಕ್ರಿಯೆಗಳು ಸುಗಮವಾಗಿ ಸಾಗಲು

* ಸಾರ್ವಜನಿಕ ವಿಶ್ವಾಸ ಉಳಿಸಿಕೊಳ್ಳಲು

* ದುರಾಚಾರ ವಂಚನೆ ಭ್ರಷ್ಟಾಚಾರ ನಿಯಂತ್ರಿಸಲು

**ಸಾರ್ವಜನಿಕ ಸೇವೆ ಅರ್ಥ:**

ಸಾರ್ವಜನಿಕ ಸೇವೆ ಎಂದರೆ ಸರ್ಕಾರ ಅಥವಾ ಸಾರ್ವಜನಿಕ ಸಂಸ್ಥೆ ಸಾರ್ವಜನಿಕರಿಗೆ ಒದಗಿಸುವ ಸರಕು ಮತ್ತು ಸೇವೆ ನಾಗರಿಕರು ಮತ್ತು ಆಡಳಿತದ ನಡುವೆ ಇರುವ ಸಂಪರ್ಕ ವ್ಯವಸ್ಥೆ.

**ಸಾರ್ವಜನಿಕ ಸೇವೆಯ ಮಹತ್ವ:**

1) ಅಗತ್ಯ ಸೇವೆಗಳನ್ನು ಪೂರೈಸುವುದು

2) ಸಾರ್ವತ್ರಿಕ ಉಪಯೋಗದ ಕೆಲಸವನ್ನು ಮಾಡುವುದು

3) ಸಾಮಾಜಿಕ ನ್ಯಾಯ ದೊರಕಿಸಿಕೊಡುವುದು

4) ಅಧಿಕ ಉತ್ಪಾದನೆಗೆ ಕ್ರಮ ಕೈಗೊಳ್ಳುವುದು

5) ರಾಷ್ಟ್ರದ ಉದ್ದೇಶಿತ ಸಾಧನೆ ನೆರವೇರಿಸುವುದು

6) ಮಾನವನ ವ್ಯಕ್ತಿತ್ವ ಬೆಳೆಸುವುದು

7) ರಾಷ್ಟ್ರೀಯ ಸಮಸ್ಯೆಗಳ ಪರಿಹಾರ

**ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ತರಬಹುದು,**

* ಆಡಳಿತಗಾರರು ನಿಧಿಯನ್ನು ಕಾಳಜಿ ಪೂರ್ವಕವಾಗಿ ಉಪಯೋಗಿಸುವುದು
* ನಿರ್ದಿಷ್ಟ ಜಾತಿ / ಧರ್ಮದ ಕುರಿತು ಪೂರ್ವಾಗ್ರಹ ಪೀಡಿತನಾಗದೆ ವರ್ತಿಸುವುದು
* ಈ ಸಂಬಂಧ ಕಾನೂನುಗಳನ್ನು ತೆಗೆದುಹಾಕುವುದು
* ಜನಸ್ನೇಹಿ ಆಡಳಿತ
* ನಾಗರಿಕರನ್ನು ಆಡಳಿತದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು
* ಸಂಸದೀಯ ಶಾಸಕಾಂಗ ನಿಯಂತ್ರಣ (ಪ್ರಶ್ನೆ ಚರ್ಚೆಗಳ ಮೂಲಕ)
* ಶಾಸನಾತ್ಮಕ ರೂಪರೇಷೆಗಳು

  1) ಮಾಹಿತಿ ಹಕ್ಕು

  2) ನಾಗರಿಕ ಸನ್ನದ್ದು

  3) ಸಕಾಲ

  ಇತ್ಯಾದಿ

* ಸಾರ್ವಜನಿಕ ತನಿಖಾ ಸಂಸ್ಥೆಗಳಿಂದ ಆಡಳಿತದಲ್ಲಿ ಪಾರದರ್ಶಕತೆ

  1) ಲೋಕಪಾಲ

  2) CVC

  3) CBI

  4) ಲೋಕಾಯುಕ್ತ

* ಸ್ವತಂತ್ರ ನ್ಯಾಯಾಂಗ
* ಆಡಳಿತ

  1) ಮೊಬೈಲ್ One

  2) My.Gov

  3) E-Sign

  4) ಭೂಮಿ / ಅಟಲ್‌ಜೀ ಕೇಂದ್ರಗಳು

* ಸ್ವತಂತ್ರ ಮಾಧ್ಯಮ

**ನೈತಿಕ ಸಂಹಿತೆಗಳು:** ಒಂದು ಸಂಸ್ಥೆಯು ತನ್ನ ಪ್ರಾಥಮಿಕ ಮೌಲ್ಯಗಳ ಮತ್ತು ನೈತಿಕ ಮಟ್ಟಗಳ ಅನುಸಾರ ವರ್ತಿಸುವಂತೆ ತನ್ನ ಉದ್ಯೋಗಿಗಳಿಗೆ ಹೊರಡಿಸಿದ ಲಿಖಿತ ಮಾರ್ಗಸೂಚಿ.

**ನೈತಿಕ ಸಂಹಿತೆ ಒಳಗೊಂಡಿರುವ ತತ್ವಗಳು:**

* ಸಮಗ್ರತೆ
* ನಿಷ್ಪಕ್ಷಪಾತ
* ವೃತ್ತಿ ಬದ್ದತೆ
* ಹೊಣೆಗಾರಿಕೆ
* ಕರ್ತವ್ಯನಿಷ್ಠೆ
* ಆದರ್ಶಪ್ರಾಯ ವರ್ತನೆ
* ಮಾನವೀಯತೆ
* ವಸ್ತುನಿಷ್ಟತೆ
* ಅನುಕಂಪ
* ಸಹಾನುಭೂತಿ

ಇತ್ಯಾದಿ.

**ನೀತಿ ಸಂಹಿತೆ:** ನೀತಿ ಸಂಹಿತೆಯು ನಡತೆಯ ನಿಯಮಗಳಾಗಿದ್ದು ಸಂಸ್ಥೆಗಳು ತನ್ನ ಉದ್ಯೋಗಿಗಳಿಂದ ನಿರೀಕ್ಷಿಸುವ ವರ್ತನೆಗಳಾಗಿವೆ. ನೀತಿ ಸಂಹಿತೆಯನ್ನು ಸದಾಚಾರ ಸಂಹಿತೆ ಎಂದು ಕರೆಯುತ್ತಾರೆ.

**ಸಾರ್ವಜನಿಕ ಸೇವಕರ ನೀತಿ ಸಂಹಿತೆಯಲ್ಲಿ ಕಂಡು ಬರುವ ಸಾಮಾನ್ಯ ಅಂಶಗಳು:**

* ಉತ್ತಮ ನಡತೆ
* ರಾಷ್ಟ್ರಕ್ಕೆ ವಿದೇಯನಾಗಿರುವುದು
* ರಾಜಕೀಯ ತಟಸ್ಥ
* ಅಧಿಕಾರದ ಸಮಗ್ರತೆ ರಕ್ಷಿಸುವುದು
* ಸರ್ಕಾರದ ಆದೇಶಗಳನ್ನು ಪಾಲಿಸುವುದು
* ಹಿರಿಯ ಅಧಿಕಾರಿಗಳನ್ನು ಆಜ್ಞೆಗಳನ್ನು ಪಾಲಿಸುವುದು

**ವೃತ್ತಿ ಸಂಸ್ಕೃತಿ:** ಆಚರಣೆಗಳು ಮೌಲ್ಯಗಳು ನಂಬಿಕೆಗಳು ಸಂಸ್ಥೆಗಳಲ್ಲಿ ಮತ್ತು ಆ ಸಂಸ್ಥೆಯ ಉದ್ಯೋಗಿಗಳಲ್ಲಿ ಪರಸ್ಪರ ಸಹಕಾರಾತ್ಮಕವಾಗಿದ್ದು ಚಿಂತನೆಗಳಿಗೆ ಮತ್ತು ಕ್ರಿಯೆಗಳಿಗೆ ಪೂರಕವಾಗಿರುವುದು.

**ಲಕ್ಷಣಗಳು:**

* ಪರಸ್ಪರ ಗೌರವ
* ಘರ್ಷಣೆ ಇಲ್ಲ
* ಮೇಲಾಧಿಕಾರಿ / ಕೆಳ ಉದ್ಯೋಗಿಗಳಲ್ಲಿ ಪಕ್ಷಪಾತ ಇಲ್ಲ
* ಸಾಮರ್ಥ್ಯಕ್ಕೆ ಬೆಲೆ
* ಸಲಹೆ ಸ್ವೀಕರಿಸುವುದು

**ವೃತ್ತಿ ನೈತಿಕತೆ:**

ಆಡಳಿತಗಾರನಲ್ಲಿ ವೃತ್ತಿಯ ಬಗೆ ಸಮರ್ಪಣಾ ಮನೋಭಾವ ಬರುವಂತೆ ಪ್ರೇರೇಪಿಸುವುದು. ದಕ್ಷತೆ ಉತ್ಪಾದಕತೆ ಸಮಯಪಾಲನೆ ಹೆಚ್ಚಿಸುವುದು.

**ವೃತ್ತಿ ನೈತಿಕತೆಯ ಗುಣಗಳು:**

1) ಮೌಲ್ಯಗಳು
2) ಪರಿಣಾಮಕಾರಿ ನಾಯಕತ್ವ
3) ಮಧ್ಯಸ್ಥಗಾರ ಸಮತೋಲನ
4) ಪ್ರಕ್ರಿಯೆ ಸಮಗ್ರತೆ
5) ದೀರ್ಘಾವಧಿ ದೃಷ್ಟಿಕೋನ

## ಪ್ರಕರಣ ಅಧ್ಯಯನಗಳು

ನಾಗರಿಕ ಸೇವಾ ಆಕಾಂಕ್ಷಿಗಳಲ್ಲಿ ಸಂಕೀರ್ಣ ಸಮಸ್ಯೆಗಳ ಕುರಿತು ವಿಶ್ಲೇಷಣಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ರಾಜ್ಯ ಲೋಕಸೇವಾ ಆಯೋಗವು ಪ್ರಕರಣ ಅಧ್ಯಯನವನ್ನು ನಾಗರಿಕ ಸೇವಾ ಪರೀಕ್ಷೆಯ ಪಠ್ಯಕ್ರಮದಲ್ಲಿ ಸೇರಿಸಿವೆ. ಭಾರತ ದೇಶವು ಅಭಿವೃದ್ಧಿಯ ಪ್ರವರ್ದಮಾನಕ್ಕೆ ಬರುತ್ತಿರುವ ಈ ಸಂದರ್ಭದಲ್ಲಿ ನಾಗರಿಕ ಸೇವಕರ ಮೇಲೆ ಮೊದಲಿಗಿಂತಲೂ ಈಗ ಹೆಚ್ಚಿನ ಜವಾಬ್ದಾರಿಗಳಿವೆ ಮತ್ತು ಹೊಣೆಗಾರಿಕೆಗಳಿವೆ. ಅದಕ್ಕಾಗಿ ನಾಗರಿಕ ಸೇವಕರಾಗುವಲ್ಲಿ ಸೇವೆಯ ಕೌಶಲ್ಯವನ್ನು ಹೆಚ್ಚಿಸುವ ಸಲುವಾಗಿ ಅಂತರಾಷ್ಟ್ರೀಯ ಪ್ರಯೋಗಗಳನ್ನು (ಪ್ರಕರಣ ಅಧ್ಯಯನ) ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ. ಪ್ರಕರಣ ಅಧ್ಯಯನ ಪದ್ಧತಿಯ ನಾಗರಿಕ ಸೇವಕರಾಗುವ ಬಯಸುವ ಅಭ್ಯರ್ಥಿಗಳಿಗೆ ಪ್ರಾಯೋಗಿಕ ಜ್ಞಾನವನ್ನು ಪಡೆಯಲು ನೆರವಾಗುತ್ತದೆ.

ಪ್ರಕರಣಗಳು ವಾಸ್ತವಿಕ ಮತ್ತು ಊಹಾತ್ಮಕ ಸಂಕೀರ್ಣ ಸಮಸ್ಯೆಗಳನ್ನು ಒಳಗೊಂಡಿವೆ. ಇವು ಅಭ್ಯರ್ಥಿಗಳಲ್ಲಿ ಕ್ರಿಯಾತ್ಮಕ ಶಕ್ತಿಯನ್ನು ವೃದ್ದಿಸಿ ಇಂಥಹ ಸಮಸ್ಯೆಗಳನ್ನು ಸುಲಭವಾಗಿ ಎದುರಿಸುವಂತೆ ಮತ್ತು ಉತ್ತಮ ನಿರ್ಧಾರ ಕೈಗೊಳ್ಳುವಂತೆ ಪ್ರಭಾವ ಬೀರುತ್ತವೆ. ಹಿಂದಿನ ಅಧ್ಯಯನಗಳಲ್ಲಿ ಓದಿದ ವಿಷಯಗಳನ್ನು ಈ ಪ್ರಕರಣಗಳ ಅಧ್ಯಯನ ಮುಖಾಂತರ ಪ್ರಾಯೋಗಿಕವಾಗಿ ಬಳಸಿಕೊಳ್ಳಲು ನೆರವಾಗುತ್ತವೆ. ವೃತ್ತಿ ಬದುಕಿನ ಸಂದಿಗ್ದ ಸನ್ನಿವೇಶಗಳನ್ನು ಸರಿಯಾದ ನಿರ್ಧಾರಗಳ ಮೂಲಕ ಕಾನೂನಾತ್ಮಕವಾಗಿ ಮತ್ತು ನೈತಿಕವಾಗಿ ಪರಿಹರಿಸಲು ಪ್ರಕರಣಗಳ ಅಧ್ಯಯನವು ಸಹಾಯಕವಾಗಿವೆ. ಯಾವುದೇ ಅಧಿಕಾರಿಯು ಸಮಸ್ಯೆಗಳ ಸುಳಿಗೆ ಸಿಲುಕದೆ ವೃತ್ತಿ ಬದುಕಿನಲ್ಲಿ ಯಶಸ್ವಿಯಾಗಬೇಕಾದರೆ ಇಂತಹ ಪ್ರಕರಣಗಳ ಅಧ್ಯಯನದ ಅವಶ್ಯಕತೆಯಿದೆ.

ಅಭ್ಯರ್ಥಿಗಳು ಹಿಂದಿನ ಅಧ್ಯಯನಗಳಲ್ಲಿ ಹಲವಾರು ವಿಷಯಗಳ ಪರಿಕಲ್ಪನೆಗಳು, ನಿಭಂದನೆಗಳು ಮತ್ತು ಸಿದ್ಧಾಂತಗಳನ್ನು ಅಭ್ಯಾಸ ಮಾಡಿದ ನಂತರ ಪ್ರಕರಣ ಅಧ್ಯಯನ ಮಾಡುವುದರಿಂದ ಅವರಲ್ಲಿ ಅವುಗಳ ಬಗ್ಗೆ ಮತ್ತಷ್ಟು ತಿಳಿವಳಿಕೆ. ಅದರಲ್ಲೂ ಪ್ರಾಯೋಗಿಕ ಗ್ರಹಿಸುವಿಕೆಯು ಹೆಚ್ಚುತ್ತದೆ. ಪ್ರಕರಣಗಳು ನಾವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ದಿನಪತ್ರಿಕೆ ಮತ್ತು ಸಂಚಿಕೆಗಳಿಂದ ಆಯ್ದುಕೊಂಡಿದ್ದು ಪರೀಕ್ಷಾ ದೃಷ್ಟಿಯಿಂದ ಸಹಾಯವಾಗುವಂತೆ ತಿದ್ದುಪಡಿ ಮಾಡಲಾಗಿದೆ. ಈ ಪ್ರಕರಣ ಅಧ್ಯಯನಗಳಲ್ಲಿ ಸಾಧ್ಯವಾದಷ್ಟು ಆಡಳಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಒಳಗೊಳ್ಳುವಂತೆ ಪ್ರಯತ್ನಿಸಲಾಗಿದೆ. ಸಂದಿಗ್ದ ಸನ್ನಿವೇಶಗಳು ಮತ್ತು ಸಂಕೀರ್ಣ ಸಮಸ್ಯೆಗಳನ್ನು ಯಾವ ರೀತಿ ಪರಿಹರಿಸಬೇಕು ಎಂಬ ವಿಷಯವನ್ನು ವಿವರವಾಗಿ ನೀಡಲಾಗಿದೆ.

ಪ್ರಕರಣ ಅಧ್ಯಯನ ಆಡಳಿತಗಾರ ಧನಾತ್ಮಕ ಚಿಂತನೆಗೆ ಸಹಾಯ ಮಾಡುತ್ತದೆ. ಮೇಲಾಧಿಕಾರಿಗಳ ಜೊತೆ, ಕೆಳ ಅಧಿಕಾರಿಗಳ ಜೊತೆ ಮತ್ತು ಸಾರ್ವಜನಿಕರ ಜೊತೆ ಯಾವ ರೀತಿ ವರ್ತಿಸಬೇಕೆಂಬ ಪ್ರಾಯೋಗಿಕ ಜ್ಞಾನವನ್ನು ಕೂಡಾ ಪ್ರಕರಣಗಳ ಅಧ್ಯಯನದಿಂದ ಪಡೆಯಬಹುದಾಗಿದೆ. ಒಟ್ಟಾರೆಯಾಗಿ ಸಂದಿಗ್ದ ಸಂದರ್ಭಗಳಲ್ಲಿ ಅಧಿಕಾರಿಯು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಈ ಪ್ರಕರಣಗಳ ಅಧ್ಯಯನವು ಸಹಾಯ ಮಾಡುತ್ತದೆ.

## ಪ್ರಕರಣ ಅಧ್ಯಯನ – 1

ನಾರಾಯಣ ರೆಡ್ಡಿ ಎಂಬ ಧಾರವಾಡ ಮೂಲದವರು ವಿಜಯಪುರ ಜಿಲ್ಲಾ ಪಂಚಾಯತಿಗೆ ಮುಖ್ಯ ಕಾರ್ಯನಿರ್ವಾಹಕ (CEO) ಅಧಿಕಾರಿಯಾಗಿ ಹೊಸದಾಗಿ ನೇಮಕಗೊಂಡಿರುತ್ತಾರೆ. ನೇಮಕಗೊಂಡ ತಕ್ಷಣ ಆ ಅಧಿಕಾರಿಯು ವಿಜಯಪುರ ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಕೂಲಂಕುಷವಾಗಿ ಅಧ್ಯಯನ ಮಾಡುತ್ತಾರೆ. ಅಧ್ಯಯನ ಸಂದರ್ಭದಲ್ಲಿ ಜಿಲ್ಲೆಯ ಸಮಸ್ಯೆಗಳಿಗೆ ಸಂಬಂಧಿಸಿದ ಅನೇಕ ವರದಿಗಳನ್ನು ಪರಿಶೀಲಿಸುತ್ತಾರೆ. ಜಿಲ್ಲೆಗೆ ಸಂಬಂಧಿಸಿದ ಅನೇಕ ಅಂಕಿ–ಸಂಖ್ಯೆಗಳನ್ನು ಸಂಗ್ರಹಿಸಿರುತ್ತಾರೆ. ಜಿಲ್ಲೆಯು ರಾಜ್ಯದ ನೀರಾವರಿ ಮತ್ತು ಕೃಷಿ ಯೋಜನೆಗಳ ವ್ಯಾಪ್ತಿಗೆ ಒಳಪಟ್ಟಿರುವ ವಿಷಯ ತಿಳಿದುಕೊಳ್ಳುತ್ತಾರೆ. ಇಂತಹ ಯೋಜನೆಗಳಿಂದ ಜಿಲ್ಲೆಯ ಕೃಷಿ ಕ್ಷೇತ್ರ ಅಭಿವೃದ್ಧಿಯಾಗಿದ್ದನ್ನು ಅರಿತುಕೊಳ್ಳುತ್ತಾರೆ. ರಾಜ್ಯ ಸರ್ಕಾರದ ಹಲವು ಯೋಜನೆಗಳಡಿಯಲ್ಲಿ ಇಲ್ಲಿ ಕೈಗಾರಿಕೆಗಳು ಸ್ಥಾಪನೆಗೊಂಡಿದ್ದು, ಅವುಗಳು ಕೂಡ ಇಲ್ಲಿನ ಆರ್ಥಿಕ ಅಭಿವೃದ್ಧಿಗೆ ಕೊಡುಗೆಯನ್ನು ಕೊಟ್ಟಿರುತ್ತವೆ. ಜಿಲ್ಲೆಯಲ್ಲಿನ ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಯಿಂದ, ಅಲ್ಲಿ ಮೂಲಭೂತ ಸೌಕರ್ಯಗಳು ನಿರ್ಮಾಣವಾಗಿ, ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ.

ಅದರ ಜೊತೆಗೆ ಜಿಲ್ಲೆಯು ಮಾನವ ಸೂಚ್ಯಾಂಕ ಅಭಿವೃದ್ಧಿಯಲ್ಲಿ ಹಿಂದುಳಿದಿರುವ ವಿಷಯವನ್ನು ಅರಿತುಕೊಳ್ಳುತ್ತಾರೆ. ಜನನ ಪ್ರಮಾಣ, ಚಿಕ್ಕ ಮಕ್ಕಳ ಸಾವಿನ ಪ್ರಮಾಣ, ಶಾಲೆ ತಪ್ಪಿಸುವ ಮಕ್ಕಳ ಪ್ರಮಾಣ, ಅನಕ್ಷರತೆಯ ಪ್ರಮಾಣಗಳು ಹೆಚ್ಚಾಗಿರುತ್ತವೆ. ಲಿಂಗಾನುಪಾತವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಿರುತ್ತದೆ. ಈ ಅಂಕಿ–ಅಂಶಗಳ ಆಧಾರದ ಮೇಲೆ ಅವರು ಮುಂದಿನ ಮುಂಗಡ ಪತ್ರದಲ್ಲಿ ಸಾಮಾಜಿಕ ವಲಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲು ನಿರ್ಧರಿಸುತ್ತಾರೆ.

ಜಿಲ್ಲಾ ಪಂಚಾಯತಿ ಚುನಾಯಿತ ಪ್ರತಿನಿಧಿಗಳ ಸಂಸ್ಥೆಯಾಗಿದೆ. ಮುಂಗಡ ಪತ್ರವು ಚುನಾಯಿತ ಪ್ರತಿನಿಧಿಗಳನ್ನು ಸದಸ್ಯರನ್ನಾಗಿ ಹೊಂದಿದ ಸಾಮಾನ್ಯ ಸಭೆಯ ಅನುಮೋದನೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನಾರಾಯಣ ಅವರು ಮುಂದಿನ ಮುಂಗಡ ಪತ್ರದಲ್ಲಿ ಸಾಮಾಜಿಕ ವಲಯಕ್ಕೆ ಹೆಚ್ಚು ಹಣವನ್ನು ಹಂಚಿಕೆ ಮಾಡಬೇಕೆಂದು ಜನಪ್ರತಿನಿಧಿಗಳಿಗೆ ಮನವರಿಕೆ ಮಾಡುತ್ತಾರೆ. ಆದರೆ ಸಾಮಾನ್ಯ ಸಭೆಯು ಅವರ ಮನವಿಯನ್ನು ಲೆಕ್ಕಿಸದೆ ಸಣ್ಣ ನೀರಾವರಿ ಕ್ಷೇತ್ರಕ್ಕೆ ಶೇ.40ರಷ್ಟು ಹಣವನ್ನು ಹಂಚಿಕೆ ಮಾಡಲು ನಿರ್ಧರಿಸುತ್ತದೆ. ಸಣ್ಣ ನೀರಾವರಿಗೆ ಇಷ್ಟೊಂದು ದೊಡ್ಡ ಪ್ರಮಾಣದ ಹಣ ಹಂಚಿಕೆಯು ಬರಿ ರೈತರಿಗೆ ಮಾತ್ರ ಲಾಭವಾಗಿ, ಇತರ ಸಾಮಾಜಿಕ ಯೋಜನೆಗಳಿಗೆ ಹಣದ ಕೊರತೆ ಉಂಟಾಗುತ್ತದೆ ಎಂದು ಅಧಿಕಾರಿ ಭಾವಿಸುತ್ತಾರೆ. ಆದ್ದರಿಂದ, ಅವರು ರಹಸ್ಯವಾಗಿ ಹಣವನ್ನು ಸಾಮಾಜಿಕ ವಲಯದ ಯೋಜನೆಗಳಿಗೆ ವರ್ಗಾಯಿಸುವಂತೆ ಮೇಲಾಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಾರೆ.

**ಪ್ರಶ್ನೆ:**

ಈ ಮೇಲಿನ ಪ್ರಕರಣದಲ್ಲಿ ನಾರಾಯಣ ಅವರು ಆದರ್ಶ ಅಧಿಕಾರಿಯಾಗಿದ್ದು, ಸೇವೆಗೆ ನೇಮಕವಾದ ತಕ್ಷಣ ಜಿಲ್ಲೆಯ ಸಾಮಾಜಿಕ-ಆರ್ಥಿಕ ಅಂಶಗಳನ್ನು ಅಧ್ಯಯನ ಮಾಡಿದ್ದಾರೆ. ಅವರು ಅಧ್ಯಯನದಿಂದ ಜಿಲ್ಲೆಯ ಕೃಷಿ ಮತ್ತು ಕೈಗಾರಿಕೆ ಕ್ಷೇತ್ರವು ಅಭಿವೃದ್ಧಿ ಹೊಂದಿ, ಮೂಲಭೂತ ಸೌಕರ್ಯಗಳು ಸೃಷ್ಟಿಯಾಗಿರುವ ವಿಷಯವನ್ನು ತಿಳಿದುಕೊಂಡಿದ್ದಾರೆ. ಆದರೆ, ಜಿಲ್ಲೆಯ ಮಾನವ ಸೂಚ್ಯಾಂಕ ಅಭಿವೃದ್ಧಿಯಲ್ಲಿ ಹಿಂದುಳಿದ, ಸಾಮಾಜಿಕ ವಲಯವು ಮಬ್ಬುಗವಿದಂತಾಗಿದೆ. ಆದ್ದರಿಂದ ಅಧಿಕಾರಿಯು ಮುಂಗಡ ಪತ್ರದಲ್ಲಿ ಹೆಚ್ಚಿನ ನಿಧಿಯನ್ನು ಸಾಮಾಜಿಕ ವಲಯಕ್ಕೆ ತೊಡಗಿಸುವಂತೆ ಸಾಮಾನ್ಯ ಸಭೆಗೆ ಮನವಿಯನ್ನು ಮಾಡಿದ್ದಾರೆ. ಆದರೆ ಸಾಮಾನ್ಯ ಸಭೆಯ ಮುಂಗಡ ಪತ್ರದಲ್ಲಿ ಹೆಚ್ಚಿನ ನಿಧಿಯನ್ನು ಸಣ್ಣ ನೀರಾವರಿಗೆ ತೊಡಗಿಸಲು ನಿರ್ಧರಿಸಿದೆ. ಅದರ ಪರಿಣಾಮವಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಅನಧಿಕೃತ ಕ್ರಮವನ್ನು ಕೈಗೊಂಡಿದ್ದಾರೆ.

* ನಾರಾಯಣ ಅವರು ತನ್ನ ಮೇಲಾಧಿಕಾರಿಗಳಿಗೆ ರಹಸ್ಯವಾಗಿ ನಿಧಿಯನ್ನು ವರ್ಗಾಯಿಸುವಂತೆ ಕೇಳಿಕೊಳ್ಳುವುದು. ಸೇವಾ ನೀತಿ-ಸಂಹಿತೆಯನ್ನು ಉಲ್ಲಂಘಿಸಲಾಗುತ್ತದೆ ಎಂದು ನೀವು ಅಭಿಪ್ರಾಯಪಡುವಿರಾ?

* ನೈತಿಕ ವರ್ತನೆಯ ಆಧಾರದ ಮೇಲೆ ನೀತಿ-ಸಂಹಿತೆಯನ್ನು ರಾಜಿ ಮಾಡಿಕೊಳ್ಳಬಹುದೇ?

* ನಾರಾಯಣ ಅವರು ಇಂತಹ ನೈತಿಕ ಸಂದಿಗ್ದತೆಯಲ್ಲಿ ಹೇಗೆ ನಡೆದುಕೊಳ್ಳಬೇಕಾಗಿತ್ತು?

**ಈ ಮೇಲಿನ ಪ್ರಕರಣವು ಕೆಳಗಿನ ವಿಷಯಗಳಡಿಯಲ್ಲಿ ಬರುತ್ತದೆ,**

* ಸೇವಾ ನೀತಿ-ಸಂಹಿತೆಯ ಉಲ್ಲಂಘನೆ
* ಪ್ರಾಮಾಣಿಕತೆ ಮತ್ತು ಸಮಗ್ರತೆ
* ನೈತಿಕ ಸಂದಿಗ್ದತೆ
* ಪಾರದರ್ಶಕತೆ

ನಾರಾಯಣ ಅವರು ಜನರ ಹಿತಾಸಕ್ತಿಗಳಿಗೋಸ್ಕರ ಒಳ್ಳೆಯ ಉದ್ದೇಶವನ್ನು ಹೊಂದಿದ್ದಾರೆ. ಆದರೆ ರಹಸ್ಯವಾಗಿ ನಿಧಿಯನ್ನು ಸಾಮಾಜಿಕ ವಲಯಕ್ಕೆ ವರ್ಗಾಯಿಸುವಂತೆ ತನ್ನ ಮೇಲಾಧಿಕಾರಿಗಳಿಗೆ ಕೇಳಿಕೊಳ್ಳುವುದು, ಸೇವಾ ನೀತಿ-ಸಂಹಿತೆಯನ್ನು ಉಲ್ಲಂಘಿಸಿದಂತಾಗುತ್ತದೆ. ಸೇವಾ ನೀತಿ-ಸಂಹಿತೆಗಳು ಯಾವ ಕಾರ್ಯಗಳನ್ನು ಮಾಡಬೇಕು ಮತ್ತು ಯಾವ ಕಾರ್ಯಗಳನ್ನು ಮಾಡಬಾರದು ಎಂಬ ಅಂಶಗಳನ್ನು ಒಳಗೊಂಡಿರುತ್ತದೆ. ನಾರಾಯಣ ಅವರು ಇಲ್ಲಿ ನೀತಿ-ಸಂಹಿತೆಯು ಮಾಡಬಾರದು ಎಂದು ಹೇಳುವ ಕಾರ್ಯವನ್ನು ಮಾಡಿ ತಾವು ಮತ್ತು ತಮ್ಮ ಕೆಳಾಧಿಕಾರಿಗಳನ್ನು ಗಂಡಾಂತರಕ್ಕೆ ಸಿಲುಕಿಸುತ್ತಿದ್ದಾರೆ. ಅಲ್ಲದೆ ವೃತ್ತಿ ಸಮಗ್ರತೆಯನ್ನು ಪಾಲಿಸದೆ ವರ್ತಿಸುತ್ತಿದ್ದಾರೆ. ಸಣ್ಣ ನೀರಾವರಿಗೆ ನಿಧಿಯನ್ನು ಹಂಚಿಕೆ ಮಾಡುವುದು, ಕೇವಲ ದೊಡ್ಡ ರೈತರಿಗೆ ಅಥವಾ ಭೂ ಮಾಲಿಕರಿಗೆ ಲಾಭವಾಗುತ್ತದೆ ಎಂದು ನಾರಾಯಣ ಅವರು ಭಾವಿಸಿದ್ದಾರೆ. ಈ ರೀತಿಯಾಗಿ ಆಡಳಿತಗಾರನು ಪೂರ್ವಾಗ್ರಹ ಪೀಡಿತನಾಗಿ, ಭಾವನಾತ್ಮಕವಾಗಿ ಮತ್ತು ಪಕ್ಷಪಾತವಾಗಿ ನಿರ್ಧಾರ ಕೈಗೊಳ್ಳಬಾರದು. ಆಡಳಿತಗಾರನು ಸಮಾಜದ ದುರ್ಬಲ ವರ್ಗಗಳ ಬಗ್ಗೆ ಅನುಕಂಪ ಹೊಂದುವುದು ಅವಶ್ಯಕವಾಗಿದೆ. ಆದರೆ ಆ ಅನುಕಂಪವು ಒಳ್ಳೆಯ ಮಾರ್ಗದಲ್ಲಿರಬೇಕು. ಆ ಮಾರ್ಗವು ಸಮಗ್ರತೆ, ಸಹಾನುಭೂತಿ ಮತ್ತು ವಸ್ತುನಿಷ್ಟತೆಯಿಂದ ಕೂಡಿರಬೇಕು. ಆದರೆ ಮೇಲಿನ ಪ್ರಕರಣದಲ್ಲಿ ನಾರಾಯಣರವರು ಬುದ್ದಿವಂತಿಕೆಯಿಂದ ವರ್ತಿಸದೆ ಅವರ ನಡವಳಿಕೆಯು ಪೂರ್ವಾಗ್ರಹ ಪೀಡಿತದಿಂದ ಕೂಡಿದ್ದು ಪ್ರಶ್ನಾರ್ಹವಾಗಿದೆ. ಮೇಲಾಗಿ ನಾರಾಯಣರವರು ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಜಾರಿಗೆ ತಂದ ಪಂಚಾಯತ್ ಅಧಿನಿಯಮಗಳಿಗೆ ವಿರುದ್ದವಾಗಿ ನಡೆದುಕೊಂಡಿದ್ದಾರೆ. ಈ ಕಾಯ್ದೆಯ ಪ್ರಕಾರ ಸ್ಥಳೀಯ ಜನಪ್ರತಿನಿಧಿಗಳು ತಮ್ಮ ಸ್ಥಳೀಯ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದಂತಹ ಯೋಜನೆಗಳನ್ನು ನಿರ್ಧರಿಸುತ್ತಾರೆ. ಈ ಪಂಚಾಯತಿ ಸಂಸ್ಥೆಯು ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಹೊಂದಿದ್ದು, ಅದರ ಪ್ರಕಾರ ಯೋಜನಾ ಸಮಿತಿ ರಚಿಸುತ್ತಾರೆ ಮತ್ತು ಅವಶ್ಯಕವಾದ ಕ್ಷೇತ್ರಗಳಿಗೆ ನಿಧಿಯನ್ನು ಹಂಚಿಕೆ ಮಾಡುತ್ತಾರೆ.

ತನ್ನ ಮೇಲಾಧಿಕಾರಿಗಳಿಗೆ ರಹಸ್ಯವಾಗಿ ನಿಧಿಯನ್ನು ವರ್ಗಾವಣೆ ಮಾಡುವಂತೆ ಕೇಳಿ, ನಾರಾಯಣ ಅವರು ಸಂದಿಗ್ದ ಸ್ಥಿತಿಯನ್ನು ಸೃಷ್ಟಿಸುತ್ತಿದ್ದಾರೆ. ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆಯ ಪ್ರಕಾರ ಅಧಿಕಾರಿಗಳು ನೀತಿಯನ್ನು ರೂಪಿಸುವುದಿಲ್ಲ. ಆದರೆ ಸ್ಥಳೀಯ ಜನಪ್ರತಿನಿಧಿಗಳು ರೂಪಿಸಿ ಜಾರಿಗೊಳಿಸಿದ ಯೋಜನೆಗಳನ್ನು ಮೇಲ್ವಿಚಾರಣೆ ಮಾಡಬೇಕು.

ಇಂತಹ ಸನ್ನಿವೇಶಗಳಲ್ಲಿ ನಾರಾಯಣರವರು ಸಾಮಾಜಿಕ ವಲಯದ ಅಂಶಗಳ ಕುರಿತು ಜನರಲ್ಲಿ ಮತ್ತು ಜನಪ್ರತಿನಿಧಿಗಳಲ್ಲಿ ಜಾಗೃತಿಯನ್ನು ಮೂಡಿಸಬೇಕು. ಸಾಮಾಜಿಕ ವಲಯದ ಮಂದಗತಿಯ ಅಭಿವೃದ್ಧಿಯನ್ನು ಸುಧಾರಿಸಲು ಅವರು ಜನರು ಆಡಳಿತದಲ್ಲಿ ಭಾಗವಹಿಸುವಂತೆ ಮತ್ತು ಯೋಜನೆಯ ಯಶಸ್ಸಿಗೆ ಸಹಕರಿಸುವಂತೆ ಮಾಡುವ ಹೊಸ ವಿಧಾನಗಳನ್ನು ಅನುಸರಿಸಬೇಕು. ವಾಸ್ತವಿಕವಾಗಿ ನಾರಾಯಣರವರು ಇಂತಹ ಸನ್ನಿವೇಶಗಳಲ್ಲಿ ನೈತಿಕವಾಗಿ ನಡೆದುಕೊಂಡರೆ ಅನಾವಶ್ಯಕ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಏಕೆಂದರೆ ಅಧಿಕಾರಿಯು ಜನರಿಂದ ಚುನಾಯಿತರಾದ ಜನಪ್ರತಿನಿಧಿಗಳ ಸೂಚನೆಯ ಪ್ರಕಾರ ನಡೆದುಕೊಳ್ಳಬೇಕು. ಹಾಗೆ ನಡೆದುಕೊಳ್ಳದೆ, ತಾವೇ ಸ್ವಂತ ನಿರ್ಧಾರ ತೆಗೆದುಕೊಂಡು ಅಲ್ಲಿನ ಶಿಕ್ಷಣ ಮತ್ತು ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಿದರೆ, ಸೇವಾ ನೀತಿ–ಸಂಹಿತೆಯನ್ನು ಉಲ್ಲಂಘಿಸಿದಂತಾಗುತ್ತದೆ.

ಪ್ರಕರಣದಲ್ಲಿ ಹೇಳಿರುವಂತೆ ನಾರಾಯಣರವರು ಆದರ್ಶ ಅಧಿಕಾರಿಯಾಗಿದ್ದು, ಮಾನವ ಸೂಚ್ಯಾಂಕದ ಸ್ಥಿತಿಯನ್ನು ಅಭಿವೃದ್ಧಿಪಡಿಸಲು ಕಾಳಜಿಯುಳ್ಳವರಾಗಿದ್ದಾರೆ. ಪಂಚಾಯತಿಯ ನಿಧಿಯು ಲಭ್ಯವಿದ್ದರೂ, ಜನಪ್ರತಿನಿಧಿಗಳ ಮನೋಭಾವದಿಂದ ನಾರಾಯಣರವರು ಅನಾವಶ್ಯಕವಾಗಿ ಸೇವಾ ನೀತಿ ಸಂಹಿತೆಯನ್ನು ಉಲ್ಲಂಘಿಸುವಂತಹ ಸ್ಥಿತಿಯು ನಿರ್ಮಾಣವಾಗಿದೆ.

ನಾರಾಯಣರವರು ಬೇರೆ ರೀತಿಯಾದ ಮಾರ್ಗದ ಮೂಲಕ ಸಾಮಾಜಿಕ ವಲಯವನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಬೇಕು. ಒಂದು ವೇಳೆ ಈ ಮೇಲಿನ ಕ್ರಮವನ್ನೇ ನಾರಾಯಣರವರು ಕೈಗೊಂಡರೆ, ಅಧಿಕಾರಿಗಳ ಬಗ್ಗೆ ಸಂದೇಹಾತ್ಮಕ ಭಾವನೆ ಮೂಡುತ್ತದೆ. ಮೇಲಾಧಿಕಾರಿಗಳಿಗೆ ರಹಸ್ಯವಾಗಿ ನಿಧಿ ವರ್ಗಾಯಿಸುವಂತೆ ಕೋರುವುದು ತಪ್ಪೆಂದು ನಾರಾಯಣರವರಿಗೆ ತಿಳಿದಿದೆ. ಆದ್ದರಿಂದ ಅವರ ವರ್ತನೆಯು ಕಾನೂನು ಸಮ್ಮತವಲ್ಲ ಮತ್ತು ನ್ಯಾಯಸಮ್ಮತವಲ್ಲ. ನಾರಾಯಣರವರು ಇಲ್ಲಿ ಆದರ್ಶ ತತ್ವಗಳನ್ನು ತಮ್ಮ ಆಚರಣೆಯಲ್ಲಿ ತರಲು ಸೋಲುತ್ತಿದ್ದಾರೆ. ತಮ್ಮ ಆದರ್ಶಗಳನ್ನು ಜಾರಿಗೆ ತರಲು ಪ್ರಜಾಸತ್ತಾತ್ಮಕ ತತ್ವಗಳನ್ನು ಬಲಿಕೊಡುತ್ತಿದ್ದಾರೆ.

ಹೀಗಾಗಿ ನಾರಾಯಣರವರು ಸ್ವತ: ತಾವೇ ಆಡಳಿತದಲ್ಲಿ ಅಧಿಕಾರಿಗಳ ಮೇಲೆ ಸಂದೇಹ ಬರುವಂತೆ ನಡೆದುಕೊಳ್ಳುತ್ತಿದ್ದಾರೆ. ಪಾರದರ್ಶಕತೆಯನ್ನು ನಿರ್ಲಕ್ಷಿಸುತ್ತಿದ್ದಾರೆ. ಸೇವೆಯಲ್ಲಿ ಪಾರದರ್ಶಕತೆ, ಸಮಗ್ರತೆ ಮತ್ತು ಮಾಹಿತಿ ಹಂಚಿಕೆ ಕಾಪಾಡಿಕೊಂಡು ಬರುವುದು ಸಾರ್ವಜನಿಕ ಸೇವೆಯ ಮೌಲ್ಯಗಳಾಗಿವೆ.

## ಪ್ರಕರಣ ಅಧ್ಯಯನ – 2

ನೀವು 'ಎ' ಎಂಬ ದೇಶದ ಪ್ರಧಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದೀರಿ. 'ಬಿ' ಎಂಬ ನಿಮ್ಮ ನೆರೆ ದೇಶದ ಅಧ್ಯಕ್ಷನು, ನಿಮ್ಮ ದೇಶಕ್ಕೆ ಮುಂದಿನ ವಾರ ಭೇಟಿ ನೀಡುವ ಕಾರ್ಯಕ್ರಮ ನಿಗದಿಯಾಗಿರುತ್ತದೆ. ನಿಮ್ಮ ದೇಶವು ಆ ದೇಶದೊಂದಿಗೆ ಬಹಳ ವರ್ಷಗಳಿಂದ ಗಡಿ ಸಮಸ್ಯೆಯನ್ನು ಅಥವಾ ವಿವಾದವನ್ನು ಹೊಂದಿರುತ್ತದೆ. 'ಬಿ' ದೇಶದಲ್ಲಿ ಅಧ್ಯಕ್ಷನು ಹೊಸದಾಗಿ ಆಯ್ಕೆಯಾಗಿದ್ದು, ಆತ ಈ ಗಡಿ ವಿವಾದವನ್ನು ಬಗೆಹರಿಸಲು ಆಸಕ್ತಿ ಹೊಂದಿದವನಾಗಿರುತ್ತಾನೆ. ಆದ್ದರಿಂದ ಆ ದೇಶದ ಅಧ್ಯಕ್ಷನ ಭೇಟಿಯು ರಾಷ್ಟ್ರೀಯ ಗಮನ ಸೆಳೆದಿರುತ್ತದೆ ಮತ್ತು ಆ ದೇಶದ ಅಧ್ಯಕ್ಷನು ನಿಮ್ಮ ದೇಶದಲ್ಲಿ ಬಂಡವಾಳವನ್ನು ತೊಡಗಿಸುವ ಯೋಜನೆಗಳೊಂದಿಗೆ ಬರುವ ನಿರೀಕ್ಷೆ ಇರುತ್ತದೆ. ನಿಮ್ಮ ದೇಶದ ತಯಾರಿಕಾ ವಲಯದ ಪ್ರಗತಿ ಕುಂಠಿತವಾಗಿದ್ದು, ಹಲವಾರು ಸಮಸ್ಯೆಗಳಿಂದ ಹಿಂದುಳಿದಿರುತ್ತದೆ. ಹೀಗಾಗಿ ತಯಾರಿಕಾ ವಲಯದ ಅಭಿವೃದ್ದಿಗೆ ಬಂಡವಾಳದ ಅವಶ್ಯಕತೆಯಿರುತ್ತದೆ. ನಿಮ್ಮ ದೇಶಕ್ಕೆ 'ಬಿ' ದೇಶದ ಸೈನ್ಯದ ಮುಖ್ಯಸ್ಥನು ನಿಮ್ಮನ್ನು ಭೇಟಿಯಾಗುತ್ತಾನೆ. ಗಡಿಯಲ್ಲಿ 'ಬಿ' ದೇಶವು ನಿಮ್ಮ ದೇಶದ ಸೈನಿಕರ ಮೇಲೆ ನಿರಂತರ ಗುಂಡಿನ ದಾಳಿ ನಡೆಯುತ್ತಿದ್ದು, ಅದರಿಂದ ನಿಮ್ಮ ದೇಶದ ಐದು ಸೈನಿಕರು ಸಾವಿಗೀಡಾಗಿರುವ

ವಿಷಯವನ್ನು ಸೇನಾ ಮುಖ್ಯಸ್ಥನು ನಿಮಗೆ ತಿಳಿಸುತ್ತಾನೆ. ಈ ವಿಷಯವು ಎಲ್ಲ ಮಾಧ್ಯಮಗಳು ಮರುದಿನ ತಮ್ಮ ದಿನ ಪತ್ರಿಕೆಗಳ ಮುಖ ಪುಟದಲ್ಲಿ ದೊಡ್ಡ ಸುದ್ದಿಯಾಗಿ ಪ್ರಕಟಿಸಲಿವೆ. ನಿಮಗೆ ಈ ಕುರಿತು ರಾಷ್ಟ್ರದ ಪ್ರತಿಕ್ರಿಯೆಯ ಬಗ್ಗೆ ಅರಿವಿದೆ. ಮತ್ತೊಂದು ಕಡೆ ಅಧ್ಯಕ್ಷನ ಭೇಟಿಯ ಮಹತ್ವದ ಅರಿವಿದೆ.

* ನೀವು ಅಧ್ಯಕ್ಷನ ಭೇಟಿಯನ್ನು ನಿರಾಕರಿಸುವ ಮೂಲಕ ಈ ಘಟನೆಯನ್ನು ವಿರೋಧಿಸಿ ಪ್ರತಿಭಟನೆ ವ್ಯಕ್ತಪಡಿಸುವುದು ಸರಿಯಾದ ಕ್ರಮವೇ?

* ಇಂತಹ ಸನ್ನಿವೇಶದಲ್ಲಿ ನೀವು ಯಾವ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೀರಿ?

**ಈ ಮೇಲಿನ ಪ್ರಕರಣವು ಕೆಳಗಿನ ವಿಷಯಗಳಡಿಯಲ್ಲಿ ಬರುತ್ತದೆ,**

* ಅಂತರ್ ರಾಷ್ಟ್ರೀಯ ಸಂಬಂಧಗಳಲ್ಲಿ ನೈತಿಕ ವಿಷಯ
* ನೈತಿಕ ಸಂದಿಗ್ದತೆ
* ನೈತಿಕತೆ
* ನೈತಿಕ ಆಡಳಿತ

ಈ ಮೇಲಿನ ಪ್ರಕರಣದಲ್ಲಿ ನೆರೆಹೊರೆ ದೇಶಗಳ ನಡುವಿನ ಸಂಬಂಧಗಳ ವಿಷಯವಿದೆ. ಈ ಎರಡು ದೇಶಗಳು ಬಹಳ ವರ್ಷಗಳಿಂದ ಗಡಿ ವಿವಾದವನ್ನು ಹೊಂದಿವೆ. 'ಬಿ' ದೇಶದ ಅಧ್ಯಕ್ಷನು 'ಎ' ದೇಶದ ನಿಗಧಿತ ಭೇಟಿಯ ಕಾರ್ಯಕ್ರಮದ ಮೇಲೆ ಗಡಿಯಲ್ಲಿ ಸೈನಿಕರ ಗುಂಡಿನ ದಾಳಿಗಳಿಂದ ಕರಿನೆರಳು ಆವರಿಸಿದಂತಾಗಿದೆ. ಆದ್ದರಿಂದ 'ಎ' ದೇಶದ ಪ್ರಧಾನಮಂತ್ರಿಯು ನೈತಿಕ ಸಂದಿಗ್ದತೆಯಲ್ಲಿದ್ದಾರೆ. ಒಬ್ಬ ದೇಶದ ಪ್ರಧಾನಮಂತ್ರಿಯಾಗಿ ಆತ ರಾಷ್ಟ್ರೀಯ ಹಿತಾಸಕ್ತಿಯನ್ನು ಮತ್ತು ಅಂತರ್ ರಾಷ್ಟ್ರೀಯ ಸಂಬಂಧವನ್ನು ಸಮತೋಲನದಿಂದ ಕಾಯ್ದುಕೊಂಡು ಹೋಗಬೇಕಾದ ಜವಾಬ್ದಾರಿ ಬಂದೊದಗಿದೆ.

**ಮಾದರಿ ಉತ್ತರ:** ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ರಾಜತಾಂತ್ರಿಕ ಮತ್ತು ರಾಷ್ಟ್ರೀಯ ಹಿತಾಸಕ್ತಿಯು ಪ್ರಮುಖವಾದ ಪಾತ್ರವಹಿಸುತ್ತದೆ. ಈ ಪ್ರಕರಣದಲ್ಲಿ ಪ್ರಧಾನಮಂತ್ರಿಯು 'ಬಿ' ದೇಶದ ಅಧ್ಯಕ್ಷನ ಭೇಟಿಯನ್ನು ನಿರಾಕರಿಸಿದರೆ, ಗಡಿ ವಿವಾದವನ್ನು ಬಗೆಹರಿಸುವ ಅವಕಾಶವನ್ನು ಕಳೆದುಕೊಂಡಂತಾಗುತ್ತದೆ. ಅಲ್ಲದೆ ತನ್ನ ದೇಶದ ತಯಾರಿಕೆ ವಲಯದ ಅಭಿವೃದ್ಧಿಗೆ ಬೇಕಾದ ಬಂಡವಾಳದ ಅವಕಾಶವನ್ನು ಕಳೆದುಕೊಂಡಂತಾಗುತ್ತದೆ. ಒಂದು ವೇಳೆ ಪ್ರಧಾನಿಯು ಗಡಿಯಲ್ಲಿ ಅಂತಹ ಘಟನೆ ಸಂಭವಿಸುತ್ತಿದ್ದರೂ 'ಬಿ' ದೇಶದ ಅಧ್ಯಕ್ಷನನ್ನು ಭೇಟಿಯಾದರೆ ದೇಶಾದ್ಯಂತ ಟೀಕೆಗಳನ್ನು ಎದುರಿಸಬೇಕಾಗುತ್ತದೆ. ತನ್ನ ಮುಂದಿನ ರಾಜಕೀಯ ಭವಿಷ್ಯದ ಮೇಲೆ ಋಣಾತ್ಮಕ ಪರಿಣಾಮವು ಬೀರುತ್ತದೆ. ವಿರೋಧ ಪಕ್ಷಗಳು ಈ ತಪ್ಪನ್ನೇ ಎತ್ತಿ ತೋರಿಸುತ್ತವೆ. ಈ ವರ್ತನೆಯು ರಾಷ್ಟ್ರೀಯ ಪ್ರತಿಷ್ಠೆಗೆ ರಾಜಿ ಮಾಡಿಕೊಂಡಂತಾಗಿರುತ್ತದೆ. ಇಂತಹ ಸನ್ನಿವೇಶದಲ್ಲಿ ಪ್ರಧಾನಮಂತ್ರಿಯು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

* ಗಡಿಯಲ್ಲಿ 'ಬಿ' ದೇಶದ ಸೈನಿಕರು ಗುಂಡಿನ ದಾಳಿ ನಡೆಸಿದ ಘಟನೆಗೆ ಸಂಬಂಧಿಸಿದಂತೆ, ಆ ದೇಶದ ರಾಯಭಾರಿಯನ್ನು ತನ್ನ ಕಛೇರಿಗೆ ಬರಲು ತಿಳಿಸಬೇಕು. ಆತನಿಂದ ಆ ಘಟನೆಯ ಬಗ್ಗೆ ಸ್ಪಷ್ಟೀಕರಣ ಕೇಳಬೇಕು. ಇಂತಹ ಘಟನೆಯ ಬಗ್ಗೆ 'ಬಿ' ದೇಶಕ್ಕೆ ವಿರೋಧದ ಅಭಿಪ್ರಾಯವನ್ನು ಆ ರಾಯಭಾರಿಯ ಮೂಲಕ ವ್ಯಕ್ತಪಡಿಸಬೇಕು.

* ಪ್ರಧಾನಿಯು ದೇಶದ ಅತ್ಯುನ್ನತೆ ಹುದ್ದೆಯಲ್ಲಿರುವ ಭದ್ರತಾ ಪಡೆಗಳ ಮತ್ತು ಗುಪ್ತಾಚಾರ ಇಲಾಖೆಯ ಅಧಿಕಾರಿಗಳ ಜೊತೆ ಸಭೆಯನ್ನು ನಡೆಸಬೇಕು. ಅವರ ಜೊತೆ ಈ ಘಟನೆಯ ಬಗ್ಗೆ ಚರ್ಚಿಸಿ ದೇಶದ ಭವಿಷ್ಯದ ಮತ್ತು ರಾಷ್ಟ್ರೀಯ ಹಿತಾಸಕ್ತಿಗೆ ಅನುಕೂಲವಾಗುವ ನಿರ್ಧಾರವನ್ನು ಕೈಗೊಳ್ಳಬೇಕು. ಎಲ್ಲರ ಸಮ್ಮತಿಯ ಮೇರೆಗೆ ನಿರ್ಧಾರ ಕೈಗೊಳ್ಳಬೇಕು ವಿನ: ಒಬ್ಬರೇ ನಿರ್ಧಾರ ಕೈಗೊಳ್ಳಬಾರದು.

* ಉತ್ತಮ ಅಂತರ್‌–ರಾಷ್ಟ್ರೀಯ ರಾಜತಂತ್ರಕ್ಕೆ ಕೆಲವು ಒಳ್ಳೆಯ ಕೌಶಲ್ಯಗಳ ಅವಶ್ಯಕತೆಯಿದೆ. ಈ ದೃಷ್ಟಿಯಲ್ಲಿ ಪ್ರಧಾನಮಂತ್ರಿಯು ಭೇಟಿಯನ್ನು ರದ್ದುಗೊಳಿಸದೆ 'ಬಿ' ದೇಶದ ಅಧ್ಯಕ್ಷನನ್ನು ಬರಮಾಡಿಕೊಳ್ಳಬೇಕು. ಏಕೆಂದರೆ ಮಾತುಕತೆಯ ಮೂಲಕ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ. ಈ ಭೇಟಿಯ ಸಿದ್ದತೆಗೆ ಮಾಡಲಾದ ಅಪಾರ ಸಾರ್ವಜನಿಕ ಹಣವು ವ್ಯರ್ಥವಾಗುವುದಿಲ್ಲ.

* 'ಬಿ' ದೇಶದ ಸೈನಿಕರು 'ಎ' ದೇಶದ ಸೈನಿಕರ ಮೇಲೆ ಗುಂಡಿನ ದಾಳಿಯನ್ನು ಹಾಗೇ ಮುಂದುವರೆಸಿದರೆ, ಅದಕ್ಕೆ ಸರಿಯಾದ ಪ್ರತ್ಯುತ್ತರ ನೀಡುವಂತೆ ಸೈನ್ಯದ ಮುಖ್ಯಸ್ಥನಿಗೆ ಪ್ರಧಾನಮಂತ್ರಿಯು ತಿಳಿಸಬೇಕು.

* 'ಬಿ' ದೇಶದ ಅಧ್ಯಕ್ಷರನ್ನು ಗೌರವಯುತವಾಗಿ ಸ್ವಾಗತಿಸಬೇಕು. ಅದೇ ವೇಳೆ ಪ್ರಧಾನಿಯು ಆ ದೇಶದ ಅಧ್ಯಕ್ಷನಿಗೆ ಈ ಘಟನೆಯ ಕುರಿತು ಖಂಡನೆಯನ್ನು ವ್ಯಕ್ತಪಡಿಸಬೇಕು. ಈ ರೀತಿಯಾಗಿ ರಾಜತಾಂತ್ರಿಕವಾಗಿ ವರ್ತಿಸಬೇಕು.

* ಪ್ರಧಾನಿಯು ಮಾಧ್ಯಮಗಳಿಗೆ ಈ ಖಂಡನೆಯ ಕುರಿತು ಹೇಳಿಕೆಯನ್ನು ಬಿಡುಗಡೆ ಮಾಡಬೇಕು. ಜನರು ಶಾಂತಿಯಿಂದ ವರ್ತಿಸುವಂತೆ ಮನವಿಯನ್ನು ಮಾಡಿಕೊಳ್ಳಬೇಕು. ಈ ರೀತಿಯಾಗಿ ಸಮಸ್ಯೆಯನ್ನು ಭೇಟಿಯಾಗಿ ಮಾತುಕತೆಯ ಮೂಲಕ ಪರಿಹರಿಸಬೇಕು. ಈ ವಿಧಾನ ಪ್ರತಿಕಾರದ ಕ್ರಮಕ್ಕಿಂತ ಹೆಚ್ಚು ಸೂಕ್ತವಾದದ್ದು.

## ಪ್ರಕರಣ ಅಧ್ಯಯನ – 3

ಸಾಗರ ಎಂಬ ವ್ಯಕ್ತಿಯು ಬೆಳಗಾವಿ ಜಿಲ್ಲೆಯ ಒಂದು ಹಳ್ಳಿ ಪಂಚಾಯತಿಯ ಮುಖ್ಯಸ್ಥರಾಗಿರುತ್ತಾರೆ. ಅದೇ ಹಳ್ಳಿಯ ಕೆಳ ಜಾತಿಗೆ ಸೇರಿದ ಹುಡುಗನೊಬ್ಬ ಮೇಲು ಜಾತಿಯ ಜಮಿನ್ದಾರನ ಮಗಳನ್ನು ಪ್ರೀತಿಸುತ್ತಿರುತ್ತಾನೆ. ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದು, ಮದುವೆಯಾಗಲು ಬಯಸಿರುತ್ತಾರೆ. ಆದರೆ ಆ ಹಳ್ಳಿಯಲ್ಲಿ ಜಾತಿಪದ್ದತಿ ಆಚರಣೆಯಲ್ಲಿರುವುದರಿಂದ ಅವರ ಮದುವೆಗೆ ಆ ವ್ಯವಸ್ಥೆ ದೊಡ್ಡ ಅಡ್ಡಿಯಾಗುತ್ತದೆ. ಇಬ್ಬರು ಕುಟಂಬದವರು ಇಂತಹ ಅಂತರ್ಜಾತಿಯ ವಿವಾಹವನ್ನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಅವರಿಬ್ಬರೂ ಸಮೀಪದ ತಾಲ್ಲೂಕು ಕೇಂದ್ರಕ್ಕೆ ಹೋಗಿ ಉಪನೋಂದಣಾಧಿಕಾರಿ ಕಛೇರಿಯಲ್ಲಿ ಕಾನೂನಾತ್ಮಕವಾಗಿ ಮದುವೆಯಾಗುತ್ತಾರೆ. ನಂತರ ತಮ್ಮ ಹಳ್ಳಿಗೆ ಮರಳಿ ಬರುತ್ತಾರೆ. ನಂತರ ಅವರು ತಮ್ಮ ಕುಟುಂಬಗಳನ್ನು ಭೇಟಿಯಾಗುವುದಕ್ಕಿಂತ ಮುಂಚೆ ಸಾಗರ ಅವರಿಗೆ ಭೇಟಿಯಾಗುತ್ತಾರೆ. ಸಾಗರ ಅವರು ಹಳ್ಳಿಯ ಮುಖ್ಯಸ್ಥರಾಗಿರುವುದರಿಂದ ಅವರು ಕುಟುಂಬಗಳನ್ನು ಮನವೊಲಿಸುವಂತೆ ಮನವಿ ಮಾಡಿಕೊಳ್ಳುತ್ತಾರೆ. ಇಂತಹ ಅಂತರ್ಜಾತಿ ವಿಷಯಕ್ಕೆ ಸಂಬಂಧಪಟ್ಟಂತೆ ಹಳ್ಳಿಯಲ್ಲಿ ಈ ಹಿಂದೆ ಅನೇಕ ಮರ್ಯಾದಾ ಹತ್ಯೆಗಳು ನಡೆದಿರುತ್ತವೆ. ಅಲ್ಲದೆ ಜಾತಿಯ ಜಗಳಗಳಾಗುತ್ತಿರುತ್ತವೆ. ಸಾಗರ ಅವರು ಈ ವಿಷಯ ಜಾತಿಯ ಜಗಳವನ್ನು ಉಲ್ಬಣಗೊಳಿಸುತ್ತದೆ ಎಂಬುದನ್ನು ತಿಳಿದುಕೊಂಡವರಾಗಿರುತ್ತಾರೆ.

* ಇಂತಹ ಸಂದರ್ಭಗಳಲ್ಲಿ ಸಾಗರರವರಿಗೆ ಯಾವ ಕ್ರಮಕೈಗೊಳ್ಳುವುದರಿಂದ ಉಪಯೋಗವಾಗುತ್ತದೆ?

* ಆ ಹೊಸದಾಗಿ ಮದುವೆಯಾದ ದಂಪತಿಗಳಿಗೆ ತಕ್ಷಣ ಊರು ತೊರೆಯಲು ಹೇಳುವುದರ ಮೂಲಕ ಸಹಾಯ ಮಾಡುವುದು ಸರಿಯಾದ ಕ್ರಮವೇ?

* ಒಬ್ಬ ಊರಿನ ಮುಖ್ಯಸ್ಥನಾಗಿ ಸಾಗರ ಸರಿಯಾದ ನಿರ್ಧಾರವನ್ನು ಕೈಗೊಳ್ಳುವುದರ ಬಗ್ಗೆ ಬರೆಯಿರಿ.

ಈ ಮೇಲೆ ಕೊಟ್ಟಿರುವ ಪ್ರಕರಣವು ಸಾಗರ ಅವರು ಎರಡು ಸನ್ನಿವೇಶಗಳನ್ನು ಎದುರಿಸುವಂತಹುದಾಗಿದೆ. ಮೊದಲನೆಯದಾಗಿ ಆ ಹುಡುಗ ಮತ್ತು ಹುಡುಗಿಯ ಮದುವೆಯ ವಿಷಯ ಅವರ ಕುಟುಂಬಕ್ಕೆ ತಿಳಿಸುವ ಆಯ್ಕೆ. ಒಂದು ವೇಳೆ ಹಾಗೆ ಮಾಡಿದರೆ ಆ ನವದಂಪತಿಗಳಿಗೆ ಜೀವ ಭಯದ ಸಾಧ್ಯತೆ ಇರುತ್ತದೆ. ಎರಡನೆಯದಾಗಿ ಸಾಗರ ಅವರಿಬ್ಬರ ಕುಟುಂಬಗಳನ್ನು ಮನವರಿಕೆ ಮಾಡಲು ಪ್ರಯತ್ನಿಸುವ ಆಯ್ಕೆ. ಸಾಗರ ಅವರ ಪಂಚಾಯತ್ ಮುಖ್ಯಸ್ಥನ ಸ್ಥಾನಕ್ಕೆ ಧಕ್ಕೆ ಬರುವ ಸಾಧ್ಯತೆಯಿದೆ. ಈ ಹಳ್ಳಿಯಲ್ಲಿ ಜಾತಿಪದ್ದತಿಯ ಆಚರಣೆ ಇರುವುದರಿಂದ ಒಂದು ಸಮಸ್ಯೆಯು ಮತ್ತೊಂದು ಸಮಸ್ಯೆಯ ಸೃಷ್ಟಿಗೆ ಕಾರಣವಾಗುತ್ತದೆ.

**ಈ ಪ್ರಕರಣವು ಕೆಳಗಿನ ವಿಷಯಗಳಡಿಯಲ್ಲಿ ಬರುತ್ತದೆ,**

* ನೈತಿಕತೆ

* ಸಾಮಾಜಿಕ ಅಭಿಕ್ಷಮತೆ

* ಮಾನವೀಯ ಮೌಲ್ಯ

* ನೀತಿ ಮಾರ್ಗದ ಮೂಲಕ ಆತ್ಮಸಾಕ್ಷಿಯಾಗಿ ನಡೆದುಕೊಳ್ಳುವುದು.

**ಮಾದರಿ ಉತ್ತರ:**

ಪಂಚಾಯತ್ ಮುಖ್ಯಸ್ಥ ಸ್ಥಾನವು ಸಾರ್ವಜನಿಕ ಹುದ್ದೆಯಾಗಿದೆ. ಆತನು ಇಲ್ಲಿ ಎರಡು ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಮೊದಲನೆಯದಾಗಿ ಹಳ್ಳಿಯ ಸಾಮಾಜಿಕ ಸಂಪ್ರದಾಯಗಳನ್ನು ಎತ್ತಿ ಹಿಡಿಯಬೇಕಾಗುತ್ತದೆ. ಅದೇ ರೀತಿಯಾಗಿ ಜನರು ಆಚರಿಸುವ ಸಾಮಾಜಿಕ ಸಂಪ್ರದಾಯಗಳು ಕಾನೂನನ್ನು ಉಲ್ಲಂಘಿಸದಂತೆ ಅಥವಾ ಕಾನೂನಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರದಂತೆ ನೋಡಿಕೊಳ್ಳಬೇಕಾಗುತ್ತದೆ. ಪಂಚಾಯತ್ ಮುಖ್ಯಸ್ಥನು ಜನರ ನಡುವೆ ಮತ್ತು ಸರ್ಕಾರದ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಈ ಪ್ರಕರಣದಲ್ಲಿ ಸಾಗರ ಅವರ ಪ್ರಥಮ ಕರ್ತವ್ಯವು ಆ ದಂಪತಿಗಳ ಜೀವವನ್ನು ರಕ್ಷಿಸುವುದಾಗಿದೆ. ಹಳ್ಳಿಯಲ್ಲಿ ಯಾವುದೇ ಜಾತಿ ಜಗಳವಾಗದಂತಹ ವಾತಾವರಣ ನಿರ್ಮಿಸುವುದಾಗಿದೆ. ಹಳ್ಳಿಯಲ್ಲಿ ಸರಿಯಾದ ವ್ಯವಸ್ಥೆಯನ್ನು ಕಾಪಾಡುವುದಾಗಿದೆ. ಅದಕ್ಕಾಗಿ ಸಾಗರರವರು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

* ಮೊದಲ ಹೆಜ್ಜೆಯಾಗಿ, ಸಾಗರ ಅವರು ಪಂಚಾಯತಿ ಸದಸ್ಯರ ಮತ್ತು ಹಳ್ಳಿಯ ಹಿರಿಯ ವ್ಯಕ್ತಿಗಳ ಜೊತೆ ಸಭೆಯನ್ನು ನಡೆಸಬೇಕು. ಆ ನವದಂಪತಿಗಳನ್ನು ಒಪ್ಪಿಕೊಳ್ಳುವಂತೆ ಅವರ ಜೊತೆ ಚರ್ಚಿಸಬೇಕು. ಅದಕ್ಕಾಗಿ ಅವರಲ್ಲಿ ವಿಶ್ವಾಸ ಮೂಡಿಸಲು ಪ್ರಯತ್ನಿಸಬೇಕು.

* ಈ ಸದಸ್ಯರ ಜೊತೆ ಚರ್ಚಿಸಿದ ನಂತರ ಗ್ರಾಮ ಸಭೆಯನ್ನು ನಡೆಸುವ ದಿನಾಂಕವನ್ನು ನಿಗದಿಪಡಿಸಬೇಕು. ಅಲ್ಲಿ ಸಾಗರ ಅವರು ಈ ಮದುವೆಯ ವಿಷಯವನ್ನು ಹಳ್ಳಿಯ ಜನ ಸಮೂಹದೊಂದಿಗೆ ಚರ್ಚಿಸಬೇಕು.

* ಗ್ರಾಮ ಸಭೆ ನಡೆಯುವ ದಿನದಂದು ಜಾತಿ ಗಲಭೆಗಳು ನಡೆಯುವ ಸಾಧ್ಯತೆ ಇರುವುದರಿಂದ, ಸಾಗರ ಅವರು ಈ ವಿಷಯವನ್ನು ಸಂಬಂಧ ಪಟ್ಟ ಮೇಲಾಧಿಕಾರಿಗಳ ಗಮನಕ್ಕೆ ತರಬೇಕು ಮತ್ತು ಈ ವಿಷಯವನ್ನು ಅವರಿಗೆ ಮನದಟ್ಟು ಮಾಡಿಸಬೇಕು. ಸುರಕ್ಷತೆಯ ದೃಷ್ಟಿಯಿಂದ ಗ್ರಾಮಸಭೆ ನಡೆಯುವ ದಿನದಂದು ಪೋಲೀಸ್‌ರನ್ನು ನಿಯೋಜಿಸಲು ಮನವಿ ಸಲ್ಲಿಸಬೇಕು.

* ಗ್ರಾಮ ಸಭೆಯಲ್ಲಿ ಯಾವುದೇ ನಿರ್ಧಾರ ಕೈಗೊಂಡರೂ ಪರವಾಗಿಲ್ಲ. ಅದಕ್ಕಾಗಿ ಪೂರ್ವದಲ್ಲಿ ಶಾಂತಿಯುತ ವಾತಾವರಣ ನಿರ್ಮಾಣವಾಗುವ ಸಿದ್ದತೆಯನ್ನು ಮಾಡಿಕೊಂಡು ಖಾತ್ರಿಪಡಿಸಿಕೊಳ್ಳಬೇಕು.

* ಆ ಹಳ್ಳಿಯಲ್ಲಿ ಈ ಹಿಂದೆ ಇಂತಹ ಅಂತರ್ಜಾತಿ ಮದುವೆಯಿಂದ ಮರ್ಯಾದಾ ಹತ್ಯೆಗಳಾಗಿರುವುದರಿಂದ, ದಂಪತಿಗಳಿಗೆ ಸಮರ್ಪಕ ರಕ್ಷಣೆ ಒದಗಿಸುವಂತೆ ಸಾಗರ ಅವರು ಜಿಲ್ಲಾಧಿಕಾರಿಗಳಿಗೆ ತಿಳಿಸಬೇಕು.

* ಸಾಗರ ಅವರು ಹಳ್ಳಿಯಲ್ಲಿ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸಿದ ಸರ್ಕಾರೇತರ ಸಂಸ್ಥೆಗಳ (NGO) ಸಹಾಯವನ್ನು ಪಡೆಯಬೇಕು. ಏಕೆಂದರೆ ಹಳ್ಳಿಯ ಜನರು ಅಂತಹ ಎನ್.ಜಿ.ಓ.ಗಳ ಬಗ್ಗೆ ಗೌರವ ಭಾವನೆಯನ್ನು ಹೊಂದಿದವರಾಗಿರುತ್ತಾರೆ. ಮದುವೆಗೆ ಸಂಬಂಧಿಸಿದಂತೆ ಆ ದಂಪತಿಗಳನ್ನು ಒಪ್ಪಿಕೊಳ್ಳಲು ಅಥವಾ ಸ್ವೀಕರಿಸಲು ಇದು ಜನಗಳಿಗೆ ಮನವರಿಕೆ ಮಾಡಲು ಸಹಾಯವಾಗುತ್ತದೆ.

* ಕೇವಲ ಊರು ತೊರೆಯಲು ದಂಪತಿಗಳಿಗೆ ಹೇಳಿದರೆ ಸಮಸ್ಯೆಯು ಪರಿಹಾರವಾಗುವುದಿಲ್ಲ. ಇಂತಹ ಘಟನೆಗಳು ಭವಿಷ್ಯದಲ್ಲಿಯೂ ಜರುಗುವ ಸಾಧ್ಯತೆಯಿರುವುದರಿಂದ ಇದಕ್ಕೆ ಸರಿಯಾದ ಪರಿಹಾರ ಒದಗಿಸಬೇಕು. ಹೀಗೆ ಊರು ತೊರೆದು ಹೋಗುವುದರಿಂದ ಊರಲ್ಲಿ ಜಾತಿಗಳ ಮಧ್ಯೆ ಅಥವಾ ಅವರ ಕುಟುಂಬಗಳ ಮಧ್ಯೆ ಜಗಳ ಉಂಟಾಗುವ ಸಾಧ್ಯತೆ ಇರುತ್ತದೆ.

* ಸಾಗರ ಅವರು ಅಲ್ಲಿನ ಹೆಸರುವಾಸಿ ಮಠಾಧೀಶರ ಮತ್ತು ಮಾಧ್ಯಮಗಳ ಸಹಾಯವನ್ನು ಪಡೆದುಕೊಂಡು ಜನರಲ್ಲಿ ಜಾತಿ ವಿಷಯದ ಪೂರ್ವಾಗ್ರಹ ಪೀಡೆಯನ್ನು ತೊಲಗಿಸಲು ಮತ್ತು ನವ ದಂಪತಿಗಳನ್ನು ಸ್ವೀಕರಿಸುವಂತೆ ಜನರಲ್ಲಿ ಮನವರಿಕೆ ಮಾಡಿಕೊಡಬೇಕು.

ಭಾರತದ ಸಂವಿಧಾನವು ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ ಮತ್ತು ಸಮಾನತೆ ಹಕ್ಕನ್ನು ನೀಡಿದೆ. ಸಾಮಾಜಿಕ ಸಂಪ್ರದಾಯಗಳ ಹೆಸರಿನಲ್ಲಿ ವ್ಯಕ್ತಿಗಳ ವೈಯಕ್ತಿಕ ನಿರ್ಧಾರಗಳನ್ನು ನಿರ್ಬಂಧಿಸುವುದು, ಸಂವಿಧಾನ ಕೊಡಮಾಡಿದ ಹಕ್ಕುಗಳನ್ನು ಉಲ್ಲಂಘಿಸಿದಂತಾಗುತ್ತದೆ. ಅದಕ್ಕಾಗಿ ಭಾರತದ ಸರ್ವೋಚ್ಚ ನ್ಯಾಯಾಲಯವು “ಎಲ್ಲ ಸಮಾನತೆಗೆ ಅವಕಾಶವಿರುವುದಿಲ್ಲವೋ, ಅಲ್ಲಿ ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥವಿರುವುದಿಲ್ಲ” ಎಂದು ತೀರ್ಪು ನೀಡಿದೆ.

## ಪ್ರಕರಣ ಅಧ್ಯಯನ – 4

ಪ್ರಸಾದ ಎಂಬುವರನ್ನು ಹಾವೇರಿ ಉಪವಿಭಾಗಕ್ಕೆ ಉಪಪೋಲೀಸ್ ಅಧೀಕ್ಷಕರಾಗಿ ನೇಮಕ ಮಾಡಲಾಗುತ್ತದೆ. ಅವರ ಅಧಿಕಾರದ ವ್ಯಾಪ್ತಿಯಲ್ಲಿ ಬರುವ ಹಾವೇರಿ ನಗರದ ಮಾರುಕಟ್ಟೆಯಲ್ಲಿ ಅಂಗಡಿ ಮಾಲೀಕರು ಸ್ಥಳೀಯ ಗುಂಡಾನಿಂದ ಬಲವಂತದ ವಸೂಲಿಯ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಸ್ಥಳೀಯ ಗುಂಡಾ ಅಂಗಡಿ ಮಾಲೀಕರಿಗೆ ಜೀವ ಬೆದರಿಕೆ ಹಾಕಿ ಅವರಿಂದ ಬಲವಂತವಾಗಿ ತಿಂಗಳಿಗೆ ಇಂತಿಷ್ಟು ಹಣ ಕೊಡಬೇಕೆಂದು ಕರಾರು ಹಾಕಿ ವಸೂಲಿ ಮಾಡುತ್ತಿರುತ್ತಾನೆ. ಆದ್ದರಿಂದ ಅಂಗಡಿ ಮಾಲೀಕರು ತಮ್ಮ ಜೀವ ಭಯಕ್ಕಾಗಿ ಹೆದರಿ ಆ ಗೂಂಡಾಗೆ ಹಫ್ತಾವನ್ನು ಕೊಡಲು ಒಪ್ಪಿರುತ್ತಾರೆ. ಒಂದು ವೇಳೆ ಈ ವಿಷಯವನ್ನು ಪೋಲೀಸರಿಗೆ ತಿಳಿಸಿದರೆ, ಪೋಲೀಸರು ತಮ್ಮನ್ನು ಮತ್ತು ತಮ್ಮ ಕುಟುಂಬವನ್ನು ರಕ್ಷಿಸಲಾರರು ಎಂಬ ಭಾವನೆಯನ್ನು ಹೊಂದಿರುತ್ತಾರೆ. ಆ ಗೂಂಡಾ ಪ್ರಭಾವಿ ರಾಜಕೀಯ ವ್ಯಕ್ತಿಗಳ ಬೆಂಬಲವನ್ನು ಹೊಂದಿರುವ ವಿಷಯವು ಪ್ರಸಾದರವರು ತಿಳಿದುಕೊಳ್ಳುತ್ತಾರೆ. ಅವನ ಹಿಂದಿರುವ ಆ ರಾಜಕೀಯ ವ್ಯಕ್ತಿಗಳು ಅಲ್ಲಿನ ಆಡಳಿತ ಪಕ್ಷಕ್ಕೆ ಸೇರಿದವರಾಗಿರುತ್ತಾರೆ. ಅಂಗಡಿ ಮಾಲೀಕರು ಆ ಗೂಂಡಾನ ವಿರುದ್ದ ಯಾವುದೇ ದೂರುಗಳನ್ನು ಕೊಡದೆ ಇರುವ ಈ ಸನ್ನಿವೇಶದಲ್ಲಿ ಪ್ರಸಾದರವರಿಗೆ ಆ ಗೂಂಡಾನ ವಿರುದ್ದ ಸಾಕಷ್ಟು ಸಾಕ್ಷಿಗಳನ್ನು ಕಲೆ ಹಾಕಲು ಕಷ್ಟವಾಗುತ್ತದೆ.

* ಪ್ರಸಾದ ಅವರಿಗೆ ಇಂತಹ ಕಠಿಣ ಸಂದರ್ಭದಲ್ಲಿ ಸಮಸ್ಯೆಯನ್ನು ಪರಿಹರಿಸಲು ಯಾವ ಆಯ್ಕೆಯು ಲಭ್ಯವಿರುತ್ತದೆ?

* ಅಂಗಡಿ ಮಾಲೀಕರು ಆ ಗೂಂಡಾನ ವಿರುದ್ದ ಪೋಲೀಸರಿಗೆ ದೂರನ್ನು ಕೊಡುವವರಿಗೆ ಈ ವಿಷಯವನ್ನು ಹಾಗೆ ಸುಮ್ಮನೆ ಬಿಡುವುದು ಸರಿಯಾದ ನಿರ್ಧಾರವೇ?

**ಈ ಮೇಲಿನ ಪ್ರಕರಣವು ಈ ಕೆಳಗಿನ ವಿಷಯಗಳಡಿಯಲ್ಲಿ ಬರುತ್ತದೆ.**

* ನೈತಿಕವಾಗಿ ಮತ್ತು ರಾಜಕೀಯ ಮನೋಭಾವ
* ಸಾಮಾಜಿಕ ಪ್ರಭಾವ ಮತ್ತು ಮನವೊಲಿಕೆ
* ಸಹನೆ ಮತ್ತು ದುರ್ಬಲ ವರ್ಗಗಳ ಕುರಿತು ಅನುಕಂಪ
* ವೃತ್ತಿ ಸಂಸ್ಕೃತಿ

ಈ ಮೇಲೆ ಕೊಟ್ಟಿರುವ ಪ್ರಕರಣವು ಪೋಲೀಸ್ ಮತ್ತು ಸಾರ್ವಜನಿಕರ (ಅಂಗಡಿ ಮಾಲೀಕರು) ನಡುವಿನ ಸಂಬಂಧದ ಬಗೆಗೆ ಹೇಳುತ್ತದೆ. ಇಲ್ಲಿ ಪೋಲೀಸರ ಮೇಲಿನ ವಿಶ್ವಾಸದ ಕೊರತೆಯು ಅಡ್ಡಿಯಾಗಿದೆ. ಯಾವುದೇ ಅಂಗಡಿ ಮಾಲೀಕರು ಆ ಗೂಂಡಾನ ವಿರುದ್ದ ದೂರು ಕೊಡಲು ಮುಂದೆ ಬಾರದೆ ಇರುವುದರಿಂದ ಪೋಲೀಸ್ ಅಧಿಕಾರಿಗೆ ಸಾಕ್ಷಿಗಳನ್ನು ಸಂಗ್ರಹಿಸಿ ಕ್ರಮಗೊಳ್ಳಲು ಕಠಿಣವಾಗುತ್ತಿದೆ. ಈ ಪ್ರಕರಣವು ಪೋಲೀಸರ ವೃತ್ತಿ ಸಂಸ್ಕೃತಿ ಮತ್ತು ಸಾಮಾಜಿಕ ಮನವೊಲಿಕೆ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ. ಗೂಂಡಾ ಪ್ರಭಾವಿ ರಾಜಕೀಯ ವ್ಯಕ್ತಿಗಳ

ಬೆಂಬಲವನ್ನು ಹೊಂದಿರುವುದರಿಂದ ಪೋಲೀಸ್ ಅಧಿಕಾರಿಗೆ ಅವನ ವಿರುದ್ಧ ಕ್ರಮ ಕೈಗೊಂಡರೆ ಸಂದಿಗ್ದ ಸ್ಥಿತಿ ನಿರ್ಮಾಣವಾಗುತ್ತದೆ. ಅದರಲ್ಲೂ ಸಾಕ್ಷಿಗಳ ಕೊರತೆಯಿದೆ. ಈ ಅಪರಾಧವು ರಾಜಕೀಯಕರಣಗೊಳ್ಳುವ ಸಾಧ್ಯತೆಯಿದೆ.

**ಮಾದರಿ ಉತ್ತರ:**

ಕಾನೂನು ಸುವ್ಯವಸ್ಥೆ ಕಾಪಾಡುವುದು ಪೋಲೀಸ್ ಸಂಸ್ಥೆಯ ಪ್ರಾಥಮಿಕ ಅಥವಾ ಮೂಲಭೂತ ಕರ್ತವ್ಯವಾಗಿದೆ. ಕಾನೂನನ್ನು ಉಲ್ಲಂಘಿಸುವವರನ್ನು ನ್ಯಾಯಾಲಯದ ಗಮನಕ್ಕೆ ತರುವುದು ಮತ್ತು ಕಾನೂನಿನ ಅಧಿಪತ್ಯವನ್ನು ಕಾಪಾಡಿಕೊಂಡು ಹೋಗುವುದು ಪೋಲೀಸರ ಕರ್ತವ್ಯವಾಗಿದೆ. ಅಪರಾಧಗಳಿಂದ ಮುಕ್ತಿ ಹೊಂದಿದ ಸಮಾಜವನ್ನು ನಿರ್ಮಿಸಿ, ಜನರು ಶಾಂತಿ ಮತ್ತು ಸಾಮರಸ್ಯದಿಂದ ಜೀವನ ಸಾಗಿಸುವಂತಹ ವಾತಾವರಣ ಸೃಷ್ಟಿಸುವ ಜವಾಬ್ದಾರಿ ಪೋಲಿಸರದ್ದಾಗಿದೆ.

ಈ ಪ್ರಕರಣದಲ್ಲಿ ಪೋಲೀಸ್ ಅಧಿಕಾರಿಯು ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಬೇಕು. ಅಂಗಡಿ ಮಾಲೀಕರು ಎದುರಿಸುತ್ತಿರುವ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಬೇಕು. ಅಂಗಡಿ ಮಾಲೀಕರು ಸ್ವತ: ತಾವಾಗಿಯೇ ಬಂದು ದೂರು ಕೊಡುವವರೆಗೂ ಕಾಯುವುದು ಅನವಶ್ಯಕವಾದ ಕಾರ್ಯವಾಗುತ್ತದೆ. ಇಲ್ಲಿ ಪೋಲೀಸ್ ಅಧಿಕಾರಿಯು ಎದುರಿಸುತ್ತಿರುವ ಮೊದಲ ಸಮಸ್ಯೆ ಏನೆಂದರೆ ಅಂಗಡಿ ಮಾಲೀಕರು ದೂರು ಕೊಡದೆಯಿರುವುದು. ಒಂದು ವೇಳೆ ಪೋಲೀಸ್ ಅಧಿಕಾರಿಯು ಯಾವುದೇ ಸಾಕ್ಷಿಗಳನ್ನು ಸಂಗ್ರಹಿಸದೆ ಆ ಗೂಂಡಾನ ವಿರುದ್ಧ ಕ್ರಮಕೈಗೊಂಡರೆ ಮುಂದೆ ಶಿಸ್ತು ಕ್ರಮವನ್ನು ಎದುರಿಸಬೇಕಾಗುತ್ತದೆ. ಈ ನಡವಳಿಕೆಯು ಪ್ರಶ್ನಾರ್ಹವಾಗಿ ಪೋಲೀಸ್ ಅಧಿಕಾರಿಯ ಸೇವಾ ದಾಖಲಾತಿಯ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ. ಮೇಲಾಗಿ ಆ ಗೂಂಡಾ ರಾಜಕೀಯ ಪ್ರಭಾವ ಹೊಂದಿದವನಾಗಿರುವುದರಿಂದ ಪೋಲೀಸ್ ಅಧಿಕಾರಿಯು ರಾಜಕೀಯ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಪೋಲೀಸ್ ಅಧಿಕಾರಿಯು ಈ ಕೆಳಗಿನ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು.

* ಪ್ರಸಾದ ಅವರು ತಕ್ಷಣ ಕೈಗೊಳ್ಳಬೇಕಾದ ಕ್ರಮ ಯಾವುದೆಂದರೆ ಕೆಲವು ಕೆಳ ಅಧಿಕಾರಿಗಳನ್ನು ಈ ಸಮಸ್ಯೆಯ ಕುರಿತು ಸತ್ಯಾಸತ್ಯತೆಯನ್ನು ಪರಿಶೀಲಿಸಲು ಆ ಸ್ಥಳಕ್ಕೆ ನೇಮಿಸಬೇಕು. ಯಾಕೆಂದರೆ ಆ ಸಮಸ್ಯೆಯ ಅಥವಾ ಪ್ರಕರಣದ ಬಗ್ಗೆ ಸಮರ್ಪಕ ಜ್ಞಾನವಿಲ್ಲದೆ ಹಾಗೆಯೇ ಕ್ರಮ ಕೈಗೊಳ್ಳುವುದು ಕಾನೂನಿನ ವಿರುದ್ಧವಾಗುತ್ತದೆ.

* ಪರಿಶೀಲಿಸಿದ ನಂತರ, ಪ್ರಸಾದ ಅವರು ಆ ಮಾರುಕಟ್ಟೆಯ ಅಂಗಡಿ ಮಾಲೀಕರ ಸಂಘದ ಪ್ರತಿನಿಧಿಗಳನ್ನು ಭೇಟಿಯಾಗಬೇಕು. ಸಾಧ್ಯವಾದಷ್ಟು ನೇರವಾಗಿ ಅಂಗಡಿ ಮಾಲೀಕರನ್ನು ಭೇಟಿಯಾಗಬೇಕು. ಅವರಿಗೆ ಯಾವುದೇ ತೊಂದರೆಯಾಗದಂತೆ ಸಂಪೂರ್ಣ ಪೋಲೀಸ್ ರಕ್ಷಣೆಯನ್ನು ನೀಡುವುದರ ಕುರಿತು ಮನವೊಲಿಸಬೇಕು.

* ಈ ಪ್ರಕರಣದಲ್ಲಿ ಅಂಗಡಿ ಮಾಲೀಕರ ಸಂಘದ ಪಾತ್ರವು ಬಹಳ ಮಹತ್ವದ್ದಾಗಿದೆ. ಏಕೆಂದರೆ ಈ ಪ್ರಕರಣದಲ್ಲಿ ಅಂಗಡಿ ಮಾಲೀಕರು ಪೋಲೀಸ್‌ರ ಮೇಲಿನ ವಿಶ್ವಾಸವನ್ನು ಕಳೆದುಕೊಂಡಿರುವುದನ್ನು ಎತ್ತಿ ತೋರಿಸಿದೆ. ಒಂದು ವೇಳೆ ಅಂಗಡಿ ಮಾಲೀಕರ ಜೊತೆ ನೇರವಾಗಿ ಮಾತುಕತೆಗೆ ತೊಡಗಿದರೆ ಪ್ರಯತ್ನವು ವಿಫಲವಾಗುವ ಸಾಧ್ಯತೆಯಿದೆ. ಆ ಸಂಘದ ವಿಶ್ವಾಸವನ್ನು ಗಳಿಸಬೇಕು.

* ಈ ಪ್ರಕರಣದಲ್ಲಿ ಆಡಳಿತ ಪಕ್ಷದ ರಾಜಕೀಯ ವ್ಯಕ್ತಿಗಳು ಭಾಗಿಯಾಗಿರುವುದರಿಂದ ಪ್ರಸಾದ ಅವರು ತಮ್ಮ ಮೇಲಾಧಿಕಾರಿಗಳ ಗಮನಕ್ಕೆ ತಂದು ಅವರಿಂದ ಸಲಹೆಗಳನ್ನು ಪಡೆಯಬೇಕು. ಈ ಹಿಂದೆ ಇಂತಹ ಪ್ರಕರಣಗಳು ನಡೆದಿದ್ದರೆ ಯಾವ ರೀತಿ ಕ್ರಮಕೈಗೊಳ್ಳಬೇಕು ಎಂಬ ಸಲಹೆಯು ದೊರೆಯುವುದು.

* ಅಂಗಡಿ ಮಾಲೀಕರು ಯಾವುದೇ ಭೀತಿಯಿಲ್ಲದೆ ಆ ಗೂಂಡಾನ ವಿರುದ್ಧ ದೂರು ಕೊಡುವುದರಲ್ಲಿ ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಪ್ರಮುಖವಾದ ಪಾತ್ರವಿದೆ. ಒಂದು ವೇಳೆ ಪ್ರಸಾದ ಅವರು ಅಂಗಡಿ ಮಾಲೀಕರ ಮನವೊಲಿಸಲು ವಿಫಲವಾದರೆ, ಆ ಮಾರುಕಟ್ಟೆಯ ಸ್ಥಳೀಯ ವ್ಯಕ್ತಿಗಳ ಸಹಾಯವನ್ನು ಪಡೆಯಬೇಕು.

* ಈ ಪ್ರಕರಣವನ್ನು ಸೂಕ್ತವಾಗಿ ಬಗೆಹರಿಸಲು ಪ್ರಸಾದರವರು ಮಾಧ್ಯಮಗಳ ಸಹಾಯವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಏಕೆಂದರೆ ಆಡಳಿತ ಪಕ್ಷದ ಮೇಲೆ ಋಣಾತ್ಮಕ ಪ್ರಭಾವವನ್ನು ಬೀರುವ ಪ್ರಕರಣ ಇದಾಗಿದೆ. ಸಾಕ್ಷಿಗಳಲ್ಲದೆ ಸಮಸ್ಯೆಯನ್ನು ಪರಿಹರಿಸುವುದು ಪ್ರಸಾದರವರ ಸೇವಾ ದಾಖಲಾತಿಗೆ ಋಣಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ.

* ಒಂದು ಸಲ ಸಾಕ್ಷಿಯನ್ನು ಸಂಗ್ರಹಿಸಿದ ನಂತರ ಗೂಂಡಾನನ್ನು ಯಾವುದೇ ಭಯವಿಲ್ಲದೆ ಕಾನೂನಾತ್ಮಕವಾಗಿ ಬಂಧಿಸಬೇಕು. ಆಗ ಪೋಲೀಸರ ಬಗ್ಗೆ ಸಾರ್ವಜನಿಕರಿಗೆ ಒಳ್ಳೆಯ ಅಭಿಪ್ರಾಯ ಮೂಡುತ್ತದೆ.

ಪ್ರಸಾದ ಅವರು ಸಾರ್ವಜನಿಕ ಮತ್ತು ಪೋಲೀಸರ ನಡುವಿನ ಸಂಬಂಧವನ್ನು ಬಲಗೊಳಿಸಬೇಕು. ಅಂತಹ ಸನ್ನಿವೇಶಗಳನ್ನು ಸೂಕ್ತವಾಗಿ ಪರಿಹರಿಸಲು ದೀರ್ಘಾವಧಿ ತೆಗೆದುಕೊಂಡರೂ ಪರವಾಗಿಲ್ಲ, ಪೋಲೀಸರು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಮತ್ತು ಅಪರಾಧ ಮುಕ್ತ ಸಮಾಜವನ್ನು ನಿರ್ಮಿಸಲು, ಸಾರ್ವಜನಿಕರ ಜೊತೆಗೆ ಉತ್ತಮ ಸಂಬಂಧ ಹೊಂದುವ ಅವಶ್ಯಕತೆಯಿದೆ. ಅಧಿಕಾರದಿಂದ ಆಗದ ಕೆಲಸ ಜನರ ಸಹಕಾರದಿಂದ ಆಗುವ ಸಾಧ್ಯತೆಯಿರುತ್ತದೆ.

## ಪ್ರಕರಣ ಅಧ್ಯಯನ – 5

ನೀವು ಕೇಂದ್ರ ತನಿಖಾ ಸಂಸ್ಥೆ (CBI)ಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವಿರಿ. ಆಗ ಸಮಾಜದ ಒಬ್ಬ ಉನ್ನತ ವ್ಯಕ್ತಿಯು ನಿಮ್ಮ ನಡವಳಿಕೆಯ ಬಗ್ಗೆ ಆರೋಪ ಮಾಡುತ್ತಾನೆ. ಆ ಆರೋಪಕ್ಕೆ ಅವನು ದಾಖಲೆಯನ್ನು ಕೂಡ ಒದಗಿಸುತ್ತಾನೆ. ನೀವು ಪ್ರಕರಣವನ್ನು ನಡೆಸುತ್ತಿರುವವರಲ್ಲಿ ಆರೋಪಿ ಎಂದು ಗುರುತಿಸಲಾದ ವ್ಯಕ್ತಿಯನ್ನು ನಿಮ್ಮ ಮನೆಯಲ್ಲಿ ಭೇಟಿಯಾಗಿದ್ದೀರಿ. ಆ ವ್ಯಕ್ತಿಯು ತುಂಬಾ ಪ್ರಭಾವಿಯಾಗಿರುತ್ತಾನೆ. ಅಂತಹ ವ್ಯಕ್ತಿಯನ್ನು ನೀವು ತನಿಖೆ ಮಾಡಬೇಕಾಗಿದೆ. ಇದು ಸಮಾಜದ ಉನ್ನತ ವ್ಯಕ್ತಿಯು ಒದಗಿಸಿರುವ ದಾಖಲೆಯಾಗಿದೆ. ನೀವು ಆ ವ್ಯಕ್ತಿಗೆ ಸಂಬಂಧಿಸಿದ ತನಿಖೆಯ ಮೇಲ್ವಿಚಾರಣೆಯನ್ನು ಮತ್ತು ತನಿಖೆಯ ಪ್ರತಿಯೊಂದು ಹಂತದ ವರದಿಗಳನ್ನು ತಿಳಿದುಕೊಳ್ಳುತ್ತಿದ್ದೀರಿ. ಸಮಾಜದ ಗಣ್ಯ ವ್ಯಕ್ತಿಯು ಮಾಡಿದ ಈ ಆರೋಪವು ನಿಮ್ಮ ನಿಷ್ಪಕ್ಷಪಾತತೆ ಮತ್ತು ಸಮಗ್ರತೆಯ ಬಗ್ಗೆ ಸಂದೇಹ ಮೂಡಿಸುತ್ತದೆ.

* ಈ ಆರೋಪದ ಕುರಿತು ನಿಮ್ಮ ಪ್ರತಿಕ್ರಿಯೆ ಏನು?

* ತನ್ನ ತನಿಖಾ ಸಂಸ್ಥೆಯು ಪ್ರಕರಣವನ್ನು ತನಿಖೆ ನಡೆಸುತ್ತಿದ್ದಾಗ ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿಯನ್ನು ಹೀಗೆ ಭೇಟಿಯಾಗುವುದರ ಬಗ್ಗೆ ಒಬ್ಬ ಸಾರ್ವಜನಿಕ ಸೇವಾ ಅಧಿಕಾರಿಯಾಗಿ ನೀವು ಹೇಗೆ ವಿಶ್ಲೇಷಿಸಿ ಸಮರ್ಥನೆಗಳನ್ನು ಕೊಡುತ್ತೀರಿ?

ಮೇಲೆ ಕೊಟ್ಟಿರುವ ಪ್ರಕರಣದಲ್ಲಿ ದೇಶದ ಅತ್ಯುನ್ನತ ತನಿಖಾ ಸಂಸ್ಥೆಯ ( ನಿರ್ದೇಶಕನು ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿಯನ್ನು ತನ್ನ ಮನೆಯಲ್ಲಿ ಭೇಟಿಯಾಗಿರುವುದರಿಂದ ಸಾರ್ವಜನಿಕ ನಿಂದನೆಗೆ ಒಳಪಟ್ಟಿದ್ದಾನೆ. ಈ ಪ್ರಕರಣವು ಸಾರ್ವಜನಿಕ ಸೇವಕನ ನಡವಳಿಕೆಯ ಬಗ್ಗೆ ಅನುಮಾನ ಉಂಟುಮಾಡುವಂತಿದೆ. ಈ ಪ್ರಕರಣದಿಂದಾಗಿ ಸಾರ್ವಜನಿಕ ಸೇವಕನ ವೈಯಕ್ತಿಕ ಬದುಕಿನ, ಆತನ ನೈತಿಕ ವರ್ತನೆ ಮತ್ತು ಕಾರ್ಯಗಳ ನಿಷ್ಪಕ್ಷಪಾತತೆ ಬಗ್ಗೆ ಪ್ರಶ್ನೆಗಳು ಉದ್ಭವವಾಗಿದೆ.

**ಈ ಪ್ರಕರಣವು ಕೆಳಗಿನ ವಿಷಯಗಳಡಿಯಲ್ಲಿ ಬರುತ್ತದೆ.**

* ಸಾರ್ವಜನಿಕರ ಸೇವಕರ ಮೂಲಭೂತ ಮೌಲ್ಯಗಳು

* ನಿಷ್ಪಕ್ಷಪಾತತೆ

* ಸಾರ್ವಜನಿಕರ ಸೇವೆಯ ಮೌಲ್ಯಗಳು

* ನೈತಿಕ ವರ್ತನೆ

**ಮಾದರಿ ಉತ್ತರ:**

ಹಿರಿಯ ಅಧಿಕಾರಿಯಾದ ತನಿಖಾ ಸಂಸ್ಥೆಯ (CBI)ಯ ನಿರ್ದೇಶಕನ ನಡವಳಿಕೆಯು ಸಂಸ್ಥೆಯ ವೃತ್ತಿ ಸಂಸ್ಕೃತಿಯ ಲಕ್ಷಣ ವಿವರಿಸುತ್ತದೆ. ಕೇಂದ್ರೀಯ ತನಿಖಾ ಸಂಸ್ಥೆಯು ಭಾರತದ ಸರ್ವಶ್ರೇಷ್ಠ ತನಿಖಾ ಸಂಸ್ಥೆಯಾಗಿದೆ. ಈ ಸಂಸ್ಥೆಯ ದೇಶದ ಉನ್ನತವಾದ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ನಿಖರವಾದ ವರದಿ ಒಪ್ಪಿಸುವಲ್ಲಿ ಪ್ರಸಿದ್ಧಿಯಾಗಿದೆ. ಉನ್ನತ ಅಧಿಕಾರಿ ವರ್ಗಗಳ ಬಗ್ಗೆ ಮತ್ತು ಸಮಾಜದ ಉನ್ನತವಾದ ಸ್ಥಾನದಲ್ಲಿರುವವರ ಬಗ್ಗೆಯು ಸರಿಯಾದ ತನಿಖೆ ನಡೆಸಿದ್ದಕ್ಕೆ ಹೆಸರುವಾಸಿಯಾಗಿದೆ. ಇಂತಹ ಸಂಸ್ಥೆಯ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಯೂ ಈ ರೀತಿಯಾಗಿ ಅನೈತಿಕವಾಗಿ ವರ್ತಿಸುವುದು ನಿಷ್ಪಕ್ಷಪಾತದ ತನಿಖೆಯ ಪ್ರಕ್ರಿಯೆಯನ್ನು ಗಂಡಾಂತರಕ್ಕೆ ತಳ್ಳಿದಂತಾಗುತ್ತದೆ. ಅಪರಾಧಿಗಳಿಗೆ ಶಿಕ್ಷೆ ನೀಡುವ ನ್ಯಾಯ ವ್ಯವಸ್ಥೆಗೆ ಧಕ್ಕೆ ತರುವಂತಾಗುತ್ತದೆ.

ಈ ಮೇಲೆ ಹೇಳಿರುವ ಪ್ರಕರಣದಲ್ಲಿ ಆರೋಪವನ್ನು ಮಾಡಿರುವ ವ್ಯಕ್ತಿಯು ಸಮಾಜದ ಉನ್ನತ ವ್ಯಕ್ತಿಯಾಗಿದ್ದಾನೆ. ಆ ದಾಖಲೆಯ ಮೂಲಕ ಆರೋಪವನ್ನು ಸಾಬೀತು ಪಡಿಸುವ ಸಾಮರ್ಥ್ಯ ಹೊಂದಿದವನಾಗಿದ್ದಾನೆ. ಇಂತಹ ಸನ್ನಿವೇಶದಲ್ಲಿ ಆ ತನಿಖಾ ಸಂಸ್ಥೆಯ ಮುಖ್ಯಸ್ಥನು ಬೇರೆ ರೀತಿಯಾದ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆಯಿದೆ. ಪ್ರಕರಣದ ತನಿಖೆಯ ಪ್ರತಿಯೊಂದು ವಿವರವನ್ನು ಸಿಬಿಐನ ನಿರ್ದೇಶಕನು ಹೊಂದಿದ್ದಾನೆ. ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿಯನ್ನು ಯಾವುದೇ ಬೇರೆ ಕಾರಣಗಳಿರದಿದ್ದರೂ ಭೇಟಿಯಾಗುವುದು ತನಿಖೆಯ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುವುದು ಮೇಲ್ನೋಟಕ್ಕೆ ತೋರುತ್ತದೆ. ಇದು ಕೇಂದ್ರಿಯ ತನಿಖಾ ಸಂಸ್ಥೆಯ ಸಮಗ್ರತೆಯ ಮೇಲೆ ಮುಖ್ಯಸ್ಥನು ಮಾಡಿರುವ ಅಸಮ್ಮತದ ಪ್ರಭಾವ ಎನಿಸಿಕೊಳ್ಳುತ್ತದೆ. ಹೀಗಾಗಿ ಈ ಘಟನೆಯ ಕುರಿತು ನಿರ್ದೇಶಕನು ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ. ಇಲ್ಲವಾದರೆ ಸರ್ಕಾರ ಅಥವಾ ನ್ಯಾಯಾಲಯವು ಈ ಘಟನೆಯ ತನಿಖೆಗಾಗಿ ವಿಚಾರಣಾ ಆಯೋಗವನ್ನು ನೇಮಿಸಬೇಕು. ಅಂತಹ ವಿಚಾರಣಾ ಆಯೋಗದಿಂದ ಸ್ವತಂತ್ರ ತನಿಖೆಯಾಗಬೇಕು. ಒಂದು ವೇಳೆ ನಿರ್ದೇಶಕರನ್ನು ಆ ವ್ಯಕ್ತಿಯು ಭೇಟಿಯಾಗಿರುವುದು ನಿಜವೇ ಆಗಿದ್ದರೆ ಭೇಟಿಯ ಉದ್ದೇಶ ಮತ್ತು ಕಾರಣದ ಸತ್ಯಾಸತ್ಯತೆ ತಿಳಿದು ಬರುತ್ತದೆ.

ಸಿಬಿಐನ ನಿರ್ದೇಶಕ ಅಂತಹ ಆರೋಪಿಯನ್ನು ಭೇಟಿಯಾಗಿರುವುದರ ಕುರಿತು ಪ್ರಶ್ನೆಗಳಿಗೆ ಅಸ್ತಿತ್ವದಲ್ಲಿರುವ ಉಪಬಂಧಗಳ ಅನುಸಾರ ಸಮರ್ಥನೆಗಳನ್ನು ನೀಡಬಹುದಾಗಿದೆ. ಹೊಸ ಸರ್ಕಾರವು ಸಾರ್ವಜನಿಕ ಸೇವಕರಲ್ಲಿ ರಾಜಕೀಯ ತಟಸ್ಥತೆ, ಪ್ರಾಮಾಣಿಕತೆ, ನಿಷ್ಪಕ್ಷಪಾತತೆ ಮತ್ತು ಉನ್ನತ ನೈತಿಕ ಮೌಲ್ಯಗಳನ್ನು ಕಾಪಾಡಲು ನೀತಿ–ಸಂಹಿತೆಗಳನ್ನು ಪರಿಷ್ಕರಿಸಿದೆ. ತಿದ್ದುಪಡಿ ಮಾಡಲಾದ ನಿಯಮಗಳಲ್ಲಿ ಅಖಿಲ ಭಾರತ ಸೇವೆಗಳಾದ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಸಾರ್ವಜನಿಕರಿಗೆ ವಿನಯಶೀಲರಾಗಿರಬೇಕು ಮತ್ತು ಸಂವೇದನಾಶೀಲರಾಗಿರಬೇಕು ಎಂಬ ಅಂಶಗಳಿವೆ. ತಮ್ಮ ಕಾರ್ಯ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಕಾಯ್ದುಕೊಂಡು ಹೋಗಬೇಕು. ಅಲ್ಲದೆ ದುರ್ಬಲ ವರ್ಗಗಳ ಬಗ್ಗೆ ಅನುಕಂಪದಿಂದ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿವೆ. ಅಖಿಲ ಭಾರತ ಸೇವೆಗಳ (ನಡತೆ) ತಿದ್ದುಪಡಿ ನಿಯಮ 2014ರ ಪ್ರಕಾರ ಪ್ರತಿಯೊಬ್ಬ ನಾಗರಿಕ ಸೇವಕನು ಯೋಗ್ಯತೆ ಮತ್ತು ಸಾರ್ವಜನಿಕ ಹಿತಾಸಕ್ತಿ ಅನುಸಾರ ನಿರ್ಧಾರಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ಸಂಪನ್ಮೂಲಗಳನ್ನು ಸರಿಯಾಗಿ, ಪರಿಣಾಮಕಾರಿಯಾಗಿ ಮತ್ತು ಆರ್ಥಿಕವಾಗಿ ಬಳಸಿಕೊಳ್ಳಬೇಕು ಎಂದು ತಿಳಿಸುತ್ತದೆ.

ಇಂತಹ ಸನ್ನಿವೇಶಗಳಲ್ಲಿ ಈ ರೀತಿಯಾಗಿ ನಿರ್ದೇಶಕನು ಭೇಟಿಯಾಗುವುದು ನಾಗರಿಕ ಸೇವಕರ ನೈತಿಕ ವರ್ತನೆ ಮತ್ತು ನಿಷ್ಪಕ್ಷಪಾತದ ಬಗ್ಗೆ ಸ್ಪಷ್ಟವಾಗಿ ಪ್ರಶ್ನೆಗಳು ಉದ್ಭವಿಸುತ್ತವೆ. ಮತ್ತೊಂದು ದೃಷ್ಟಿಯಲ್ಲಿ ಸಿಬಿಐನ ನಿರ್ದೇಶಕನು ಸಾರ್ವಜನಿಕ ಅಧಿಕಾರಿಯಾಗಿರುವುದರಿಂದ, ಆತನನ್ನು ಭೇಟಿಯಾಗಲು ಪ್ರತಿಯೊಬ್ಬ ನಾಗರಿಕರಿಗೆ ಇರುವ ಹಕ್ಕುಗಳಂತೆ, ಆರೋಪಿ ಎಂದು ಕರೆಯಿಸಿಕೊಳ್ಳುವ ವ್ಯಕ್ತಿಗೂ ಕೂಡಾ ಹಕ್ಕು ಇದೆ. ಆದರೆ ಆರೋಪಿಯ ಮನೆಯಲ್ಲಿ ಭೇಟಿಯು ಪ್ರಕರಣದ ಕುರಿತು ಸಂಕಟ, ತನಿಖೆಯ ಕುರಿತು ಅತೃಪ್ತಿಗೆ ಸಂಬಂಧಿಸಿದಾಗಿರಬಹುದು. ಆದರೆ ನಾಗರಿಕ ಸೇವೆಯ ಸಂಹಿತೆಯ ಪ್ರಕಾರ ಅಂತಹ ಭೇಟಿಗಳು ಅಧಿಕೃತವಾಗಿ ಕಛೇರಿಯಲ್ಲಿ ಆಗಬೇಕು ವಿನಹ ಮನೆಯಲ್ಲಿ ಅಲ್ಲ. ಆದರೆ ಈ ಪ್ರಕರಣದಲ್ಲಿ ನಿರ್ದೇಶಕ ಸೇವಾ ನೀತಿ ಸಂಹಿತೆಗಳನ್ನು ಉಲ್ಲಂಘಿಸಿ ತನ್ನ ಸ್ಥಾನವನ್ನು ದುರ್ಬಳಕೆ ಮಾಡಿರುವುದು ಕಂಡು ಬರುತ್ತದೆ.

ನೀತಿ–ಸಂಹಿತೆಗಳನ್ನು ಸಾರ್ವಜನಿಕ ಅಧಿಕಾರಿಗಳಿಗೆ ಹೊಣೆಗಾರಿಕೆ ಹೆಚ್ಚುವಂತೆ ಮಾಡುವಂತಿರಬೇಕು. ಸರ್ಕಾರವು ಈ ನಿಟ್ಟಿನಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ರಾಜ್ಯದ ರಕ್ಷಣೆ, ವೈಜ್ಞಾನಿಕ, ಆರ್ಥಿಕ ಮುಂತಾದ ಮಾಹಿತಿಗಳನ್ನು ಅಧಿಕಾರಿಗಳು ತಮ್ಮ ಸ್ನೇಹಿತರಿಗೆ ಅಥವಾ ವಿದೇಶದ ವ್ಯಕ್ತಿಗಳಿಗೆ ಸೋರಿಕೆಯಾಗದಂತೆ ತಡೆಯಬೇಕು. ಸಾರ್ವಜನಿಕ ಸೇವಕರು ಸಂವಿಧಾನ ಬದ್ಧವಾಗಿ ಕಾರ್ಯನಿರ್ವಹಿಸಿ ದೇಶದ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯಬೇಕು. ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ, ವಸ್ತುನಿಷ್ಠವಾಗಿ ಸೇವೆ ಸಲ್ಲಿಸಬೇಕು. ಬಡವರ ಮತ್ತು ಶೋಷಿತರ ಬಗ್ಗೆ ಅನುಕಂಪ ಹೊಂದಿದವರಾಗಬೇಕು. ಆಡಳಿತದಲ್ಲಿ ಶಿಸ್ತನ್ನು ಕಾಯ್ದುಕೊಂಡು ಕಾನೂನುಗಳು ಜಾರಿಯಲ್ಲಿರುವಂತೆ ನೋಡಿಕೊಳ್ಳಬೇಕು. ಸಾರ್ವಜನಿಕ ಸೇವೆಯಲ್ಲಿ ಸಮಗ್ರತೆಯನ್ನು ಕಾಪಾಡಿಕೊಂಡು ಹೋಗಬೇಕು. ಇಂತಹ ಮೌಲ್ಯಗಳು ಪಾಲಿಸದಿದ್ದರೆ ದೇಶದ ರಕ್ಷಣೆ, ಆರ್ಥಿಕ ವ್ಯವಸ್ಥೆಗೆ ದಕ್ಕೆಯಾಗುವ ಸಂಭವವಿರುತ್ತದೆ. ಈ ಮೌಲ್ಯಗಳನ್ನು ಪಾಲಿಸಿದ ಅಧಿಕಾರಿಗಳಿಗೆ ಸರ್ಕಾರವು ಸೂಕ್ತ ಶಿಕ್ಷೆಯನ್ನು ನೀಡಬೇಕು.

## ಪ್ರಕರಣ ಅಧ್ಯಯನ – 6

ನೀವು ಭಾರತೀಯ ರೈಲ್ವೆ ಇಲಾಖೆಯ ಸಂಕೇತ (Signal) ವಿಭಾಗದಲ್ಲಿ ವಿಭಾಗೀಯ ಅಭಿಯಂತರರಾಗಿ ಸೇವೆ ಸಲ್ಲಿಸುತ್ತಿದ್ದರು. ನಿಮ್ಮ ವಿಭಾಗದ ವ್ಯಾಪ್ತಿಯಲ್ಲಿ ರೈಲ್ವೆಗಳ ಮಧ್ಯೆ ಡಿಕ್ಕಿ ಸಂಭವಿಸಿ, ಭೀಕರ ಅಪಘಾತವಾಗಿ ಸುಮಾರು 100 ಜನರು ಸಾವಿಗೀಡಾಗಿದ್ದಾರೆ. ಮಾಧ್ಯಮಗಳ ವರದಿಯ ಪ್ರಕಾರ ಈ ಅಪಘಾತವು ಸಂಭವಿಸಲು ಕಾರಣ ತಪ್ಪು ಸಂಕೇತ ರವಾನೆಯಾಗಿದೆ. ತಪ್ಪು ಸಂಕೇತದಿಂದ ಟ್ರ್ಯಾಕ್ ಮೇಲೆ ಎರಡು ರೈಲುಗಳು ಪರಸ್ಪರ ವಿರುದದ ಚಲಿಸಿ ಅಪಘಾತ ಸಂಭವಿಸಿದೆ. ಈ ಅಪಘಾತವು ವಿಭಾಗದ ಸಿಬ್ಬಂದಿಗಳ ನಿರ್ಲಕ್ಷದಿಂದ ಉಂಟಾಗಿದೆ. ಸರ್ಕಾರವು ಈ ಅಪಘಾತದ ಕುರಿತು ತನಿಖೆ ನಡೆಸಿ, ವರದಿ ಒಪ್ಪಿಸಲು ಒಂದು ಸಮಿತಿಯನ್ನು ರಚಿಸಿದೆ. ನಿಮ್ಮನ್ನು ಆ ಸಮಿತಿಯ ಮುಖ್ಯಸ್ಥನನ್ನಾಗಿ ನೇಮಕ ಮಾಡಲಾಗಿದೆ. ನೀವು ತನಿಖೆ ಕೈಗೊಂಡಾಗ 'ಎ' ಎಂಬ ಸ್ಟೇಷನ್ ಮಾಸ್ಟರ್‌ನ ಸಂಪೂರ್ಣ ನಿರ್ಲಕ್ಷ್ಯವು, ಈ ಅಪಘಾತ ಸಂಭವಿಸಲು ಕಾರಣ ಎಂಬ ವಿಷಯ ತಿಳಿಯುತ್ತದೆ. ಆತ ಕಛೇರಿಯ ಕೆಲಸದ ವೇಳೆಯಲ್ಲಿ ತನ್ನ ವೈಯಕ್ತಿಕ ಕೆಲಸಕ್ಕೆ ಹೋಗಿರುವುದರಿಂದ, ತಪ್ಪು ಸಂಕೇತ ರವಾನೆಯಾಗಿದೆ. ಆದರೆ ಆ 'ಎ' ಎಂಬ ಸ್ಟೇಷನ್ ಮಾಸ್ಟರ್ ನಿಮ್ಮ ವಿಭಾಗದ ಪ್ರಧಾನ ವ್ಯವಸ್ಥಾಪಕರ (GM) ಆತ್ಮೀಯ ಸಂಬಂಧಿಯಾಗಿದ್ದಾರೆ. ಆ ಪ್ರಧಾನ ವ್ಯವಸ್ಥಾಪಕರು ನಿಮ್ಮ ತನಿಖಾ ವರದಿಯನ್ನು ಬದಲಾಯಿಸುವಂತೆ ನಿಮ್ಮ ಮೇಲೆ ಸತತ ಒತ್ತಡ ಹಾಕುತ್ತಿದ್ದಾರೆ. ನೀವು ಮುಂದಿನ ತಿಂಗಳ ರೈಲ್ವೇ ವಿಭಾಗೀಯ ವ್ಯವಸ್ಥಾಪಕ (DRM)ರಾಗಿ ಬಡ್ತಿಯನ್ನು ಹೊಂದುವವರಿದ್ದೀರಿ. ನೀವು ಆ ಬಡ್ತಿಯನ್ನು ಹೊಂದಬೇಕಾದರೆ ಈ ತನಿಖಾ ವರದಿಯನ್ನು ಪ್ರಧಾನ ವ್ಯವಸ್ಥಾಪಕರು ಹೇಳಿದಂತೆ ಬದಲಾಯಿಸಬೇಕಾಗಿದೆ. ಸರ್ಕಾರವು ನಿಮ್ಮ ತನಿಖಾ ವರದಿಯನ್ನು ಒಪ್ಪಿಸಲು ನಿಗದಿ ಪಡಿಸಿದ ದಿನಾಂಕವು ಸಮೀಪಿಸುತ್ತಿದೆ. ನೀವು ಒಂದು ವೇಳೆ ನಿಗದಿತ ದಿನಾಂಕದೊಳಗೆ ವರದಿಯನ್ನು ಒಪ್ಪಿಸಲು ವಿಫಲವಾದರೆ, ನಿಮ್ಮ ಸೇವಾ ದಾಖಲಾತಿಗೆ ಮತ್ತು ಬಡ್ತಿಗೆ ಪರಿಣಾಮ ಬೀರಲಿದೆ.

ಈ ಸಮಸ್ಯೆಯನ್ನು ಸೌಹಾರ್ದಯುತವಾಗಿ ಪರಿಹರಿಸಲು ನೀವು ಯಾವ ರೀತಿಯ ಕ್ರಮವನ್ನು ಕೈಗೊಳ್ಳುತ್ತೀರಿ?

**ಮಾದರಿ ಉತ್ತರ:**

ಈ ಸನ್ನಿವೇಶದಲ್ಲಿ ವಿಭಾಗೀಯ ಅಭಿಯಂತ್ರಕರು ನೈತಿಕ ಸಂದಿಗ್ಧತೆಯನ್ನು ಎದುರಿಸುವಂತಾಗಿದೆ. ಒಂದು ಕಡೆ ತನ್ನ ವೃತ್ತಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವ ಅನಿವಾರ್ಯತೆ, ಮತ್ತೊಂದು ಕಡೆ ತಾನು ಪ್ರಮುಖ ಹುದ್ದೆಗೆ ಬಡ್ತಿಯನ್ನು ಹೊಂದುವ ಸಲುವಾಗಿ ತನಿಖಾ ವರದಿಯನ್ನು ತಿದ್ದುವ ಅನಿವಾರ್ಯತೆ ಉಂಟಾಗಿದೆ. ಈ ಸನ್ನಿವೇಶವು ಸಾರ್ವಜನಿಕ ಸೇವಕನ ಸಮಗ್ರತೆ, ನೈತಿಕತೆ, ಸೇವಾ ಸಮರ್ಪಣಾ ಭಾವ ಮತ್ತು ರಾಷ್ಟ್ರೀಯ ಹಿತಾಸಕ್ತಿಯನ್ನು ರಕ್ಷಿಸಲು ತನ್ನ ವೈಯಕ್ತಿಕ ಲಾಭಗಳನ್ನು ತ್ಯಾಗ ಮಾಡುವುದರ ಕುರಿತು ಪ್ರಶ್ನೆಗಳು ಉದ್ಭವಿಸುವಂತೆ ಮಾಡಿದೆ.

**ಈ ಮೇಲಿನ ಪ್ರಕರಣವು ಕೆಳಗಿನ ವಿಷಯಗಳಡಿಯಲ್ಲಿ ಬರುತ್ತದೆ.**

* ನೈತಿಕ ಸಂದಿಗ್ದತೆ
* ಆಡಳಿತದಲ್ಲಿ ಋಜುತ್ವ
* ಹೊಣೆಗಾರಿಕೆ
* ವೃತ್ತಿ ಸಂಸ್ಕೃತಿ
* ಸಾರ್ವಜನಿಕ ಸೇವೆಯ ಮೌಲ್ಯಗಳು

ನಾಗರಿಕ ಸೇವಕನಿಗೆ ಸಮಗ್ರತೆ ಮತ್ತು ಪ್ರಾಮಾಣಿಕತೆಯಿಂದ ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ಆಡಳಿತ ನಡೆಸಲು ಬೇಕಾದ ಪ್ರಮುಖ ಗುಣಗಳಾಗಿವೆ. ಈ ಪ್ರಕರಣದಲ್ಲಿ ಭೀಕರ ಅಪಘಾತ ಸಂಭವಿಸಿ ಜನರು ಸಾವಿಗೀಡಾಗಿರುವುದರಿಂದ ವೈಯಕ್ತಿಕ ಜವಾಬ್ದಾರಿಯನ್ನು ಸಂಬಂಧ ಪಟ್ಟವರು ತೆಗೆದುಕೊಳ್ಳುವ ಅವಶ್ಯಕತೆಯಿದೆ. ತನಿಖೆ ನಡೆಸಿ ತಪ್ಪುಗಳನ್ನು ಪತ್ತೆ ಹಚ್ಚಲು ಪ್ರಯತ್ನಿಸುತ್ತಿರುವವರು ಅಭಿಯಂತರರ ಮೇಲೆ ಒತ್ತಡ ಹಾಕುವುದು ತನಿಖೆಗೆ ಅಡಚಣೆಯುಂಟಾಗುತ್ತಿದೆ.

ಈ ಮೇಲಿನ ಪ್ರಕರಣದಲ್ಲಿ ವಿಭಾಗೀಯ ಅಭಿಯಂತಕರು ನೈತಿಕ ಸಂದಿಗ್ದತೆಯನ್ನು ಎದುರಿಸುತ್ತಿದ್ದಾರೆ. ಭಾರತೀಯ ರೈಲ್ವೆ ಕಾಯ್ದೆ–1989ರ ಪ್ರಕಾರ ವಿಭಾಗೀಯ ರೈಲ್ವೆ ವ್ಯವಸ್ಥಾಪಕನು ವಿಭಾಗದ ಮುಖ್ಯಸ್ಥನಾಗಿ ಮೂರು ವರ್ಷಗಳ ಅವಧಿಯವರೆಗೆ ನೇಮಕಗೊಂಡಿರುತ್ತಾನೆ. ಪ್ರತಿಯೊಂದು ವಿಭಾಗವು ವಲಯಗಳ (Zone) ವ್ಯಾಪ್ತಿಯಲ್ಲಿ ಬರುತ್ತದೆ. ವಿವಿಧ ವಿಭಾಗಗಳ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ವಲಯಗಳಡಿಯಲ್ಲಿ ಸೇವೆ ಸಲ್ಲಿಸಬೇಕಾಗಿದೆ. ವಲಯಗಳಿಗೆ ಪ್ರಧಾನ ವ್ಯವಸ್ಥಾಪಕರು (General Manager) ಮುಖ್ಯಸ್ಥರಾಗಿರುತ್ತಾರೆ. ಆದ್ದರಿಂದ ಪ್ರಧಾನ ವ್ಯವಸ್ಥಾಪಕರು ರೈಲ್ವೆ ಆಡಳಿತದಲ್ಲಿ ಮುಖ್ಯವಾದ ಸ್ಥಾನವನ್ನು ಹೊಂದಿದ್ದಾರೆ. ಈ ಮೇಲಿನ ಪ್ರಕರಣದಲ್ಲಿ ಪ್ರಧಾನ ವ್ಯವಸ್ಥಾಪಕರು ಕೂಡ ಅಸಮಂಜಸ ವರದಿಯ ಮೂಲಕ ವಿಭಾಗೀಯ ವ್ಯವಸ್ಥಾಪಕರನ್ನು ನೇಮಿಸಿರುವ ಸಾಧ್ಯತೆ ಇದೆ. ಒಂದು ವೇಳೆ ಅಭಿಯಂತಕರು ಸರಿಯಾದ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದರೆ, ಮೇಲಾಧಿಕಾರಿಗಳಿಂದ 'ಎ' ವ್ಯಕ್ತಿಯ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ. ಅಲ್ಲದೆ ಆ ವ್ಯಕ್ತಿಯ ಬಡ್ತಿಯು ತಪ್ಪುತ್ತದೆ. ಮತ್ತು ಸೇವಾ ದಾಖಲಾತಿಯ ಮೇಲೆ ಋಣಾತ್ಮಕ ಪರಿಣಾಮ ಬೀರಿದಂತಾಗುತ್ತದೆ. ವಿಭಾಗೀಯ ವ್ಯವಸ್ಥಾಪಕನ ಅನುಸಾರ ನಡೆದುಕೊಂಡರೆ ತಮ್ಮ ಬಡ್ತಿಯನ್ನು ಪಡೆದು ತಮ್ಮ ವೈಯಕ್ತಿಕ ಲಾಭವನ್ನು ಗಳಿಸುತ್ತಾರೆ. ಆದರೆ ಅವರು ಸಾರ್ವಜನಿಕ ಸೇವಾ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಇಂತಹ ಸನ್ನಿವೇಶದಲ್ಲಿ ಅವರು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

* ಪ್ರಥಮ ಹೆಜ್ಜೆಯಾಗಿ ವಿಭಾಗೀಯ ಅಭಿಯಂತಕರು ಪ್ರಧಾನ ವ್ಯವಸ್ಥಾಪಕ ಮತ್ತು ವಿಭಾಗೀಯ ವ್ಯವಸ್ಥಾಪಕರಿಗೆ ಮನವರಿಕೆ ಮಾಡಬೇಕು. ಸಂಬಂಧಪಟ್ಟ ವ್ಯಕ್ತಿಗೆ ಜವಾಬ್ದಾರಿ ಹೊರಿಸಿ ಶಿಕ್ಷೆಯನ್ನು ಕೊಡದಿದ್ದರೆ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಹೆಚ್ಚಾಗಿ ಸಂಭವಿಸುತ್ತವೆ ಮತ್ತು ಇದು ಸಾರ್ವಜನಿಕ ಜೀವನ ಹಾನಿಯಂತೆ ಗಂಭೀರ ಪ್ರಕರಣವಾಗಿದೆ ಎಂದು ಆ ಅಧಿಕಾರಿಗಳಿಗೆ ತಿಳಿಸಲು ಪ್ರಯತ್ನಿಸಬೇಕು. ವರದಿಯನ್ನು ತಿದ್ದುವುದರಿಂದ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲವೆಂದು ತಿಳಿಸಿ, ಅವರು ಮೌಖಿಕ ಆಜ್ಞೆ ಅಥವಾ ಒತ್ತಡವನ್ನು ಪಾಲಿಸಬಾರದು.

* ಅದೇ ವೇಳೆಯಲ್ಲಿ ವಿಭಾಗೀಯ ಅಭಿಯಂತಕ ತನ್ನ ವೃತ್ತಿಗೆ ಬದ್ದನಾಗಿ ಸರಿಯಾದ ಮತ್ತು ಪ್ರಾಮಾಣಿಕವಾದ ವರದಿಯನ್ನು ಸಿದ್ದಪಡಿಸಬೇಕು. ಯಾವುದೇ ಬಾಹ್ಯ ಒತ್ತಡಗಳಿಗೆ ಮಣಿಯಬಾರದು.

* ರೈಲ್ವೆ ಮಂಡಳಿ ಕಾಯ್ದೆ–1905ರ ಪ್ರಕಾರ ಎಲ್ಲಾ ಅಧಿಕಾರಿಗಳು ಈ ರೈಲ್ವೆ ಮಂಡಳಿಯ ವಲಯ ಮತ್ತು ವಿಭಾಗೀಯ ಅಧಿಕಾರಿಗಳನ್ನು ಕಾರ್ಯ ನಿರ್ವಹಣೆಯನ್ನು ಪರಿಶೀಲಿಸಿ ನಿಯಂತ್ರಿಸುತ್ತದೆ. ಅದಕ್ಕಾಗಿ ವಿಭಾಗೀಯ ಅಭಿಯಂತಕನು ಈ ಒತ್ತಡ ತರುತ್ತಿರುವ ಅಧಿಕಾರಿಗಳ ಬಗ್ಗೆ ರೈಲ್ವೆ ಮಂಡಳಿಗೆ ತಿಳಿಸಬೇಕು. ಈ ಘಟನೆಯ ಸಂಪೂರ್ಣ ವಿವರವನ್ನು ರೈಲ್ವೆ ಮಂಡಳಿಗಳಿಗೆ ತಿಳಿಸಬೇಕು. ಆಗ ರೈಲ್ವೆ ಮಂಡಳಿಯು ವಲಯ ವ್ಯವಸ್ಥಾಪಕರ ಮತ್ತು ವಿಭಾಗೀಯ ವ್ಯವಸ್ಥಾಪಕರ ಮೇಲೆ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವ ಸಾಧ್ಯತೆಯಿರುತ್ತದೆ.

ವಿಭಾಗೀಯ ಅಭಿಯಂತಕರು ತನಿಖೆ ಕೈಗೊಳ್ಳುವಾಗ 'ಎ' ಎಂಬ ಸ್ಟೇಷನ್ ಮಾಸ್ಟರ್‌ನಿಗೆ ಸ್ಪಷ್ಟೀಕರಣ ಕೊಡಲು ಅವಕಾಶ ಮಾಡಿಕೊಡಬೇಕು. ಸರ್ಕಾರಕ್ಕೆ ವರದಿಯನ್ನು ಒಪ್ಪಿಸುವುದಕ್ಕಿಂತ ಪೂರ್ವದಲ್ಲಿ ಘಟನೆಗೆ ಕಾರಣವಾದ ಅಂಶಗಳನ್ನು ಮತ್ತು 'ಎ' ವ್ಯಕ್ತಿಯ ನಿರ್ಲಕ್ಷದ ಅಂಶಗಳನ್ನು ಸರಿಯಾಗಿ ವರದಿಯಲ್ಲಿ ನಮೂದಿಸಬೇಕು. ಈ ರೀತಿಯಾಗಿ ವಿಭಾಗೀಯ ಅಭಿಯಂತಕರು ಕಾನೂನು ಬದ್ದವಾಗಿ ನಡೆದುಕೊಂಡು ನೈತಿಕ ಸಂದಿಗ್ದತೆಯಿಂದ ಪಾರಾಗಬೇಕು.

## ಪ್ರಕರಣ ಅಧ್ಯಾಯ – 7

ನೀವು ಬಾಗಲಕೋಟೆಯಲ್ಲಿ ಸಹಾಯಕ ಪೋಲೀಸ್ ಆಯುಕ್ತರಾಗಿ (ACP) ಸೇವೆ ಸಲ್ಲಿಸುತ್ತಿದ್ದೀರಿ. ಕೆಲವು ತಿಂಗಳಿನಿಂದ ಮಾದಕ ಪದಾರ್ಥಗಳ ಕಳ್ಳಸಾಗಣೆ, ಮಾರಾಟ ಮತ್ತು ವೇಶ್ಯಾವಾಟಿಕೆಯ ವಿಷಯಗಳಿಗೆ ಸಂಬಂಧಿಸಿದಂತೆ ನಿಮಗೆ ನಾಗರಿಕರಿಂದ ದೂರು ಬಂದಿರುತ್ತದೆ. ಈ ಅಕ್ರಮ ನಿಮ್ಮ ವ್ಯಾಪ್ತಿಯ ಪ್ರದೇಶದಲ್ಲಿ ನಡೆಯುತ್ತಿದೆ. ಈ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರು ವಿದೇಶ ವ್ಯಕ್ತಿಗಳೆಂಬ ಆಪಾದನೆ ಇದೆ. ಆ ವಿದೇಶಿ ವ್ಯಕ್ತಿಗಳ ಕೆಲಸದ ಮೇಲಿನ ವೀಸಾ ಪಡೆದುಕೊಂಡು ಊರಿನಲ್ಲಿ ವಾಸಿಸುತ್ತಿದ್ದಾರೆ. ಅವರು ಅಕ್ರಮ ವ್ಯವಹಾರಗಳಲ್ಲಿ ಭಾಗಿಯಾಗಿರುವ ಕುರಿತು ನಿಮಗೆ ಬಲವಾದ ಸಾಕ್ಷಿಗಳು ದೊರೆತಿಲ್ಲ. ಹೀಗಾಗಿ ಅವರನ್ನು ಬಂಧಿಸಲು ಅಥವಾ ಸೂಕ್ತ ಕ್ರಮ ಕೈಗೊಳ್ಳಲು ನಿಮ್ಮಿಂದ ಸಾಧ್ಯವಾಗುತ್ತಿಲ್ಲ.

ನೀವು ಒಂದು ದಿವಸ ಸಾಯಂಕಾಲ ಆ ಅಕ್ರಮ ನಡೆಯುವ ಸ್ಥಳಕ್ಕೆ ಅನಿರೀಕ್ಷಿತ ಭೇಟಿ ನೀಡಿದಾಗ, ಅಲ್ಲಿ ಸ್ಥಳೀಯ ಜನರು ತಮ್ಮ ಕ್ಷೇತ್ರದ ಶಾಸಕನೊಂದಿಗೆ ನಿಮ್ಮನ್ನು ಮುತ್ತಿಗೆ ಹಾಕಿ ನಿಲ್ಲುತ್ತಾರೆ. ಆ ಸ್ಥಳದ ಒಂದು ಮನೆಯಲ್ಲಿ ಒಬ್ಬ ವಿದೇಶಿ ಮಹಿಳೆ ವೇಶ್ಯಾವಾಟಿಕೆ ಮತ್ತು ಮಾದಕ ಪದಾರ್ಥಗಳ ವ್ಯವಹಾರವನ್ನು ಮಾಡುತ್ತಿದ್ದಾಳೆ. ಆದ್ದರಿಂದ ಆಕೆಯ ಮನೆಯ ಮೇಲೆ ತಕ್ಷಣ ದಾಳಿ ಮಾಡಿ ಆಕೆಯನ್ನು ಬಂಧಿಸಬೇಕು ಎಂದು ಸ್ಥಳೀಯ ಶಾಸಕ ಮತ್ತು ಜನರು ನಿಮ್ಮ ಮೇಲೆ ಒತ್ತಡ ಹೇರುತ್ತಾರೆ. ಆದರೆ ಕಾನೂನು ಸೂರ್ಯಾಸ್ತದ ನಂತರ ಯಾವುದೇ ಮಹಿಳೆಯನ್ನು ಬಂಧಿಸಬಾರದು ಎಂದು ಹೇಳುತ್ತದೆ.

* ಈ ಸನ್ನಿವೇಶವನ್ನು ವಿಶ್ಲೇಷಿಸಿರಿ ಮತ್ತು ಅಂತಹ ಸಂದರ್ಭದಲ್ಲಿ ನೀವು ಯಾವ ಕ್ರಮವನ್ನು ಕೈಗೊಳ್ಳುತ್ತೀರಿ ಎಂಬುದರ ಕುರಿತು ಬರೆಯಿರಿ.

**ಮಾದರಿ ಉತ್ತರ:**

ಸಹಾಯಕ ಪೋಲೀಸ್ ಆಯುಕ್ತ (ACP)ನು ಉತ್ತಮ ಆಯ್ಕೆ ಮಾಡಿಕೊಳ್ಳುವ ಸಂದಿಗ್ದ ಪರಿಸ್ಥಿತಿಯಲ್ಲಿದ್ದಾನೆ. ಆತ ಕಾನೂನು ಪ್ರಕಾರ ನಡೆದುಕೊಂಡರೆ ಅಪರಾಧಿಯು ತಪ್ಪಿಸಿಕೊಳ್ಳುವ ಸಾಧ್ಯತೆಯಿದೆ. ಒಂದು ವೇಳೆ ಸ್ಥಳೀಯ ಶಾಸಕ ಮತ್ತು ಜನರ ಒತ್ತಡಕ್ಕೆ ಮಣಿದು ನಡೆದುಕೊಂಡರೆ ಕಾನೂನು ಉಲ್ಲಂಘಿಸಿದಂತಾಗುತ್ತದೆ. ನಮ್ಮ ಸಂವಿಧಾನ, ಭಾರತೀಯ ದಂಡ ಸಂಹಿತೆ (IPC) ಮತ್ತು ಅಪರಾಧ ದಂಡ ಸಂಹಿತೆ (CRPC)ಗಳು ಅಪರಾಧಿಗಳ ಶೋಧನೆ ಮತ್ತು ಬಂಧನ ಕುರಿತು ಸಾಕಷ್ಟು ವಿವರಗಳನ್ನು ಹೊಂದಿವೆ. ಸಂವಿಧಾನದ 21 ಮತ್ತು 22ನೇ ವಿಧಿಗಳು ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಬಂಧನದ ವಿಷಯದ ಕುರಿತಾಗಿವೆ. ಬಂಧನಕ್ಕೆ ಸಂಬಂಧಿಸಿದಂತೆ ಇತರ ಕಾನೂನಾತ್ಮಕ ಉಪಬಂಧಗಳು ಈ ಕೆಳಗಿನಂತಿವೆ.

ಪ್ರಥಮ ಮಾಹಿತಿಯ ವರದಿಯನ್ನು (FIR) ದಾಖಲಿಸದೆ ಯಾವುದೇ ಮಹಿಳೆಯನ್ನು ಬಂಧಿಸುವಂತಿಲ್ಲ ಮತ್ತು ಠಾಣೆಗೆ ಕರೆದುಕೊಂಡು ಬಂದು ಪ್ರಶ್ನೆಗಳನ್ನು ಕೇಳುವಂತಿಲ್ಲ ಎಂದು ಅಪರಾಧ ಪ್ರಕ್ರಿಯೆ ಸಂಹಿತೆ (CRPC)ಯ 160ನೇ ಪರಿಚ್ಛೇದ ಹೇಳುತ್ತದೆ.

ಮಹಿಳೆಯರನ್ನು ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯಕ್ಕಿಂತ ಪೂರ್ವದಲ್ಲಿ ಬಂಧಿಸುವಂತಿಲ್ಲ. ಬಂಧಿಸಬೇಕಾದರೆ ನ್ಯಾಯಾಧೀಶರ ಅನುಮತಿ ಪಡೆಯಬೇಕು. ಮಹಿಳೆಯರನ್ನು ಬಂಧಿಸುವಾಗ ಅವರ ಜೊತೆ ಮಹಿಳಾ ಪೋಲೀಸರು ಇರಬೇಕು.

ಲೈಂಗಿಕ ಅಕ್ರಮಗಳಿಗೆ ಸಂಬಂಧಿಸಿದ ಹೊಸ ಕಾನೂನು ಅಪರಾಧ ಪ್ರಕ್ರಿಯೆ ಸಂಹಿತೆಗೆ 1660 ಪರಿಚ್ಛೇದಕ್ಕೆ ಅವಕಾಶ ಮಾಡಿಕೊಟ್ಟು ಪೋಲೀಸರ ಹೊಣೆಗಾರಿಕೆಯನ್ನು ಹೆಚ್ಚಿಸಿದೆ. ಅಪರಾಧ ಪ್ರಕ್ರಿಯೆ ಸಂಹಿತೆಗೆ ಪರಿಚ್ಛೇದ 97ರ ಪ್ರಕಾರ (ACP)ಯು ಸರ್ಚ್ ವಾರಂಟ್ ಇಲ್ಲದೆ ಆ ಮಹಿಳೆಯ ಮನೆಯ ಮೇಲೆ ದಾಳಿ ಮಾಡುವುದು ಕಾನೂನಿನ ಉಲ್ಲಂಘನೆಯಾಗುತ್ತದೆ.

ವಿದೇಶಿ ವ್ಯಕ್ತಿಗಳನ್ನು ವೇಶ್ಯಾವಾಟಿಕೆ ಮತ್ತು ಮಾದಕ ಪದಾರ್ಥಗಳ ಕಳ್ಳಸಾಗಣೆ ಮತ್ತು ಮಾನವ ಕಳ್ಳಸಾಗಣೆಗೆ ಸಂಬಂಧಿಸಿದ ವಿಷಯಗಳಲ್ಲಿ ಬಂಧಿಸಬೇಕಾದರೆ ಅಂತರರಾಷ್ಟ್ರೀಯ ಒಪ್ಪಂದಗಳ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ಪೋಲೀಸರು ಬಂಧಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಇಲಾಖೆ, ವಿದೇಶಾಂಗ ಇಲಾಖೆಗಳಿಗೆ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ವಿದೇಶಿ ವ್ಯಕ್ತಿಗಳನ್ನು ಇಂತಹ ಅಪರಾಧಗಳಲ್ಲಿ ಬಂಧಿಸುವ ಕುರಿತು 2012ರಲ್ಲಿ ಕೇಂದ್ರ ಗೃಹ ಇಲಾಖೆಯ ಸಲಹೆಗಳನ್ನು ನೀಡಿದೆ. ಅದರ ಪ್ರಕಾರ ಅಪರಾಧಗಳಲ್ಲಿ ಭಾಗಿಯಾದ ವ್ಯಕ್ತಿಗಳ ಬಗ್ಗೆ ಸಂಬಂಧಪಟ್ಟ ದೇಶಗಳ ರಾಯಭಾರಿಗಳಿಗೆ ಸಂಪರ್ಕಿಸಿ ಮಾಹಿತಿಯನ್ನು ಒದಗಿಸಬೇಕು. ಹೀಗಾಗಿ ಅವರನ್ನು ಭಾರತದ ಕಾನೂನು ಪ್ರಕಾರ ಬಂಧಿಸಿ, ವೈದ್ಯಕೀಯ ಪರೀಕ್ಷೆಗಳನ್ನು ನಡೆಸುವಂತಿಲ್ಲ.

ಆ ಸನ್ನಿವೇಶದಲ್ಲಿ ACPಯು ವಿದೇಶಿ ಮಹಿಳೆಯ ಮನೆಯ ಮೇಲೆ ದಾಳಿ ಮಾಡಿ ಬಂಧಿಸಿದರೆ ಅದು ಕಾನೂನಿನ ಸ್ಪಷ್ಟ ಉಲ್ಲಂಘನೆ ಎನಿಸಿಕೊಳ್ಳುತ್ತದೆ. ಅಲ್ಲದೆ ಮೂಲಭೂತ ಮಾನವ ಹಕ್ಕುಗಳ ಉಲ್ಲಂಘನೆ ಎನಿಸಿಕೊಳ್ಳುತ್ತದೆ. ಸ್ಥಳೀಯ ಶಾಸಕ ಮತ್ತು ಜನರು ಮಾಡಿದ ಆಪಾದನೆ ನಿಜವಿದ್ದರೆ, ಅವರ ಮಾತನ್ನೇ ನಂಬಿ ACPಯು ಆ ಮಹಿಳೆಯನ್ನು ಬಂಧಿಸಿದ್ದೇ ಆಗಿದ್ದಲ್ಲಿ ಮುಂದೆ ಆತ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗಿತ್ತು. ಅಲ್ಲದೆ ಅಲ್ಲಿ ನೆಲೆಸಿದ ವಿದೇಶಿ ಸಮುದಾಯಗಳಲ್ಲಿ ಪೋಲೀಸರ ಬಗ್ಗೆ ತಪ್ಪು ಭಾವನೆಗಳು ಮೂಡುತ್ತಿದ್ದವು. ಅದು ACPಯು ಆ ಮಹಿಳೆಯ ಮೇಲೆ ಮಾಡಿದ ಶೋಷಣೆ ಎನಿಸಿಕೊಳ್ಳುತ್ತಿತ್ತು. ಈ ಘಟನೆಯು ಅಂತರಾಷ್ಟ್ರೀಯ ಸುದ್ದಿಯಾಗಿ ವಿದೇಶಗಳಿಂದ ಖಂಡನೆಗಳು ವಯಕ್ತವಾಗುತ್ತಿದ್ದವು. ಆ ಮಹಿಳೆಯ ತವರು ದೇಶದ ವಿದೇಶಾಂಗದ ಸಂಬಂಧದ ಮೇಲೆ ಪರಿಣಾಮ ಬೀರುತ್ತಿತ್ತು. ಭಾರತದ ಬಗ್ಗೆ ವಿಶ್ವ ಸಮುದಾಯಕ್ಕೆ ತಪ್ಪು ಭಾವನೆಗಳು ಬರುತ್ತಿದ್ದವು. ಇದು ದೇಶದ ಗೌರವ ಮತ್ತು ಪ್ರತಿಷ್ಠೆಗೆ ದಕ್ಕೆಯನ್ನು ತರುವ ಸನ್ನಿವೇಶ ನಿರ್ಮಾಣವಾಗುವ ಸಾಧ್ಯತೆ ಇರುತ್ತಿತ್ತು.

ಈ ಕಡೆ ACPಯು ಸ್ಥಳೀಯ ಜನ ಮತ್ತು ಶಾಸಕನ ಮಾತು ಕೇಳದಿದ್ದರೆ, ಅವನ ಬಗ್ಗೆ ಜನರಲ್ಲಿ ಅಸಮಾಧಾನ ಉಂಟಾಗುತ್ತಿತ್ತು. ಏಕೆಂದರೆ ಈ ವಿಷಯಗಳ ಕುರಿತು ಈಗಾಗಲೇ ಅವರು ಹಲವು ದೂರುಗಳನ್ನು ನೀಡಿದ್ದಾರೆ. ಇದರಿಂದ ಜನರು ಕ್ರೋಧಗೊಂಡು ತಾವೇ ಸ್ವತ: ಆ ಮಹಿಳೆಯ ಮನೆಯ ಮೇಲೆ ಶಾಸಕನ ಜೊತೆ ಸೇರಿ ದಾಳಿ ಮಾಡುವ ಸಾಧ್ಯತೆ ಇತ್ತು. ಹೀಗೆ ACPಯು ಅವರ ಮನವಿಯನ್ನು ಒಪ್ಪಿಕೊಳ್ಳದಿದ್ದರೆ ಅಲ್ಲಿ ಅಶಾಂತಿ ಮತ್ತು ಕಾನೂನು ಉಲ್ಲಂಘನೆಯ ಕೃತ್ಯಗಳು ಜರುಗುವ ಸಾಧ್ಯತೆ ಕೂಡ ಇರುತ್ತಿತ್ತು. ಅಲ್ಲದೆ ACPಯು ಆ ಆರೋಪಿ ಎಂದು ಹೇಳಲಾದ ಮಹಿಳೆಯ ವಿರುದ್ದ ಪ್ರಬಲವಾದ ಸಾಕ್ಷಿಗಳನ್ನು ಸಂಗ್ರಹಿಸುವ ಅವಕಾಶಗಳನ್ನು ಕಳೆದುಕೊಂಡಂತಾಗುತ್ತಿತ್ತು.

ಆದ್ದರಿಂದ, ಈ ಸನ್ನಿವೇಶದಲ್ಲಿ ACPಯು ಈ ಕೆಳಗಿನ ಜಾಣ ಕ್ರಮಗಳ ಮೂಲಕ ಎಲ್ಲರಿಗೂ ಸಮಾಧಾನ ತರಬಹುದಾಗಿದೆ. ಅವುಗಳೆಂದರೆ,

* ACPಯು ಸ್ಥಳೀಯ ಶಾಸಕನು ಮತ್ತು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮನವರಿಕೆ ಮಾಡಿಕೊಡಬೇಕು. ಅವರಿಗೆ ಕಾನೂನುಗಳ ಬಗ್ಗೆ ಮಾಹಿತಿಯನ್ನು ಒದಗಿಸಬೇಕು. ಲಿಖಿತ ದೂರನ್ನು ಸ್ಥಳೀಯ ಪೋಲೀಸ್ ಠಾಣೆಗೆ ಕೊಡುವಂತೆ ತಿಳಿಸಬೇಕು. ತಾನು ಬೆಳಿಗ್ಗೆ ಸರ್ಚ್ ವಾರಂಟ್ ಪಡೆದ ನಂತರ ಆ ಮಹಿಳೆಯನ್ನು ಬಂಧಿಸುತ್ತೇನೆ ಎಂಬ ಭರವಸೆಯನ್ನು ಕೊಡಬೇಕು.

* ಆತ ಜನರ ಸಹಕಾರವನ್ನು ಕೋರಬೇಕು. ಆಪಾದಿತ ಮಹಿಳೆಯ ವಿರುದ್ದ ಕುಟುಕ ಕಾರ್ಯಾಚರಣೆ (Sting Operation) ಮಾಡಿ ಸಾಕ್ಷಿಯನ್ನು ಸಂಗ್ರಹಿಸಲು ತಿಳಿಸಬೇಕು. ಆ ಮನೆಯ ಸುತ್ತಮುತ್ತಲಿನ ಅಕ್ರಮ ವ್ಯವಹಾರಗಳ ಬಗ್ಗೆ ಕ್ಯಾಮಾರಾಗಳಲ್ಲಿ ದೃಶೀಕರಣ ಮಾಡಬೇಕೆಂದು ತಿಳಿಸಬೇಕು.

* ಆ ಮಹಿಳೆಯ ಮನೆಯನ್ನು ಶೋಧಿಸಿ, ಆ ಸ್ಥಳದ ಎಲ್ಲ ವಿದೇಶಿ ವ್ಯಕ್ತಿಗಳಿಗೆ ಪಾಸ್‌ಪೋರ್ಟನ್ನು ತೋರಿಸುವಂತೆ ಆದೇಶ ಹೊರಡಿಸಬೇಕು.

* ಇಬ್ಬರು ಪೋಲೀಸ್ ಪೇದೆಗಳನ್ನು ಆ ಮಹಿಳೆಯ ಮನೆಯ ಮುಂದೆ ಹೊರಗಡೆ ಕಾವಲಿಗೆ ನಿಲ್ಲಿಸಿ, ಯಾವುದೇ ವ್ಯಕ್ತಿ ಒಳಗೆ ಹೋಗುವ ಅಥವಾ ಹೊರಗೆ ಬರುವುದನ್ನು ತನಿಖೆ ಮಾಡಿಸಬೇಕು.

ACPಯು ಈ ಮೇಲಿನ ಕ್ರಮಗಳ ಮೂಲಕ ಅಲ್ಲಿನ ಅಕ್ರಮ ವ್ಯವಹಾರಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಆ ಸ್ಥಳದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಬಹುದಾಗಿದೆ.

## ಪ್ರಕರಣ ಅಧ್ಯಯನ – 8

ಮಹಾರಾಷ್ಟ್ರದ ನವ ನಿರ್ಮಾಣ ಸೇನೆಯ ಮುಖ್ಯಸ್ಥ ರಾಜ್ ಠಾಕ್ರೆ ತಮ್ಮ ಭಾಷಣದಲ್ಲಿ ರಸ್ತೆಗಳ ಸುಂಕವನ್ನು ವಿಧಿಸುವ ಟೋಲ್ ಭೂತಗಳ ಮೇಲೆ ದಾಳಿ ಮಾಡಿ ಎಂದು ತಮ್ಮ ಅನುಯಾಯಿಗಳಿಗೆ ಕರೆ ನೀಡಿದ್ದಾರೆ. ರಾಜ್ ಠಾಕ್ರೆಯವರು ರವಿವಾರ ನವಿ ಮುಂಬಯಿಯಲ್ಲಿ ಭಾಷಣದಲ್ಲಿ ಈ ಹೇಳಿಕೆಯನ್ನು ನೀಡಿದ್ದಾರೆ. ಹೀಗಾಗಿ ಅವರು ಅನುಯಾಯಿಗಳು ಮತ್ತು ಪಕ್ಷದ ಕಾರ್ಯಕರ್ತರು ಮಹಾರಾಷ್ಟ್ರ ರಾಜ್ಯದಾದ್ಯಂತ ಟೋಲ್ ಭೂತಗಳ ಮೇಲೆ ದಾಳಿ ಮಾಡಿದ್ದಾರೆ. ಸೋಮವಾರ ಸಾಯಂಕಾಲ ಸುಮಾರು 104 ಮಹಾರಾಷ್ಟ್ರದ ನವ ನಿರ್ಮಾಣ ಸೇನೆಯ ಕಾರ್ಯಕರ್ತರನ್ನು ಪೋಲೀಸರು ಅಕ್ರಮ ದಾಳಿ, ಗಲಭೆ, ಮತ್ತು ಕೊಳ್ಳೆಯದೂರಿನ ಆಧಾರದ ಮೇಲೆ ಬಂಧಿಸಿದ್ದಾರೆ. ಮುಂಬಯಿ, ನಾಸಿಕ್, ಔರಂಗಾಬಾದ್, ನಾಗಪುರ, ಪುಣೆ, ಕೊಲ್ಹಾಪುರ ಮತ್ತು ಸೋಲ್ಲಾಪುರ ನಗರಗಳ ಸುತ್ತಮುತ್ತ ಇಂತಹ ದಾಳಿಗಳು ಹೆಚ್ಚಾಗಿ ನಡೆದಿದೆ. ಹೀಗಾಗಿ ಪೋಲೀಸರು ಟೋಲ್ ಭೂತಗಳ ಭದ್ರತೆಯನ್ನು ಹೆಚ್ಚಿಸಿದ್ದಾರೆ. ಮಹಾರಾಷ್ಟ್ರ ರಾಜ್ಯ ಗೃಹ ಇಲಾಖೆಯು ರಾಜ್ ಠಾಕ್ರೆಯವರ ವಿರುದ್ಧ ಕ್ರಮಕೈಗೊಳ್ಳಲು ಕಾನೂನು ಅಭಿಪ್ರಾಯವನ್ನು ಪಡೆದು ಪರಿಶೀಲಿಸುತ್ತದೆ ಎಂದು ಮೂಲಗಳು ತಿಳಿಸಿವೆ. ಹಿಂಸೆಗೆ ಪ್ರಚೋದನೆ ನೀಡಿದ ಭಾಷಣದ ವಿವರವನ್ನು ಪೋಲೀಸರು ಪರಿಶೀಲಿಸಿದ್ದಾರೆ. ಉಪ ಮುಖ್ಯಮಂತ್ರಿಯಾದ ಅಜಿತ್ ಪವಾರ ಅವರು ಹಿಂಸೆಗೆ ಪ್ರಚೋದನೆ ನೀಡಿದ ವ್ಯಕ್ತಿಗಳ ವಿರುದ್ಧ ಕ್ರಮಕೈಗೊಳ್ಳುತ್ತವೆ ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ. ಅಲ್ಲದೆ ಈ ರಸ್ತೆ ಸುಂಕದ ಸಮಸ್ಯೆಯ ಕುರಿತು ಪರಿಶೀಲನೆ ಮಾಡಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಮತ್ತೆ ಈ ಕಡೆ ನಡೆಸಿದ ರಾಜ್ ಠಾಕ್ರೆಯವರು ತಮ್ಮ ಪಕ್ಷದ ಕಾರ್ಯಕರ್ತರಿಗೆ ಟೋಲ್ ಬೂತಗಳಿಗೆ ಒಂದೇ ಒಂದು ರೂಪಾಯಿಯನ್ನು ಕೊಡಬೇಡಿ. ಒಂದು ವೇಳೆ ಬೇಡಿಕೆ ಇಟ್ಟರೆ ಅಂತಹ ಟೋಲ್ ಬೂತಗಳನ್ನು ಧ್ವಂಸಗೊಳಿಸಿ ಎಂದಿದ್ದಾರೆ. ಈ ಸುದ್ದಿಯು ಜನವರಿ 28, 2014ರಂದು "ದಿ ಹಿಂದೂ" ಇಂಗ್ಲೀಷ್ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ.

**ಪ್ರಶ್ನೆ:**

ಒಬ್ಬ IPS ಅಧಿಕಾರಿಯು ದೇಶದ ಒಂದು ಮೆಟ್ರೋಪಾಲಿಟನ್ ನಗರದಲ್ಲಿ ಸಹಾಯಕ ಪೋಲೀಸ್ ಆಯುಕ್ತ (ACP)ರಾಗಿ ಸೇವೆ ಸಲ್ಲಿಸುತ್ತಿದ್ದಾನೆ. ಆ ನಗರದಲ್ಲಿ ಸಂಚಾರ ದಟ್ಟಣೆಯ ಆಡಳಿತದ ದೊಡ್ಡ ಸಮಸ್ಯೆಯಾಗಿತ್ತು. ತೀವ್ರಗತಿಯಲ್ಲಿ ಜನಸಂಖ್ಯೆಯ ಬೆಳವಣಿಗೆ ಮತ್ತು ಹೆಚ್ಚುತ್ತಿರುವ ವಾಣಿಜ್ಯ–ವ್ಯವಹಾರಗಳ ಚಟುವಟಿಕೆಗಳಿಂದ ನಗರದಲ್ಲಿ ರಸ್ತೆ ದಟ್ಟಣೆಯ ಸಮಸ್ಯೆ ಉಂಟಾಗಿತ್ತು. ಅದಕ್ಕಾಗಿ ಈ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ರಸ್ತೆಗಳನ್ನು ಸರಿ ಪಡಿಸಲು ರಾಜ್ಯ ಸರ್ಕಾರವು PPP ಮಾದರಿಯನ್ನು ಜಾರಿಗೆ ತಂದಿದೆ. ಅಂದರೆ ರಸ್ತೆಗಳನ್ನು ಸಾರ್ವಜನಿಕ ಮತ್ತು ಖಾಸಗಿ ಬಂಡವಾಳ ಮತ್ತು ಕೌಶಲ್ಯವನ್ನು ಸರ್ಕಾರ ಬಳಸಿಕೊಳ್ಳುತ್ತಿದೆ. ಹೀಗಾಗಿ ಈ ಮಾದರಿಯಲ್ಲಿ ಖಾಸಗಿ ಕಂಪನಿಗಳು ರಸ್ತೆಯ ಮೇಲಿನ ಪ್ರಯಾಣಿಕರಿಗೆ ಸುಂಕವನ್ನು ವಿಧಿಸುತ್ತದೆ.

ಆದರೆ, ಕೆಲವು ದಿನಗಳ ಹಿಂದೆ ಆ ಖಾಸಗಿ ಕಂಪನಿಗಳು ಸುಂಕವನ್ನು ಹೆಚ್ಚಿಸಿರುವುದರಿಂದ, ಸಾರ್ವಜನಿಕ ಪ್ರತಿಭಟನೆಗಳನ್ನು ಎದುರಿಸಿವೆ. ಆ ರಾಜ್ಯದ ಒಂದು ಪ್ರಾದೇಶಿಕ ಪಕ್ಷವು ಸ್ಥಳೀಯ ಜನರೊಂದಿಗೆ ಸೇರಿಕೊಂಡು ಟೋಲ್ ಬೂತಗಳ ಮೇಲೆ ದಾಳಿ ಮಾಡಿದೆ. ಆ ಟೋಲ್ ಬೂತಗಳು ACPಯ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ. ಇದರಿಂದಾಗಿ ಹಿಂಸೆ ಉಂಟಾಗಿ ಆಸ್ತಿಪಾಸ್ತಿಗೆ ಹಾನಿಯಾಗಿದೆ. ಜನರು ಕೂಡ ಟೋಲ್ ಬೂತಗಳ ವಿರುದ್ಧ ಕೆಂಡ ಕಾರುತ್ತಿದ್ದಾರೆ. ಅವರು ಈ ಸಂದರ್ಭದಲ್ಲಿ ಆ ಪ್ರಾದೇಶಿಕ ಪಕ್ಷವನ್ನು ಬೆಂಬಲಿಸುತ್ತಿದ್ದಾರೆ.

* ಈ ಮೇಲಿನ ಪ್ರಕರಣವನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಿರಿ. ಇಲ್ಲಿ ACPಯು ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ತಿಳಿಸಿರಿ.

ಈ ಮೇಲಿನ ಪ್ರಕರಣ ಕೆಳಗಿನ ವಿಷಯಗಳಡಿಯಲ್ಲಿ ಬರುತ್ತದೆ.

* ಕಾನೂನು ಉಲ್ಲಂಘನೆ
* ಮೂಲಭೂತ ಹಕ್ಕುಗಳ ಉಲ್ಲಂಘನೆ
* ನ್ಯಾಯ
* ಲೋಕಹಿತ ಅಥವಾ ಸರ್ವಹಿತ

**ಮಾದರಿ ಉತ್ತರ:**

ಈ ಪ್ರಕರಣದಲ್ಲಿ ಪೋಲೀಸ್ ಆಯುಕ್ತ ACPನು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಮತ್ತು ಅಪರಾಧಿಗಳನ್ನು ಬಂಧಿಸಿ ನ್ಯಾಯ ಒದಗಿಸುವ ಸಂದಿಗ್ದ ಸನ್ನಿವೇಶಕ್ಕೆ ಸಿಲುಕಿದ್ದಾನೆ. ಒಂದು ವೇಳೆ ಆ ಸಂಬಂಧಪಟ್ಟ ರಾಜಕೀಯ ಪಕ್ಷದ ವಿರುದ್ದ ಕ್ರಮಕೈಗೊಂಡರೆ ಮತ್ತಷ್ಟು ಹಿಂಸೆ, ಗಲಭೆಗಳು ಉಂಟಾಗಿ ಆ ಪ್ರದೇಶದಲ್ಲಿ ಕಾನೂನು ಉಲ್ಲಂಘಿಸಿ, ಹಿಂಸೆಯನ್ನು ಸಮರ್ಥಿಸಿದಂತಾಗುತ್ತದೆ. ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಈ ಹಿಂಸಾತ್ಮಕ ಪ್ರತಿಭಟನೆಗೆ ಕಾರಣ ಖಾಸಗಿ ಟೋಲ್ ಬೂತಗಳು ಅನಿಯಮಿತ ಸುಂಕ ವಿಧಿಸುವಿಕೆಯಾಗಿದೆ. ಪ್ರತಿಭಟನಾಕಾರರು ಸುಂಕ ವಿಧಿಸುವ ವಿಧಾನದಲ್ಲಿ ಪಾರದರ್ಶಕ ವ್ಯವಸ್ಥೆಯ ಅಳವಡಿಕೆಗೆ ಒತ್ತಾಯಿಸಿದ್ದಾರೆ. ಟೋಲ್ ಬೂತಗಳ ಅನೇಕ ಸಮಸ್ಯೆಗಳನ್ನು ತಮ್ಮ ಪ್ರತಿಭಟನೆಯಲ್ಲಿ ಎತ್ತಿ ತೋರಿಸಿದ್ದಾರೆ. ಆದರೂ PPP ಮಾದರಿಯ ವಿಧಾನದಿಂದ ಈ ರೀತಿಯ ರಸ್ತೆಯ ನಿರ್ಮಾಣದಿಂದ ಸಾರ್ವಜನಿಕರಿಗೆ ಹಲವಾರು ಪ್ರಯೋಜನಗಳಿವೆ. ಅವುಗಳೆಂದರೆ,

* ಸಂಚಾರ ದಟ್ಟನೆಯ ಸಮಸ್ಯೆ ನಿವಾರಣೆಯಾಗುತ್ತದೆ
* ಪ್ರಯಾಣಿಕರ ಸಮಯ ಉಳಿತಾಯವಾಗುತ್ತದೆ
* ಇಂಧನ ಉಳಿತಾಯವಾಗುತ್ತದೆ
* ಪರಿಸರ ಮಾಲಿನ್ಯ ಕಡಿಮೆಯಾಗುತ್ತದೆ
* ರಸ್ತೆ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತದೆ
* ದೇಶದ ಆರ್ಥಿಕ ಅಭಿವೃದ್ದಿಗೆ ಸಹಾಯವಾಗುತ್ತದೆ
* ಆಡಳಿತವು ಸುಗಮವಾಗಿ ಸಾಗಲು ನೆರವಾಗುತ್ತದೆ

ಮತ್ತೊಂದು ಕಡೆ ರಸ್ತೆ ನಿರ್ಮಾಣದ ಗುತ್ತಿಗೆದಾರರು ಟೋಲ್ ಬೂತಗಳ ಮೂಲಕ ಪ್ರಯಾಣಿಕರಿಂದ ಅವೈಜ್ಞಾನಿಕವಾಗಿ ಸುಂಕವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬ ಕೂಗು ಕೇಳಿಬರುತ್ತಿದೆ. ಅಲ್ಲದೆ ಪರಿಶೀಲನೆ ನಡೆಸಿದ CAGಯವರು ಟೋಲ್ ಬೂತಗಳು ಸುಂಕ ಸಂಗ್ರಹಿಸುವ ತಮ್ಮ ಅವಧಿ ಮುಗಿದರೂ ಕೂಡ ಪ್ರಯಾಣಿಕರಿಂದ ಸುಂಕವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಜೊತೆಗೆ ಸರ್ಕಾರವು ಆ ರಸ್ತೆಗಳಲ್ಲಿ ದಿನಕ್ಕೆ ಎಷ್ಟು ವಾಹನಗಳನ್ನು ಓಡಾಡುತ್ತವೆ ಎಂಬ ಮಾಹಿತಿಯನ್ನು ಮತ್ತು ಟೋಲ್ ಬೂತಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದರ ಬಗ್ಗೆ ಸರಿಯಾಗಿ ಪರಿಶೀಲನೆ ಮಾಡುತ್ತಿಲ್ಲ. ಸಂಗ್ರಹಿಸಿದ ಸುಂಕವನ್ನು ಪಾರದರ್ಶಕವಾಗಿ ರಸ್ತೆಗಳ ನಿರ್ವಹಣೆಗೆ ಬಳಸುತ್ತಿಲ್ಲ ಎಂಬ ಆಪಾದನೆ ಟೋಲ್ ಬೂತಗಳ ಮೇಲಿದೆ.

ಈ ಪ್ರಕರಣದಲ್ಲಿ ರಾಜ್ಯದ ಪ್ರಾದೇಶಿಕ ಪಕ್ಷವು ಕಾನೂನು ಕೈಗೆ ತೆಗೆದುಕೊಂಡು ಹಿಂಸೆಯ ಮೂಲಕ ಆಸ್ತಿಪಾಸ್ತಿಗೆ ಹಾನಿಯನ್ನುಂಟು ಮಾಡಿದೆ. ಈ ಘಟನೆಗೆ ಕಾರಣನಾದ ರಾಜಕೀಯ ಪಕ್ಷದ ವ್ಯಕ್ತಿಯನ್ನು ಭಾರತ ದಂಡ ಸಂಹಿತೆ IPC 103ರ ಪ್ರಕಾರ ಬಂಧಿಸಬಹುದಾಗಿದೆ.

ಈ ಘಟನೆಯನ್ನು ನಿಯಂತ್ರಿಸಲು ACPಗೆ ಮೂರು ಆಯ್ಕೆಗಳಿವೆ. ಅವುಗಳೆಂದರೆ,

* ಸಾರ್ವಜನಿಕ ಭಾವನೆಗಳನ್ನು ಗೌರವಿಸಲು ರಾಜಕೀಯ ಪಕ್ಷದ ವಿರುದ್ಧ ಯಾವುದೇ ಕ್ರಮಕೈಗೊಳ್ಳದೆ ಇರುವುದು.

* ಆ ರಾಜಕೀಯ ಪಕ್ಷದ ವಿರುದ್ಧ ವಿವಿಧ ವಿಧಿಗಳಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳುವುದು. ಆ ಮೂಲಕ ಕಾನೂನು ಉಲ್ಲಂಘಿಸುವ ಯಾವುದೇ ಪಕ್ಷ ಅಥವಾ ವ್ಯಕ್ತಿಯಾಗಲೀ ಕಾನೂನಿನ ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ಸಂದೇಶ ರವಾನಿಸುವುದು.

* ಆ ಪ್ರಾದೇಶಿಕ ಪಕ್ಷಕ್ಕೆ ನಷ್ಟ ಪರಿಹಾರವನ್ನು ತುಂಬಿಕೊಡುವಂತೆ ಆದೇಶಿಸುವುದು. ಭವಿಷ್ಯದಲ್ಲಿ ಇಂತಹ ಹಿಂಸಾತ್ಮಕ ಕೃತ್ಯಗಳನ್ನು ಮಾಡಿದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡುವುದು. ಈ ಘಟನೆಗೆ ಕಾರಣವಾದ ಅಂಶಗಳು ಮತ್ತು ಪರಿಹಾರದ ಮಾಹಿತಿಯನ್ನು ಒಳಗೊಂಡ ವರದಿಯನ್ನು ಗೃಹ ಇಲಾಖೆಗೆ ಕಳುಹಿಸುವುದು.

ಮೊದಲನೆಯ ಆಯ್ಕೆಯ ಪ್ರಕಾರ ಕ್ರಮಕೈಗೊಂಡರೆ ಆಡಳಿತದ ಬಗ್ಗೆ ಪ್ರಜ್ಞಾವಂತ ಜನರಲ್ಲಿ ಅಸಮಾಧಾನ ಉಂಟಾಗುತ್ತದೆ. ಹಿಂಸೆಯನ್ನು ಸಮರ್ಥಿಸಿದಂತಾಗುತ್ತದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ಇಲ್ಲದಂತಾಗುತ್ತದೆ. ಈ ಕ್ರಮದಿಂದ ಖಾಸಗಿ ಕಂಪನಿಗಳು ಸರ್ಕಾರದ ಯೋಜನೆಗಳಲ್ಲಿ ಹೂಡಿಕೆ ಮಾಡುವುದರಿಂದ ಹಿಂದೆ ಸರಿಯುತ್ತದೆ. ಆದ್ದರಿಂದ ದೇಶದ ಆರ್ಥಿಕ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ.

ಎರಡನೆಯ ಆಯ್ಕೆಯ ಕ್ರಮಕೈಗೊಂಡರೆ ಟೋಲ್ ಬೂತಗಳ ಬಗ್ಗೆ ಅಸಹನೆ ಹೊಂದಿದ ಜನರಲ್ಲಿ ಸರ್ಕಾರದ ಬಗ್ಗೆ ಅಸಮಾಧಾನ ಉಂಟಾಗುತ್ತದೆ. ಕಾನೂನುಗಳ ಮೂಲಭೂತ ಉದ್ದೇಶ ಜನರ ಕಲ್ಯಾಣವಾಗಿದೆ. ಸುಂಕದ ಬಗ್ಗೆ ಜನರಲ್ಲಿ ವಿರೋಧ ಭಾವನೆಯಿದೆ. ಅದಕ್ಕಾಗಿ ಅವರು ಸರ್ಕಾರದ ವಿರುದದ ಅಸಮಾಧಾನ ಹೊಂದಿದ್ದಾರೆ. ಈ ರೀತಿಯಾಗಿ ಸುಂಕದ ಸಮಸ್ಯೆಯನ್ನು ಪರಿಹರಿಸದೆ ಕಾನೂನಿನ ಮೂಲಕ ನೇರವಾಗಿ ಆ ಪಕ್ಷದ ಮೇಲೆ ಕ್ರಮಕೈಗೊಂಡರೆ ಜನರಿಗೆ ಸರ್ಕಾರದ ಮೇಲಿನ ವಿಶ್ವಾಸ ಮತ್ತು ನಂಬಿಕೆ ಹೋಗುತ್ತದೆ. ಪ್ರಾದೇಶಿಕ ಪಕ್ಷವು ಜನರ ಬೆಂಬಲವನ್ನು ಗಳಿಸಿಕೊಂಡು, ತನ್ನ ಮತಗಳನ್ನು ಭದ್ರಪಡಿಸಬಹುದು ಮತ್ತು ಜನಗಳ ಸಹನೆಯನ್ನು ಗಿಟ್ಟಿಸಿಕೊಳ್ಳಬಹುದು. ಇದು ಸಮಸ್ಯೆಗೆ ಪರಿಹಾರದ ಕ್ರಮವಲ್ಲ.

ಆದರೆ ರಾಜಕೀಯ ಪಕ್ಷಗಳು ಮತ್ತು ಜನರು ಸರ್ಕಾರದ ಯೋಜನೆ ಮತ್ತು ನೀತಿಗಳ ವಿರುದ್ಧ ಪ್ರತಿಭಟಿಸುವ ಹಕ್ಕು ಇದೆ. ಆದರೆ ಅದು ಹಿಂಸಾತ್ಮಕವಾಗಿರಬಾರದು. ಸಂವಿಧಾನದ 19(1) ವಿಧಿಯ ಪ್ರಕಾರ ದೇಶದ ಎಲ್ಲ ನಾಗರಿಕರಿಗೂ ಮಾತನಾಡುವ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಸ್ವಾತಂತ್ರವಿದೆ. 19(2) ವಿಧಿಯ ಸ್ವಾತಂತ್ರ ಹಕ್ಕು ಕೆಲವೊಂದು ನಿರ್ಬಂಧಗಳನ್ನು ಹೊಂದಿದೆ ಎಂದು ತಿಳಿಸುತ್ತದೆ. ಅದಕ್ಕಾಗಿ ಜನಗಳು ಮತ್ತು ಯಾವುದೇ ಸಂಘ ಸಂಸ್ಥೆಗಳ ನ್ಯಾಯಯುತವಾಗಿ, ಶಾಂತಿಯುತವಾಗಿ, ಕಾನೂನಾತ್ಮಕವಾಗಿ ಪ್ರತಿಭಟನೆಗಳನ್ನು ಮಾಡಬೇಕಾಗುತ್ತದೆ. ಈ ಮೇಲಿನ ಪ್ರಕರಣದಲ್ಲಿ ಆ ರಾಜಕೀಯ ಪಕ್ಷ ಮತ್ತು ಸ್ಥಳೀಯರು ಹಿಂಸಾತ್ಮಕ ಕೃತ್ಯಗಳ ಮೂಲಕ ಪ್ರತಿಭಟಿಸಿ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಅವರು ಕಾನೂನನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ.

ಆ ಮೂರನೆಯ ಆಯ್ಕೆಯು ಉಪಯುಕ್ತವಾದ ದೃಷ್ಟಿಯಲ್ಲಿ ಸರಿಯಾದ ಕ್ರಮ ಎನಿಸಿಕೊಳ್ಳುತ್ತಿದೆ. ಇದೇ ಲೋಕಹಿತದ ದೃಷ್ಟಿಯ ಕ್ರಮವಾಗಿದೆ. ನೈತಿಕ ಬೆಂಬಲವನ್ನು ಹೊಂದಿದೆ. ತಕ್ಷಣ ಪೋಲೀಸರು ಕಾರ್ಯಪ್ರವೃತ್ತರಾಗಿ ಮುಂದೆ ಇಂತಹ ಘಟನೆಯನ್ನು ನಡೆಸಿದರೆ ಉಗ್ರ ಶಿಕ್ಷೆಯನ್ನು ಕೊಡಲಾಗುವುದು ಎಂದು ಎಚ್ಚರಿಕೆ ನೀಡಬೇಕು. ACPಯೂ ಆ ಪ್ರದೇಶದಲ್ಲಿ ಶಾಂತಿಯನ್ನು ಮರಳಿ ಸ್ಥಾಪಿಸಬೇಕು.

ACPಯು ಆ ಪ್ರಾದೇಶಿಕ ಪಕ್ಷಕ್ಕೆ ಸರಿಯಾದ ಸೂಚನೆ ಮತ್ತು ಲೋಕೋಪಯೋಗಿ ಇಲಾಖೆಗಳಿಗೆ ಟೋಲ್ ಬೂತಗಳ ಸುಂಕದ ನೀತಿಯನ್ನು ಪರಿಶೀಲಿಸುವಂತೆ ಮನವಿಯ ಪತ್ರವನ್ನು ಕಳುಹಿಸಬೇಕು. ಮಾಧ್ಯಮಗಳ ಮುಖಾಂತರ ಭವಿಷ್ಯದಲ್ಲಿ ಇಂತಹ ಕೃತ್ಯಗಳನ್ನು ಮಾಡುವವರಿಗೆ ಉಗ್ರ ಶಿಕ್ಷೆಯನ್ನು ನೀಡಲಾಗುವುದು ಎಂದು ACPಯು ಜನರಿಗೆ ತಿಳಿಸಬೇಕು. ತಾತ್ಕಾಲಿಕವಾಗಿ ಟೋಲ್ ಬೂತಗಳಿಗೆ ಪೋಲೀಸ್ ಭದ್ರತೆಯನ್ನು ಮುಂದುವರೆಸಬೇಕು. ಆ ದೃಷ್ಟಿಯಲ್ಲಿ PPP ಮಾದರಿಯ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು.

**ಪ್ರಕರಣ ಅಧ್ಯಯನ – 9**

ನೀವು ಉತ್ತರಖಂಡ ರಾಜ್ಯದ ಒಂದು ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ನೇಮಕಗೊಂಡಿದ್ದೀರಿ. ಆ ರಾಜ್ಯವು ದೇಶದಲ್ಲಿಯೇ ಔಷಧ ಸಸ್ಯಗಳಿಗೆ ಹೆಸರುವಾಸಿಯಾಗಿದೆ. ಆ ಸಸ್ಯಗಳನ್ನು ಉಪಯೋಗಿಸಿಕೊಂಡು ಮನುಷ್ಯನ ಅನೇಕ ರೋಗಗಳನ್ನು ಗುಣಪಡಿಸುವ ಸ್ಥಳೀಯ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಹೀಗಾಗಿ ಆ ರಾಜ್ಯದ ಆರೋಗ್ಯ ಮಂತ್ರಿಯ ಈ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಯನ್ನು ಅಲೋಪತಿ ಚಿಕಿತ್ಸೆಯ ಪ್ರಕಾರದಂತೆ ಉಳಿಸಲು ಆದೇಶವನ್ನು ನೀಡಿದ್ದಾರೆ. ಹೀಗಾಗಿ ಎಲ್ಲೆಡೆ ಔಷಧದ ಸಸ್ಯಗಳ ಮೂಲಕ ಚಿಕಿತ್ಸೆ ನೀಡುವ ಸಾಂಪ್ರದಾಯಿಕ ವೈದ್ಯರು ಮುಕ್ತವಾಗಿ ಸರ್ಕಾರದ ಆದೇಶದ ಪ್ರೇರಣೆಯಿಂದ ಸೇವೆ ಸಲ್ಲಿಸಿದ್ದಾರೆ.

ಆದರೆ ಈ ಆದೇಶ ಬಂದ ನಂತರ ರಾಜ್ಯದಲ್ಲಿ ಒಂದು ಸಮಸ್ಯೆ ಸೃಷ್ಟಿಯಾಗಿದೆ. ನಕಲಿ ವೈದ್ಯರು ಸೃಷ್ಟಿಯಾಗಿ ಜನರನ್ನು ವಂಚಿಸಿದ್ದಾರೆ. ಈಗ ನಿಮ್ಮ ಜಿಲ್ಲೆಯಲ್ಲಿ ಅಂತಹ ನಕಲಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದು, ಜನರನ್ನು ವಂಚಿಸುತ್ತಿದ್ದಾರೆ. ಅವರಿಂದ ಜನರು ಹಣವನ್ನು ಕಳೆದುಕೊಂಡಿದ್ದಾರೆ. ಅವರ ಆರೋಗ್ಯದಲ್ಲಿ ಯಾವುದೇ ಸುಧಾರಣೆಗಳು ಕಂಡು ಬಂದಿಲ್ಲಾ. ಅವರು ಅಂತಹ ನಕಲಿ ವೈದ್ಯರುಗಳ ವಿರುದ್ಧ ಪೋಲೀಸರಿಗೆ ದೂರನ್ನು ಸಲ್ಲಿಸಿದ್ದಾರೆ.

ಈಗ ಜಿಲ್ಲೆಯ ಪೋಲೀಸರು ಇಂತಹ ಪ್ರಕರಣಗಳ ಕುರಿತು ನಿಮಗೆ ಮಾಹಿತಿಯನ್ನು ನೀಡಿದ್ದಾರೆ. ಜನರು ಈ ಸಾಂಪ್ರದಾಯಿಕ ಚಿಕಿತ್ಸೆಯ ಬಗ್ಗೆ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಆ ಚಿಕಿತ್ಸೆಯ ಬಗ್ಗೆ ಗೊಂದಲಗಳನ್ನು ಹೊಂದಿದವರಾಗಿದ್ದಾರೆ. ಸಾಮಾನ್ಯ ಜನರ ಆರೋಗ್ಯ ಮತ್ತಷ್ಟು ಹದಗೆಡುತ್ತಿದೆ.

* ಈಗ ನೀವು ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುತ್ತೀರಿ?

* ನಕಲಿ ವೈದ್ಯರನ್ನು ಹೇಗೆ ನಿಯಂತ್ರಿಸುವಿರಿ?

* ಆ ಸಾಂಪ್ರದಾಯಿಕ ಚಿಕಿತ್ಸೆಯ ಪದ್ಧತಿಯ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸಲು ನೀವು ಯಾವ ಯಾವ ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂಬುವುದನ್ನು ವಿವರಿಸಿರಿ.

* ಈ ಚಿಕಿತ್ಸಾ ಪದ್ಧತಿಯ ಪ್ರಯೋಜನೆಯನ್ನು ಹೆಚ್ಚಿಸುವಲ್ಲಿ ನೀವು ಏನು ಮಾಡುವಿರಿ?

**ಮಾದರಿ ಉತ್ತರ:**

ಈ ಮೇಲಿನ ಪ್ರಕರಣವು ಸಾಂದರ್ಭಿಕ ಸಂದಿಗ್ದತೆಯ ವಿಷಯದಡಿಯಲ್ಲಿ ಬರುತ್ತದೆ. ಜಿಲ್ಲಾದಿಕಾರಿ ಮಂತ್ರಿಯ ಆದೇಶವನ್ನು ಸರಿಯಾಗಿ ಜಾರಿಗೆ ತರುವ ಮತ್ತು ನಕಲಿ ವೈದ್ಯರನ್ನು ಪತ್ತೆ ಹಚ್ಚಿ ಶಿಕ್ಷಿಸುವ ಸಂದಿಗ್ದತೆಯಲ್ಲಿದ್ದಾರೆ. ವೈದ್ಯರಂತೆ ನಟನೆ ಮಾಡಿ ಜನರನ್ನು ವಂಚಿಸುತ್ತಿರುವ ನಕಲಿ ವೈದ್ಯರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದೊಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ. ಇದನ್ನು ಬೇರು ಸಮೇತ ಕಿತ್ತು ಹಾಕಲು ಸಾಧ್ಯವಾಗಿದಿದ್ದರೂ ಅದನ್ನು ಬಹುತೇಕ ತಡೆಯುವ ಪ್ರಯತ್ನವನ್ನು ಜಿಲ್ಲಾಧಿಕಾರಿಯು ಮಾಡಬೇಕಾಗಿದೆ. ಆ ಜಿಲ್ಲೆಯ ಗ್ರಾಮೀಣ ಮಟ್ಟದಲ್ಲಿ ವ್ಯಾಪಕವಾಗಿ ಈ ದಂಧೆ ನಡೆಯುತ್ತಿದೆ.

ವೈದ್ಯಕೀಯ ಜ್ಞಾನ ಸಾಮಾನ್ಯ ಜ್ಞಾನವಲ್ಲ. ಅದೊಂದು ಸೂಕ್ಷ್ಮ ವಿಜ್ಞಾನ. ಗಿಡ ಮೂಲಿಕೆಗಳಿಂದ ಚಿಕಿತ್ಸೆ ನೀಡುವ ಸಾಂಪ್ರದಾಯಿಕ ಚಿಕಿತ್ಸೆಯ ಪದ್ಧತಿಯು ತಂತ್ರದ ವಿಷಯವಾಗಿದೆ. ಇಲ್ಲಿಯವರೆಗೆ ಆಧುನಿಕ ವಿಜ್ಞಾನದಿಂದ ಈ ಪದ್ದತಿಗೆ ಅಧಿಕೃತ ಮನ್ನಣೆ ದೊರಕಿಲ್ಲ. ಈ ಚಿಕಿತ್ಸಾ ಪದ್ಧತಿ ವಿಧಾನದಲ್ಲಿ ಸರಿಯಾದ ಗುಣಮಟ್ಟವಿಲ್ಲ. ಅಲ್ಲಿ ಶುಚಿತ್ವವನ್ನು ಪಾಲಿಸುತ್ತಿಲ್ಲ ಎಂಬ ಅಭಿಪ್ರಾಯವಿದೆ. ಈ ಪದ್ಧತಿಯನ್ನು ವಿಜ್ಞಾನ ಪ್ರಯೋಗಗಳಿಂದ ಸಾಬೀತುಪಡಿಸಬೇಕಾಗಿದೆ.

ಅನಾದಿ ಕಾಲದಿಂದಲೂ ಆರೋಗ್ಯ ಮತ್ತು ರೋಗ ಸಮಾಜದ ಪ್ರಮುಖ ವಿಷಯಗಳಾಗಿವೆ. ದಿನ ನಿತ್ಯದ ಅವಶ್ಯಕತೆಗಳಾದ ಆಹಾರ, ನೀರು, ಭದ್ರತೆ ವಸತಿಯ ವಿಕಾಸದೊಂದಿಗೆ ಮಾನವನು ಅನಾರೋಗ್ಯವನ್ನು ಹೋಗಲಾಡಿಸುತ್ತಲೇ ಬಂದಿದ್ದಾನೆ. ಭಾರತದಲ್ಲಿ ಪುರೋಹಿತ ವರ್ಗದವರು ಪೂಜೆ ಪುನಸ್ಕಾರಗಳ ಜೊತೆಗೆ ಚಿಕಿತ್ಸೆ ನೀಡುವ ಕಾಯಕವನ್ನು ಪ್ರಾಚೀನ ಕಾಲದಿಂದಲೂ ನಡೆಸಿಕೊಂಡು ಬಂದಿದ್ದಾರೆ. ಈಗ ಕಾಲ ಬದಲಾಗಿದ್ದು

ವೈದ್ಯಕೀಯ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾಗಿವೆ. ಸಾಂಪ್ರದಾಯಿಕ ಚಿಕಿತ್ಸೆಯ ಪದ್ಧತಿಯಲ್ಲಿ ಆಧುನಿಕ ಅಲೋಪತಿ ಚಿಕಿತ್ಸಾ ಪದ್ಧತಿ ಹಲವಾರು ವ್ಯತ್ಯಾಸಗಳಿವೆ.

ಕೆಲವು ಸಾಂಪ್ರದಾಯಿಕ ವೈದ್ಯರು ಮೂಢನಂಬಿಕೆಗಳನ್ನು ಪಾಲಿಸುತ್ತಾ ಬಂದಿದ್ದಾರೆ. ಇಂತಹ ವೈದ್ಯಕೀಯ ಪದ್ಧತಿಯನ್ನು ನಂಬುವ ಜನರು ಕೂಡಾ ಸಮಾಜದಲ್ಲಿದ್ದಾರೆ. ಸಾಂಪ್ರದಾಯಿಕ ವೈದ್ಯರು ಯಾರು ಎಂದು ಸರಿಯಾಗಿ ಗುರುತಿಸುವ ವಿಧಾನದ ಕೊರತೆ ಸಮಾಜದಲ್ಲಿದೆ. ಏಕೆಂದರೆ ಹಲವರು ಹೊಟ್ಟೆ ಪಾಡಿಗಾಗಿ ದಂಧೆಯ ವೇಷವನ್ನು ಧರಿಸಿದ್ದಾರೆ. ಅಲೋಪತಿ ವೈದ್ಯಕೀಯ ಸೌಲಭ್ಯವಿರದ ಪ್ರದೇಶಗಳಲ್ಲಿ ಕೆಲವು ನಕಲಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಇತ್ತ ನಿಜವಾದ ಸಾಂಪ್ರದಾಯಿಕ ಪದ್ಧತಿಯು ಅಲ್ಲದೆ ಅತ್ತ ಅಲೋಪತಿ ಪದ್ಧತಿಯು ಅಲ್ಲದ ಚಿಕಿತ್ಸೆಯನ್ನು ಕೊಟ್ಟು, ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿದ್ದಾರೆ.

ಜಿಲ್ಲಧಿಕಾರಿಯು ನಕಲಿ ವೈದ್ಯರ ಪತ್ತೆಗಾಗಿ ವಿಶೇಷ ತಂಡವನ್ನು ರಚಿಸಬೇಕು. ಅಂತಹ ವೈದ್ಯರನ್ನು ಪತ್ತೆ ಹಚ್ಚಿ ಸೂಕ್ತ ಶಿಕ್ಷೆಯನ್ನು ನೀಡಬೇಕು. ಜನರಿಗೆ ಮಾದ್ಯಮಗಳ ಮೂಲಕ ಅಥವಾ ಖುದ್ದಾಗಿ ಸಭೆಗಳನ್ನು ನಡೆಸುವ ಮೂಲಕ ವೈದ್ಯರುಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಸಾಂಪ್ರದಾಯಿಕ ಚಿಕಿತ್ಸಾ ವಿಧಾನದ ರೂಪುರೇಷೆಗಳನ್ನು ತಿಳಿದುಕೊಂಡು ವಿವೇಚನಾಧಿಕಾರವನ್ನು ಯಾರು ನಿಜವಾದ ವೈದ್ಯರು ಎಂದು ಗುರ್ತಿಸಿ ಅಂತಹ ಸಾಂಪ್ರದಾಯಿಕ ವೈದ್ಯರಿಗೆ ಪ್ರಮಾಣ ಪತ್ರಗಳನ್ನು ನೀಡುವ ವ್ಯವಸ್ಥೆ ಮಾಡಬೇಕು. ಯಾವ ಯಾವ ರೋಗಗಳಿಗೆ ಯಾವ ಸಾಂಪ್ರದಾಯಿಕ ಚಿಕಿತ್ಸೆ ಉತ್ತಮವಾದದ್ದು ಎಂಬುದರ ಕುರಿತು ಪ್ರಸಿದ್ಧ ಸಾಂಪ್ರದಾಯಿಕ ವೈದ್ಯರುಗಳ ಮೂಲಕ ಜನರಲ್ಲಿ ತಿಳುವಳಿಕೆ ಮೂಡಿಸಬೇಕು. ಅಂತಹ ವೈದ್ಯರ ಹೆಸರಿನಲ್ಲಿ ಪಟ್ಟಿಯನ್ನು ಸಾರ್ವಜನಿಕ ಆಸ್ಪತ್ರೆಗಳ ಮುಂದೆ ಅಂಟಿಸಬೇಕು. ಸಾಂಪ್ರದಾಯಿಕ ಪದ್ಧತಿಯಲ್ಲಿ ಗುಣಮಟ್ಟವನ್ನು ಸುಧಾರಿಸಬೇಕು. ಆಗ ಜನರಿಗೆ ಆ ವೈದ್ಯಕೀಯ ಪದ್ಧತಿಯ ಮೇಲೆ ವಿಶ್ವಾಸ ಮೂಡುತ್ತದೆ. ಸಾಂಪ್ರದಾಯಿಕ ವೈದ್ಯಕೀಯ ಚಿಕಿತ್ಸೆ ನೀಡುವ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡಬೇಕು.

ಈ ಮೇಲಿನ ಕ್ರಮಗಳನ್ನು ಕೈಗೊಳ್ಳುವ ಮೂಲಕ ಜಿಲ್ಲಾಧಿಕಾರಿಯು ಮಂತ್ರಿಯ ಆದೇಶವನ್ನು ಪಾಲಿಸಬಹುದು ಮತ್ತು ಸಾಂಪ್ರದಾಯಿಕ ಗಿಡಮೂಲಿಕೆಗಳಿಂದ ನೀಡುವ ಚಿಕಿತ್ಸಾ ಪದ್ಧತಿಯನ್ನು ಸುಧಾರಿಸಿ ಅದರ ಮೇಲೆ ಜನರ ವಿಶ್ವಾಸವನ್ನು ಹೆಚ್ಚಿಸಬಹುದಾಗಿದೆ.

ಸಾಂಪ್ರದಾಯಿಕ ವೈದ್ಯರಿಗೆ ಪ್ರಮಾಣ ಪತ್ರಗಳನ್ನು ನೀಡುವ ವ್ಯವಸ್ಥೆ ಮಾಡಬೇಕು. ಯಾವ ಯಾವ ರೋಗಗಳಿಗೆ ಯಾವ ಸಾಂಪ್ರದಾಯಿಕ ಚಿಕಿತ್ಸೆ ಉತ್ತಮವಾದದ್ದು ಎಂಬುದರ ಕುರಿತು ಪ್ರಸಿದ್ಧ ಸಾಂಪ್ರದಾಯಿಕ ವೈದ್ಯರ ಮೂಲಕ ಜನರಲ್ಲಿ ತಿಳಿವಳಿಕೆ ಮೂಡಿಸಬೇಕು. ಅಂತಹ ವೈದ್ಯರ ಹೆಸರಿನ ಪಟ್ಟಿಯನ್ನು ಸಾರ್ವಜನಿಕ ಆಸ್ಪತ್ರೆಗಳ ಮುಂದೆ ಅಂಟಿಸಬೇಕು. ಸಾಂಪ್ರದಾಯಿಕ ಪದ್ಧತಿಯ ಮೇಲೆ ವಿಶ್ವಾಸ ಮೂಡುತ್ತದೆ. ಸಾಂಪ್ರದಾಯಿಕ ವೈದ್ಯಕೀಯ ಚಿಕಿತ್ಸೆ ನೀಡುವ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡಬೇಕು.

ಈ ಮೇಲಿನ ಕ್ರಮಗಳನ್ನು ಕೈಗೊಳ್ಳುವ ಮೂಲಕ ಜಿಲ್ಲಾಧಿಕಾರಿಯು ಮಂತ್ರಿಯ ಆದೇಶವನ್ನು ಪಾಲಿಸಬಹುದು ಮತ್ತು ಸಾಂಪ್ರದಾಯಿಕ ಗಿಡಮೂಲಿಕೆಗಳಿಂದ ನೀಡುವ ಚಿಕಿತ್ಸಾ ಪದ್ಧತಿಯನ್ನು ಸುಧಾರಿಸಿ ಅದರ ಮೇಲೆ ಜನರ ವಿಶ್ವಾಸವನ್ನು ಹೆಚ್ಚಿಸಬಹುದು.

## ಪ್ರಕರಣ ಅಧ್ಯಯನ – 10

ಶ್ರೀ X ಎಂಬುವರು ರಾಜ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ಸದಸ್ಯರಾಗಿರುತ್ತಾರೆ. ಈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ (MD)ರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತದೆ. ಕೈಗಾರಿಕೆಗಳ ಸ್ಥಾಪನೆಯಾಗಿ ನಿವೇಶನಗಳನ್ನು ಮಂಜೂರು ಮಾಡುವುದು ಈ ಸಂಸ್ಥೆಯ ಕಾರ್ಯವಾಗಿದೆ. ನಿವೇಶನಗಳ ಬೇಡಿಕೆಯು ಈಗ ತೀವ್ರವಾಗಿದೆ. ಈ ಸಂಸ್ಥೆಯ ಅಧ್ಯಕ್ಷನು ಪ್ರಭಾವಿ ರಾಜಕೀಯ ವ್ಯಕ್ತಿಯಾಗಿದ್ದಾರೆ. ಆತನು ಈ ಸಂದರ್ಭದ ಸದುಪಯೋಗ ಪಡಿಸಿಕೊಳ್ಳುವ ಹಂಬಲದಲ್ಲಿದ್ದಾನೆ. ದುರಾದೃಷ್ಟವಶಾತ್ ವ್ಯವಸ್ಥಾಪಕ ನಿರ್ದೇಶಕನು ಕೂಡ ಅಧ್ಯಕ್ಷನ ಜೊತೆ ಮೈತ್ರಿ ಬೆಳೆಸಿಕೊಳ್ಳುತ್ತಾನೆ. ಅವರಿಬ್ಬರು ಸೇರಿಕೊಂಡು ಭ್ರಷ್ಟಾಚಾರ ಮಾಡಲು ನಿರ್ಧರಿಸುತ್ತಾರೆ. ಈ ಕಾರಣಕ್ಕಾಗಿ ಅವರು ನಿವೇಶನಗಳ

ಹಂಚಿಕೆ ಕಾರ್ಯದಲ್ಲಿ ಅಪಾರದರ್ಶಕತೆಯ ವ್ಯವಸ್ಥೆಯನ್ನು ಅಳವಡಿಸುತ್ತಾರೆ. ತೋರಿಕೆಗೆ ಮಾತ್ರ ಪ್ರಥಮ ಬಂದವರಿಗೆ ಪ್ರಥಮ ಆದ್ಯತೆ ಎಂದು ನಿವೇಶನಗಳ ಹಂಚಿಕೆ ನಿಯಮವನ್ನು ಮಾಡುತ್ತಾರೆ. ಆದರೆ ನಿವೇಶನಗಳಿಗೆ ಸಲ್ಲಿಸುವ ಅರ್ಜಿಗಳ ದಾಖಲಾತಿಗಳಿಗೆ ಸರಿಯಾದ ದಿನಾಂಕ ಮತ್ತು ಸಮಯದ ಪಾವತಿ ನೀಡುವ ವ್ಯವಸ್ಥೆಯಿರುವುದಿಲ್ಲ. ಈ ಕೆಲಸಕ್ಕೆ ಅಕ್ರಮ ತಂತ್ರಾಂಶ ಒಳಗೊಂಡ ಗಣಕಯಂತ್ರಗಳನ್ನು ಬಳಸಿಕೊಳ್ಳುತ್ತಾರೆ. ಅಧ್ಯಕ್ಷನು ತನ್ನ ವಿವೇಚನಾಧಿಕಾರವನ್ನು ಬಳಸಿ ಶ್ರೀಮಂತ ಉದ್ಯಮಗಳಿಗೆ ಮಾತ್ರ ನಿವೇಶನಗಳನ್ನು ಮಾರಾಟ ಮಾಡಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಅಕ್ರಮ ಹಣವನ್ನು ಸಂಪಾದನೆ ಮಾಡುತ್ತಾರೆ. ಇವರ ಈ ರೀತಿಯ ಅಕ್ರಮ ಕಾರ್ಯದಿಂದಾಗಿ ನಿವೇಶನಗಳು ಕೈಗಾರಿಕಾ ವ್ಯಕ್ತಿಗಳಲ್ಲದವರ ಪಾಲಾಗುತ್ತವೆ. ಬಹಳಷ್ಟು ನಿವೇಶನಗಳು ಪ್ರಭಾವಿ ವ್ಯಕ್ತಿಗಳಲ್ಲದವರ ಪಾಲಾಗುತ್ತವೆ. ಬಹಳಷ್ಟು ನಿವೇಶನಗಳು ಅನುಮತಿ ನೀಡಿದ ಗಾತ್ರಕ್ಕಿಂತಲೂ ಹೆಚ್ಚಿನ ಗಾತ್ರದಾಗಿರುತ್ತವೆ. ಅಲ್ಲದೆ ನಿವೇಶನಗಳಿಗೆ ಸಲ್ಲಿಸದ ಅರ್ಜಿಗಳ ದಿನಾಂಕಗಳು ಮತ್ತು ಸರದಿಯ ದಾಖಲಾತಿಗಳು ವಿಶ್ವಾಸದಿಂದ ಕೂಡಿರುವುದಿಲ್ಲ ಅಥವಾ ವಿಶ್ವಾಸಾರ್ಹ ದಾಖಲಾತಿಗಳು ಲಭ್ಯವಿರುವುದಿಲ್ಲ. ಅನೇಕ ನಿವೇಶನ ಹಂಚಿಕೆಯನ್ನು ಮಂಡಳಿಯನ್ನು ಚರ್ಚಿಸದೆ ಮಾಡಲಾಗಿದೆ. ಮಂಡಳಿಯ ಸದಸ್ಯರಾದ ಶ್ರೀ Xರವರು ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸುತ್ತಾರೆ.

* ಇಂತಹ ಸನ್ನಿವೇಶದಲ್ಲಿ ಶ್ರೀ X ರವರು ಯಾವ ರೀತಿಯ ಕ್ರಮಗಳನ್ನು ಭ್ರಷ್ಟಾಚಾರವನ್ನು ಪರಿಶೀಲಿಸಲು ಮತ್ತು ನಿಯಂತ್ರಿಸಲು ಕೈಗೊಳ್ಳಬೇಕು?

ಈ ಮೇಲಿನ ಪ್ರಕರಣವು ಕೆಳಗಿನ ವಿಷಯಗಳಡಿಯಲ್ಲಿ ಬರುತ್ತದೆ.

* ಭ್ರಷ್ಟಾಚಾರದ ಸವಾಲುಗಳು
* ಪಾರದರ್ಶಕತೆ ಮತ್ತು ಹೊಣೆಗಾರಿಕೆ
* ನೈತಿಕತೆ
* ಸಾರ್ವಜನಿಕ ಆಡಳಿತದಲ್ಲಿ ನೈತಿಕ ವಿಷಯ

**ಮಾದರಿ ಉತ್ತರ:**

ಈ ಪ್ರಕರಣದಲ್ಲಿ ಸಂಸ್ಥೆಯ ಮೇಲಾಧಿಕಾರಿಗಳಿಬ್ಬರ ಅಪವಿತ್ರ ಮೈತ್ರಿಯನ್ನು ಹೊಂದಿರುವುದನ್ನು ಕಾಣಬಹುದು. ಈ ಪ್ರಕರಣವೇ ಇಬ್ಬರೂ ಅಧಿಕಾರಿಗಳು ತಮ್ಮ ಸ್ವಂತ ಲಾಭಕ್ಕಾಗಿ ಭ್ರಷ್ಟಾಚಾರವನ್ನು ಅಳವಡಿಸಿಕೊಂಡಿರುವ ವಿಷಯವನ್ನು ಒತ್ತಿ ಹೇಳುತ್ತದೆ. ಹೀಗಾಗಿ ಇಲ್ಲಿ ಈ ಅಧಿಕಾರಿಗಳ ಹೊಣೆಗಾರಿಕೆ ಮತ್ತು ಪಾರದರ್ಶಕತೆಯ ಕುರಿತು ಪ್ರಶ್ನೆಗಳು ಏಳುತ್ತವೆ. ಮೇಲಾಗಿ ಮಂಡಳಿಯ ಸದಸ್ಯನಾದ Xನ ನೈತಿಕ ಸಂದಿಗ್ದತೆಯನ್ನು ಈ ಪ್ರಕರಣವು ಎತ್ತಿ ತೋರಿಸುತ್ತದೆ. ಭ್ರಷ್ಟಾಚಾರ ಕಣ್ಣು ಮುಂದೆ ನಡೆಯುತ್ತಿದ್ದರೂ ಅಥವಾ ಸಂಸ್ಥೆಯ ಮೇಲಾಧಿಕಾರಿಗಳು ಭ್ರಷ್ಟಾಚಾರವನ್ನು ಮಾಡುತ್ತಿದ್ದರೂ ಆತ ನೇರವಾದ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.

ಕೈಗಾರಿಕಾ ಅಭಿವೃದ್ದಿ ನಿಗಮವು ರೈತರಿಂದ ಭೂಮಿಯನ್ನು ಕೊಂಡು ಕೈಗಾರಿಕಾ ಉದ್ದೇಶಗಳಿಗೆ ನಿವೇಶನಗಳಿಗೆ ಹಂಚಿಕೆ ಮಾಡುವ ಸಂಸ್ಥೆಯಾಗಿದೆ. ಕೈಗಾರಿಕಾ ಕಾರಿಡಾರ್‌ಗಳನ್ನು ನಿರ್ಮಾಣ ಮಾಡಲು ಆ ನಿವೇಶನಗಳ ಸ್ಥಳದಲ್ಲಿ ರಸ್ತೆ, ನೀರು ಪೂರೈಕೆ, ಚರಂಡಿ ವ್ಯವಸ್ಥೆ, ವಿದ್ಯುತ್, ತ್ಯಾಜ್ಯ ವಿಲೇವಾರಿ, ಸಾರಿಗೆ, ಬ್ಯಾಂಕ್ ಮುಂತಾದ ಮೂಲಭೂತ ಸಾಕರ್ಯಗಳನ್ನು ನಿರ್ಮಿಸುತ್ತದೆ. ಇಂತಹ ನಿವೇಶನಗಳ ಬೇಡಿಕೆ ಜಾಸ್ತಿಯಿರುತ್ತದೆ. ಆದರೆ ಪೂರೈಕೆ ಮಾತ್ರ ಕಡಿಮೆಯಿರುತ್ತದೆ. ಆದ್ದರಿಂದ ಇಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡುವ ಸನ್ನಿವೇಶ ಸೃಷ್ಟಿಯಾದಂತಾಗುತ್ತದೆ. ಈ ಪ್ರಕರಣದಲ್ಲಿಯೂ ಕೂಡ ನಿಗಮದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕನು ಅಪವಿತ್ರ ಮೈತ್ರಿ ಮಾಡಿಕೊಂಡು, ವೈಯಕ್ತಿಕ ಲಾಭವನ್ನು ಗಳಿಸಿದ್ದಾರೆ. ತಮ್ಮ ಸಂಸ್ಥೆಯಲ್ಲಿನ ಈ ಭ್ರಷ್ಟಾಚಾರದ ಬೆಳವಣಿಗೆಯನ್ನು ಮಂಡಳಿಯ ಸದಸ್ಯನಾದ Xನು ಗಮನಿಸುತ್ತಿದ್ದಾನೆ. ಆದರೆ ಆತನಿಗೆ ಸರಿಯಾದ ಸಾಕ್ಷಿಗಳು ಲಭ್ಯವಿರದ ಕಾರಣದಿಂದ ನೇರವಾಗಿ ಭ್ರಷ್ಟಾಚಾರ ತಡೆಯಲು ಅಸಮರ್ಥನಾಗಿದ್ದಾನೆ. ಸಾರ್ವಜನಿಕವಾಗಿ

ನಿವೇಶನಗಳನ್ನು ಹಂಚಿಕೆ ಮಾಡಲು ಬಯಸುವ ಮಂಡಳಿಯ ಸದಸ್ಯರನ್ನು ಲೆಕ್ಕಿಸದೆ ಈ ಇಬ್ಬರು ಮೇಲಾಧಿಕಾರಿಗಳು ತಮ್ಮ ಇಚ್ಛಾನುಸಾರವಾಗಿ ವರ್ತಿಸುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ Xನು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

* ಆತನು ಮೊದಲಿಗೆ ಮಂಡಳಿಯ ಎಲ್ಲ ಸದಸ್ಯರನ್ನು ಸಭೆಗೆ ಕರೆಯಬೇಕು. ಆ ಸಭೆಯಲ್ಲಿ ಈ ವಿಷಯದ ಬಗ್ಗೆ ಎಲ್ಲ ಸದಸ್ಯರೊಂದಿಗೆ ಚರ್ಚಿಸಬೇಕು. ಈ ಸಮಸ್ಯೆಯ ಪರಿಹಾರಕ್ಕೆ ಒಮ್ಮತದ ನಿರ್ಣಯವನ್ನು ಕೈಗೊಳ್ಳಬೇಕು.

* ಸಾಕ್ಷಿಗಳನ್ನು ಸಂಗ್ರಹಿಸಲು ಪ್ರಯತ್ನಿಸಬೇಕು. ಅದಕ್ಕಾಗಿ ಸದಸ್ಯರ ಜೊತೆ ಸೇರಿ ನಿವೇಶನಗಳಿಗೆ ಅರ್ಜಿ ಹಾಕಿದವರು, ನಿವೇಶನಗಳು ಮಂಜೂರಾಗದ ಅರ್ಜಿದಾರರನ್ನು ಭೇಟಿಯಾಗಬೇಕು. ಅವರಿಗೆ ನಿವೇಶನ ಹಂಚಿಕೆಯ ಪ್ರಕ್ರಿಯೆ ಮತ್ತು ನಿವೇಶನ ಹಂಚಿಕೆ ಮಾಡಿದ ವ್ಯಕ್ತಿಗಳ ವಿವರವನ್ನು ಆ ಮೇಲಾಧಿಕಾರಿಗಳಿಂದ ಪಡೆಯಲು ಮಾಹಿತಿ ಹಕ್ಕನ್ನು ಬಳಸಿಕೊಳ್ಳುವಂತೆ ತಿಳಿಸಬೇಕು.

* ಈ ಅರ್ಜಿದಾರರ ಸಹಾಯದಿಂದ Xನು ಈ ಭ್ರಷ್ಟಾಚಾರದ ಅಕ್ರಮವನ್ನು ಸಾಕ್ಷಿ ಸಮೇತ ಹೊರಗೆಳೆಯಬೇಕು.

* Xನು ಈ ವಿಷಯವನ್ನು ತಮ್ಮ ಇಲಾಖೆಯ ಅಥವಾ ಸಚಿವಾಲಯದ ಭ್ರಷ್ಟಾಚಾರ ನಿಗ್ರಹದ ಜಾಗೃತ ಅಧಿಕಾರಿಗಳಿಗೆ ತಿಳಿಸಿ, ಪರಿಶೀಲಿಸಲು ಶಿಫಾರಸ್ಸು ಮಾಡಬೇಕು.

* ಅದರ ಜೊತೆಗೆ Xನು ಈ ವಿಷಯವನ್ನು ಭ್ರಷ್ಟಾಚಾರ ನಿಗ್ರಹ ಪೋಲೀಸರಿಗೆ ತಿಳಿಸಬೇಕು. ಏಕೆಂದರೆ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು ಅಕ್ರಮ ವ್ಯವಹಾರದ ಗಳಿಕೆಯನ್ನು ನಗದು ರೂಪದಲ್ಲಿ ಮನೆಯಲ್ಲಿಟ್ಟಿರುವ ಸಾಧ್ಯತೆಯಿರುತ್ತದೆ. ಪೋಲೀಸರು ಕೂಡಲೇ ಅವರ ಮನೆಯ ಮೇಲೆ ದಾಳಿ ಮಾಡಿ ಆ ಹಣವನ್ನು ವಶಪಡಿಸಿಕೊಳ್ಳಲು ಸಹಾಯವಾಗುತ್ತದೆ.

* ಈ ಮೇಲಿನ ಎಲ್ಲ ಕ್ರಮಗಳ ನಂತರ Xನು ತನ್ನ ಮಂಡಳಿ ಇತರ ಸದಸ್ಯರೊಂದಿಗೆ ಆ ಸಮಿತಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರನ್ನು ಸೇವೆಯಿಂದ ಅಮಾನತುಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು.

* ಈ ರೀತಿಯಾದ ಅಕ್ರಮಗಳಲ್ಲಿ ಭಾಗಿಯಾಗುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತಹ ಅಧಿಕಾರವನ್ನು ಮಂಡಳಿಯ ಸದಸ್ಯರಿಗೆ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು.

* ನಿವೇಶನದ ಹಂಚಿಕೆಯ ವ್ಯವಸ್ಥೆ ಪಾರದರ್ಶಕವಾಗಿರಲು ಸೂಕ್ತ ಕಾನೂನು ರಚಿಸಿ ಜಾರಿಗೆ ತರಲು ಸರ್ಕಾರಕ್ಕೆ ಮನವಿ ಮಾಡಬೇಕು.

**ಸಂಭವನೀಯ ಪ್ರಕರಣ ಅಧ್ಯಯನಗಳ ಪ್ರಶ್ನೆಗಳು:**

1) ಶಂಕರ ಒಬ್ಬ ದಕ್ಷ ಸಹಾಯಕ ಆಯುಕ್ತರೆಂದು ಹೆಸರು ಮಾಡಿದ್ದು, ದೈವಿಕತೆಯಿಂದಲೂ ಅವರು ಬಹಳ ನಂಬಿಕೆ ಹೊಂದಿದ್ದಾರೆ. ದೇವರ ದಯೆಯಿಂದಲೂ ಮತ್ತು ಅವರ ಪ್ರಯತ್ನದಿಂದಲೂ ಅವರಿಗೆ ಅಧಿಕಾರ ಲಭಿಸಿದೆ ಎಂಬ ಅಪಾರ ನಂಬಿಕೆ ಇದೆ. ಈಗ ಅವರನ್ನು ಚಿಕ್ಕೊಡಿಗೆ ನಿಯೋಜನೆ ಮಾಡಲಾಗಿದೆ. ವಿದೇಶಿ ಎ.ಡಿ.ಬಿ ಬ್ಯಾಂಕ್ ನೆರವಿನಿಂದ 30 ಕಿ.ಮೀ ರಸ್ತೆ ಅಗಲೀಕರಣದ ಕಾರ್ಯವು ಅನುಷ್ಠಾನ ಮಾಡಲು ಅವರಿಗೆ ಆದೇಶವಾಗಿದೆ. ಅದಕ್ಕೆ ಎಲ್ಲಾ ಅಗತ್ಯತೆ ಪೂರೈಸಲು ಹಣಕಾಸಿನ ಅನುಮೋದನೆ ದೊರಕಿದೆ. ಹೀಗೆ ರಸ್ತೆ ಅಗಲೀಕರಿಸುವ ಕಾರ್ಯದಲ್ಲಿ ಒಂದು ಗ್ರಾಮದ ಲಕ್ಷ್ಮೀದೇವರ ಮಂದಿರ ರಸ್ತೆಯ ಪಕ್ಕದಲ್ಲಿದೆ. ಶಂಕರ ಲಕ್ಷ್ಮೀದೇವರ ಭಕ್ತ. ಈ ದೇವಸ್ಥಾನ ತೆರವುಗೊಳಿಸುವ ಆದೇಶ ಹೊರಡಿಸುವ ಹೊಣೆಯು ಅವರದು. ಈಗ ಅವರು ತೀರಾ ಸಂದಿಗ್ದತೆಯಲ್ಲಿ ಇದ್ದಾರೆ.

ಅ) ಅವರಿಗೆ ಮುಂದಿರುವ ಅವಕಾಶಗಳಾವುವು?

ಬ) ಅವರ ಮುಂದಿನ ನಡೆ ಸಾರ್ವಜನಿಕರ ಹಿತದೃಷ್ಟಿಯಿಂದ (ಗ್ರಾಮ ಜನತೆ ಮತ್ತು ಸಾರಿಗೆ) ಹೇಗಿರಬೇಕು?

ಕ) ಹೇಗೆ ಈ ಸನ್ನಿವೇಶ ಎದುರಿಸಬೇಕು?

ಡ) ಇಲ್ಲಿನ ನೈತಿಕ ಅಂಶಗಳಾವುವು?

2) ನೀವು ಒಬ್ಬ ದಂಡಾಧಿಕಾರಿಯಾಗಿ ಕಾರ್ಯ ನಿರ್ವಹಿಸುತೀರಿ. ಇನ್ನು ಮೂರು ತಿಂಗಳಲ್ಲಿ ಒಂದು ಮರು ಚುನಾವಣೆಯನ್ನು ನಿಭಾಯಿಸುವ ಹೊಣೆ ನಿಮ್ಮ ಹೆಗಲೇರಿದೆ. ನಿಮ್ಮ ಕಛೇರಿಯ ಚುನಾವಣಾ ವಿಭಾಗದಲ್ಲಿ 8 ಜನ, ಹಾಗೆಯೇ ಒಟ್ಟಾರೆ ನಿಮ್ಮ ಅಧೀನದಲ್ಲಿ 30 ಜನರು ಕಾರ್ಯನಿರತರಾಗಿದ್ದಾರೆ. ಈ ಚುನಾವಣೆಯು ಸುವ್ಯವಸ್ಥಿತವಾಗಿ ನಡೆಯಲು 50 ಜನ ಅಧಿಕಾರಿಗಳ ಅಗತ್ಯವಿದೆ. ಚುನಾವಣಾ ವಿಭಾಗದ 6 ಜನ, ಉಳಿದ ವಿಭಾಗದ 10 ಜನ ಕೆ.ಎ.ಎಸ್ ಪರೀಕ್ಷೆಗೆ ಎನ್.ಓ.ಸಿ ಪಡೆದಿದ್ದಾರೆ. ಅವರ ಜೀವನದ ಮುಖ್ಯ ಪರೀಕ್ಷೆಯು ಇನ್ನು ಮೂರು ತಿಂಗಳಲ್ಲಿ ನಿಶ್ಚಯವಾಗಿದೆ. ಅವರು ರಜೆಯ ಅರ್ಜಿ ಹಾಕಿದ್ದಾರೆ. ಈ ಜನರಲ್ಲಿ 4 ಜನ ಮಾತ್ರ ಪಾಸಾಗುವ ಲಕ್ಷಣಗಳಿವೆ. ಚುನಾವಣೆ ನಡೆಸಲು ನಿಮಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. (ನೀವು ಕೂಡ ಇಂತಹ ಸನ್ನಿವೇಶದಲ್ಲಿಯೇ ಪರೀಕ್ಷೆ ಎದುರಿಸಿ ಬಂದಿರುತ್ತೀರಿ).

ಅ) ನಿಮ್ಮ ಮುಂದಿರುವ ಆಯ್ಕೆಗಳಾವುವು?

ಬ) ಇಲ್ಲಿ ಎದುರಾಗಿರುವ ನೈತಿಕತೆಯ ಅಂಶಗಳು ಯಾವುವು?

ಕ) ಹೇಗೆ ಈ ಸನ್ನಿವೇಶವನ್ನು ಎದುರಿಸಬೇಕು?

3) ನೀವು ಬೆಳಗಾವಿ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಉಪನಿರ್ದೇಶಕರಾಗಿ (DDPI) ಕಾರ್ಯ ನಿರ್ವಹಿಸುತ್ತಿದ್ದೀರಿ. ಈ ಜಿಲ್ಲೆಯ ಒಂದು ಹಳ್ಳಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಧ್ಯಾಹ್ನದ ಬಿಸಿ ಊಟಕ್ಕೆ ಸಂಬಂಧಿಸಿದಂತೆ ಒಂದು ಸಮಸ್ಯೆ ಉದ್ಭವಿಸಿದೆ. ಶಾಲಾ ಆಡಳಿತ ಮಂಡಳಿಯ ಅಡುಗೆ ತಯಾರು ಮಾಡಲು ದಲಿತ ಮಹಿಳೆಯನ್ನು ನೇಮಕ ಮಾಡಿದೆ. ಅಲ್ಲಿನ ಸವರ್ಣೀಯ ಮಕ್ಕಳು ದಲಿತ ಮಹಿಳೆಯನ್ನು ಅಡುಗೆ ಸಹಾಯಕಿಯಾಗಿ ನೇಮಕ ಮಾಡಿದ್ದರಿಂದ ಶಾಲೆಯನ್ನು ಬಹಿಷ್ಕರಿಸಿದ್ದಾರೆ. ಶಾಲೆಯ ಮುಖ್ಯಸ್ಥರು ಮಕ್ಕಳನ್ನು ಮತ್ತು ಅವರ ಪೋಷಕರನ್ನು ಮನವೊಲಿಸಿದರೂ ಪ್ರಯೋಜನವಾಗಿಲ್ಲ. ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೆಲವು ವಿದ್ಯಾರ್ಥಿಗಳನ್ನು ಮನವೊಲಿಸಿ ಮಧ್ಯಾಹ್ನದ ಬಿಸಿ ಊಟಕ್ಕೆ ಕೂರಿಸಿದ್ದಾರೆ. ಈ ವಿಷಯವನ್ನು ತಿಳಿದ ಸವರ್ಣೀಯ ಜಾತಿಯ ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು ಸಹಪಂಕ್ತಿ ಭೋಜನದಿಂದ ಮೇಲಕ್ಕೆಬ್ಬಿಸಿ ಮನೆಗೆ ಕರೆದುಕೊಂಡು ಹೋಗಿದ್ದಾರೆ. ಈ ಶಾಲೆಯಲ್ಲಿ ರಾಜ್ಯದ ಮುಖ್ಯ ಮಂತ್ರಿಯವರು ವ್ಯಾಸಂಗ ಮಾಡಿರುವುದರಿಂದ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿದೆ. ಈ ವಿಷಯ ಮುಖ್ಯಮಂತ್ರಿಯವರಿಗೆ ಗೊತ್ತಾಗಿ, ಯಾವುದೇ ಕಾರಣಕ್ಕೆ ಪೋಲೀಸರ ಮಧ್ಯಸ್ಥಿಕೆಯಲ್ಲಿ ವಿವಾದವನ್ನು ಬಗೆಹರಿಸದಂತೆ, ಮಾತುಕತೆ ಮೂಲಕವೇ ಸವರ್ಣೀಯ ಪೋಷಕರನ್ನು ಮನವೊಲಿಸಿ ಸಮಸ್ಯೆ ಇತ್ಯರ್ಥಪಡಿಸುವಂತೆ ನಿಮಗೆ ಆದೇಶ ನೀಡಿದ್ದಾರೆ.

* ನೀವು ಮಾತುಕತೆಯ ಮೂಲಕ ಸವರ್ಣೀಯ ವಿದ್ಯಾರ್ಥಿಗಳ ಪೋಷಕರನ್ನು ಹೇಗೆ ಮನವೊಲಿಸುತ್ತೀರಿ?
* ಇಂತಹ ಬಿಕ್ಕಟ್ಟುಗಳನ್ನು ಭವಿಷ್ಯದಲ್ಲಿ ನಿಮ್ಮ ಜಿಲ್ಲೆಯ ಇತರ ಹಳ್ಳಿಗಳಲ್ಲಿ ಜರುಗದಂತೆ ಯಾವ ಕ್ರಮಕೈಗೊಳ್ಳುತ್ತೀರಿ?

4) ನೀವು ಪೋಲೀಸ್ ಉಪಅಧ್ಯಕ್ಷಕರಾಗಿ, ಹೊಸದಾಗಿ ರಚನೆಯಾದ ಅಥಣಿ ವಿಭಾಗಕ್ಕೆ ನೇಮಕಗೊಂಡಿದ್ದೀರಿ. ನಿಮ್ಮ ಜೊತೆಗೆ ಅಭ್ಯಸಿಸಿ, ಕೆ.ಎ.ಎಸ್ ಪರೀಕ್ಷೆಯಲ್ಲಿ ಯಶಸ್ವಿಯಾಗಿ, ಅಷ್ಟೇನೂ ಉತ್ತಮವಲ್ಲದ ಹುದ್ದೆಯನ್ನು ಗಳಿಸಿದ ನಿಮ್ಮ ಅತ್ಯಂತ ಆತ್ಮೀಯ ಗೆಳೆಯನ ಮದುವೆಯ ಆಮಂತ್ರಣ ಬಂದಿದೆ. ಮನೆಗೆ ಬಂದು ಕುದ್ದಾಗಿ ಆಮಂತ್ರಿಸಿದ್ದಾನೆ. (ಅವನೇ ನಿಮ್ಮ ಯಶಸ್ಸಿನ ರೂವಾರಿಯಾಗಿದ್ದಾನೆ). ಅವನ ಮದುವೆಯ ದಿನದಂದೇ ನಿಮ್ಮ ವಿಭಾಗದ ವ್ಯಾಪ್ತಿಯಲ್ಲಿ ಆಡಳಿತ ಪಕ್ಷದ ಬೃಹತ್ ಕಾರ್ಯಕ್ರಮವಿದೆ. ಅದರ ಸಂಪೂರ್ಣ ಜವಾಬ್ದಾರಿಯನ್ನು ಜಿಲ್ಲಾ ಎಸ್.ಪಿ. ನಿಮ್ಮ ಹೆಗಲಿಗೆ ಏರಿಸಿದ್ದಾರೆ.

ಅ) ಈ ಸಂದಿಗ್ಧತೆಯನ್ನು ಎದುರಿಸುವಲ್ಲಿನ ನೈತಿಕತೆ ಏನು?

ಬ) ಎದುರಿಸುವ ಬಗೆಗಳು ಯಾವುವು?

ಕ) ನಿಮ್ಮ ಮುಂದಿನ ಕಾರ್ಯವೈಖರಿ ಏನು?

5) ದೇವರು ಮತ್ತು ಧರ್ಮದ ಹೆಸರಿನಲ್ಲಿ ಹಿಂದುಳಿದ ಜಾತಿಯ ಏನೂ ಅರಿಯದ ಚಿಕ್ಕ ವಯಸ್ಸಿನ ಬಾಲಕಿಯರನ್ನು ವೇಶ್ಯಾವಾಟಿಕೆಗೆ ಬಲವಂತವಾಗಿ ದೂಡುವ 'ದೇವದಾಸಿ ಪದ್ಧತಿ' ಎಂಬ ಕೆಟ್ಟ ಆಚರಣೆಯು ನಮ್ಮ ರಾಜ್ಯದ ಕೆಲವು ಪ್ರದೇಶಗಳಲ್ಲಿ ಇಂದಿಗೂ ಚಾಲ್ತಿಯಲ್ಲಿದೆ. ರಾಜ್ಯ ಸರ್ಕಾರ ಈ ಆಚರಣೆಯನ್ನು ಕಾನೂನಿನ ಮೂಲಕ ನಿಷೇಧಿಸಿದೆ. ಆದರೂ ಸರ್ಕಾರ ಈ ಆಚರಣೆಯನ್ನು ಸಂಪೂರ್ಣವಾಗಿ ತಡೆಯುವಲ್ಲಿ ವಿಫಲವಾಗಿದೆ. ಈ 'ದೇವದಾಸಿ ಪದ್ಧತಿ'ಯು ದೇಶದಲ್ಲಿ ನಮ್ಮ ರಾಜ್ಯಕ್ಕೆ ಕೆಟ್ಟ ಹೆಸರನ್ನು ತಂದಿದೆ. ಬಾಲಕಿಯರನ್ನು ದೇವದಾಸಿಯರನ್ನಾಗಿಸುವ ಈ ಆಚರಣೆಯು ಪ್ರತಿ ವರ್ಷ ಜರುಗುವಂತೆ ಈ ವರ್ಷವು ದಾವಣಗೆರೆ ಜಿಲ್ಲೆಯ ಹರಪ್ಪನಹಳ್ಳಿ ತಾಲೂಕಿನ ಉತ್ತರಂಗ ಮಾಲಾ ದುರ್ಗ ದೇವಸ್ಥಾನದಲ್ಲಿ ಭಾರತ ಹುಣ್ಣಿಮೆ ದಿನದ ವಿಶೇಷ ಕಾರ್ಯಕ್ರಮದಲ್ಲಿ ಜರುಗಲಿದೆ. ಮಹಿಳೆಯರನ್ನು ಬಲವಂತವಾಗಿ ದೇವದಾಸಿಯರನ್ನಾಗಿಸುವ ಪ್ರಯತ್ನವನ್ನು ಕಡ್ಡಾಯವಾಗಿ ತಡೆಯುವಂತೆ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಕಟ್ಟುನಿಟ್ಟಾಗಿ ಸೂಚನೆ ನೀಡಿದೆ. ನೀವು ದಾವಣಗೆರೆ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯಾಗಿ ಸೇವೆಯನ್ನು ಸಲ್ಲಿಸುತ್ತಿದ್ದೀರಿ. ಈ ಭಾರಿ ಸುಪ್ರೀಂ ಕೋರ್ಟಿನ ಆದೇಶದಂತೆ ಈ ಕಾನೂನು ಬಾಹಿರ ಪದ್ಧತಿಯನ್ನು ಯಾವುದೇ ರೀತಿಯಲ್ಲಿ ಆಚರಿಸಿದಂತೆ ಕ್ರಮ ಕೈಗೊಳ್ಳಲು ನಿಮಗೆ ಆದೇಶ ನೀಡಿದೆ.

* ಆ ಸ್ಥಳದಲ್ಲಿ ಮಹಿಳೆಯರು ದೇವದಾಸಿಯಾಗದಂತೆ ನೀವು ಯಾವ ಯಾವ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುತ್ತೀರಿ?

* ಜನರು ಧಾರ್ಮಿಕ ಆಚರಣೆಯ ವಿಷಯದಲ್ಲಿ ಭಾವನಾತ್ಮಕ ನಂಬಿಕೆಯನ್ನು ಹೊಂದಿದವರಾಗಿದ್ದು, ಈ ಆಚರಣೆಯಿಂದ ಹಿಂದೆ ಸರಿಯದಿದ್ದರೆ ನಿಮ್ಮ ಮುಂದಿನ ಆಯ್ಕೆಗಳೇನು?

6) ನೀವು ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕಿನ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ (ಇಓ)ಯಾಗಿ ಕಾರ್ಯ ನಿರ್ವಹಿಸುತ್ತಿದ್ದೀರಿ. ನಿಮ್ಮ ಅಧಿಕಾರ ವ್ಯಾಪ್ತಿಯ ಒಂದು ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಪಂಚಾಯತಿಯ ಅಧ್ಯಕ್ಷ ಮತ್ತು ಕೆಲವು ಸದಸ್ಯರೊಂದಿಗೆ ಸೇರಿಕೊಂಡು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (MGNREG) ಯೋಜನೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆ ಗ್ರಾಮದ ಪ್ರಜ್ಞಾವಂತರಿಂದ ದೂರನ್ನು ಸ್ವೀಕರಿಸುತ್ತೀರಿ. ಆ ದೂರಿನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಅನಕ್ಷರಸ್ಥ ಬಡ ಜನರ ಹೆಸರಿನಲ್ಲಿ ಈ ಯೋಜನೆಯಡಿ ಜಾಬ್‌ಕಾರ್ಡ್ ಮತ್ತು ಬ್ಯಾಂಕ್ ಖಾತೆಗಳನ್ನು ತೆರೆದಿರುತ್ತಾನೆ. ಈ ಯೋಜನೆಯಡಿಯಲ್ಲಿ ಬರುವ ಕೆಲಸಗಳನ್ನು ಯಂತ್ರದಿಂದ ಮಾಡಿಸಿ, ಆ ಅನಕ್ಷರಸ್ಥ ಜನಗಳೇ ಮಾಡಿದ್ದಾರೆ ಎಂದು ದಾಖಲೆಗಳನ್ನು ತಯಾರು ಮಾಡುತ್ತಿರುತ್ತಾನೆ. ಆ ಜನಗಳಿಗೆ ಈ ಯೋಜನೆಯ ಮಾಹಿತಿ ಇರುವುದಿಲ್ಲ. ಅಲ್ಲದೆ ಅವರಿಗೆ 200 ರೂಪಾಯಿಗಳನ್ನು ನೀಡಿ ಅವರ ಜಾಬ್ ಕಾರ್ಡ್ ಮತ್ತು ಪಾಸ್ ಬುಕ್‌ಗಳನ್ನು ತಮ್ಮ ಹತ್ತಿರವೇ ಇಟ್ಟುಕೊಂಡು ಅಲ್ಲಿನ ಬ್ಯಾಂಕ್ ಸಿಬ್ಬಂದಿಗಳ ಜೊತೆ ಸೇರಿ ನಕಲಿ ಸಹಿಗಳನ್ನು ಮಾಡಿ ಹಣವನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಧ್ಯಕ್ಷ ಮತ್ತು ಕೆಲವು ಸದಸ್ಯರು ಪಡೆಯುತ್ತಿದ್ದಾರೆ.

* ಈ ದೂರಿನ ಸತ್ಯಾಸತ್ಯತೆಯನ್ನು ನೀವು ಹೇಗೆ ನಿಯಂತ್ರಿಸುತ್ತೀರಿ?

* ಈ ದೂರು ನಿಜವಾಗಿದ್ದರೆ, ಈ ಭ್ರಷ್ಟಾಚಾರವನ್ನು ಹೇಗೆ ನಿಯಂತ್ರಿಸುತ್ತೀರಿ?

* ಈ ಭ್ರಷ್ಟಾಚಾರದಲ್ಲಿ ಭಾಗಿಯಾದವರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳುತ್ತೀರಿ?

7) ನೀವು ಕೋಲಾರ ಜಿಲ್ಲೆಯ ಒಂದು ತಾಲ್ಲೂಕಿನಲ್ಲಿ ತಹಸೀಲ್ದಾರ ಆಗಿ ಸೇವೆಯನ್ನು ಸಲ್ಲಿಸುತ್ತಿದ್ದೀರಿ. ಅಲ್ಲಿಯ ಸ್ಥಳೀಯ ಶಾಸಕ ಸರ್ಕಾರಿ ಗೋಮಾಳ ಮತ್ತು ಕೆರೆಯನ್ನು ನಕಲಿ ದಾಖಲೆಗಳನ್ನು ಬಳಸಿ ಒತ್ತುವರಿ ಮಾಡಿಕೊಂಡು ತೋಟವನ್ನು ನಿರ್ಮಿಸಿರುವ ವಿಷಯದ ಕುರಿತು ನಿಮಗೆ ದೂರು ಬರುತ್ತದೆ. ಆಗ ನೀವು ಆ ಸ್ಥಳದ ಕಾಗದ ಪತ್ರವನ್ನು ಪರಿಶೀಲಿಸಲಾಗಿ, ಅವರು ನಕಲಿ ದಾಖಲೆಗಳ ಮೂಲಕ ಅಕ್ರಮ ಒತ್ತುವರಿ ಮಾಡಿಕೊಂಡಿರುವ ವಿಷಯ ನಿಜವಾಗಿರುತ್ತದೆ. ಹೀಗಾಗಿ ನೀವು ಆ ಶಾಸಕನಿಗೆ ಆ ಜಾಗವನ್ನು ತೆರವುಗೊಳಿಸುವಂತೆ ಸೂಚಿಸುತ್ತೀರಿ.

ಆದರೆ ಆತ ನಿಮಗೆ ಲಂಚದ ಆಮಿಷವನ್ನು ಒಡ್ಡುತ್ತಾನೆ. ನೀವು ಆಮಿಷವನ್ನು ತಿರಸ್ಕರಿಸಿ ಕಾನೂನುಬದ್ಧವಾಗಿ ಕ್ರಮಕೈಗೊಳ್ಳಲು ಪ್ರಯತ್ನಿಸುತ್ತೀರಿ. ಆಗ ಆತ ನಿಮಗೆ ಜೀವ ಬೆದರಿಕೆಯನ್ನು ಮತ್ತು ವರ್ಗಾವಣೆಯ ಭಯವನ್ನು ಹುಟ್ಟಿಸುತ್ತಾನೆ.

* ಆ ಶಾಸಕರಿಂದ ಲಂಚವನ್ನು ಪಡೆದುಕೊಂಡು, ಆ ವಿಷಯವನ್ನು ಅಲ್ಲಿಗೆ ಬಿಡುವುದು ಸರಿಯಾದ ಕ್ರಮವೇ?

* ಇಂತಹ ಸಂದರ್ಭಗಳನ್ನು ನೀವು ಹೇಗೆ ಎದುರಿಸುತ್ತೀರಿ ಎಂಬುದರ ಕುರಿತು ವಿವರಿಸಿರಿ.

* ಆ ಶಾಸಕನ ವಿರುದ್ಧ ಯಾವ ಕ್ರಮ ಕೈಗೊಳ್ಳುತ್ತೀರಿ?

8) ನೀವು ಕರ್ನಾಟಕ ರಾಜ್ಯದ ಒಂದು ಗಡಿ ಭಾಗದ ಜಿಲ್ಲೆಯಲ್ಲಿ ಅಬಕಾರಿ ಉಪಅಧೀಕ್ಷಕರಾಗಿ ನೇಮಕಗೊಂಡಿರುತ್ತೀರಿ. ಆ ಜಿಲ್ಲೆಯಲ್ಲಿ ಅಕ್ರಮ ಕಳ್ಳಬಟ್ಟಿಯ ಕುಡಿತದಿಂದ ಸುಮಾರು ಐದು ಜನ ಸಾವಿಗೀಡಾಗಿರುತ್ತಾರೆ. ಈ ಘಟನೆಯ ತನಿಖೆಗಾಗಿ ನಿಮ್ಮ ನೇತೃತ್ವದಲ್ಲಿ ರಾಜ್ಯ ಸರ್ಕಾರ ಒಂದು ತನಿಖಾ ಆಯೋಗ ಅಥವಾ ಸಮಿತಿಯನ್ನು ರಚಿಸುತ್ತದೆ. ನೀವು ತನಿಖಾ ಸಮಿತಿಯ ಮುಖ್ಯಸ್ಥರಾಗಿ ಈ ಘಟನೆಯ ಕುರಿತು ಕೂಲಂಕುಷವಾಗಿ ಪರಿಶೀಲನೆಯನ್ನು ಮಾಡುತ್ತೀರಿ. ತನಿಖೆ ಮಾಡಲಾಗಿ ಜಿಲ್ಲೆಯಲ್ಲಿ ಯಾವುದೇ ಸ್ಥಳದಲ್ಲಿ ಅಕ್ರಮ ಕಳ್ಳಬಟ್ಟಿಯ ತಯಾರಿಕೆಯಾಗಿರುವುದಿಲ್ಲ. ಆದರೆ ನೆರೆಯ ರಾಜ್ಯದ ಗಡಿ ಭಾಗದ ಜಿಲ್ಲೆಯಲ್ಲಿ ಅಕ್ರಮ ಕಳ್ಳಬಟ್ಟಿಯು ತಯಾರಿಸಲಾಗುತ್ತಿದೆ. ಈ ಸಾವಿಗೀಡಾದ ಐದು ಜನರು ಅಲ್ಲಿಗೆ ಹೋಗಿ ಕಳ್ಳಬಟ್ಟಿಯನ್ನು ಸೇವಿಸಿ ತಮ್ಮ ಹಳ್ಳಿಗೆ ಬಂದು ಒಂದು ಘಂಟೆಯ ನಂತರ ಸಾವಿಗೀಡಾಗಿದ್ದಾರೆ ಎಂಬ ವಿಷಯವನ್ನು ತಿಳಿಯುತ್ತೀರಿ. ಆ ಅಕ್ರಮ ಕಳ್ಳಬಟ್ಟಿ ತಯಾರಿಕೆಯ ಸ್ಥಳ ಸಾವಿಗೀಡಾದ ಜನರ ಹಳ್ಳಿಯಿಂದ ಕೇವಲ 1 ಕಿ.ಮೀ.ದೂರದಲ್ಲಿದೆ. ಆದರೆ ಆ ಸ್ಥಳವು ನಿಮ್ಮ ವ್ಯಾಪ್ತಿಯಲ್ಲಿ ಬರದೆ ನೆರೆ ರಾಜ್ಯದ ವ್ಯಾಪ್ತಿಯಲ್ಲಿ ಬರುತ್ತದೆ. ಇಂತಹ ಘಟನೆಗಳು ಭವಿಷ್ಯದಲ್ಲಿ ಮತ್ತೆ ಜರುಗುವ ಸಾಧ್ಯತೆಯಿದೆ.

* ನಿಮ್ಮ ಅಧಿಕಾರಿ ವ್ಯಾಪ್ತಿಯಲ್ಲಿ ಬರುವ ಸ್ಥಳಗಳಲ್ಲಿ ಅಕ್ರಮ ಕಳ್ಳಬಟ್ಟಿಯನ್ನು ಜನರು ಸೇವಿಸದಂತೆ ಏನು ಕ್ರಮ ಕೈಗೊಳ್ಳುವಿರಿ?

* ಗಡಿ ಜಿಲ್ಲೆಯ ಅಕ್ರಮ ಕಳ್ಳಬಟ್ಟಿಯ ತಯಾರಿಕೆಯನ್ನು ಹೇಗೆ ನಿಯಂತ್ರಿಸುವಿರಿ?

9) ನೀವು ಬಸವನ ಬಾಗೇವಾಡಿ ತಾಲ್ಲೂಕಿಗೆ ಉಪವಿಭಾಗಾಧಿಕಾರಿಯಾಗಿ ನೇಮಕಗೊಂಡಿರುತ್ತೀರಿ. ನಿಮ್ಮ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕೂಡಗಿ ಎಂಬ ಸ್ಥಳದಲ್ಲಿ ಕೇಂದ್ರ ಸರ್ಕಾರವು ಜಗತ್ತಿನ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರವನ್ನು ನಿರ್ಮಿಸುತ್ತಿದೆ. ಎನ್.ಟಿ.ಪಿ.ಸಿ 'ಸೂಪರ್ ಕ್ರಿಟಿಕಲ್' ತಂತ್ರಜ್ಞಾನ ಬೈಲರ್ ಬಳಸಿಕೊಂಡು ಸ್ಥಾಪಿಸುತ್ತಿರುವ ದೇಶದ ಪ್ರಥಮ ಸ್ಥಾವರ ಇದು. ದೇಶದ ಇತರ ಸ್ಥಾವರಗಳ ಘಟಕಗಳು ನಿತ್ಯ 12000 ಮೆಟ್ರಿಕ್ ಟನ್ ಕಲ್ಲಿದ್ದಲು ಬಳಸಿ 600 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುತ್ತಿದ್ದರೆ, ಕೂಡಗಿ ಘಟಕಗಳು ಅಷ್ಟೇ ಕಲ್ಲಿದ್ದಲಿನ 800 ಮೆಗಾವ್ಯಾಟ್ ಉತ್ಪಾದಿಸಲಿವೆ. ಇಲ್ಲಿ ಶಾಖದ ಸದ್ಬಳಕೆ ಸಾಮರ್ಥ್ಯ ಹೆಚ್ಚಾಗಿರುವುದರಿಂದ ಕಲ್ಲಿದ್ದಲು ಬಳಕೆಯ ಪ್ರಮಾಣ ಕಡಿಮೆಯಾಗಿ ಉತ್ಪಾದನಾ ವೆಚ್ಚವೂ ತಗ್ಗುತ್ತದೆ. ಈ ತಂತ್ರಜ್ಞಾನದಲ್ಲಿ ಶೇ.99.97ರಷ್ಟು ಕ್ಷಮತೆ ಹೊಂದಿದ್ದು, 1000 ಗ್ರಾಂ ಬೂದಿ ಉತ್ಪಾದನೆಯಾದರೆ ಅದರಲ್ಲಿ 0.3 ಗ್ರಾಂನಷ್ಟು ಬೂದಿ ಮಾತ್ರ ಚಿಮಣಿ ಮೂಲಕ ಹೊರಹೋಗುತ್ತದೆ. ಚಿಮಣಿಗಳ ಎತ್ತರ 270 ಮೀಟರ್ ಇರಲಿದ್ದು, ಚಿಮಣಿಯಲ್ಲಿ ಸಿ.ಓ 2 ಮಾನಕ ಸಾಧನ ಮತ್ತು ಘಟಕದ ಸುತ್ತಲಿನ ವಾಯುಮಂಡಲದ ವಾತಾವರಣದ ಸುರಕ್ಷತೆಗಾಗಿ 'ಅಂಬಿಯಂಟ್ ಏರ್ ಕ್ವಾಲಿಟಿ ಮಾನಿಟರಿಂಗ್ ಸಿಸ್ಟಮ್' ಮತ್ತು ಕ್ಲೋಸ್ಡ್ ಸೈಕಲ್ ಕೂಲಿಂಗ್ ಸಿಸ್ಟಮ್' ಅಳವಡಿಸಲಾಗುವುದು. ಹೀಗಾಗಿ ಅಲ್ಲಿನ ಪರಿಸರಕ್ಕೆ ಯಾವುದೇ ಹಾನಿ ಇರುವುದಿಲ್ಲ. ಆದರೆ ಆ ಸ್ಥಾವರದ ಸುತ್ತಮುತ್ತಲಿನ ರೈತರು ಆ ಸ್ಥಾವರದ ನಿರ್ಮಾಣದಿಂದ ತಮ್ಮ ಬೆಳೆಗಳ ಮೇಲೆ ಬೂದಿ ಬಿದ್ದು ಬೆಳೆಗಳು ನಾಶವಾಗುತ್ತವೆ ಎಂದು ಆತಂಕವನ್ನು ಹೊಂದಿದವರಾಗಿರುತ್ತಾರೆ. ಆದ್ದರಿಂದ ಸ್ಥಾವರದ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿ ಹೋರಾಟವನ್ನು ಕೈಗೊಳ್ಳುತ್ತಾರೆ. ಹೋರಾಟ ಮಾಡುವಾಗ ಸ್ಥಾವರದ ಮೇಲೆ ದಾಳಿ ಮಾಡಿ ಅಲ್ಲಿನ ಆಸ್ತಿಪಾಸ್ತಿಗೆ

ಹಾನಿಯನ್ನುಂಟು ಮಾಡುತ್ತಾರೆ. ಆದ್ದರಿಂದ ಪೋಲೀಸರು ರೈತರ ಮೇಲೆ ಲಾಠಿ ಚಾರ್ಜ್ ಮಾಡಿ ಗಾಳಿಯಲ್ಲಿ ಗುಂಡು ಹಾರಿಸಿ ರೈತರನ್ನು ಅಲ್ಲಿಂದ ಚದರಿಸುತ್ತಾರೆ.

ನಿಮ್ಮನ್ನು ಜಿಲ್ಲಾಧಿಕಾರಿಯವರು ಅಲ್ಲಿನ ಪರಿಸ್ಥಿತಿಯನ್ನು ಸಮತೋಲನಕ್ಕೆ ತಂದು ರೈತರಲ್ಲಿ ಆ ಸ್ಥಾವರದ ಬಗ್ಗೆ ವಿಶ್ವಾಸ ಬರುವಂತೆ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ. ಆ ಪ್ರದೇಶದಲ್ಲಿ ವಿದ್ಯುತ್ ಅಭಾವ ಇರುವುದರಿಂದ ಸರ್ಕಾರಕ್ಕೆ ಸ್ಥಾವರದ ನಿರ್ಮಾಣದ ಅವಶ್ಯಕತೆಯಿದೆ.

* ನೀವು ರೈತರು ಹೊಂದಿರುವ ಬೂದಿಯ ಸಮಸ್ಯೆಯ ಪೂರ್ವಾಗ್ರಹ ಪೀಡೆಯನ್ನು ತೊಲಗಿಸಲು ಏನು ಮಾಡುವಿರಿ?

* ಆ ಸ್ಥಾವರ ನಿರ್ಮಾಣದ ಮಹತ್ವದ ಕುರಿತು ರೈತರಿಗೆ ಮನವರಿಕೆ ಮಾಡಿ ಹೋರಾಟದಿಂದ ಹಿಂದೆ ಸರಿಯುವಂತೆ ಯಾವ ಕ್ರಮವನ್ನು ಕೈಗೊಳ್ಳುವಿರಿ?

10) ನೀವು ಬಾಗಲಕೋಟೆ ಜಿಲ್ಲೆಯಲ್ಲಿ ಉಪ ತಹಸೀಲ್ದಾರರಾಗಿ ಸೇವೆಯನ್ನು ಸಲ್ಲಿಸುತ್ತಿದ್ದೀರಿ ಎಂದು ಭಾವಿಸಿಕೊಳ್ಳಿ. ಇತ್ತೀಚೆಗೆ ತೆರೆದ ಕೊಳವೆ ಬಾವಿಗಳ ದುರಂತಗಳನ್ನು ತಪ್ಪಿಸಲು ಕರ್ನಾಟಕ ಸರ್ಕಾರ ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ. ಎಲ್ಲ ಕೊಳವೆ ಬಾವಿಗಳನ್ನು ಮುಚ್ಚಿಸಬೇಕಾಗಿದೆ. ಭವಿಷ್ಯದಲ್ಲಿ ಚಿಕ್ಕ ಮಕ್ಕಳು ಕೊಳವೆ ಬಾವಿಯಲ್ಲಿ ಬಿದ್ದು ಮೃತಪಟ್ಟರೆ ನಿಮ್ಮನ್ನು ಕೂಡ ಹೊಣೆ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. ನೀವು ನಿಮ್ಮ ಪ್ರದೇಶದಲ್ಲಿರುವ ಎಲ್ಲಾ ನಿಷ್ಪ್ರಯೋಜಕ ಕೊಳವೆ ಬಾವಿಗಳನ್ನು ಮುಚ್ಚಿಸಲು ಪ್ರಯತ್ನಿಸುತ್ತಿದ್ದೀರಿ. ಆದರೆ ರೈತರು ನಿಮಗೆ ಮಾಹಿತಿಯನ್ನು ನೀಡದೆ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆದು ನೀರು ಸಿಗದೆ ವಿಫಲವಾದಾಗ ಹಾಗೆ ತೆರೆದು ಬಿಟ್ಟು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಹೀಗಾಗಿ ಇದು ನಿಮಗೆ ನಿಷ್ಪ್ರಯೋಜಕ ಕೊಳವೆ ಬಾವಿಗಳನ್ನು ಮುಚ್ಚಿಸುವುದಕ್ಕೆ ದೊಡ್ಡ ತೊಡಕಾಗಿದೆ.

* ನಿಷ್ಪ್ರಯೋಜಕ ಕೊಳವೆ ಬಾವಿಯನ್ನು ಮುಚ್ಚಿಸಲು ನೀವು ಯಾವ ಕ್ರಮಗಳನ್ನು ಕೈಗೊಳ್ಳುತ್ತೀರಿ?

* ಹೊಸದಾಗಿ ಕೊಳವೆ ಬಾವಿಯನ್ನು ಕೊರೆಯುವ ರೈತರು ಯಾವ ಮಾರ್ಗಸೂಚಿಯನ್ನು ಅನುಸರಿಸುವಂತೆ ನೀವು ಹೇಗೆ ಮನವೊಲಿಸುವಿರಿ?

11) ನೀವು ಒಂದು ನಗರದ ಮಹಾನಗರ ಪಾಲಿಕೆಯ ಆಯುಕ್ತರಾಗಿ ಕಾರ್ಯನಿರ್ವಹಿಸುವಾಗ, ಲಾಡ್ಜ್ ಒಂದರ ಶೌಚಾಲಯ ಕಟ್ಟಿಕೊಂಡಿದ್ದರಿಂದ ಒಳಚರಂಡಿ ಶುಚಿಗೊಳಿಸಲು ಮ್ಯಾನಹೋಲ್ ಗೆ ಇಳಿದ ಪೌರ ಕಾರ್ಮಿಕ ಉಸಿರುಗಟ್ಟಿ ಮೃತಪಟ್ಟಿರುವ ಘಟನೆ ಜರುಗಿದೆ. ಪೌರ ಕಾರ್ಮಿಕ ಕಾಯ್ದೆಯ ಪ್ರಕಾರ ಮ್ಯಾನಹೋಲ್‌ಗೆ ಪೌರ ಕಾರ್ಮಿಕರನ್ನು ಇಳಿಸಬಾರದು. ನೀವು ಈ ಘಟನೆಯ ಕುರಿತು ತನಿಖೆಯನ್ನು ಕೈಗೊಳ್ಳುತ್ತೀರಿ. ತನಿಖೆ ಮುಗಿದ ನಂತರ ಪೌರ ಕಾರ್ಮಿಕನು ಲಾಡ್ಜ್ ಮಾಲಿಕನ ಹಣದ ಆಸೆಗೆ ಮ್ಯಾನ್‌ಹೋಲ್‌ನಲ್ಲಿ ಇಳಿದಿರುವ ಸಂಗತಿ ತಿಳಿಯುತ್ತದೆ. ಇದೇ ರೀತಿಯಾಗಿ ಹಣದ ಆಸೆಯಿಂದ ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಇತರ ಪೌರ ಕಾರ್ಮಿಕರು ಹೀಗೆ ಮ್ಯಾನ್‌ಹೋಲ್‌ನಲ್ಲಿ ಇಳಿಯುತ್ತಿರುವ ಸಂಗತಿ ಕೂಡ ನಿಮಗೆ ತಿಳಿದು ಬರುತ್ತದೆ. ಇಂತಹ ಘಟನೆಗಳು ಮುಂದೆ ಕೂಡ ಸಂಭವಿಸುವ ಸಾಧ್ಯತೆಗಳಿವೆ.

* ಮ್ಯಾನ್‌ಹೋಲ್‌ನಲ್ಲಿ ಪೌರ ಕಾರ್ಮಿಕರು ಇಳಿಯುವುದನ್ನು ತಡೆಯಲು ನೀವು ಯಾವ ಕ್ರಮಗಳನ್ನು ಕೈಗೊಳ್ಳುವಿರಿ?

* ಕಾರ್ಮಿಕರಿಗೆ ಹಣದ ಆಸೆಯನ್ನು ತೋರಿಸಿ ಮ್ಯಾನ್‌ಹೋಲ್‌ನಲ್ಲಿ ಇಳಿಯಲು ಪ್ರಚೋದಿಸುವ ವ್ಯಕ್ತಿಗಳಿಗೆ ಯಾವ ಎಚ್ಚರಿಕೆಗಳನ್ನು ಕೊಡುತ್ತೀರಿ?

12) ನಿಮ್ಮ ಸ್ನೇಹಿತನೊಬ್ಬ ಆಹಾರ ಸುರಕ್ಷತಾ ಅಧಿಕಾರಿಯಾಗಿದ್ದು ನಿಮ್ಮ ಹತ್ತಿರ ಬಂದು ತನ್ನ ಸೇವೆಯಲ್ಲಿನ ಈ ಕೆಳಗಿನ ಸಮಸ್ಯೆಯನ್ನು ಹೇಳಿಕೊಳ್ಳುತ್ತಾನೆ. ಆತನ ಒಂದು ಪ್ರತಿಷ್ಠಿತ ಕಂಪನಿಯು ನೂಡಲ್ಸ್ ಪ್ಯಾಕೆಟನ್ನು ಖರೀದಿಸಿ ಸರ್ಕಾರ ಲ್ಯಾಬಿಗೆ ಪರೀಕ್ಷೆಗೆ ಕಳುಹಿಸಿರುತ್ತಾನೆ. ನಂತರ ಲ್ಯಾಬ್‌ನಿಂದ ಬಂದ ವರದಿಯನ್ನು ನೋಡಿ ಆತ ಗಾಬರಿಗೊಳ್ಳುತ್ತಾನೆ. ಏಕೆಂದರೆ ಆ ಪ್ಯಾಕೆಟ್‌ನಲ್ಲಿ ಸೀಸ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಮೋನೋಸೋಡಿಯಂ ಗ್ಲುಟಮೇಟ್ ಪತ್ತೆಯಾಗಿರುತ್ತದೆ. ಮೊದಲಿಗೆ ಆತನಿಗೆ ಈ ವರದಿಯನ್ನು ನಂಬಲು ಸಾಧ್ಯವಾಗಲಿಲ್ಲ. ಜನಪ್ರಿಯ ಕಂಪನಿಯ ಆಹಾರ ಉತ್ಪನ್ನದಲ್ಲಿ ಇಂಥ ಅಪಾಯಕಾರಿ ಇವೆಯೇ? ಎಂಬ ಪ್ರಶ್ನೆ ಕಾಡತೊಡಗಿತು. ಕೂಡಲೇ ಆತ ಮತ್ತೊಂದು ಲ್ಯಾಬ್‌ಗೆ ಪರೀಕ್ಷೆಗೆ ಕಳುಹಿಸುತ್ತಾನೆ. ಅಲ್ಲಿಯೂ ಕೂಡ ಅದೇ ವರದಿ ಬರುತ್ತದೆ. ಆತನಿಗೆ ಆಹಾರ ಉತ್ಪನ್ನ ಕಂಪನಿಯ ಮೇಲೆ ಕ್ರಮಕೈಗೊಳ್ಳುವ ಅಧಿಕಾರ ಇದ್ದರೂ, ಅವನು ಮೇಲಿನ ಅಧಿಕಾರಿಗಳ ಆದೇಶಕ್ಕೆ ಕಾಯಬೇಕಿದೆ. ಮೇಲಾಧಿಕಾರಿಯು ಈ ಬಗ್ಗೆ ನಿರ್ಲಕ್ಷಭಾವ ತೋರುತ್ತಿದ್ದಾರೆ. ಈ ಕುರಿತು ಹೆಚ್ಚು ವಿಚಾರಿಸದೆ ವಿಷಯವನ್ನು ಅಲ್ಲಿಗೆ ಬಿಡುವಂತೆ ಮೌಖಿಕವಾಗಿ ಒತ್ತಡ ಹೇರುತ್ತಿದ್ದಾರೆ.

* ಈ ಹಂತದಲ್ಲಿ ಅವರು ಯಾವ ಕ್ರಮ ಕೈಗೊಂಡರೆ ಸೂಕ್ತ?
* ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬಹುದು?
* ನ್ಯಾಯಸಮ್ಮತವಾಗಿ ಯಾವ ಕ್ರಮ ಕೈಗೊಳ್ಳುವಂತೆ ನೀವು ಸಲಹೆ ನೀಡುತ್ತೀರಿ.

13) ನೀವು ಪಡಿತರ ಚೀಟಿಗಳ ಕುರಿತು ಸರ್ಕಾರ ನಡೆಸುತ್ತಿರುವ ಸತ್ಯಾಂಶ ಪರಿಶೀಲನೆಯ ವಿಶೇಷ ಅಧಿಕಾರಿಯಾಗಿದ್ದೀರಿ. ಒಂದು ತಾಲೂಕಿನ ಎಲ್ಲ 1,00,000 ಪಡಿತರ ಅಂಗಡಿಗಳ, ಎಲ್ಲ ಪಡಿತರ ಚೀಟಿಗಳ ಅಕ್ರಮ–ಸಕ್ರಮಗಳ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವ ಹೊಣೆ ನಿಮ್ಮದು. ಹೀಗಿರುವಾಗ ಅನೇಕ ರೀತಿಯ ಸಮಸ್ಯೆಗಳು ಎದುರಾಗಲಿವೆ.

ಅ) ನೀವು ಎದುರಿಸುವ ಸಮಸ್ಯೆಗಳು ಏನು?

ಬ) ಪರಿಹಾರ ಕ್ರಮಗಳು ಯಾವುವು?

ಕ) ಇದಕ್ಕೆ ನಿಮ್ಮ ಯೋಜನೆ ಹೇಗಿರುತ್ತದೆ?

ಡ) ಈ ಕಾರ್ಯ ನಿಜವಾಗಿ ಸಾಧ್ಯವಾಗಬಹುದೇ?

ಹ) ನಿಮ್ಮ ಕಾರ್ಯ ವೈಖರಿಯನ್ನು ಚರ್ಚಿಸಿರಿ.

# ಉತ್ತರ ಸಹಿತ ಮಾದರಿ ಪ್ರಶ್ನೆ ಪತ್ರಿಕೆಗಳು

## ಪ್ರಶ್ನೆ ಪತ್ರಿಕೆ – 1

**(ಪ್ರತಿಯೊಂದು ಪ್ರಶ್ನೆಗೆ 20 ಅಂಕಗಳು)**

**ಪ್ರಶ್ನೆ 1) ನೈತಿಕತೆ ಎಂದರೇನು? ಇದು ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ಭಿನ್ನವಾಗಿರುವುದೇ? ಈ ಬಗ್ಗೆ ನಿಮ್ಮ ನಿಲುವುಗಳೇನು? ಮತ್ತು ನೈತಿಕತೆಯ ಪ್ರಾಮುಖ್ಯತೆ ಏನು?**

**ಉತ್ತರ:** ನೈತಿಕತೆ ಎಂದರೆ ಸಾಮಾಜಿಕ ಸಂಘಟನೆಯ ಅಥವಾ ವ್ಯಕ್ತಿಯ ನಡತೆಯ ನಿಯಮಗಳೇ ಆಗಿವೆ. ವ್ಯಕ್ತಿ ವೈಯಕ್ತಿಕವಾಗಿ ಯಾವುದು ಸರಿ ಯಾವುದು ತಪ್ಪು ಎಂದು ನಿರ್ಧರಿಸಲು ನೆರವಾಗುವುದೇ ನೈತಿಕತೆ. ಸಮಾಜದಲ್ಲಿ ಶಾಂತಿ, ಸಾಮರಸ್ಯ, ಮಾನವೀಯತೆ, ಸಹಬಾಳ್ವೆ, ನೆಮ್ಮದಿಯ ಜೀವನ ನಡೆಸಲು ಎಲ್ಲರಲ್ಲಿಯೂ ನೈತಿಕ ಮೌಲ್ಯಗಳಿರಬೇಕಾದ ಅಗತ್ಯವಿದೆ. ಮನುಷ್ಯನ ನಡತೆಯನ್ನು ನಿರ್ಧರಿಸುವಲ್ಲಿ ನೈತಿಕತೆ ಪ್ರಮುಖ ಪಾತ್ರ ವಹಿಸುತ್ತದೆ.

ವೈಯಕ್ತಿಕವಾಗಿ ನೈತಿಕತೆಯ ಪ್ರಾಮುಖ್ಯತೆಯನ್ನು ಹೇಳಬೇಕೆಂದರೆ **"ಸರ್ವೇಜನ ಸು:ಖನೋ ಭವಂತು"** ಎಂಬ ತತ್ವದಡಿಯಲ್ಲಿ ಜೀವನದ ಪ್ರತಿ ದಿನಗಳನ್ನು ಯಾರಿಗೆ ನೋವು ಕೊಡದೆ ನಮ್ಮ ಕೈಲಾದಷ್ಟು ಸಹಾಯ ಹಸ್ತ ಚಾಚುತ್ತಾ ಸಂತೋಷದಿಂದ ಬದುಕಲು ನೈತಿಕತೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೇವೆ.

ಇಂದಿನ ಆಧುನಿಕ ಬದುಕಿನಲ್ಲಿ ನೈತಿಕತೆಯ ಅಗತ್ಯತೆ ಹೆಚ್ಚಿದೆ. ವೈಯಕ್ತಿಕವಾಗಿ ಕುಟುಂಬ, ಸಮುದಾಯ, ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿ, ಸಾಮರಸ್ಯ, ಸಹಬಾಳ್ವೆ, ನೆಮ್ಮದಿಯ ಬದುಕನ್ನು ನಡೆಸಲು ನೈತಿಕತೆಯ ಅಂಶಗಳಿರದೇ ಸಾಧ್ಯವಿಲ್ಲ.

ವಿಶ್ವದಲ್ಲಿ ಮೂರನೇ ಮಹಾಯುದ್ಧ ನಡೆಯದೇ ಇರುವಲ್ಲಿ ನೈತಿಕತೆಯ ಪಾತ್ರವಿದೆ. ಒಂದು ದೇಶ ಪ್ರಾಕೃತಿಕ ವಿಕೋಪಕ್ಕೆ ತುತ್ತಾದಾಗ ಇತರ ದೇಶಗಳು ಸಹಾಯ ಹಸ್ತ ಚಾಚುವಲ್ಲಿ ನೈತಿಕತೆ ಇದೆ. ಇಂದು ಭಾರತದಲ್ಲಿ ಹಲವು ಭಾಷೆ, ಧರ್ಮ, ಜಾತಿ ಅಂಶಗಳು ಇದ್ದಾಗಿಯೂ ಭಾರತೀಯರಲ್ಲಿ ಶಾಂತಿ ನೆಲೆಸಲು ಕಾರಣ ನೈತಿಕತೆ ಆಂಶಗಳೇ ಆಗಿವೆ.

ಎಲ್ಲರೂ ಬಯಸುವ ಹಿತವಾದ, ಸಾಮಾಜಿಕ, ವಾತಾವರಣ ನಿರ್ಮಾಣವಾಗಲು ನೈತಿಕತೆಯು ಪ್ರಮುಖ ಪಾತ್ರ ವಹಿಸುತ್ತದೆ. ನೈತಿಕತೆ ಇರದಿದ್ದರೆ ಶಾಂತಿಯುತ ಜೀವನ ಅಸಾಧ್ಯ. ಇದೇ ನೈತಿಕತೆಯ ಅವಶ್ಯಕತೆ ಆಗಿದೆ.

**ಪ್ರಶ್ನೆ 2) ಸಂತೋಷ ಎಂದರೇನು? ಅದು ವ್ಯಕ್ತಿಯಿಂದ ವ್ಯಕ್ತಿಗೆ ಹೇಗೆ ಭಿನ್ನವಾಗಿದೆ. ನೀವು ಯಾವುದರಲ್ಲಿ ಸಂತೋಷ ಕಾಣುತ್ತೀರಿ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ.**

**ಉತ್ತರ: "**ಮಾನವ ಅನ್ನಕ್ಕಾಗಿ ಬದುಕಿರದೇ ಆನಂದಕ್ಕಾಗಿ ಬದುಕಿದ್ದಾನೆ**"** ಎಂಬ ಮಾತಿನಲ್ಲಿ ಸಂಶಯವಿಲ್ಲ. ಪ್ರತಿಯೊಬ್ಬರ ಜೀವನದ ಗುರಿಯು ಸಂತೋಷದಿಂದ ಬಾಳುವುದೇ ಆಗಿರುತ್ತದೆ. ಸಂತೋಷ ಎಂಬ ಪದವನ್ನು ವಿಶ್ಲೇಷಿಸಿದಾಗ ಅದು ಒಂದು ವೈಯಕ್ತಿಕ ನೆಲೆ. ಪ್ರತಿಯೊಬ್ಬರಲ್ಲಿಯೂ ವಿಶಿಷ್ಟತೆ ಇರುವುದರಿಂದ ಸಂತೋಷದ ಪರಿಭಾಷೆ ಭಿನ್ನವಾಗುವ ಅವಕಾಶವಿದೆ.

ನನ್ನ ದೃಷ್ಟಿಯಲ್ಲಿ ಸಂತೋಷವೆಂದರೆ ನೆಮ್ಮದಿಯ ಬದುಕು. ಇದು ಕೌಟುಂಬಿಕವಾಗಿ, ಕಾರ್ಯಕ್ಷೇತ್ರದಲ್ಲಿ ಸಮರ್ಥವಾಗಿ ಕುಟುಂಬ ಮತ್ತು ಕಛೇರಿಯನ್ನು ನಿಭಾಯಿಸಿಕೊಂಡು ಎರಡರಲ್ಲಿಯೂ ಯಶಸ್ವಿಯಾಗುವುದರಲ್ಲಿ ನನ್ನ ಸಂತೋಷ ಅಡಗಿದೆ.

ಪ್ರತಿಯೊಬ್ಬರಿಗೂ ಇದೇ ರೀತಿಯ ಸಂತೋಷದ ಅಗತ್ಯವಿದೆ ಎಂದು ಹೇಳಲು ಸಾಧ್ಯವಿಲ್ಲ. ಸಂಗೀತಗಾರನಿಗೆ –ಸಂಗೀತವಾದ್ಯ ನುಡಿಸುವುದರಲ್ಲಿಯೂ, ಕೇಳುವುದರಲ್ಲಿಯೂ ಸಂತೋಷವಿದೆ. ಸಮಾಜ ಸೇವಕರಿಗೆ ಸಮಾಜದ ದೀನ–ದಲಿತರಿಗೆ ನೆರವಾಗುವುದರಲ್ಲಿ ಅವರ ಮೊಗದಲ್ಲಿ ನಗುವನ್ನು ಕಾಣುವುದರಲ್ಲಿ ಸಂತೋಷವಿರುತ್ತದೆ.

ಓರ್ವ ದೇಶ ಕಾಯುವ ಸೈನಿಕನಿಗೆ ದೇಶಕ್ಕಾಗಿ ಹೋರಾಡಿ ಯುದ್ದ ಗೆದ್ದರೇ ಅಪಾರವಾದ ಸಂತೋಷ ಸಿಗುತ್ತದೆ. ಹಾಗೆಯೇ ಉತ್ತಮ ರಾಜಕಾರಣಿಗೆ ಸರ್ಕಾರದ ಪ್ರತಿಯೊಂದು ಯೋಜನೆಯನ್ನು ತನ್ನ ಜನರಿಗೆ ತಲುಪಿಸಿ ಸಂತೋಷ ಪಡೆಯುತ್ತಾನೆ.

ಮನೆಯ ಗೃಹಿಣಿ, ಮಕ್ಕಳು, ವೃದ್ದರು, ವೃತ್ತಿಪರರು, ಕುಶಲ ಕೆಲಸಗಾರರು, ಕಾರ್ಮಿಕರು, ಶ್ರೀಮಂತರು, ಬಡವರು ಹೀಗೆ ಯಾವ ಹಿನ್ನೆಲೆಯ ವ್ಯಕ್ತಿಯನ್ನು ನಾವು ಉದಾಹರಣೆಗೆ ತೆಗೆದುಕೊಂಡರೂ ಅವರವರ ಸಂತೋಷದ ನೆಲೆ ಬೇರೆಯದೇ ಆಗಿರುತ್ತದೆ.

ಗೃಹಿಣಿ ಮಕ್ಕಳಿಗೆ, ಗಂಡನಿಗೆ ಅಡುಗೆ ಮಾಡುವುದರಲ್ಲಿ, ವೃದ್ದರಿಗೆ ಕಥೆ ಹೇಳುವುದರಲ್ಲಿ, ಮಕ್ಕಳಿಗೆ ಕ್ರೀಡೆಯಲ್ಲಿ, ವೃತ್ತಿಪರರಿಗೆ ತಮ್ಮ ವೃತ್ತಿಯಲ್ಲಿ ಸಂತೋಷ ಕಾಣುವರು.

ನಾನೂ ಕುಟುಂಬ ಮತ್ತು ನನ್ನ ಕಾರ್ಯ ಸ್ಥಳವನ್ನು ದಕ್ಷವಾಗಿ, ಸಮರ್ಥವಾಗಿ ನಿಭಾಯಿಸಿ ಸಂತೋಷ ಕಾಣುವುದೇ ನಮ್ಮ ಜೀವನದ ಪರಮ ಗುರಿಯಾಗಿದೆ.

**ಪ್ರಶ್ನೆ 3) ಸಾರ್ವಜನಿಕ ಸೇವಾ ಕೈಂಕರ್ಯದಲ್ಲಿ ನಾವು ತೊಡಗಿಕೊಳ್ಳಬೇಕು. ಇದಕ್ಕೆ ನಮ್ಮಲ್ಲಿ ಇಚ್ಛಾಶಕ್ತಿ ಮತ್ತು ಬದ್ದತೆ ಬೇಕೇ ಹೊರತು ಸರ್ಕಾರಿ ಹುದ್ದೆ ಅಲ್ಲ ಎಂಬ ಮಾತನ್ನು ಉದಾಹರಣೆ ಸಹಿತವಾಗಿ ವಿವರಿಸಿರಿ.**

**ಉತ್ತರ:** ಸಾರ್ವಜನಿಕ ಸೇವೆ ಎಂಬ ಪದ / ಪರಿಭಾಷೆಯನ್ನು ವಿಶಾಲವಾದ ಮನೋಭಾವ ದೃಷ್ಟಿಯಲ್ಲಿ ಗ್ರಹಿಸಬೇಕು. ಈ ಹಿನ್ನೆಲೆಯಲ್ಲಿ ವ್ಯಕ್ತಿಯೋರ್ವ ಸಮಾಜದ ಯಾವುದೇ ವ್ಯಕ್ತಿಗೆ ಅವನ ಅಪೇಕ್ಷೆಯಲ್ಲಿ ನೆರವಾಗಿ ಅವನಿಗೆ ಸಂತೃಪ್ತಿ ಕೊಡುವುದೇ ಆಗಿದೆ.

ಮಹಾತ್ಮಾಗಾಂಧೀಜಿಯವರು ನೀವು ಒಬ್ಬ ದಾರಿದ್ರ್ಯದ ವ್ಯಕ್ತಿಯನ್ನು ನೆನೆಸಿಕೊಂಡು ನೀವು ಮಾಡುತ್ತಿರುವ ಈ ನಿಮ್ಮ ಮುಂದಿನ ಕಾರ್ಯ ಅವನಿಗೆ ನೆರವಾಗುತ್ತದೆಯೇ? ಎಂದು ಆತ್ಮಾವಲೋಕನ ಮಾಡಿಕೊಳ್ಳಿರಿ ಎಂದು ಹೇಳಿದ್ದಾರೆ. ಹೀಗಾಗಿ ಸಾರ್ವಜನಿಕ ಸೇವೆಗೆ ಸರ್ಕಾರಿ ಹುದ್ದೆ ಅನಿವಾರ್ಯವಲ್ಲ.

ಮಹಾತ್ಮಾಗಾಂಧೀಜಿ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಜ್ಯೋತಿಬಾಫುಲೆ, ರಾಜಾರಾಂ ಮೋಹನ್‌ರಾಯ್, ಈಶ್ವರ ಚಂದ್ರ ವಿದ್ಯಾಸಾಗರ್, ಶ್ರೀ ಅರವಿಂದೋ ಮುಂತಾದ ಸಮಾಜ ಸೇವಕರಾರೂ ಸರ್ಕಾರಿ ಹುದ್ದೆಯನ್ನು ಹೊಂದಿರಲಿಲ್ಲ. ಆದರೆ ಎಲ್ಲರಿಗೂ ಮೀರಿದ ಸಮಾಜ ಸೇವೆಯನ್ನು ಮಾಡಿ ಸಾಧಿಸಿದ್ದಾರೆ.

ಸಾರ್ವಜನಿಕ ಸೇವೆ ಅಂದರೆ ಕೇವಲ ವ್ಯಕ್ತಿಗಳಿಗೆ ನೆರವಾಗಿ ಸಹಾಯ ಮಾಡಬೇಕೆಂದೇನೂ ಇಲ್ಲ. ಬಿಹಾರದ ಮಾಂಝಿ ಅಲ್ಲಿನ ಹಳ್ಳಿಯ ಜನರಿಗೆ ಗುಡ್ಡ ಕಡಿದು ರಸ್ತೆ ಮಾಡಿದ ಧೀಮಂತ. ನಾವು ರಸ್ತೆಯ ಮೇಲಿನ ಮುಳ್ಳುಕಲ್ಲು ತೆಗೆದರೆ ಸಾಕು ಅದು ಒಂದು ಚಿಕ್ಕದಾದ ಸಾರ್ವಜನಿಕ ಸೇವೆಯೇ ಆಗಿರುತ್ತದೆ. ನಾವು ನಮ್ಮ ನಿತ್ಯ ಕರ್ತವ್ಯದ ಮಧ್ಯೆಯೇ ಈ ರೀತಿಯ ಅನೇಕ ಸಾರ್ವಜನಿಕ ಸೇವಾ ಕೈಂಕರ್ಯ ಕೈಗೊಳ್ಳಬೇಕು. ಇದಕ್ಕೆ ನಮ್ಮಲ್ಲಿ ಇಚ್ಛಾಶಕ್ತಿ ಮತ್ತು ಬದ್ದತೆ ಬೇಕೇ ಹೊರತು ಸರ್ಕಾರಿ ಹುದ್ದೆ ಅಲ್ಲ.

**ಪ್ರಶ್ನೆ 4) ಅಂತರಾತ್ಮ ಎಂದರೇನು? ಅಂತರಾತ್ಮದ ಮಾತು ನಮ್ಮನ್ನು ಹೇಗೆ ಸರಿಯಾದ ದಾರಿಗೆ ನಡೆಯುವಂತೆ ಪ್ರಚೋದಿಸುತ್ತದೆ? ಒಬ್ಬ ಸಾರ್ವಜನಿಕ ಸೇವಕನ ಕಾರ್ಯದಲ್ಲಿ ಅಂತರಾತ್ಮದ ಧ್ವನಿಯು ಯಾವ ರೀತಿ ಪ್ರಾಮುಖ್ಯತೆ ಹೊಂದಿದೆ ವಿವರಿಸಿರಿ.**

**ಉತ್ತರ:** ಮಹಾತ್ಮಾಗಾಂಧೀಜಿಯವರು ನೈತಿಕತೆಯನ್ನು ಅಂತರಾತ್ಮ ಎಂದಿದ್ದಾರೆ. ಈ ಅಂತರಾತ್ಮವನ್ನು ಸರಿಯಾಗಿ ಅರಿತರೆ ನಮ್ಮ ಯಾವುದೇ ಕಾರ್ಯದಲ್ಲಿ ಯಶಸ್ವಿಯಾಗಬಹುದು. ಅಂತರಾತ್ಮ ಎಂಬುದನ್ನು ಆತ್ಮಸಾಕ್ಷಿ

ಎಂದು ಅರ್ಥೈಸಬಹುದು. ನಮ್ಮ ಕಾರ್ಯದ ಸರಿ ತಪ್ಪುಗಳ ಕುರಿತಾದ ವಿವೇಚನೆಯ ನೆಲೆಯೇ ಅಂತರಾತ್ಮದ ಅರಿವು. ಇದು ಸಾರ್ವಜನಿಕ ಕ್ಷೇತ್ರದಲ್ಲಿ ಬಹಳ ಪ್ರಾಮುಖ್ಯತೆ ಪಡೆದಿದೆ. ಹೇಗೆಂದರೆ,

* ಸಾರ್ವಜನಿಕ ಸೇವಕ ತನ್ನ ಸೇವಾಬದ್ದತೆ ಹೆಚ್ಚಿಸಿಕೊಳ್ಳಲು ನೆರವಾಗುತ್ತದೆ
* ಸಾರ್ವಜನಿಕ ಸೇವಕ ಕಾರ್ಯಕ್ಷಮತೆ ದಕ್ಷತೆ ಹೆಚ್ಚುತ್ತದೆ
* ಪ್ರಾಮಾಣಿಕತೆ ನ್ಯಾಯ ಪಾರದರ್ಶಕತೆ ತರಲು ಸಹಕಾರಿಯಾಗುತ್ತದೆ
* ಸಮಾಜದಲ್ಲಿ ಶಾಂತಿ ಸಹಬಾಳ್ವೆ ಸಮಾನತೆಯ ಮೌಲ್ಯಗಳನ್ನು ಜಾರಿಗೆ ತರಲು ನೆರವಾಗುತ್ತದೆ
* ಸಾರ್ವಜನಿಕ ಸೇವಕರಲ್ಲಿ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ತರಲು ಪ್ರೇರೇಪಿಸುತ್ತದೆ ಮತ್ತು ಒತ್ತಾಯಿಸುತ್ತದೆ
* ಆಡಳಿತದಲ್ಲಿ ಪಕ್ಷಪಾತವಾಗದಂತೆ ತಡೆಯುತ್ತದೆ
* ಕಾರ್ಯದಲ್ಲಿ ಶೀಘ್ರಗತಿಯ ಸೇವಾ ತತ್ವ ಪರಿಪಾಲನೆಯಾಗುತ್ತದೆ
* ಸತ್ಯ, ನ್ಯಾಯ, ನಿಷ್ಠೆಗೆ ಆಡಳಿತದಲ್ಲಿ ಹೆಚ್ಚು ಬೆಲೆ ಬರುತ್ತದೆ
* ನೈತಿಕ, ಮಾನವೀಯ, ಸಂವಿಧಾನಿಕ ಮೌಲ್ಯಗಳು ಸಾಕಾರವಾಗುತ್ತವೆ.

ಆದ್ದರಿಂದ ಪ್ರತಿ ಸಾರ್ವಜನಿಕ ಅಧಿಕಾರಿಯು ಅಂತರಾತ್ಮದ ಅರಿವನ್ನು ಹೊಂದಬೇಕಾಗಿದೆ.

**ಪ್ರಶ್ನೆ 5) ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ಭಾರತ ಸರ್ಕಾರ 2005ರಲ್ಲಿ ಮಾಹಿತಿ ಹಕ್ಕು ಅಧಿನಿಯಮವನ್ನು ಜಾರಿಗೆ ತಂದಿದೆ. ಇದರಂತೆ ಭಾರತದ ಆಡಳಿತದಲ್ಲಿ ಆದಂತಹ ಬದಲಾವಣೆಗಳೇನು ಎಂಬುದನ್ನು ಸವಿವರವಾಗಿ ವಿವರಿಸಿರಿ.**

**ಉತ್ತರ:** ಆಡಳಿತದಲ್ಲಿ ಪಾರದರ್ಶಕತೆಯು ಇಂದು ತುರ್ತು ಅಗತ್ಯವಾಗಿದೆ. ಭಾರತ ಸರ್ಕಾರ 2005ರಲ್ಲಿ ಮಾಹಿತಿ ಹಕ್ಕು ಅಧಿನಿಯಮವನ್ನು ಜಾರಿಗೆ ತಂದಿದೆ. ಇದರ ಪರಿಭಾಷೆ ಏನೆಂದರೆ ಸಾರ್ವಜನಿಕರು ತಮ್ಮ ಮೇಲೆ ಪರಿಣಾಮ ಬೀರಬಲ್ಲ ಯಾವುದೇ ಮಾಹಿತಿಯನ್ನು ಸರ್ಕಾರ / ಸರ್ಕಾರದ ಸಂಸ್ಥೆಗಳಿಂದ ಪಡೆಯಲು ಹಕ್ಕನ್ನು ಪಡೆದಿರುತ್ತಾರೆ.

ಒಂದು ದೃಷ್ಟಿಯಲ್ಲಿ ಮಾಹಿತಿ ಹಕ್ಕು ಮೂಲಭೂತ ಹಕ್ಕಿನಂತೆಯೇ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹವಾದುದು. ಇದು ಸರಿಯಾಗಿ 10 ವರ್ಷಗಳ ಅವಧಿಯಲ್ಲಿ (2005–2015) ತನ್ನ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದೆ. ಈ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ತರಲು ನೆರವಾಗಿದೆ. ಸಾಮಾಜಿಕ ಕಾರ್ಯಕರ್ತರು ಮಾಹಿತಿ ಪಡೆಯುತ್ತಿರುವುದರಿಂದಾಗಿ ಸಾರ್ವಜನಿಕ ಸೇವಕರು ಅತ್ಯಂತ ಜಾಗರೂಕತೆಯಿಂದ ಕಾರ್ಯನಿರ್ವಹಿಸುವಂತೆ ಮಾಡಿದೆ.

ಕಾಯ್ದೆಯ ಪ್ರಕಾರ ಇಲಾಖೆಯ ಕೆಲ ಮಾಹಿತಿಗಳು ಸ್ವಯಂ ಘೋಷಣೆಯನ್ನು ಅಂತರ್ಜಾಲ ತಾಣದಲ್ಲಿ ಮಾಡುವ ಮೂಲಕ ಪಾರದರ್ಶಕತೆ ಸಾಧಿಸಲು ನೆರವಾಗಿದೆ. ಟೆಂಡರ್ ಪ್ರಕ್ರಿಯೆ, ನೇಮಕಾತಿ, ಹಣಕಾಸು ವ್ಯವಹಾರಗಳಲ್ಲಿ ಆಗುತ್ತಿದ್ದ ಮೋಸ, ಹಣದ ಅಪವ್ಯಯವನ್ನು ತಡೆಯಲು ನೆರವಾಗಿದೆ.

ಕುಡಿಯುವ ನೀರು ಪೂರೈಕೆಯಲ್ಲಿ ಆದ ಅವ್ಯವಹಾರ ಕುರಿತು ಬೆಳಗಾವಿಯಲ್ಲಿ ಈ ಅಧಿನಿಯಮದ ಮೂಲಕವೇ ಬಹಿರಂಗವಾಗಿತ್ತು. ಇಂತಹ ಸಾವಿರಾರು ಯಶೋಗಾಥೆಗಳು ಹೇಳಬಹುದು. ಇದು ಆಡಳಿತದಲ್ಲಿ ಪಾರದರ್ಶಕತೆ ತಂದಿದೆ ಮತ್ತು ಭ್ರಷ್ಟಾಚಾರ ಕಡಿಮೆ ಮಾಡುವಲ್ಲಿ ಯಶಸ್ವಿಯಾಗಿದೆ.

**ಪ್ರಶ್ನೆ 6) ರಾಜಕೀಯದ ಮೂಲ ಗುರಿ ದೇಶ–ಸೇವೆ ಎಂಬುದನ್ನು ನಮ್ಮನ್ನು ಆಳುವವರು ಅರ್ಥೈಸಿಕೊಳ್ಳಬೇಕಾಗಿದೆ ಎಂಬ ಮಾತು ಪ್ರಸ್ತುತ ರಾಜಕಾರಣವು ಪಾರದರ್ಶಕತೆಯಿಂದ ಕೂಡಿಲ್ಲ ಎಂಬುದನ್ನು ಹೇಳುತ್ತದೆ. ಇದು ಸರಿಯೇ?**

**ಉತ್ತರ:** ಭಾರತದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಮತ್ತು ದೇಶ ಸೇವೆ ಸಲ್ಲಿಸುವ ಅದಮ್ಯ ಅಭಿಲಾಷೆ ಇತ್ತು. ಅದರಿಂದಲೇ ಅವರು ಅಂದುಕೊಂಡಿದ್ದನ್ನು ಸಾಧಿಸಲು ಯಶಸ್ವಿಯಾದರು. ಸ್ವಾತಂತ್ರ್ಯ ನಂತರದ ಕಾಲದಲ್ಲಿ ದೇಶಸೇವೆಯ ಹೆಸರಿನಲ್ಲಿ ರಾಜಕೀಯ ಪ್ರವೇಶವನ್ನು ಪಡೆಯುವ ಪ್ರಕ್ರಿಯೆ ಆರಂಭವಾಯಿತು. ಹಾಗೆಯೇ ಬಹುತೇಕ ರಾಜಕಾರಣಿಗಳು ರಾಜಕೀಯ ಮಾಡಿದರು ಮತ್ತು ಮಾಡುತ್ತಲೇ ಇದ್ದಾರೆ.

ಈ ವಿಷಯದಲ್ಲಿ ರಾಜಕೀಯ ಮತ್ತು ದೇಶಸೇವೆ ಮಾಡುವ ಮಹಾನ್ ನಾಯಕರು ಇದ್ದಾರೆ. ಆದರೆ ಅವರ ಸಂಖ್ಯೆ ಕಡಿಮೆ ಆಗತೊಡಗಿದೆ. ದೇಶದ ಭವಿಷ್ಯದ ದೃಷ್ಟಿಯಿಂದ ಈ ಬೆಳವಣಿಗೆ ಒಳ್ಳೆಯದಲ್ಲ. ರಾಜಕೀಯ ಶುದ್ದೀಕರಣ ಇಂದಿನ ತುರ್ತು ಅಗತ್ಯವಾಗಿದೆ. ಪ್ರಜಾಪ್ರತಿನಿಧಿ ಕಾಯ್ದೆಯನ್ನು ಅಮೂಲಾಗ್ರವಾದ ಬದಲಾವಣೆ ಮಾಡಿ ರಾಜಕೀಯ ಶುದ್ದಿಕರಣಕ್ಕಾಗಿ ಪ್ರಯತ್ನಿಸಬೇಕು. ಆ ಮೂಲಕ ದೇಶಸೇವೆ ಮನೋಭಾವನೆಯನ್ನು ಹೆಚ್ಚಿಸಬೇಕು.

ಪ್ರಸ್ತುತ ಸ್ಥಿತಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ, ಇಂದಿರಾಗಾಂಧಿ, ನೇತಾಜಿ, ಅಟಲ್‌ಜಿ, ದೀನದಯಾಳ್ ಉಪಾಧ್ಯಾಯ, ಮೊರಾರ್ಜೀ ದೇಸಾಯಿ ಮುಂತಾದವರಂತೆ ದೇಶಸೇವೆಯೇ ಈಶ ಸೇವೆ ಎಂದು ಪಣತೊಡುವ ರಾಜಕಾರಣಿಗಳ ಅಗತ್ಯವಿದೆ.

ರಾಜಕೀಯದ ಮೂಲ ಗುರಿ ದೇಶಸೇವೆ ಎಂಬುದನ್ನು ನಮ್ಮನ್ನು ಆಳುವವರು ಅರ್ಥೈಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಸಾರ್ವಜನಿಕರು ತಮ್ಮ ಮತ ಕರ್ತವ್ಯ ಸರಿಯಾಗಿ ಪಾಲಿಸಬೇಕಾಗಿದೆ.

**ಪ್ರಶ್ನೆ 7) ವ್ಯಕ್ತಿಗಿಂತ ಯಾವತ್ತು ದೇಶವೇ ಶ್ರೇಷ್ಠ. ನಮ್ಮಿಂದ ದೇಶವಲ್ಲ. ದೇಶವಿರುವುದರಿಂದಲೇ ನಾವು ಇದ್ದೇವೆ ಎಂಬುದನ್ನು ಪ್ರತಿಯೊಬ್ಬ ದೇಶವಾಸಿ ಅರಿತು ನಡೆಯಬೇಕು ಎಂಬ ಮಾತನ್ನು ವಿಮರ್ಶಿಸಿರಿ.**

**ಉತ್ತರ:** ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ತನ್ನ ದೇಶದ ಬಗ್ಗೆ ಅದಮ್ಯವಾದ ಅಭಿಮಾನ ಪ್ರೀತಿ ಅಗತ್ಯವಾಗಿ ಇರಬೇಕು. ದೇಶ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತ, ದೇಶಕ್ಕಾಗಿ ನಾನು ಏನು ಕೊಟ್ಟಿದ್ದೇನೆ ಎಂಬುದು ಮುಖ್ಯ. ಆದರೆ ಯಾವುದೇ ಕಾರಣಕ್ಕೂ ದೇಶದ ಕುರಿತು ದುರಾಭಿಮಾನ ಸಲ್ಲದು.

ತನ್ನ ದೇಶವನ್ನು ಪ್ರೀತಿಸಲಾರದವ ಮತ್ತೇನನ್ನಾದರೂ ಪ್ರೀತಿಸಿದರೆ ಅದಕ್ಕೆ ಅರ್ಥವಿರುವುದಿಲ್ಲ. ದೇಶವೆಂದರೆ ನಮ್ಮ ತಾಯಿಯ ಸಮಾನ. ನಮಗೆ ಅನ್ನ, ಆಶ್ರಯ, ನೆಲೆ ಕೊಟ್ಟ ತಾಯಿ ನಾಡಿನ ಬಗ್ಗೆ ಪ್ರೀತಿ ಇದ್ದರೆ ಸಾಲದು, ಸಮಾಜಕ್ಕೆ ದೇಶಕ್ಕೆ ಒಳಿತಾಗುವ ರೀತಿಯಲ್ಲಿ ನಾವು ಕಾರ್ಯ ನಿರ್ವಹಿಸಬೇಕು. ಆಗಲೇ ದೇಶಾಭಿಮಾನ ಪ್ರೀತಿಗೆ ಬೆಲೆ ಬರುತ್ತದೆ.

ವ್ಯಕ್ತಿಗಿಂತ ಯಾವತ್ತು ದೇಶವೇ ಶ್ರೇಷ್ಠ. ನಮ್ಮಿಂದ ದೇಶವಲ್ಲ, ದೇಶವಿರುವುದರಿಂದಲೇ ನಾವು ಇದ್ದೇವೆ ಎಂಬುದನ್ನು ಅರಿಯಬೇಕು. ದೇಶದ ಪ್ರೀತಿಯನ್ನು ಇನ್ನೊಬ್ಬರಿಗೆ ನೋವಾಗದಂತೆ ಅಭಿವ್ಯಕ್ತ ಪಡಿಸಬೇಕು. ಪ್ರತಿಯೊಬ್ಬ ಪ್ರಜೆಯು ತನ್ನ ದೇಶದ ಸರ್ವತೋಮುಖ ಏಳಿಗೆಗಾಗಿ ಕಾರ್ಯನಿರ್ವಹಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಅದನ್ನು ನಾವು ಪಾಲಿಸಬೇಕು. ದೇಶಕ್ಕಾಗಿ ಪ್ರಾಣ ಕೊಡಲು ಸೈನಿಕರು ಸಿದ್ದವಿರುವಾಗ ನಾವು ಒಳ್ಳೆಯ ಕಾರ್ಯ ಮಾಡುವ ಮೂಲಕ ದೇಶದ ಪ್ರೀತಿಯನ್ನು ಅಭಿವ್ಯಕ್ತ ಪಡಿಸಬೇಕಾಗಿದೆ.

**ಪ್ರಶ್ನೆ 8) ಭಾರತ ಸಮಾಜವು ಲಿಂಗ ಸಮಾನತೆಯಲ್ಲಿ ಸಂತೃಪ್ತ ಭಾವನೆಯನ್ನು ತಾಳಿದೆಯೇ? ಇಲ್ಲದಿದ್ದರೆ ಅದಕ್ಕೆ ಕಾರಣಗಳನ್ನು ವಿವರಿಸುತ್ತಾ ಅದರ ಅವಶ್ಯಕತೆಯನ್ನು ಬರೆಯಿರಿ.**

**ಉತ್ತರ: "**ಜನನಿ ಜನ್ಮ ಭೂಮಿಷ್ಟ, ಸ್ವರ್ಗಾದಪೀ ಗರಿಯಷಿ**", "**ಯತ್ರ ನಾರ್ಯಂತು ಪೂಜ್ಯಂತೆ ರಮಂತೆ ತತ್ರ ದೇವತಾಹ**"** ಇವು ಭಾರತೀಯ ಸಾಂಸ್ಕೃತಿಕ ಮೌಲ್ಯಗಳಲ್ಲಿ ಬಿಂಬಿತವಾಗಿರುವ ಸ್ತ್ರೀಯರ ಕುರಿತಾದ ಪ್ರಸಿದ್ದ ನುಡಿಗಳು. ಇದಕ್ಕೆ ಪೂರಕವಾದ ಸ್ವಾಮಿ ವಿವೇಕಾನಂದರ ಹೇಳಿಕೆಯೂ ಸೂಕ್ತವಾಗಿದೆ.

ಭಾರತವನ್ನೇ ನಾವು ಮಾತೆ ಎಂದು ಪೂಜ್ಯ ಭಾವನೆಯಿಂದ ಕಾಣುತ್ತಾ ಬಂದಿದ್ದೇವೆ. ಅದು ಸ್ತ್ರೀಯರಿಗೆ ನೀಡಿದ ಗೌರವ. ಪ್ರತಿಯೊಂದು ನದಿಗಳಿಗೆ ಸ್ತ್ರೀಯರ ಹೆಸರನ್ನು ಇಟ್ಟಿರುವುದು ಸ್ತ್ರೀ ಸಬಲೀಕರಣ ಮತ್ತು ಅವಳ ತ್ಯಾಗ ಗುಣಕ್ಕೆ ಗೌರವ ಸಂಕೇತವಾಗಿದೆ. ಆದರೆ ವಾಸ್ತವಿಕವಾಗಿ ಕೆಲವೇ ಕೆಲವು ವ್ಯಕ್ತಿಗಳ ಕೃತ್ಯಗಳಿಂದ ನಾವಿಂದು ವಿಶ್ವದಲ್ಲಿಯೇ ತಲೆ ತಗ್ಗಿಸುವಂತಾಗಿದೆ.

ಶತಮಾನಗಳಿಂದಲೂ ದ್ವಿತೀಯ ದರ್ಜೆ ಪ್ರಜೆಗಳಂತೆ ಸ್ತ್ರೀಯನ್ನು ಕೀಳಾಗಿ ಕಾಣುವ ರೀತಿ ನಮ್ಮಲ್ಲಿದೆ. ಅವಳ ಮೇಲಿನ ಶೋಷಣೆ ಮಿತಿ ಮೀರಿದೆ. ಅವಳ ಮೇಲೆ ಅತ್ಯಾಚಾರ, ಹಿಂಸೆ, ಹೀನ ದೃಷ್ಟಿ ಮೂಲಕ ಅವಳ ಚಾರಿತ್ರ್ಯ ಹರಣ ಮಾಡುತ್ತಾ ಕೆಲವು ವಿಕೃತಿ ಮನಸ್ಸಿನ ಪುರುಷರು ವಿಜೃಂಭಿಸುತ್ತಿದ್ದಾರೆ.

ಈ ಸ್ಥಿತಿಯನ್ನು ನಾವು ಬದಲಾಯಿಸಬೇಕು. ಸ್ವಾಮಿ ವಿವೇಕಾನಂದರ ಅಪೇಕ್ಷಿಸಿದ ರೀತಿಯಲ್ಲಿ ಸ್ತ್ರೀಯರ ಘನತೆಯನ್ನು ಮರುಸ್ಥಾಪಿಸಬೇಕು. ಇದಕ್ಕಾಗಿ ಪ್ರತಿಯೊಬ್ಬರು ಸಂಕಲ್ಪ ಮಾಡಬೇಕು.

**ಪ್ರಶ್ನೆ 9) ಪ್ರಾಮಾಣಿಕತೆ ಮತ್ತು ಅಭಿಕ್ಷಮತೆ ಎಂದರೇನು? ಈ ಎರಡು ಒಂದೇ ನಾಣ್ಯದ ಎರಡು ಮುಖಗಳಂತೆ ಎಂಬುದನ್ನು ನಿಮ್ಮ ಮಾತಿನಲ್ಲಿ ವಿವರಿಸಿರಿ.**

**ಉತ್ತರ:** ಸಾರ್ವಜನಿಕ ಆಡಳಿತದಲ್ಲಿ ಆಗಲೀ, ವೈಯಕ್ತಿಕವಾಗಿಯೇ ಆಗಲೀ ಪ್ರಾಮಾಣಿಕತೆ ಅತ್ಯಗತ್ಯ. ಇಲ್ಲದಿದ್ದರೆ ವ್ಯಕ್ತಿತ್ವಕ್ಕೆ ಗೌರವವಿರುವುದಿಲ್ಲ. ಪ್ರಾಮಾಣಿಕತೆ ಎಂದರೆ ವ್ಯಕ್ತಿ ತನ್ನ ಕಾರ್ಯದಲ್ಲಿ ಪಕ್ಷಪಾತಿಯವಾಗಿಲ್ಲದೇ ಸಮಗ್ರತೆಯಿಂದ ದಕ್ಷತೆಯಿಂದ ಕರ್ತವ್ಯ ಪರಿಪಾಲಿಸುವುದೇ ಆಗಿದೆ.

ಅಭಿಕ್ಷಮತೆ ಎಂಬುದು ಸಾರ್ವಜನಿಕ ಅಧಿಕಾರಿಯಾಗಿರಲಿ ಅಥವಾ ಬೇರೆ ಯಾವುದೇ ವ್ಯಕ್ತಿಯು ನಿರ್ದಿಷ್ಟ ಕಾರ್ಯ ಸಾಧಿಸಲು ಇರುವ ವಿಶೇಷವಾದ ಕಾರ್ಯ ಸಾಮರ್ಥ್ಯ ಅಥವಾ ಒಲವು.

ಆಡಳಿತದ ಹಿನ್ನೆಲೆಯಲ್ಲಿ ಪ್ರಾಮಾಣಿಕತೆಯಿಂದ ಅಭಿಕ್ಷಮತೆ ಹೆಚ್ಚುತ್ತದೆ. ಇದರಿಂದ ಅವೆರಡು ಒಂದೇ ನಾಣ್ಯದ ಎರಡು ಮುಖಗಳೆಂದು ಹೇಳುವುದರಲ್ಲಿ ತಪ್ಪಿಲ್ಲ. ಪ್ರಾಮಾಣಿಕತೆ ಮತ್ತು ಅಭಿಕ್ಷಮತೆಯನ್ನು ನಾವು ಪ್ರಯತ್ನ ಪೂರ್ವಕವಾಗಿ ಬೆಳೆಸಿಕೊಳ್ಳಬೇಕು. ತನ್ನ ತಿಳುವಳಿಕೆಯ ಮಿತಿಯಿಂದ ಚಿಕ್ಕಂದಿನಲ್ಲಿ ಅಪ್ರಾಮಾಣಿಕನಾದ ಹುಡುಗನು ಮುಂದೆ ಒಳ್ಳೆಯ ಅಧ್ಯಯನ, ಹಲವು ವ್ಯಕ್ತಿಗಳ ಪ್ರಭಾವದಿಂದ ಪ್ರಾಮಾಣಿಕನಾಗಲು ಅವಕಾಶವಿದೆ. ಕಾರ್ಯಕ್ಷಮತೆಯಾದ ಅಭಿಕ್ಷಮತೆಯನ್ನು ಗಳಿಸಿಕೊಳ್ಳಲು ಪ್ರಾಮಾಣಿಕತೆ ಅಗತ್ಯವಿದೆ.

ಸಾರ್ವಜನಿಕ ಆಡಳಿತ ಅಥವಾ ಸೇವಕನಲ್ಲಿ ಈ ಎರಡು ವಿಷಯಾಂಶಗಳಿಗೆ ಬಹಳ ಪ್ರಾಮುಖ್ಯತೆ ಇದೆ. ಇದರಿಂದ ಅತ್ಯುತ್ತಮವಾದ ಫಲಿತಾಂಶ ಪಡೆಯಲು ಅವಕಾಶವಿರುತ್ತದೆ.

**ಪ್ರಶ್ನೆ 10) ನಿಮ್ಮ ನೆಚ್ಚಿನ ಆದರ್ಶ ನಾಯಕರು ಯಾರು? ಅವರನ್ನು ನೀವು ಆದರ್ಶವೆಂದು ಕರೆಯಲು ಕಾರಣವನ್ನು ಸಮರ್ಥಿಸಿರಿ.**

**ಉತ್ತರ:** ನನ್ನ ನೆಚ್ಚಿನ ಆದರ್ಶ ನಾಯಕರು ಲಾಲ್ ಬಹದ್ದೂರ್ ಶಾಸ್ತ್ರಿ. 1962–64ರ ಅವಧಿಯಲ್ಲಿ ದೇಶದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಈ ನಾಯಕ ನನ್ನ ಮೇಲೆ ಅಗಾಧವಾದ ಪ್ರಭಾವ ಬೀರಿದ್ದಾರೆ. ಅವರ ಪ್ರಾಮಾಣಿಕತೆ, ಸರಳತೆ ದೇಶದ ಕುರಿತಾದ ಉತ್ಕಟ ದೇಶಾಭಿಮಾನ, ಕಾರ್ಯಬದ್ಧತೆ, ಸಮಗ್ರತೆಯ ಗುಣಗಳನ್ನು ನಾನು ಎಂದೆಂದಿಗೂ ಪಾಲಿಸಲು ಇಷ್ಟಪಡುತ್ತೇನೆ.

ಓರ್ವ ಪ್ರಧಾನಿಯಾಗಿ ಅವರಷ್ಟು ಸರಳ ವ್ಯಕ್ತಿ ಇತಿಹಾಸದಲ್ಲಿ ಯಾರು ಇಲ್ಲ ಎಂಬುದೇ ಪ್ರೇರಣೆಯಾಗಿದೆ. ತಮ್ಮ ನಿತ್ಯ ಜೀವನ (ಸರಳ) ಸಾಗಿಸಲು ತಮಗೆ ಸಿಗುವ ಸಂಬಳ ಸಾಕಾದಾಗ ಉಳಿದ ಮೊತ್ತವನ್ನು ಅವರು ಸರ್ಕಾರಕ್ಕೆ ಮರಳಿಸಿದ್ದರು. ಅವರ ಕಡಿಮೆ ಅವಧಿಯ ಅಧಿಕಾರದಲ್ಲಿ ಒಂದೇ ಒಂದು ಚಿಕ್ಕ ಕಪ್ಪು ಚುಕ್ಕೆ ಬೀಳದಂತೆ ಕಾರ್ಯ ನಿರ್ವಹಿಸಿದರು.

ದೇಶದ ಕುರಿತಾದ ಅವರ ಅಭಿಮಾನ ಬದ್ದತೆ ನನ್ನನ್ನು ಯಾವತ್ತು ಎಚ್ಚರಿಸುತ್ತದೆ. ಅವರ ದೇಹ ಕುಳ್ಳಗಿತ್ತು, ಆದರೆ ಮನಸ್ಸು, ಸಂಕಲ್ಪ, ನಿರ್ಣಯಗಳು ತುಂಬಾ ಬೃಹತ್ ಅಂದರೆ, ಅಗಸದ ಎತ್ತರ ಹೊಂದಿದ್ದವು. ಪಾಕಿಸ್ತಾನದೊಂದಿಗಿನ ಅವರ ಯುದ್ದ ನಿಶ್ಚಯ ಅವರ ದೇಶಾಭಿಮಾನ ಮತ್ತು ದಕ್ಷತೆಗೆ ಸಾಕ್ಷಿ. ಈ ರೀತಿಯಾದ ಹಲವು ವ್ಯಕ್ತಿಗಳ ಉತ್ತಮ ಗುಣಗಳು ನನ್ನನ್ನು ಪ್ರಭಾವಿಸಿದೆ, ಪ್ರಭಾವಿಸುತ್ತಲೇ ಇವೆ.

**ಪ್ರಶ್ನೆ 11) ಅಧಿಕಾರ ವ್ಯಕ್ತಿಯನ್ನು ಭ್ರಷ್ಟನನ್ನಾಗಿಸುತ್ತದೆ ಎಂಬ ಮಾತನ್ನು ನೀವು ಒಪ್ಪುತ್ತೀರಾ? ನಿಮ್ಮ ಅಭಿಪ್ರಾಯವನ್ನು ಸೂಕ್ತ ಕಾರಣದಿಂದ ಸಮರ್ಥಿಸಿ.**

**ಉತ್ತರ:** ವ್ಯಕ್ತಿಯ ನಿಜವಾದ ವ್ಯಕ್ತಿತ್ವದ ಸ್ವರೂಪವನ್ನು ನಾವು ನಿರ್ಧರಿಸಲು ಅಬ್ರಾಹಂ ಲಿಂಕನ್‌ರ ಮಾತು ಬಹಳ ಪರಿಣಾಮಕಾರಿಯಾದುದು. ಅಧಿಕಾರ ವ್ಯಕ್ತಿಯನ್ನು ಭ್ರಷ್ಟನನ್ನಾಗಿಸುತ್ತದೆ. ಅತಿಯಾದ ಅಧಿಕಾರ ಮತ್ತೂ ಭ್ರಷ್ಟನನ್ನಾಗಿಸುತ್ತವೆ ಎಂದು ಅವರು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ವ್ಯಕ್ತಿ ತಾನು ಅಧಿಕಾರ ಆಕ್ರಮಿಸಿದಾಗ ಅವನ ವ್ಯಕ್ತಿತ್ವದಲ್ಲಿ ಯಾವ ಬದಲಾವಣೆಗಳು ಆಗುತ್ತವೆ, ಹೇಗೆ ಪ್ರತಿಕ್ರಯಿಸುತ್ತಾನೆ, ಹೇಗೆ ಕಾರ್ಯ ನಿರ್ವಹಿಸುತ್ತಾನೆ ಎಂಬುದನ್ನು ಸರಳವಾಗಿ ಗುರುತಿಸಬಹುದು.

ಆದರೆ ಮನುಷ್ಯ ಅಧಿಕಾರ ಇದ್ದರೂ ಇಲ್ಲದೇ ಇದ್ದರೂ ತನ್ನ ನೈಜವಾದ ವ್ಯಕ್ತಿತ್ವದಿಂದ ವಿಮುಖನಾಗಬಾರದು. ವಿಶ್ವದಲ್ಲಿ ಅದೆಷ್ಟು ನಾಯಕರು ಎಂತಹ ಅಧಿಕಾರ ಪಡೆದರು. ನೈತಿಕತೆಯು ಅದರ ವ್ಯಕ್ತಿತ್ವ ಬದಲಾಗದೇ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದು ಯಥೇಚ್ಚ ಉದಾಹರಣೆಗಳಿವೆ. ಜವಹಾರ್‌ಲಾಲ್ ನೆಹರು, ಶಾಸ್ತ್ರಿ, ಅಟಲ್‌ಜೀ, ಅಂಬೇಡ್ಕರ್, ತಿಲಕ್, ಮ್ಯಾರ್ಟಿನ ಲೂಥರ್ ಕಿಂಗ್ ಜ್ಯೂನಿಯರ್, ನೆಲ್ಸೆನ್ ಮಂಡೇಲಾ, ಇವರೆಲ್ಲಾ ಪ್ರಭಾವಿಯಾದುದು ತಮ್ಮ ನಿಜವಾದ ವ್ಯಕ್ತಿತ್ವದಿಂದಲೇ.

**ಪ್ರಶ್ನೆ 12) ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಮಾತಿನ ಆಚರಣೆಯು ಸಾರ್ವಜನಿಕ ಸೇವಕನಲ್ಲಿ ಎಷ್ಟು ಅವಶ್ಯಕವಾಗಿದೆ? ಈ ತತ್ವದಂತೆಯೇ ನೀವು ನಡೆದುಕೊಳ್ಳುತ್ತೀರಾ?**

**ಉತ್ತರ:** ಕಾಯಕವೇ ಕೈಲಾಸ, ಕರ್ಮಣ್ಯೇ ವಾಧಿಕಾರಸ್ತೆ ಮಾ ಫಲೇಷು ಕದಾಚನಾ, ಎಂಬ ಉಕ್ತಿಗಳ ಅರಿವು ಈಗಿನ ಬಹುತೇಕ ಅಧಿಕಾರಿಗಳಿಗೆ ಇಲ್ಲ. ಕಾಯಕ ಯೋಗಿಗಳಾಗಿ ನಮ್ಮ ಕೆಲಸ ನಿರ್ವಹಿಸಬೇಕು. ಅದಕ್ಕೆ ದೇವರು ನೆಮ್ಮದಿ ಶಾಂತಿಯನ್ನು ಕರುಣಿಸುತ್ತಾನೆ. ಆದರೂ ಕೆಲವರು ಕೇವಲ ಸಂಬಳಕ್ಕಾಗಿ ದುಡಿಯುವ ಕನಿಷ್ಠವಾದ ಮನೋಭಾವ ಹೊಂದಿದ್ದಾರೆ. ಇದು ಸಾರ್ವಜನಿಕ ಸೇವಕರಿಗೆ ಶೋಭೆಯಲ್ಲ.

ಕರ್ತವ್ಯ ಪರಿಪಾಲನೆಯಿಂದ ಸಂಬಳ ಬರುತ್ತದೆ ಎಂದು ದುಡಿಯಬಾರದು. ಆತ್ಮತೃಪ್ತಿಗಾಗಿ ಕೆಲಸ ನಿರ್ವಹಿಸಬೇಕು. ನಾನು ಸಂಬಳಕ್ಕಿಂತ ಹೆಚ್ಚಾಗಿ ಆತ್ಮತೃಪ್ತಿಗಾಗಿ ಕಾರ್ಯ ನಿರ್ವಹಿಸುತ್ತೇನೆ. ಈ ಕಾರ್ಯದಿಂದ ಉಪಜೀವನಕ್ಕಾಗಿ ಸಂಬಳದ ಅಗತ್ಯವು ಇದೇ ಆದರೇ ಎಲ್ಲವೂ ಸಂಬಳವೊಂದೇ ಅಲ್ಲ.

ಕೆಲಸದಲ್ಲಿ ನೆಮ್ಮದಿ ಕಾಣುವ ಆ ಮೂಲಕ ಸಂತೋಷವಾಗಿರುವ ಅಗತ್ಯ ಇದೆ. ಸಂಬಳ ನಮ್ಮ ಕಾರ್ಯಕ್ಕೆ ಪ್ರತಿಫಲವಾಗಿದೆ. ನಮ್ಮ ಸೇವೆಯ ಅಂತಿಮ ಗುರಿ ಸೇವೆಯೇ ಆಗಿರಬೇಕು ಹೊರತು ಸಂಬಳವಲ್ಲ. ಸೇವೆಯಲ್ಲಿ ಸಂತೋಷವನ್ನು ಕಾಣು ಎಂಬುದೇ ನನ್ನ ದೃಢವಾದ ನಂಬಿಕೆ ಮತ್ತು ನಾನು ಅದನ್ನೇ ಕೊನೆವರೆಗೂ ಕಾಯ್ದುಕೊಳ್ಳುತ್ತೇನೆ.

**ಪ್ರಶ್ನೆ 13) ಸತ್ಯನಿಷ್ಠೆ ಎಂದರೇನು? ವರ್ತಮಾನದಲ್ಲಿ ಸತ್ಯನಿಷ್ಠೆಗೆ ಇರುವ ತೊಡಕುಗಳು ಯಾವುವು?**

**ಉತ್ತರ:** ಸತ್ಯನಿಷ್ಠೆ ಎಂದರೆ ಪ್ರಾಮಾಣಿಕತೆ, ಸಮಗ್ರತೆ, ನ್ಯಾಯ, ನೀತಿ, ದಕ್ಷತೆಯಿಂದ ಕರ್ತವ್ಯ ನಿರ್ವಹಿಸುವ ವಿಧಾನವಾಗಿದೆ. ಸತ್ಯಕ್ಕೆ ಅಚಲವಾದ ನಿಷ್ಠೆಯನ್ನು ಹೊಂದಿರುವುದು ಇದರ ತಾತ್ಪರ್ಯ. ಸಾರ್ವಜನಿಕ ಜೀವನದಲ್ಲಿ ಅಧಿಕಾರಿಯು ಸತ್ಯನಿಷ್ಠನಾಗಿರಬೇಕು. ಇದರಿಂದ ಮಾತ್ರ ಸಮಗ್ರತೆಯನ್ನು ಕಾಯ್ದುಕೊಂಡು ವೃತ್ತಿಬದ್ದತೆ ವ್ಯಕ್ತಪಡಿಸಲು ಸಾಧ್ಯ.

ವರ್ತಮಾನದಲ್ಲಿ ಸತ್ಯನಿಷ್ಠೆ ಅನುಸರಿಸುವ ತೊಡಕುಗಳು ರಾಜಕೀಯ, ಬಾಹ್ಯ ಒತ್ತಡ, ಹಸ್ತಕ್ಷೇಪ, ಮೇಲಾಧಿಕಾರಿಗಳ ಅನೈತಿಕ ಅಲಿಖಿತ ಆದೇಶಗಳು ಇತ್ಯಾದಿ.

* ಸಾರ್ವಜನಿಕ (ಕೆಲವು)ರಿಂದ ವಿರೋಧ

* ವೃತ್ತಿಯ ಮೇಲೆ ಪರೋಕ್ಷವಾದ ಪರಿಣಾಮಗಳು

* ಸರಿಯಾದ ಬೆಂಬಲ ದೊರೆಯದೇ ಇರುವುದು

* ಕರ್ತವ್ಯ ಸ್ಥಳದಲ್ಲಿರುವ ಜನರ ಅಸತ್ಯನಿಷ್ಠೆಯ ಪ್ರಭಾವ ತೊಡಕುಗಳನ್ನು ನಮ್ಮ ಬದ್ಧತೆಯಿಂದ ನಿಭಾಯಿಸುವುದು

* ಬಾಹ್ಯ ಒತ್ತಡಗಳನ್ನು ನಿಯಂತ್ರಿಸುವುದು

* ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು

* ವೈಯಕ್ತಿಕ ಹಿತಾಸಕ್ತಿಗಿಂತ ಸತ್ಯನಿಷ್ಠೆಯ ತೊಡಕು ನಿವಾರಿಸಲು ಪ್ರಯತ್ನಿಸುವಿಕೆ

* ಕಾರ್ಯಸ್ಥಳದ ಇತರ ಉದ್ಯೋಗಿಗಳಲ್ಲಿ ಸತ್ಯನಿಷ್ಠೆಯನ್ನು ಬೆಳೆಸುವುದು ಈ ರೀತಿಯ ಕ್ರಮಗಳ ಮೂಲಕ ಬಗೆಹರಿಸಿಕೊಳ್ಳುವುದು.

**ಪ್ರಶ್ನೆ 14) ಹೊಣೆಗಾರಿಕೆ ಎಂದರೇನು? ವಿವರಿಸಿರಿ.**

**ಉತ್ತರ:** ಹೊಣೆಗಾರಿಕೆಯು ಸಾರ್ವಜನಿಕ ಸೇವೆಯ ಅಗತ್ಯ ಅಂಶ. ಸಾರ್ವಜನಿಕ ಸೇವಕನಾದವನು ತನ್ನ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುವಾಗ ಅಲ್ಲಿನ ಪ್ರತಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುವಿಕೆಯ ಕರ್ತವ್ಯವೇ ಹೊಣೆಗಾರಿಕೆ ಆಗಿದೆ. ತಾನು ಮಾಡಬೇಕಾದ ಮಾಡಿದ ಮತ್ತು ಮಾಡದೇ ಇರುವ ಕೆಲಸಕ್ಕೆ ಸಾರ್ವಜನಿಕ ಅಧಿಕಾರಿಯು ಹೊಣೆಗಾರ ಆಗಿರುತ್ತಾನೆ. ವೈಯಕ್ತಿಕ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಖಚಿತಪಡಿಸಲು ಕೈಗೊಳ್ಳಬೇಕಾದ ಕ್ರಮಗಳು ವೈಯಕ್ತಿಕವಾಗಿ ತನ್ನ ಕುಟುಂಬ ಸ್ನೇಹಿತ ಸಮುದಾಯಕ್ಕೆ, ವೈಯಕ್ತಿಕ ನೆಲೆಯಲ್ಲಿಯೇ ಉತ್ತಮ ಸಂಬಂಧ ಮುಂದುವರೆಸಿಕೊಂಡು ಹೋಗುವ ಕುರಿತು ತಿಳಿಸುವುದು. ವ್ಯಕ್ತಿಗೆ ತನ್ನ ಕರ್ತವ್ಯ ನಿರ್ವಹಣೆಯ ಕುರಿತು ಸರಿಯಾದ ತಿಳಿವಳಿಕೆ ತರಬೇತಿ ನೀಡುವುದು. ಸಾಮಾಜಿಕವಾಗಿ ನಿಭಾಯಿಸಬೇಕಾದ ಎಲ್ಲ ಕಾರ್ಯಗಳ ಕುರಿತು ಅರಿವು ಮೂಡಿಸುವುದು. ಉತ್ತಮ ವಾತಾವರಣ ನಿರ್ಮಿಸುವಿಕೆ, ಸ್ವಯಂ ನಮ್ಮ ಹೊಣೆಗಾರಿಕೆಯ ಪ್ರದರ್ಶನದ ಮೂಲಕ ಬೇರೆಯವರಿಗೆ ಮಾದರಿಯಾಗುವುದು. ಸತ್ಯ, ನ್ಯಾಯ, ನಿಷ್ಠೆ, ಬದ್ಧತೆ, ಕಾರ್ಯಕ್ಷಮತೆ ಹೆಚ್ಚಿಸಲು ಕ್ರಮಕೈಗೊಂಡು ಅದರೊಂದಿಗೆ ಹೊಣೆಗಾರಿಕೆಯನ್ನು ಖಚಿತಪಡಿಸುವುದು.

**ಪ್ರಶ್ನೆ 15) ಅಂತರಾಷ್ಟ್ರೀಯ ನೈತಿಕತೆ ಎಂದರೇನು? ಅಂತರಾಷ್ಟ್ರೀಯ ನೈತಿಕತೆ ಇರದೆ ಹೋದರೆ ಯಾವ ರೀತಿ ಪರಿಣಾಮಗಳನ್ನು ಎದುರಿಸಬೇಕಾಗಬಹುದು?**

**ಉತ್ತರ:** ಯಾವ ನೈತಿಕತೆಯ ಅಂಶಗಳನ್ನು ಪಾಲಿಸಿದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಳಿತಾಗುವುದೋ ಅದೇ ಅಂತರರಾಷ್ಟ್ರೀಯ ಮೌಲ್ಯಗಳು. ಇದರಲ್ಲಿ ಅನೇಕ ನೈತಿಕ ಅಂಶಗಳಿವೆ.

1) ಸಾಮಾನ್ಯ ಸರಕುಗಳ ನೈತಿಕತ

2) ನಿಶ್ಯಸ್ತ್ರೀಕರಣ

3) ಬೌದ್ಧಿಕ ಹಕ್ಕು

4) ಆಂತರಿಕ ಹಸ್ತಕ್ಷೇಪ

5) ವ್ಯಾಪಾರಿ ನೈತಿಕತೆ

ಜಾಗತಿಕವಾಗಿ ಮಾನವ ಹಕ್ಕು ಉತ್ತೇಜಿಸಲು ಮುಂತಾದವು ಹಣಕಾಸಿನ ನೆರವು ನೀಡುತ್ತವೆ. ಉದಾಹರಣೆಗೆ ಪರಿಸರ ಮಾಲಿನ್ಯ ದಲಿತರ ಶೋಷಿತರ ಪರವಾಗಿ ಅರಣ್ಯವಾಸಿ ಗ್ರಾಮದ ಜನರ ಪರವಾಗಿ ಈ ಕುರಿತು ಸ್ವಯಂ ಸೇವಾ ಸಂಸ್ಥೆಗಳು ಮಾನವ ಹಕ್ಕುಗಳ ರಕ್ಷಣೆಗಾಗಿ ಎಂದು ಹೇಳಿ ಹೋರಾಡುತ್ತಿರುತ್ತವೆ. ಅದಕ್ಕಾಗಿ ವಿದೇಶಿ ದಾನಿಗಳು, ದತ್ತಿಗಳು ಹಣದ ನೆರವು ನೀಡುತ್ತಾರೆ. ಈ ರೀತಿಯ ವಿಷಯಗಳಲ್ಲಿನ ನೈತಿಕ ವಿಷಯಗಳು,

* ಪ್ರಾಮಾಣಿಕತೆ
* ಯಾವುದೇ ದುರುದ್ದೇಶ ಇಲ್ಲದ ಸಹಾಯ
* ನ್ಯಾಯ ಪರ
* ಸತ್ಯಕ್ಕಾಗಿ ಹೋರಾಟ
* ನಿಜವಾದ ಮಾನವೀಯತೆ
* ಕಾನೂನು ಪಾಲನೆ
* ಈ ಹಿನ್ನೆಲೆಯಲ್ಲಿ ವಿವೇಚಿಸದೆ ದುರುದ್ದೇಶ ಅಂತರರಾಷ್ಟ್ರೀಯ ಹಣದ ನೆರವು ಅಗತ್ಯವಿದೆ. ಅದಕ್ಕಾಗಿ ಜಾಗೃತಿ ಮೂಡಿಸಬೇಕು.

**ಪ್ರಶ್ನೆ 16) ಮಗುವಿನ ಮೌಲ್ಯಗಳು ಬೆಳೆಯಲು ಮನೆ ಮತ್ತು ಶಾಲೆ ಸಹಕಾರಿಯಾಗುತ್ತವೆ. ಹೇಗೆ ವಿವರಿಸಿರಿ.**

**ಉತ್ತರ:** "ಮನೆಯೇ ಮೊದಲ ಪಾಠಶಾಲೆ" "ಜನನಿ ತಾನೇ ಮೊದಲ ಗುರು" ಎಂಬ ಮಾತಿನಂತೆ ಮೌಲ್ಯಗಳ ಬೋಧಿಸುವ ಕಾರ್ಯ ಮಗು ಹುಟ್ಟಿದ ತಕ್ಷಣ ಮನೆಯಿಂದಲೇ ಆರಂಭವಾಗುತ್ತದೆ. ಮನೆಯ ಪ್ರತಿಯೊಬ್ಬ ಸದಸ್ಯನು ಮಗುವಿನ ಮೌಲ್ಯಗಳು ಬೆಳೆಯಲು ಸಹಕಾರಿಯಾಗುತ್ತಾರೆ. ಇದರಿಂದ ಮಗು ಪ್ರೀತಿ, ಕರುಣೆ, ದಯೆ, ಅನುಕಂಪ ಮುಂತಾದ ಮೌಲ್ಯ ಕಲಿಯುತ್ತದೆ. ಕುಟುಂಬದ ನಂತರ ತರುಣ ವ್ಯವಸ್ಥೆಯಲ್ಲಿ ಪ್ರಭಾವಿಸುವ ಮತ್ತು ಮೌಲ್ಯ ಬೋಧಿಸುವುದು ಸಮಾಜ, ಸಮುದಾಯ ಒಳ್ಳೆಯದಾಗಿದ್ದರೆ ಒಳ್ಳೆಯ ಮೌಲ್ಯಗಳು ಆ ತರುಣನಲ್ಲಿ ಬೆಳೆಯುತ್ತವೆ. ಇಲ್ಲದೇ ಹೋದರೆ ಅಲ್ಲಿ ಕೆಟ್ಟ ಮೌಲ್ಯಗಳು ಕಲಿಯುವ ಸಾಧ್ಯತೆ ಇರುತ್ತದೆ. ಮನೆಯಲ್ಲಿ ತಾಯಿಯ ನಂತರ ತಿದ್ದಿ ತೀಡಿ ಬೆಳೆಸುವ ಕಾರ್ಯ ಶಾಲೆಯ ಮೂಲಕ ಶಿಕ್ಷಕರದ್ದು. ಪಠ್ಯ ಪಠ್ಯೇತರ ಚಟುವಟಿಕೆ ಸರಿಯಾಗಿ ಬೋಧಿಸುವ ಮೂಲಕ ವ್ಯಕ್ತಿತ್ವಕ್ಕೆ ಒಂದು ಸರಿಯಾದ ರೂಪ ನೀಡುತ್ತಾರೆ. ಹೀಗೆ ಮಗುವಿನ ಮೌಲ್ಯಗಳು ಬೆಳೆಯಲು ಮನೆ ಮತ್ತು ಶಾಲೆ ಸಹಕಾರಿಯಾಗುತ್ತವೆ.

**ಪ್ರಶ್ನೆ 17) ಸಾಂಸ್ಥಿಕ ಆಡಳಿತ ಎಂದರೇನು? ಅದಕ್ಕೆ ಇರುವ ಸವಾಲುಗಳು ಯಾವುವು?**

**ಉತ್ತರ:** ಸಾಂಸ್ಥಿಕ ಆಡಳಿತವೆಂದರೆ ಖಾಸಗಿಯಾದ ವ್ಯಕ್ತಿಗಳ ಗುಂಪಿನ ಕಾರ್ಯ ನಿರ್ವಹಣಾ ಘಟಕ. ಇದರ ಸಂಸ್ಥೆಯ ಮಾಲೀಕರ ಧ್ಯೇಯ ಲಾಭದೊಂದಿಗೆ ಸೇವೆ ಒದಗಿಸುವುದೇ ಆಗಿರುತ್ತದೆ. ಸರ್ಕಾರಗಳು ಕೂಡ ಸಮಾಜವಾದಿ ಆರ್ಥಿಕ ಹಿನ್ನೆಲೆಯಲ್ಲಿ ಅನೇಕ ಸಾಂಸ್ಥಿಕ ಆಡಳಿತವನ್ನು ನಿರ್ವಹಿಸುವ ಕಾರ್ಯ ಮಾಡುತ್ತದೆ. ಉದಾ: ಸಾರ್ವಜನಿಕ ಉದ್ಯಮವೆಂದರೆ ಇದು ಸರ್ಕಾರದಿಂದ ನಿಯಂತ್ರಿಸಲ್ಪಡುವ ಆಡಳಿತ ವ್ಯವಸ್ಥೆ ಹೊಂದಿರುತ್ತದೆ.

ಇಲ್ಲಿನ ಸವಾಲುಗಳು,

* ಕಡಮೆ ಕಾರ್ಯದಕ್ಷತೆ
* ಮೂಲಭೂತ ಸೌಕರ್ಯಗಳ ಕೊರತೆ
* ನೌಕರಶಾಹಿ ಮನೋಭಾವ
* ಕಚ್ಚಾ ವಸ್ತುಗಳ ಕೊರತೆ

* ಕೌಶಲಯುಕ್ತ ಕಾರ್ಮಿಕರ ಕೊರತೆ
* ಹೊಂದಾಣಿಕೆ ಕೊರತೆ
* ರಾಜಕೀಯ ಹಸ್ತಕ್ಷೇಪ
* ಅತಿಯಾದ ಉತ್ಪಾದನಾ ವೆಚ್ಚ
* ಸರಿಯಾದ ನಿರ್ವಹಣಾ ವ್ಯವಸ್ಥೆ ಇಲ್ಲದಿರುವಿಕೆ
* ಭ್ರಷ್ಟಾಚಾರದ ಸಮಸ್ಯೆ, ಸರ್ಕಾರದ ನೀತಿ ನಿಯಮಗಳು
* ಪೈಪೋಟಿಯನ್ನು ಎದುರಿಸಲು ವಿಫಲ
* ಸಾಮಾಜಿಕ ಹೋರಾಟ ಕಾರ್ಮಿಕ ಗುಂಪುಗಳ ತಕರಾರುಗಳು

ಮುಂತಾದವು.

**ಪ್ರಶ್ನೆ 18) ನೀವು ಒಂದು ನೇಮಕಾತಿ ಪ್ರಾಧಿಕಾರದ ಚೇರ್‌ಮನ್ ಆಗಿರುತ್ತೀರಿ. ನೇಮಕಾತಿಯು ಸಂದರ್ಶನದ ಮೂಲಕ ನಡೆಯುತ್ತಿದೆ. ಮೆರಿಟ್ ಆದರಿಸಿ ನೇಮಕಾತಿ ಆದೇಶ ಕೊಡಬೇಕಿದೆ. ನೀವೇ ಚೇರ್‌ಮನ್ ಆಗಿರುವುದರಿಂದ ಸಂದರ್ಶನದಲ್ಲಿ ನಿಮ್ಮ ಮಾತಿಗೆ ಹೆಚ್ಚಿನ ಬೆಲೆ ಇದೆ. ಈ ಸಮಯದಲ್ಲಿ ಮೆರಿಟ್ ಇಲ್ಲದ ವ್ಯಕ್ತಿಗೆ ನೇಮಕಾತಿ ಆದೇಶ ನೀಡುವಂತೆ ನಿಮಗೆ ರಾಜಕಾರಣಿ ಒತ್ತಡ ಹೇರುತ್ತಿದ್ದಾರೆ. ಅವರ ಮಾತು ಕೇಳದೆ ಹೋದರೆ, ದೂರದ ಪ್ರದೇಶಕ್ಕೆ ವರ್ಗ ಮಾಡಿಸುವ ಬೆದರಿಕೆ ಹಾಕುತ್ತಿದ್ದಾರೆ. ಈಗ ನಿಮ್ಮ ಮುಂದಿರುವ ಆಯ್ಕೆಗಳು ಯಾವುವು? ನಿಮ್ಮ ಮುಂದಿನ ನಡೆ ಏನು? ಇಲ್ಲಿನ ನೈತಿಕ ಅಂಶಗಳು ಯಾವುವು?**

**ಉತ್ತರ:** ಈ ಪ್ರಕರಣದಲ್ಲಿ ಹುದುಗಿರುವ ನೈತಿಕ ಅಂಶಗಳು,

1) ಪ್ರಾಮಾಣಿಕತೆ
2) ದಕ್ಷತೆ
3) ಮೇಲಾಧಿಕಾರಿಗಳಿಗೆ ವಿಧೇಯತೆ
4) ಸತ್ಯನಿಷ್ಠೆ
5) ಸಮಗ್ರತೆ
6) ನ್ಯಾಯ
7) ಪಕ್ಷಪಾತತನ
8) ಅನೈತಿಕ ಮಾರ್ಗದಿಂದ ಸಹಾಯ
9) ದಯೆ ಅನುಕಂಪ
10) ಮಾನವೀಯತೆ

ಲಭ್ಯವಿರುವ ಪರ್ಯಾಯಗಳು: ಸಚಿವರ ಶಿಫಾರಸ್ಸನ್ನು ನಯವಾಗಿ ತಿರಸ್ಕರಿಸಿ, ಕರ್ತವ್ಯ ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕು. ತನ್ನ ಕರ್ತವ್ಯದಿಂದ ವರ್ಗಾವಣೆಯಾದರೂ ಕುಟುಂಬದ ಸಮಸ್ಯೆಯನ್ನು ವೈಯಕ್ತಿಕವಾಗಿ ಬಗೆಹರಿಸಿಕೊಂಡು ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ತನ್ನ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಬೇಕು. ಮಂತ್ರಿಯ ಶಿಫಾರಸ್ಸು ಪಾಲಿಸುವುದರಿಂದ ಉಲ್ಲಂಘನೆಯಾಗುವ ನಿಯಮಗಳು ಸಾರ್ವಜನಿಕ ಆಡಳಿತಗಾರ ತನ್ನ ಕರ್ತವ್ಯ ನಿಷ್ಠೆಗೆ ದ್ರೋಹ ಮಾಡಿದಂತೆ ಆಗುತ್ತದೆ. ಸಂದರ್ಶನದ ನಿಯಮ ಬದಲಿಸಿ ಅಪ್ರಾಮಾಣಿಕತೆಯಿಂದ

ಶಿಫಾರಸ್ಸು ಪಾಲಿಸಿದರೇ ದಕ್ಷತೆಯ ನಿಯಮ ಉಲ್ಲಂಘನೆಯಾದ ಹಾಗೆ ಆಗುತ್ತದೆ. ಸೇವಾ ಗೌಪ್ಯತೆಯ ಉಲ್ಲಂಘನೆ ಅನ್ಯಾಯದ ಮಾರ್ಗವಾಗಿದ್ದು, ಆಡಳಿತದಲ್ಲಿ ಪಕ್ಷಪಾತತನ ಮಾಡಿದಂತಾಗುತ್ತದೆ. ದುರ್ಬಲ ವರ್ಗಗಳ ದೌರ್ಬಲ್ಯದ ದುರ್ಬಳಕೆ ಮಾಡಿಕೊಂಡಂತೆ ಆಗುತ್ತದೆ. ಪ್ರಾಮಾಣಿಕ ಅಭ್ಯರ್ಥಿಗೆ ವಂಚನೆ ಮಾಡಿದಂತಾಗುತ್ತದೆ.

**ಪ್ರಶ್ನೆ 19) ಇತ್ತೀಚೆಗೆ ನಿವೃತ್ತಿ ಹೊಂದಿದ ಸರ್ಕಾರಿ ಅಧಿಕಾರಿಯು, ತನ್ನ ಇಲಾಖೆಯ ಗೌಪ್ಯ ಮಾಹಿತಿಗಳನ್ನು, ಹಣದ ಆಸೆಗಾಗಿ ಮಾಧ್ಯಮಗಳಿಗೆ ಬಹಿರಂಗಪಡಿಸಿದ್ದಾನೆ. ಈ ಹಿನ್ನೆಲೆಯಲ್ಲಿ ನಿಮ್ಮ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಬರೆಯಿರಿ.**

**ಉತ್ತರ:** ಸರ್ಕಾರಿ / ಸಾರ್ವಜನಿಕ ಅಧಿಕಾರಿಯೂ ತನ್ನ ಕರ್ತವ್ಯ ಪಾಲನೆಯಲ್ಲಿ **'ಸರ್ಕಾರಿ'** ಕಾರ್ಯಗಳ ಕುರಿತಾಗಿ ಕಡ್ಡಾಯವಾಗಿ ಕಾಯ್ದುಕೊಳ್ಳಬೇಕಾದ **'ಗೌಪ್ಯತೆ'**ಯನ್ನು ವೈಯಕ್ತಿಕ ಹಿತಾಸಕ್ತಿ ಮತ್ತು ಪ್ರತಿಫಲದ ಆಸೆಯಿಂದ ಪ್ರಭಾವಿ ವ್ಯಕ್ತಿಗಳಿಗೆ ಮಾಹಿತಿ ದೊರಕಿಸಿ ಅಧಿಕಾರಿಯು ಸಾರ್ವಜನಿಕ ಸೇವೆಯ **'ಗೌಪ್ಯತಾ'** ನಿಯಮವನ್ನು ನೇರವಾಗಿ ಉಲ್ಲಂಘಿಸಿದ್ದಾನೆ.

ಕಾನೂನಿನ ದೃಷ್ಟಿಯಲ್ಲಿ ಈ ರೀತಿಯ ಸರ್ಕಾರದ ಮಾಹಿತಿಯನ್ನು ಹೊರಗೆ ಬಹಿರಂಗ ಪಡಿಸದಂತೆ, ಸರ್ಕಾರಿ ಅಧಿಕಾರಿಗಳಿಗೆ ಇರುವ **'ಸೇವಾನಿಯಮ'**ವನ್ನು ಉಲ್ಲಂಘಿಸಿದ್ದಾನೆ. ಸೇವಾ ದಕ್ಷತೆ ಕಾಯ್ದುಕೊಳ್ಳಲು ಅಧಿಕಾರಿ ಸಂಪೂರ್ಣ ವಿಫಲನಾಗಿದ್ದಾನೆ. ನೈತಿಕತೆಯ ದೃಷ್ಟಿಯಿಂದ ವೈಯಕ್ತಿಕ ಲಾಭಕ್ಕಾಗಿ ಸರ್ಕಾರದ ಅಧಿಕಾರವನ್ನು ತನ್ನ ಅಪ್ರಮಾಣಿಕತೆಯಿಂದ ದುರ್ಬಳಕೆ ಮಾಡಿಕೊಂಡಿದ್ದಾನೆ.

ಯಾವುದೇ ಅಧಿಕಾರಿಯೂ ತನ್ನ ಸೇವಾವಧಿಯಲ್ಲಿ ಮತ್ತು ಸೇವಾವಧಿಯ ನಂತರವು ಕರ್ತವ್ಯ ಬದ್ಧತೆ, ಪ್ರಾಮಾಣಿಕತೆ, ಸತ್ಯನಿಷ್ಠೆ, ನ್ಯಾಯ, ದಕ್ಷತೆಯನ್ನು ಕಾಯ್ದುಕೊಂಡು ಹೋಗಬೇಕು. ಆದರೆ ಅಧಿಕಾರಿ ಅದಕ್ಕೆ **'ವ್ಯತಿರಿಕ್ತ'**ವಾಗಿ ನಡೆದುಕೊಂಡು ಕಾನೂನಿನ ಪ್ರಕಾರವಾಗಿ ಶಿಕ್ಷೆಗೆ ಅರ್ಹನಾಗಿದ್ದಾನೆ. ನೈತಿಕವಾಗಿಯೂ ಅವನು ಮೌಲ್ಯಗಳಿಂದ ವಂಚಿತನಾಗಿದ್ದಾನೆ. ಸರ್ಕಾರದ ಯಾವುದೇ ಹಂತದ ಅಧಿಕಾರಿಯೂ ಈ ರೀತಿಯ ಕರ್ತವ್ಯ ಲೋಪ ಎಸಗಬಾರದು, ದೇಶದ ಹಿತದೃಷ್ಟಿಯಿಂದ ಈ ರೀತಿಯ ಅಧಿಕಾರಿಗಳು ಮಾರಕವಾಗುತ್ತಾರೆ. ಇವರಿಗೆ ಶೀಘ್ರ ಮತ್ತು ಕಠಿಣ ಶಿಕ್ಷೆ ವಿಧಿಸಬೇಕು.

**ಪ್ರಶ್ನೆ 20) ನೀವು ವಲಯ ಅರಣ್ಯಾಧಿಕಾರಿಯಾಗಿದ್ದು, ನಿಮಗೆ ಬಂದಿರುವ ಮಾಹಿತಿಯ ಪ್ರಕಾರ, ಸಾಕಷ್ಟು ರಾಜಕಾರಣಿಗಳ ಬೆಂಬಲ ಹೊಂದಿದ ವ್ಯಕ್ತಿ ಒಬ್ಬರು, ಕಾಡಿನ ಸಂಪತ್ತನ್ನು ಕಳ್ಳ ಸಾಗಾಣಿಕೆ ಮಾಡುತ್ತಿದ್ದಾನೆ. ಅವನ ದಾರಿಗೆ ಎದುರಾದರೆ, ಕೊಲೆ ಮಾಡಲು ಹಿಂಜರಿಯುವುದಿಲ್ಲ. ಈ ಹಿಂದಿನ ಅಧಿಕಾರಿಗಳಿಗೆ ಲಂಚ ಕೊಟ್ಟು, ಕೆಲಸ ಮಾಡಿಕೊಳ್ಳುತ್ತಿದ್ದನು. ಈಗ ನಿಮಗೂ ಆಮಿಷ ಒಡ್ಡಲಾಗಿದೆ. ಪ್ರಾಮಾಣಿಕತೆ ಬಲಿ ಕೊಡುವ ಪ್ರಸಂಗ ಬಂದಿದೆ. ಈಗ ನಿಮ್ಮ ಮುಂದಿರುವ ದಾರಿ ಏನು? ಈ ಸಮಸ್ಯೆಯನ್ನು ನೀವು ಹೇಗೆ ಎದುರಿಸುತ್ತೀರಿ.**

**ಉತ್ತರ:** ಈ ಪ್ರಕರಣವನ್ನು ಬಹಳ ಜಾಗರೂಕತೆಯಿಂದ ಎದುರಿಸಬೇಕು. ಪ್ರಾಮಾಣಿಕತೆಯನ್ನು ಬಿಟ್ಟು, ಅವನ ದೊಡ್ಡದೋ, ಚಿಕ್ಕದೋ ಪ್ರಮಾಣದ ಕಾಣಿಕೆಗೆ ಆಸೆ ಪಡುವುದು ದೇಶ ದ್ರೋಹದ ಕಾರ್ಯ ಮತ್ತು ನನ್ನ ಪ್ರಾಮಾಣಿಕತೆ ಮತ್ತು ಸೇವಾ ನಿಯಮಗಳಿಗೆ ತೀರಾ ವಿರುದ್ಧವಾದುದು. ಈ ವಿಷಯದಲ್ಲಿ ಈಗಾಗಲೇ ಮಾಹಿತಿ ದೊರೆತಿರುವುದರಿಂದ ಈ ಕಳ್ಳಸಾಗಾಣಿಕೆ ಬೇಧಿಸಲು ಹೆಚ್ಚಿನ ಸಿಬ್ಬಂದಿಯನ್ನು ಬಳಸಿಕೊಂಡು, ಮೇಲಾಧಿಕಾರಿಗಳ ನಿರ್ದೇಶನ ಮತ್ತು ಕಾನೂನು ಸಮ್ಮತ ಸಲಹೆಯಂತೆ ಕಾರ್ಯಾಚರಣೆಗೆ ಇಳಿಯಬೇಕು. ಈ ಕಳ್ಳಸಾಗಾಣಿಕೆ ತಡೆದು ಸರ್ಕಾರಕ್ಕೆ ಪ್ರಾಮಾಣಿಕವಾಗಿ ಒಪ್ಪಿಸಬೇಕು. ಇದರಲ್ಲಿ ಯಾವುದೇ ರೀತಿಯ ಮಾನಸಿಕ ತುಮುಲಗಳಿಗೆ ಅವಕಾಶವಿಲ್ಲ. ಕುಟುಂಬ ಮತ್ತು ನನ್ನ ರಕ್ಷಣೆಗಾಗಿ ಸರ್ಕಾರದಿಂದ ಸೂಕ್ತ ರಕ್ಷಣೆ (ಪೋಲೀಸ್) ಪಡೆದು ಈ ಅಕ್ರಮವನ್ನು ಮಟ್ಟ ಹಾಕಬೇಕು.

ಅನುಸರಿಸಬಹುದಾದ ಪರ್ಯಾಯ ಮಾರ್ಗಗಳು:

* ಕುಖ್ಯಾತ ಕಳ್ಳ ಸಾಗಾಣಿಕೆದಾರನಿಂದ ಪ್ರಾಣ ಭೀತಿ, ಕುಟುಂಬಕ್ಕೆ ಗಂಡಾಂತರವಿರುವುದರಿಂದ, ಮೊದಲು ರಕ್ಷಣೆಯನನು ಬಲಪಡಿಸಿಕೊಳ್ಳಬೇಕು. ಪೋಲೀಸರ ರಕ್ಷಣೆಯನ್ನು, ಕುಟುಂಬಕ್ಕೆ ಒದಗಿಸಿ, ಅವರ ರಕ್ಷಣೆಯೊಂದಿಗೆ ಕಾರ್ಯಾಚರಣೆಗೆ ಇಳಿಯಬೇಕು

* ಈ ಕುರಿತು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ, ಅಗತ್ಯವಿದ್ದರೆ ಸಲಹೆ ಪಡೆದು, ರಣತಂತ್ರ ಹೆಣೆದು ಆ ಕಳ್ಳ ಸಾಗಾಣಿಕೆದಾರನನ್ನು ಬಂಧಿಸಿ, ಜೈಲಿಗೆ ಸಾಕ್ಷಿ ಸಮೇತ ಅಟ್ಟಬೇಕು

* ಕರ್ತವ್ಯ ನಿರ್ವಹಣೆಯಲ್ಲಿ ಕುಟುಂಬ, ವೈಯಕ್ತಿಕ ಹಿತಾಸಕ್ತಿಗಿಂತ ಕರ್ತವ್ಯವೇ ಮೊದಲ ಆದ್ಯತೆಯಾಗಿದ್ದು ಸಮರ್ಥವಾಗಿ ಕಾರ್ಯ ನಿರ್ವಹಿಸಬೇಕು.

# ಪ್ರಶ್ನೆ ಪತ್ರಿಕೆ – 2

## (ಪ್ರತಿಯೊಂದು ಪ್ರಶ್ನೆಗೆ 20 ಅಂಕಗಳು)

**1) ಖಾಸಗಿ ನೈತಿಕತೆ ಎಂದರೇನು? ಸಾರ್ವಜನಿಕ ನೈತಿಕತೆ ಎಂದರೇನು? ಅವೆರಡರ ನಡುವಿನ ಸಾಮ್ಯ ಮತ್ತು ವೈಷಮ್ಯಗಳೇನು?**

**ಉತ್ತರ:** ನೈತಿಕತೆ ಎಂಬುದು ಮನುಷ್ಯನ ಮಾನವೀಯ ಮೌಲ್ಯಗಳಿಗೆ ಸಂಬಂಧಿಸಿದ ಪರಿಭಾಷೆಯಾಗಿದೆ. ಸಮಾಜದಲ್ಲಿ ಉತ್ತಮವೆಂದು ಪರಿಗಣಿಸಿರುವ ನಮ್ಮೆಲ್ಲರ ನಡೆ ನುಡಿ ಆಚಾರ ವಿಚಾರ ಕಾರ್ಯಶೈಲಿ ಇವೆಲ್ಲವುಗಳಿಂದ ಪೋಷಿತವಾದುದು.

ಖಾಸಗಿ ನೈತಿಕತೆ ಎಂದರೆ ಅದು ವ್ಯಕ್ತಿ ಕೇಂದ್ರಿತ ಮತ್ತು ವ್ಯಕ್ತಿಯ ಸುತ್ತಲೂ ಇರುವ ಖಾಸಗಿತನದಲ್ಲಿ ಪ್ರಭಾವಿಸುವ ಮೌಲ್ಯಗಳ ಒಂದು ಸಂಗ್ರಹವಾಗಿದೆ. ಖಾಸಗಿ ನೈತಿಕತೆಯ ಮೇಲೆ ಹೊರಗಿನ ಒತ್ತಡ ಕಡಿಮೆ ವೈಯಕ್ತಿಕವಾಗಿದ್ದು ಅವರ ನಡವಳಿಕೆಯನ್ನೇ ಬಹುತೇಕ ಅವಲಂಬಿಸಿದೆ. ಉದಾಹರಣೆಗೆ ಹಸಿದಿರುವ ವ್ಯಕ್ತಿಯನ್ನು ಕಂಡ ತಕ್ಷಣ ನಮ್ಮಿಂದ ಆದ ಹಣದ ಅಥವಾ ಅನ್ನದ ಸಹಾಯ ಖಾಸಗಿ ನೈತಿಕತೆಯ ಪರಿಧಿಯಲ್ಲಿ ಅಡಕವಾಗಿದೆ.

ಈ ನೆಲೆಯಲ್ಲಿ ಸಾರ್ವಜನಿಕ ನೈತಿಕತೆಯು 'ಬಹುಜನ ಹಿತ' ಎಂಬ ತತ್ವದಡಿ ವೈಯಕ್ತಿಕವಾಗಿರದೇ ವ್ಯಕ್ತಿಯ ಸಾರ್ವಜನಿಕ ಬದುಕಿನಲ್ಲಿ ಸಮಾಜವು ಅಪೇಕ್ಷಿಸುವ ವಿಶಾಲವಾದ ಪರಿಧಿಯನ್ನು ಹೊಂದಿದೆ. ಸಾರ್ವಜನಿಕ ನೈತಿಕತೆಯಲ್ಲಿ ವ್ಯಕ್ತಿಗೆ ಅವನ ಆ ನೈತಿಕ ಆಚರಣೆಯಿಂದ ಯಾವುದೇ ಪ್ರತಿ ಫಲಾಪೇಕ್ಷೆ ಇಲ್ಲದಿರುವಿಕೆ ಕಾಣುವುದು.

ಉದಾಹರಣೆಗೆ ಓರ್ವ ಸಾರ್ವಜನಿಕ ಸೇವಕ ವೃದ್ದರು, ಅಂಗವಿಕಲರಿಗೆ ವಿಶೇಷ ಆದ್ಯತೆ ನೀಡಿ ಅವರಿಗೆ ಶೀಘ್ರ ಸೇವೆಯನ್ನು ದೊರಕಿಸಿ ಕೊಡುವುದು ಸಾರ್ವಜನಿಕ ನೈತಿಕತೆಯ ನೆಲೆಯಲ್ಲಿ ಬರುತ್ತದೆ.

ನೈತಿಕತೆ ಎಂಬುದು ಒಳಿತುಗಳ ಮತ್ತು ಉತ್ತಮವಾದ ಆಚರಣೆಗಳ ಒಂದು ಘಟ್ಟ ಆಗಿರುವುದರಿಂದ ಖಾಸಗಿ ಮತ್ತು ಸಾರ್ವಜನಿಕ ನೈತಿಕತೆಗಳೆರಡು ಉತ್ತಮಾಂಶಗಳ ಸಾಮ್ಯತೆ ಹೊಂದಿರುವಿಕೆ ಅರಿವಾಗುತ್ತದೆ. ಇವೆರಡರಲ್ಲಿ ವೈಷಮ್ಯವೆಂದರೆ ಖಾಸಗಿ ನೈತಿಕತೆಯು ಪ್ರತಿಯೊಬ್ಬ ಮಾನವರಲ್ಲಿ ಇರುವಂತಹದು. ಆದರೆ ಸಾರ್ವಜನಿಕ ನೈತಿಕತೆಯ ಸಾರ್ವಜನಿಕರಿಗೆ ಸೇವೆ ಸಲ್ಲಿಸುವುದರಲ್ಲಿ ಗೋಚರಿಸುವಂತಹುದಾಗಿದೆ.

**2) ಸರ್ಕಾರಿ ನೈತಿಕ ಸಂದಿಗ್ದತೆ ಎಂದರೇನು? ಒಂದು ಸೂಕ್ತ ಉದಾಹರಣೆಯೊಂದಿಗೆ ವಿವರಿಸಿ, ಅದನ್ನು ಹೇಗೆ ನಿಭಾಯಿಸಬೇಕೆಂದು ಚರ್ಚಿಸಿರಿ.**

**ಉತ್ತರ:** ಸಂದಿಗ್ದತೆ ಅಂದರೆ ಇಕ್ಕಟ್ಟು ಎಂದರ್ಥ. ಒಂದು ವಿಷಯದ ಕುರಿತು ನೈತಿಕ ನೆಲೆಗಟ್ಟಿನಲ್ಲಿ ಎದುರಾಗಬಹುದಾದ ಎರಡು ಉತ್ತಮ ಆಯ್ಕೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭ ಎದುರಾಗುವುದೇ ನೈತಿಕ ಸಂದಿಗ್ದತೆ. ಸರ್ಕಾರಿ ನೈತಿಕ ಸಂದಿಗ್ದತೆ ಎಂದರೆ ಸಾರ್ವಜನಿಕ ಅಧಿಕಾರಿ ತನ್ನ ಕರ್ತವ್ಯ ನಿರ್ವಹಿಸುವಲ್ಲಿ ಎದುರಾಗುವ ನಿರ್ಧಾರ ಕೈಗೊಳ್ಳುವಲ್ಲಿ ಎದುರಿಸುವ ಒಂದು ವಿಧದ ಬಿಕ್ಕಟ್ಟು.

ಸರ್ಕಾರಿ ನೈತಿಕ ಸಂದಿಗ್ದತೆ ಎದುರಾಗಬಹುದಾದ ಸಂದರ್ಭಗಳು:

ಸರ್ಕಾರದ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತಂದು ಅರ್ಹ ಫಲಾನುಭವಿಗಳ ಆಯ್ಕೆಯಲ್ಲಿ ರಾಜಕೀಯದ ಒತ್ತಡದಿಂದ ಉಂಟಾಗಬಹುದಾದ ನೈತಿಕ ಸಂದಿಗ್ದತೆ.

ಇಲ್ಲಿ ರಾಜಕಾರಣಿಗಳು ಅರ್ಹರಿಗೂ / ಅರ್ಹರಲ್ಲದವರನ್ನು ಫಲಾನುಭವಿಗಳಾಗಿ ಗುರುತಿಸುವಂತೆ ತೀವ್ರ ಒತ್ತಡ ಹೇರಬಹುದು. ಸಾರ್ವಜನಿಕ ಅಧಿಕಾರಿ ಪ್ರತ್ಯಕ್ಷವಾಗಿಯೂ ಅರ್ಹ ಫಲಾನುಭವಿಗಳನ್ನು ಗುರುತಿಸಿದಾಗ ಆ ಅರ್ಹ ವ್ಯಕ್ತಿಯನ್ನು ಕೈಬಿಡುವಂತೆ ಎದುರಾಗುವ ಸನ್ನಿವೇಶಗಳಾಗಿವೆ.

ಈ ರೀತಿಯ ಸಂದಿಗ್ದ ಸನ್ನಿವೇಶಗಳನ್ನು ಸಮಾಧಾನ ಚಿತ್ತದಿಂದ ಅವಲೋಕಿಸಿ ನಿಭಾಯಿಸಬೇಕಾದ ಹೊಣೆ ಅಧಿಕಾರಿಯದು. ರಾಜಕೀಯ ವ್ಯಕ್ತಿಗಳು ಜನ ಪ್ರತಿನಿಧಿ ಆಗಿರುವುದರಿಂದ ಸೂಕ್ತ ದಾಖಲೆಗಳೊಂದಿಗೆ ಅವರಿಗೆ ಮನವರಿಕೆ ಆಗುವಂತೆ ಫಲಾನುಭವಿಗಳ ಆಯ್ಕೆಯ ಕುರಿತು ತಿಳಿಸುವುದು. ನಿಜವಾದ ಅರ್ಹ ಫಲಾನುಭವಿಗಳ ಮಾಹಿತಿಯನ್ನು ಒದಗಿಸಿ ರಾಜಕೀಯ ಒತ್ತಡವನ್ನು ಕಡಿಮೆ ಮಾಡುವುದು.

ಮನವರಿಕೆ ಸಾಧ್ಯವಾಗದಿದ್ದಾಗ ಮೇಲಾಧಿಕಾರಿಗಳ ಗಮನಕ್ಕೆ ಈ ವಿಷಯ ಪ್ರಸ್ತಾವನೆ ಮಾಡುವ ಮೂಲಕ ಸಮಸ್ಯೆ ಪರಿಹರಿಸಲು ಯತ್ನಿಸುವುದು.

ಸಾರ್ವಜನಿಕರಲ್ಲಿ ಫಲಾನುಭವಿಗಳ ಆಯ್ಕೆ ಕುರಿತು ಬಹಿರಂಗ ಸಭೆ ಏರ್ಪಡಿಸಿ ಯಾವ ಒತ್ತಡವು ಬರದಂತೆ ಪಾರದರ್ಶಕವಾಗಿ ಆ ಫಲಾನುಭವಿಗಳನ್ನು ಆಯ್ಕೆ ಮಾಡುವುದು. ಈ ಸಂದಿಗ್ದತೆ ಎದುರಿಸಲು ತಾಳ್ಮೆ ಸಂಯಮದ ಅವಶ್ಯಕತೆ ಇದೆ. ಇದಕ್ಕೆ ಇನ್ನೊಂದು ಉದಾಹರಣೆ ಎಂದರೆ, ಸರ್ಕಾರ ಒಮ್ಮೊಮ್ಮೆ ನಿಗಧಿತ ಮೊತ್ತದ ಪರಿಹಾರವನ್ನು, ನಿಗಧಿತ ಸಂಖ್ಯೆಯ ಫಲಾನುಭವಿಗಳಿಗೆ ಹಂಚಲು ಆದೇಶಿಸಿರುತ್ತದೆ. ಆದರೆ ಇಬ್ಬರು ಅತ್ಯಂತ ಅರ್ಹರು, ಪರಿಹಾರ ಬಯಸಿದಾಗ ನಮ್ಮಲ್ಲಿ ಯಾರಿಗೆ ಕೊಡಬೇಕೆಂಬ ಸಂದಿಗ್ದತೆ ಎದುರಾಗುತ್ತದೆ. ಆ ಸಮಯದಲ್ಲಿ ಲಾಟರಿ ಎತ್ತಿ ಪರಿಹಾರ ಕೊಟ್ಟರೆ ಉತ್ತಮ. ಆದರೂ ಇಲ್ಲಿ ನಮಗೆ ಮಾನಸಿಕವಾಗಿ ಇಬ್ಬರು ಅರ್ಹರೆಂಬುದು ಸಂದಿಗ್ದತೆಯಲ್ಲಿ ತಳ್ಳುತ್ತದೆ.

**3) ಆತ್ಮಸಾಕ್ಷಿಯೊಂದಿಗಿನ ಹೊಯ್ದಾಟವನ್ನು ನೀವು ಎದುರಿಸಿದ್ದೀರಾ? ಅದು ನಮ್ಮ ನಿರ್ಧಾರಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ? ನೀವು ಎದುರಿಸಿದ ಆತ್ಮಸಾಕ್ಷಿಯ ಗುದ್ದಾಟದ ಅಥವಾ ಒಬ್ಬ ಅಧಿಕಾರಿ ಎದುರಿಸಬಹುದಾದ ಆತ್ಮಸಾಕ್ಷಿಯೊಂದಿಗಿನ ಹೊಯ್ದಾಟದ ಪ್ರಕರಣವೊಂದನ್ನು ತಿಳಿಸಿ. ಅದನ್ನು ಎದುರಿಸುವ ಬಗೆಯನ್ನು ನೈತಿಕವಾದ ನೆಲೆಯಲ್ಲಿ ಚರ್ಚಿಸಿರಿ.**

**ಉತ್ತರ:** ಹೌದು. ಆತ್ಮಸಾಕ್ಷಿ ಇರುವುದೇ ನಮ್ಮನ್ನು ಎಚ್ಚರಿಸಲು, ಹೊರ ಜಗತ್ತಿಗೆ ನಮ್ಮ ಕಾರ್ಯದ ಫಲಾಫಲ, ಒಳಿತು ಕೆಡುಕು, ಉತ್ತಮ ಉತ್ತಮವಲ್ಲದ್ದು ಎಂಬುವುದು ತಿಳಿಯದೇ ಹೋಗಬಹುದು. ಆದರೆ ಆತ್ಮಸಾಕ್ಷಿಯ ಮುಂದೆ ಎಲ್ಲವೂ ಗೊತ್ತಾಗುತ್ತದೆ. ಆತ್ಮಸಾಕ್ಷಿಯ ಎದುರು ನಮ್ಮ ನೈಜ ವ್ಯಕ್ತಿತ್ವದ ಅನಾವರಣವಾಗುತ್ತದೆ.

'ಜಗವ ತಿದ್ದುವ ಮೊದಲು ನಮ್ಮನ್ನು ನಾವು ತಿದ್ದುಕೊಳ್ಳಬೇಕು. ಲೋಕದ ಡೊಂಕ ನೀವೇಕೆ ತಿದ್ದುವಿರಿ' ಎಂಬ ಮಾತುಗಳ ಆತ್ಮಸಾಕ್ಷಿಯ ಕಾರ್ಯದ ಕುರಿತು ತಿಳಿಸುತ್ತವೆ.

ಸಾರ್ವಜನಿಕ ಬದುಕಿನಲ್ಲಿ ಎದುರಾಗುವ ಆಂತರಿಕ ಬಾಹ್ಯ ಒತ್ತಡಗಳಿಗೆ ಒಳಗಾಗಿ ಸಾರ್ವಜನಿಕ ಅಧಿಕಾರ ತನ್ನ ಅಧಿಕಾರ ಚಲಾಯಿಸುವಲ್ಲಿ ಒಳಿತು ಕೆಡುಕುಗಳ ಕುರಿತು ಗೊತ್ತಿದ್ದು ಮುಂದುವರೆದು ಹೊರಟಾಗ ಅವನ ಆತ್ಮಸಾಕ್ಷಿಯೇ ಅವನನ್ನು ನಿಯಂತ್ರಿಸುತ್ತದೆ.

ಪೋಲೀಸ್ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿ ಇರುವ ಅಧಿಕಾರಿ ಎದುರಿಸಿದ ಪ್ರಸಂಗವಿದು. ATM ದರೋಡೆಕೋರನೊಬ್ಬನನ್ನು ಮುಂದಿನ 24 ಗಂಟೆಗಳಲ್ಲಿ ಬಂಧಿಸಬೇಕೆಂದು ಮೇಲಾಧಿಕಾರಿಯಿಂದ ಆದೇಶ ಬರುತ್ತದೆ. ಇದು ಸರ್ಕಾರದ ವರ್ಚಸ್ಸಿನ ವಿಷಯವಾಗಿದ್ದರಿಂದ ಈ ಹೊಣೆ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ವಿಫಲನಾದರೆ ಈ ಅಧಿಕಾರಿಗೆ ಕೊನೆ ಪಕ್ಷ ವರ್ಗಾವಣೆ ಶಿಕ್ಷೆಯಾಗುವುದು ಕಟ್ಟಿಟ್ಟಿದ್ದು. ಈ ಸನ್ನಿವೇಶದಲ್ಲಿ ಒಂದು ಸಲಹೆ ಸಿಗುತ್ತದೆ.

ಅದೇನೆಂದರೆ ಮತ್ತೊಬ್ಬ ಕಳ್ಳನನ್ನೇ ಬಂಧಿಸಿ ವಿಚಾರಣೆಗೆ ಒಳಪಡಿಸಿ ನಂತರ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡು ನಂತರ ನಿಜವಾದ ಅಪರಾಧಿಯನ್ನು ಬಂಧಿಸುವುದು. ಆಗ ಅಧಿಕಾರಿಯ ಆತ್ಮಸಾಕ್ಷಿ ಇದಕ್ಕೆ ವಿರೋಧಿಸುತ್ತದೆ.

ನೈತಿಕವಾಗಿ ಈ ಅಧಿಕಾರಿ ಹಾಗೇ ನಡೆದುಕೊಳ್ಳಬಾರದು. ಇರುವ 24 ಗಂಟೆಯಲ್ಲಿಯೇ ಹೆಚ್ಚಿನ ತಂಡಗಳನ್ನು ರಚಿಸಿಕೊಂಡು CC TV ತಂತ್ರಜ್ಞಾನ, ಅತ್ಯಾಧುನಿಕ ವಿಶೇಷ ಕ್ರೈಮ್, ಗುಪ್ತಾಚಾರ ವಿಭಾಗದ ಎಲ್ಲರೊಂದಿಗೆ ಸಮನ್ವಯ ಸಾಧಿಸಿ ಆ ಗಡುವಿನಲ್ಲಿಯೇ ಕೆಲಸ ಸಾಧಿಸಿ ಯಶಸ್ಸು ಹೊಂದಿ ಆತ್ಮಸಾಕ್ಷಿಯ ವಿರುದ್ಧವಾದ ಕೆಲಸದಿಂದ ಅವನು ಮುಕ್ತನಾಗಬೇಕು.

**4) ಪ್ರಸ್ತುತ ಆಡಳಿತದಲ್ಲಿ ನೈತಿಕತೆ ಮತ್ತು ಹೊಣೆಗಾರಿಕೆಯ ಕುರಿತು ಚರ್ಚೆಯಾಗುತ್ತಿದೆ. ಇವೆರಡರ ಅಗತ್ಯವೇನು? ಇವೆರಡನ್ನು ನಿಭಾಯಿಸುವಿಕೆಯಲ್ಲಿ ಎದುರಾಗುವ ಸಮಸ್ಯೆಗಳು? ವಿವರಿಸಿರಿ.**

**ಉತ್ತರ:** ನೈತಿಕತೆ ಎಂದರೆ ಒಳ್ಳೆಯ ಮೌಲ್ಯಗಳ ಒಂದು ಚೌಕಟ್ಟು. ಹೊಣೆಗಾರಿಕೆ ಎಂದರೆ ಸಾರ್ವಜನಿಕ ಅಧಿಕಾರಿಯು ನಿಭಾಯಿಸಬೇಕಾದ ಜವಾಬ್ದಾರಿಯ ಕುರಿತಾದ ನೈತಿಕ ನೆಲೆ. ನಮ್ಮ ಹೊಣೆಗಾರಿಕೆಯನ್ನು ನೈತಿಕ ನೆಲೆಯಲ್ಲಿ ನಿಭಾಯಿಸುವ ತುರ್ತು ಇಂದಿನ ಆಡಳಿತದಲ್ಲಿದೆ.

ಇಂದಿನ ಅಭಿವೃದ್ಧಿ ಆಡಳಿತದಲ್ಲಿ ದಕ್ಷ ಅಧಿಕಾರಿಗಳಂತೆಯೇ ನೈತಿಕತೆಯ ಮೌಲ್ಯ ಹೊಂದಿರುವ ಉತ್ತಮ ಮನೋಭಾವದ ಅಧಿಕಾರಿಗಳ ಅಗತ್ಯವಿದೆ. ಅದರಿಂದ ಮಾತ್ರವೇ ಅವರ ಕರ್ತವ್ಯದ ಕುರಿತಾದ ಹೊಣೆಗಾರಿಕೆಯನ್ನು ಅಪೇಕ್ಷಿಸಲು ಸಾಧ್ಯ.

ಆಡಳಿತದಲ್ಲಿ ಹೊಣೆಗಾರಿಕೆ ಮತ್ತು ನೈತಿಕತೆಯನ್ನು ಪಾಲಿಸುವ ವಿಧಾನಗಳು:

* ನಮ್ಮ ಕಾರ್ಯವ್ಯಾಪ್ತಿಯ ಎಲ್ಲಾ ಕೆಲಸವನ್ನು ಸಮಯಪ್ರಜ್ಞೆ ಮತ್ತು ದಕ್ಷತೆಯಿಂದ ನಿಭಾಯಿಸುವಿಕೆ

* ನಮ್ಮ ಕಾರ್ಯಕ್ಕೆ ನಮ್ಮನ್ನೇ ಹೊಣೆಗಾರರನ್ನಾಗಿ ಮಾಡಿಕೊಳ್ಳುವುದು

* ವೃತ್ತಿ ಬದ್ಧತೆಯಿಂದ ಕಾರ್ಯ ನಿರ್ವಹಿಸುವುದು

* ಕಾನೂನಿನ ಚೌಕಟ್ಟಿನಲ್ಲಿ ನೈತಿಕ ಅಂಶಗಳನ್ನು ಗಮನಿಸಿ ಅಧಿಕಾರ ಚಲಾಯಿಸುವುದು ನ್ಯಾಯದಾನ ಮಾಡುವುದು.

ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಎದುರಾಗಬಹುದಾದ ಸಮಸ್ಯೆಗಳು:

* ಸಾರ್ವಜನಿಕ ಅಧಿಕಾರ ಅಧಿಕಾರಿಯ ವೈಯಕ್ತಿಕ ಸಮಸ್ಯೆಗಳು. ಉದಾ: ಅನಾರೋಗ್ಯ, ವೈಯಕ್ತಿಕ ಕಾರ್ಯಕ್ರಮ, ಕುಟುಂಬದಿಂದ ಸಹಕಾರ ಇಲ್ಲದೆ ಇರುವುದು ಇತ್ಯಾದಿ.

* ಬಾಹ್ಯವಾಗಿ ಒತ್ತಡದ ಅಂಶಗಳು. ಉದಾ: ರಾಜಕೀಯ ಒತ್ತಡ, ಮೇಲಾಧಿಕಾರಿಗಳ ಒತ್ತಡ

* ಸಾಮರ್ಥ್ಯಕ್ಕಿಂತಲೂ ಹೆಚ್ಚಿನ ಕಾರ್ಯಭಾರ. ಉದಾ: ವಿವಿಧ ಹುದ್ದೆಗಳು ಖಾಲಿ ಇದ್ದಾಗ ಹೆಚ್ಚುವರಿ ಹೊಣೆಗಾರಿಕೆ

* ಕಛೇರಿಯ ಸಿಬ್ಬಂದಿಯಿಂದ ಸಹಕಾರ ಮತ್ತು ಅಷ್ಟೇ ಪ್ರಮಾಣದ ದಕ್ಷತೆ ಕೊರತೆ

* ತಾಂತ್ರಿಕ ಮತ್ತು ಕಾನೂನಿನ ತೊಡಕುಗಳು

ಇತ್ಯಾದಿ.

**5) ನಿಧಿಯನ್ನು ನಿಭಾಯಿಸುವಲ್ಲಿ ಎದುರಾಗುವ ನೈತಿಕತೆಯ ಅಂಶಗಳಾವುವು? ಸರ್ಕಾರದ ಖಜಾನೆಯನ್ನು ನಮ್ಮ ಖಜಾನೆಯೆಂದು ತಿಳಿಯಬಹುದೇ? ಸರ್ಕಾರ ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕೋಟ್ಯಾಂತರ ನಿಧಿಯನ್ನು ಕೊಡುತ್ತದೆ. ಅದನ್ನು ನೈತಿಕ ನೆಲೆಯಲ್ಲಿ ಹೇಗೆ ನಿರ್ವಹಿಸುವಿರಿ. ಉದಾಹರಣೆ ಸಹಿತ ವಿವರಿಸಿರಿ.**

**ಉತ್ತರ:** ಸರ್ಕಾರದ ನಿಧಿ ಸಾರ್ವಜನಿಕರ ನಿಧಿ. ಅದನ್ನು ಸೂಕ್ತವಾಗಿ ಕಾನೂನುಬದ್ಧವಾಗಿ ಬಳಸುವುದೇ ಪ್ರತಿಯೊಬ್ಬ ಸಾರ್ವಜನಿಕ ಅಧಿಕಾರಿಯ ಕರ್ತವ್ಯವಾಗಿದೆ.

ನಿಧಿ ಬಳಕೆಯಲ್ಲಿ ಎದುರಾಗಬಹುದಾದ ನೈತಿಕತೆಯ ಅಂಶಗಳು:

1) ಸರ್ಕಾರದ ನಿಧಿಯನ್ನು ದುಂದು ವೆಚ್ಚ ಮಾಡಬಾರದು

2) ಸರ್ಕಾರದ ನಿರ್ದಿಷ್ಟ ಮಾರ್ಗದರ್ಶನ ನೀತಿಗೆ ಅನುಸಾರವಾಗಿ ವೆಚ್ಚ ಮಾಡಬೇಕು. ಉದಾ: ಯಾವುದೋ ಹಣವನ್ನು ಬೇರಾವುದೋ ಕಾರ್ಯಕ್ಕೆ ವೆಚ್ಚ ಮಾಡುವುದು.

3) ಅರ್ಹರಿಗೆ ನಿಧಿ ಉಪಯೋಗಿಸಬೇಕು. ಉದಾ: ಬಾಹ್ಯ ಒತ್ತಡಗಳಿಂದ ಅನರ್ಹರಿಗೆ ದೊರಕಿಸಬೇಕೆಂಬುದು.

ಸರ್ಕಾರ ಖಜಾನೆಯನ್ನು ಸ್ವಂತದ್ದು ಎಂದು ಪರಿಭಾವಿಸಲು ಸಾಧ್ಯವಿಲ್ಲ. ಸಾರ್ವಜನಿಕ ಅಧಿಕಾರಿಗೆ ಅವನ ಪದ ನಿಮಿತ್ಯ ಆ ನಿಧಿಯನ್ನು ಉಪಯೋಗಿಸುವ ಅಧಿಕಾರವಿರುತ್ತದೆ. ಅದನ್ನು ನಿಭಾಯಿಸುವುದು ಅವನ ಹೊಣೆಗಾರಿಕೆ ಮತ್ತು ಜವಾಬ್ದಾರಿ.

ಸರ್ಕಾರದ ನಿಧಿಯನ್ನು ನೈತಿಕ ನೆಲೆಯಲ್ಲಿ ನಿರ್ವಹಿಸುವ ವಿಧಾನಗಳು:

* ಪ್ರತಿಯೊಂದು ಪೈಸೆ ಹಣಕ್ಕೂ ಯಾವ ಕಾರ್ಯಕ್ಕಾಗಿ ಹೇಗೆ, ಯಾರಿಗೆ, ಯಾವ ರೀತಿ ನಿಧಿ ಬಳಕೆ ಆಗಬೇಕೆಂದು ನಿರ್ದೇಶನಗಳಿರುತ್ತವೆ. ಅವುಗಳನ್ನು ಪಾಲಿಸಬೇಕು. ಉದಾ: ಕಂದಾಯ ಇಲಾಖೆಯಲ್ಲಿ ವಿವಿಧ ರೀತಿಯ ಪಿಂಚಣಿ ಹಣ ಮತ್ತು ಬರ ಪರಿಹಾರ ಮೊತ್ತಗಳು ಇತ್ಯಾದಿ.

* ಪರಿಹಾರದ ನಿಧಿಯಾಗಿದ್ದರೆ ಕೊಡಬೇಕಾದ ಸಂದರ್ಭದಲ್ಲಿ ಪಾಲಿಸಬೇಕಾದ ಮಾನದಂಡಗಳು ಯಾವುವು ಎಂಬುದನ್ನು ಅರಿತು ಈ ಮಾನಕಗಳ ಪರಿಪಾಲನೆಯನ್ನು ತಿಳಿದು ನಿಧಿ ಪರಿಹಾರ ಕಾರ್ಯಕೈಗೊಳ್ಳುವಿಕೆ

* ರಸ್ತೆ ಮತ್ತಿತರ ಕಾಮಗಾರಿಗಳ ಹಣ ಪಾವತಿಸುವ ಮುಂಚೆ ಕಾಮಗಾರಿಯ ಗುಣಮಟ್ಟವನ್ನು ಪರೀಕ್ಷಿಸಿ ನಿಧಿ ವಿತರಿಸುವಿಕೆ.

ಇತರೇ ಅಂಶಗಳು.

**6) ಭಾರತಕ್ಕೆ ಅಹಿಂಸಾ ಮಾರ್ಗದ ಮೂಲಕ ಸ್ವಾತಂತ್ರ್ಯ ದೊರಕಿದೆ. ಆದ್ದರಿಂದಲೇ ಭಾರತದ ಸ್ವಾತಂತ್ರ್ಯದ ಮೌಲ್ಯ ಭಾರತೀಯರಿಗೆ ಅರಿವಿಲ್ಲ. ಯಾವುದೇ ರಕ್ತದ ಕ್ರಾಂತಿಗಳಿಲ್ಲದ ಸ್ವಾತಂತ್ರ್ಯ ಅಲ್ಲಿನ ಜನರು ಅನಾಯಾಸವಾಗಿ ಸ್ವೇಚ್ಛೆಯಿಂದ ಬಾಳುವಂತೆ ಮಾಡುವುದು ಎಂಬ ವಾದವಿದೆ.**

**ಆದ್ದರಿಂದ ನಿಮ್ಮ ಪ್ರಕಾರ ಅಹಿಂಸಾವಾದವು ಒಳ್ಳೆಯದೇ? ನಿಮ್ಮ ಪ್ರಕಾರ ಒಂದು ದೇಶಕ್ಕೆ ಕ್ರಾಂತಿಯ ಸ್ವಾತಂತ್ರ್ಯ ಬೇಕೋ ಅಥವಾ ಅಹಿಂಸಾ ಸ್ವಾತಂತ್ರ್ಯ ಬೇಕೋ? ಸೂಕ್ತವಾದ ಉದಾಹರಣೆಗಳಿಂದ ನಿಮ್ಮ ವಾದವನ್ನು ಚರ್ಚಿಸಿರಿ.**

**ಉತ್ತರ:** **"**ಅಹಿಂಸಾ ಪರಮೋಧರ್ಮ**"** ಎಂಬ ಮಾತಿನಂತೆ ಅಹಿಂಸೆ ಎನ್ನುವುದು ಸರ್ವಕಾಲಕ್ಕೂ ಒಪ್ಪಿತವಾದದ್ದು. ಅಹಿಂಸೆಯೇ ಇಂದಿನ ಯುಗದ ಅತ್ಯಗತ್ಯವಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಅಹಿಂಸೆಯಿಂದ ಸಿಕ್ಕಿರುವುದೇ ಒಳ್ಳೆಯದು. ಹೆಣಗಳ ರಾಶಿಯಲ್ಲಿ ರಕ್ತದ ಮಡುವಿನ ಸ್ವಾತಂತ್ರ್ಯ ಅಮಾನವೀಯವಾದುದು.

ನಮ್ಮ ಸ್ವಾತಂತ್ರ್ಯದ ಬೆಲೆಯನ್ನು ನಾವು ಅರಿಯದೇ ಇರುವುದಕ್ಕೆ ಬೇರೆಯದೆ ಕಾರಣಗಳಿರಬಹುದು. ಅದು ದೇಶಭಕ್ತಿಯ ಕೊರತೆ, ಸ್ವಾಭಿಮಾನದ ಕೊರತೆ, ಕಾಯಕ ನಿಷ್ಠೆ ಇಲ್ಲದಿರುವಿಕೆ, ರಾಷ್ಟ್ರ ನಾಯಕರ ಕುರಿತಾದ ಪೂರ್ವಾಗ್ರಹಗಳು ಇತ್ಯಾದಿ. ಈ ರೀತಿಯಾಗಿ ಭಾವನೆಗಳು ಬೆಳೆಯಲು ನಮ್ಮ ರಾಜಕೀಯ ವ್ಯವಸ್ಥೆಯೂ ಕಾರಣವಾಗಿದೆ. ಅಹಿಂಸೆಯಿಂದ ಪಡೆದ ಗೆಲುವಿಗೆ ನಮ್ಮ ದೇಶದ ಸ್ವಾತಂತ್ರ್ಯಕ್ಕಿಂತ ಬೇರೆಯ ಉದಾಹರಣೆಗಳೇ ಬೇಕಿಲ್ಲ.

ಭಯೋತ್ಪಾದನೆ ಹಿಂಸೆಗಳಿಂದ ಕೂಡಿದ ವಿಶ್ವಕ್ಕೆ ಅಹಿಂಸೆಯ ಮಂತ್ರದ ಅಗತ್ಯವಿದೆ. ಅದೇ ನಮ್ಮ ಧ್ಯೇಯವಾಗಬೇಕಿದೆ.

**7) ವಿವೇಚಿಸಿರಿ:** **2.5*5=12.50**

**ಅ) ವೃತ್ತಿ ಸಂಸ್ಕೃತಿ**

**ಬ) ಸೇವೆ**

**ಕ) ಪ್ರಾಮಾಣಿಕತೆ**

**ಡ) ನೈತಿಕ ಚೌಕಟ್ಟು**

**ಢ) ಮಾನವೀಯತೆ**

**ಉತ್ತರ:** ವೃತ್ತಿ ಸಂಸ್ಕೃತಿ ಎಂದರೆ ಸಹೋದ್ಯೋಗಿಗಳ ಮಧ್ಯೆ ಉತ್ತಮ ಸಂಬಂಧ, ಸಹಕಾರ, ಉತ್ಪಾದನೆ ಹೆಚ್ಚಿಸಲು ಪ್ರೋತ್ಸಾಹ, ಇವನ್ನು ಒಳಗೊಂಡಿದೆ. ಅಲ್ಲದೆ ಇದೊಂದು ವಿಶಿಷ್ಟವಾದ ಆಚರಣೆ. ವೃತ್ತಿ ಸಂಸ್ಕೃತಿ ಎಂದರೆ ಪ್ರಾಮಾಣಿಕತೆ, ದಕ್ಷತೆ, ಸಂಯಮದಿಂದ ಜವಾಬ್ದಾರಿ ನಿಭಾಯಿಸುವುದೇ ವೃತ್ತಿ ಸಂಸ್ಕೃತಿ. ಇದು ಕಾಯಕವೇ ಕೈಲಾಸ ಎಂಬ ತತ್ವವನ್ನು ಆಧರಿಸಿದೆ. ಕೆಲಸ ಮಾಡುವುದೇ ಸಂಸ್ಕೃತಿ. ಇದು ಇಂದಿನ ಸಾರ್ವಜನಿಕ ಬದುಕಿನ ಅಗತ್ಯಗಳಲ್ಲಿ ಒಂದು.

* ಸೇವೆ: ಇನ್ನೊಬ್ಬರಿಗೆ ಒಂದು ಕಾರ್ಯದಲ್ಲಿ ನೆರವಾಗುವುದೇ ಸೇವೆ. ಬಹುತೇಕ ಸೇವೆಯು ಪ್ರತಿಫಲಾಪೇಕ್ಷೇ ಇಲ್ಲದೆ ಪರರಿಗಾಗಿ ಅರ್ಪಣಾ ಮನೋಭಾವ, ಸಹಾಯ ಹಸತ ಚಾಚುವುದೇ ಸೇವೆಯಾಗಿದೆ.

ಸಾರ್ವಜನಿಕ ಬದುಕಿನಲ್ಲಿ ನಮಗೆ ಸಂಬಳವನ್ನು ನೀಡುವುದೇ ನಿಷ್ಪಕ್ಷಪಾತವಾಗಿ ಸೇವೆ ಸಲ್ಲಿಸಲು.

* ಪ್ರಾಮಾಣಿಕತೆ: ವ್ಯಕ್ತಿ ತನ್ನ ನಡೆ ನುಡಿಯನ್ನು ಶುದ್ದವಾಗಿರುವುದು. ಆತ್ಮಸಾಕ್ಷಿಯ ಎದುರು ದಕ್ಷವಾಗಿರುವುದು. ಪ್ರತಿಫಲಾಪೇಕ್ಷಿ ಇರದೆಯೇ ಸೇವೆ ಸಲ್ಲಿಸುವುದು. ಪ್ರಾಮಾಣಿಕತೆಯು ಒಳಿತಿನ ಒಂದು ನೈತಿಕ ನೆಲೆಗಟ್ಟು. ಅದನ್ನು ಕಾಯಾ, ವಾಚಾ, ಮನಸಾ ಪಾಲಿಸಬೇಕು.

* ನೈತಿಕ ಚೌಕಟ್ಟು: ಕಾನೂನಿನ ಚೌಕಟ್ಟಿಗೆ ಒಂದು ಮೂರ್ತವಾದ ಆಕಾರವಿದೆ. ನೈತಿಕ ಚೌಕಟ್ಟು ಅಮೂರ್ತವಾದ ಒಳ್ಳೆಯ ಅಂಶಗಳಿಂದ ಕೂಡಿದ ಒಂದು ಬಂಧ. ವ್ಯಕ್ತಿಯೊಂದಿಗೆ ಆಂತರಿಕವಾದ ಮೌಲ್ಯಗಳ ಬಂಧವಿದು. ಇದನ್ನು ಪಾಲಿಸಿದರೆ ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಒಳ್ಳೆಯದಾಗುತ್ತದೆ.

* ಮಾನವೀಯತೆ: ಮತ್ತೊಬ್ಬ ವ್ಯಕ್ತಿಯ ಕುರಿತಾಗಿ ಇರುವ ಸಹನೆ ಅನುಕಂಪ ಕರುಣೆಗಳ ಸಮ್ಮಿಳಿತವೇ ಮಾನವೀಯತೆ.

ಮಾನವನು ಸಹಜವಾಗಿ ಮಾನವೀಯತೆ ಮೌಲ್ಯಗಳ ಆಗರ. ಸಮಾಜದಲ್ಲಿನ ದೀನ ದಲಿತ ಮುಂತಾದವರ ಕುರಿತಾಗಿ ಮಾನವೀಯತೆಯ ಅಗತ್ಯವಿದೆ.

**8) ಸಮಗ್ರತೆಯು ಗಳಿಸಿಕೊಳ್ಳುವಂತಹುದೇ? ಅಥವಾ ಸಮಗ್ರತೆಯು ಹುಟ್ಟಿನಿಂದ ಬರುವುದೋ? ಆಡಳಿತದಲ್ಲಿ ಸಮಗ್ರತೆಯ ಪ್ರಾಮುಖ್ಯತೆ? ಅದರಿಂದ ಆಡಳಿತಕ್ಕೆ ಮತ್ತು ಆಡಳಿತಗಾರನಿಗೆ ಆಗುವ ಅನುಕೂಲತೆಗಳು? ವಿವರಿಸಿರಿ.**

**ಉತ್ತರ:** ವ್ಯಕ್ತಿಯ ಪರಿಪೂರ್ಣವಾದ ವ್ಯಕ್ತಿತ್ವವೇ ಸಮಗ್ರತೆ. ಇಲ್ಲಿ ಪರಿಪೂರ್ಣತೆ ಎಂಬುದು ಮುಖ್ಯ. ಮನಸಾ, ವಾಚಾ, ಕಾಯಾ ಒಂದೇ ಅಭಿಪ್ರಾಯ ಹೊಂದಿರುವುದು. ಈ ಪರಿಪೂರ್ಣತೆಯೆಂಬ ಸಮಗ್ರತೆ ಮನುಷ್ಯನಲ್ಲಿ ಬರಬೇಕಾದರೆ ಅನುಭವವೆಂಬ ಪಾಕಶಾಲೆಯಲ್ಲಿ ಬೆಂದು ಬರಬೇಕು. ಆದ್ದರಿಂದ ಕಾಲಾವಕಾಶದಲ್ಲಿ ಸಮಗ್ರತೆ ಎಂಬುದು ಗಳಿಸಿಕೊಳ್ಳುವುದು.

ಸಮಗ್ರತೆಯ ಪ್ರಾಮುಖ್ಯತೆ:

* ಮಾನವನ ವೈಯಕ್ತಿಕ ಬದುಕಿನಲ್ಲಿಯೂ ಸಾರ್ವಜನಿಕ ಬದುಕಿನಲ್ಲಿಯೂ ಸಮಗ್ರತೆಯ ಅಗತ್ಯವಿದೆ

* ಸಮಗ್ರತೆಯಿಂದ ವ್ಯಕ್ತಿ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ಪಕ್ವವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯ

* ಸಮಗ್ರತೆಯಲ್ಲಿ ಪ್ರಾಮಾಣಿಕತೆ, ದಕ್ಷತೆ, ವೃತ್ತಿಪರತೆಯ ಅಂಶಗಳು ಹದವಾಗಿ ಬೆರೆತಿರುತ್ತವೆ.

ಆಡಳಿತಕ್ಕೆ ಮತ್ತು ಆಡಳಿತಗಾರರಿಗೆ ಸಮಗ್ರತೆಯಿಂದಾಗುವ ಅನುಕೂಲಗಳು:

* ಪರಿಪೂರ್ಣವಾದ ನಿರ್ಧಾರವನ್ನು ತೆಗೆದುಕೊಳ್ಳಲು ಸಹಾಯಕಾರಿಯಾಗಿದೆ

* ವೃತ್ತಿಬದ್ಧತೆ ಬೆಳೆಸುವುದರಿಂದ ಆಡಳಿತದಲ್ಲಿ ದಕ್ಷತೆ ಹೆಚ್ಚುವುದು

* ಪ್ರಾಮಾಣಿಕತೆಯು ಸಮಗ್ರತೆಯ ಒಂದು ಭಾಗವಾಗಿರುವುದರಿಂದ ಆಡಳಿತಕ್ಕೆ ಅನುಕೂಲ. ಆಡಳಿತಗಾರನಿಗೆ ಹೆಚ್ಚಿನ ಕೀರ್ತಿಯನ್ನು ತರುತ್ತದೆ

* ಸಮಯ ನಿಷ್ಠೆಯಿಂದ ಇಬ್ಬರಿಗೂ ಸಹಕಾರಿ

* ಸಾರ್ವಜನಿಕರಿಗೆ ಉತ್ತಮ ಸೇವೆ

* ಭ್ರಷ್ಟಾಚಾರ ಮುಕ್ತ ರಾಷ್ಟ್ರ ನಿರ್ಮಾಣಕ್ಕೆ ನೆರವಾಗುತ್ತದೆ

ಅತ್ಯುತ್ತಮವಾದ ಅಂಶಗಳ ಪರಿಪಾಕವೇ ಸಮಗ್ರತೆ. ಇದು ಆಡಳಿತಕ್ಕೆ ಆಡಳಿತಗಾರರಿಗೂ ಅತಿ ಅನಿವಾರ್ಯವಾಗಿದೆ.

**9) ಸಾರ್ವಜನಿಕ ಸೇವೆಯಲ್ಲಿ ಸಮರ್ಪಣಾ ಮನೋಭಾವನೆಯ ಅಗತ್ಯತೆಗಳೇನು? ಇಂದಿನ ಅಧಿಕಾರಿಗಳಲ್ಲಿ ಸಮರ್ಪಣೆಯ ಕೊರತೆ ಇದೆ ಎಂಬ ವಾದವಿದೆ. ಈ ಸಮರ್ಪಣಾ ಮನೋಭಾವ ಹೇಗೆ ಬೆಳೆಸಬಹುದು ಮತ್ತು ಸ್ವಯಂ ಬೆಳೆಸಿಕೊಳ್ಳುವ ಬಗೆಗಳಾವುವು?**

**ಉತ್ತರ:** ಸಾರ್ವಜನಿಕ ಸೇವೆಗಾಗಿ ಸಾರ್ವಜನಿಕ ಅಧಿಕಾರಿ ತನ್ನ ತನು ಮನ ಧನವನ್ನು ಅರ್ಪಿಸಿ ಬದ್ಧತೆಯಿಂದ ಕಾರ್ಯ ನಿರ್ವಹಿಸುವುದೇ ಸಮರ್ಪಣಾ ಮನೋಭಾವ. ಸಮರ್ಪಣೆ ಎಂದರೆ ಸರ್ವವನ್ನು ಅರ್ಪಿಸಿಕೊಳ್ಳುವಿಕೆ ಎಂದರ್ಥ. ಇಲ್ಲಿ ಸೇವೆಗಾಗಿ ತನ್ನನ್ನು ತಾನು ಅರ್ಪಿಸಿಕೊಳ್ಳುವುದೇ ಆಗಿದೆ. ಇಲ್ಲಿ ಸೇವಕನು ಸಮಯ, ಶಕ್ತಿಯೊಂದಿಗೆ ತನ್ನನ್ನು ತಾನೇ ಕರ್ತ್ಯಕ್ಕೆ ಅರ್ಪಿಸಿಕೊಂಡಿರುತ್ತಾನೆ.

ಸಮರ್ಪಣಾ ಮನೋಭಾವವು ವೈಯಕ್ತಿಕ ನೆಲೆಗಟ್ಟಿನಲ್ಲಿದೆ. ಎಲ್ಲಾ ಅಧಿಕಾರಿಗಳಲ್ಲಿ ಈ ಮನೋಭಾವದ ಕೊರತೆ ಇಲ್ಲ. ಸಮರ್ಪಣಾ ಮನೋಭಾವ ಇಲ್ಲದವರಲ್ಲಿ ಅದನ್ನು ಬೆಳೆಸುವ ತುರ್ತು ನಮಗಿದೆ.

ಸಮರ್ಪಣಾ ಮನೋಭಾವ ಬೆಳೆಸುವ ಬಗೆಗಳು:

* ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ಇಂಥಹ ಅಂಶಗಳನ್ನು ಶಾಲಾ ಪಠ್ಯಕ್ರಮದಲ್ಲಿಯೇ ಅಳವಡಿಸಬೇಕು

* ಮನೆಯಲ್ಲಿ ಪಾಲಕರಿಂದ, ಪೋಷಕರಿಂದ, ಶಿಕ್ಷಕರಿಂದ, ಸಮಾಜದಿಂದ ಈ ಭಾವನೆ ಬೆಳೆಸಲು ಸಾಧ್ಯವಿದೆ

* ಉದಾತ್ತ ನಾಯಕರ ಕುರಿತಾದ ವಿಷಯವನ್ನು ಕಲಿಸಬೇಕು

* ಸಾರ್ವಜನಿಕ ಸೇವಕರ ಆಯ್ಕೆಯ ಹಂತದಲ್ಲಿನ ಪರೀಕ್ಷೆಗಳಲ್ಲಿ ಸಂದರ್ಶನಗಳಲ್ಲಿ ಪರೀಕ್ಷಿಸಬೇಕು

* ವೃತ್ತಿ ಪೂರ್ವ, ವೃತ್ತಿ ನಿರತ ಸೇವಾ ತರಬೇತಿಯ ಕಾರ್ಯ ಚಟುವಟಿಕೆಗಳಲ್ಲಿ ಈ ಸೇವೆ ಅರ್ಪಣಾ ಮನೋಭಾವದ ಕುರಿತಾಗಿ ವಿಶೇಷ ತರಬೇತಿ ನೀಡಬೇಕು

* ವೃತ್ತಿ ನಿರತ ಸಮರ್ಪಣಾ ಮನೋಭಾವದ ವ್ಯಕ್ತಿಗಳನ್ನು ಗುರುತಿಸಿ ಗೌರವಿಸುವುದರಿಂದ ಮತ್ತೊಬ್ಬರಲ್ಲಿಯೂ ಬೆಳೆಸಬಹುದು.

**10) ಇಂದಿನ ಅಧಿಕಾರಿಗಳಿಗೆ ಸಹನೆ ಮತ್ತು ಅನುಕಂಪದ ಅಗತ್ಯವಿದೆಯೇ? ಯಾರಿಗಾಗಿ ಈ ಸಹನೆ ಮತ್ತು ಅನುಕಂಪ ಬೇಕು? ಅಧಿಕಾರಿಗಳು ಕಾನೂನಿಗೆ ಅನ್ವಯವಾಗಿ ಕೆಲಸ ಮಾಡಬೇಕೇ? ಅಥವಾ ಅನುಕಂಪ ಮತ್ತು ಸಹನೆಯಾಧಾರಿತವಾಗಿ ಅಧಿಕಾರ ನಡೆಸಬೇಕೇ? ವಿವೇಚಿಸಿ.**

**ಉತ್ತರ:** ಸಾರ್ವಜನಿಕ ಜೀವನದಲ್ಲಿ ಸಮಾಜದಲ್ಲಿ ತುಳಿತಕ್ಕೆ ಒಳಗಾದ ದಲಿತರು, ಅಲ್ಪಸಂಖ್ಯಾತರು, ದ್ವಿತೀಯ ದರ್ಜೆ ಪ್ರಜೆಗಳೆಂದು ಹಿಂದೆ ಸರಿಸಲ್ಪಟ್ಟ ಮಹಿಳೆಯರು, ಅಂತ್ಯಜರು, ಅಂಗವಿಕಲರು, ತೃತೀಯ ಲಿಂಗಿಗಳು ಮುಂತಾದವರಿಗೆ ಸೇವೆ ಸಲ್ಲಿಸುವುದೇ ಇಂದಿನ ತುರ್ತಾಗಿದೆ. ಈ ಮೇಲಿನ ಎಲ್ಲ ವರ್ಗದವರಿಗೆ ಸೇವೆ ಸಲ್ಲಿಸಲು ಸಹನೆ ಮತ್ತು ಅನುಕಂಪದ ಅಗತ್ಯ ಅಪಾರವಾಗಿದೆ.

ಸಹನೆ ಎಂದರೆ ಇನ್ನೊಬ್ಬರ ಸಂಕಟಗಳಿಗೆ ಓಗೊಡುವುದು. ಅವರ ಸಂಕಟವನ್ನು ಅರಿಯುವಾಗ ತೋರಿಸಬೇಕಾದ ವ್ಯಕ್ತಿಯ ಮಾನವೀಯ ಮೌಲ್ಯವೇ ಸಹನೆ. ಅದನ್ನೇ ನಾವು ತಾಳ್ಮೆ (Patience) ಎನ್ನುತ್ತೇವೆ.

ಅನುಕಂಪ ಎಂದರೆ ಕರುಣೆ ತೋರಿಸುವುದು. ಸಮಾಜದ ದುರ್ಬಲ ವರ್ಗದವರ ಸ್ಥಿತಿಗಾಗಿ ಅನುಕಂಪ ತೋರಿಸುವ ಜರೂರ ಎದುರಾಗಿದೆ. ನಾವು ಕಾರ್ಯ ನಿರ್ವಹಿಸುತ್ತಿರುವುದು ಮನುಷ್ಯರಿಗೆ ಹೊರತು ಯಂತ್ರಗಳಿಗಲ್ಲ. ಅದಕ್ಕೆ ಸಹನೆ ಮತ್ತು ಅನುಕಂಪಗಳ ಅಗತ್ಯವಿದೆ.

ಸಾರ್ವಜನಿಕ ಅಧಿಕಾರಿಗೆ ಕಾನೂನು ಕಾಯ್ದೆಗಳಷ್ಟೇ ಇವುಗಳ ಅಗತ್ಯವು ಇದೆ. ಅನುಕಂಪ ಅಥವಾ ಸಹನೆ ತೋರಿಸುವ ಭರದಲ್ಲಿ ಅಧಿಕಾರಿಯಾದವನು ಕಾನೂನಿನ ಚೌಕಟ್ಟನ್ನು ಮೀರಬಾರದು.

ಕಾನೂನು ಕಾಯ್ದೆಯ ವ್ಯಾಪ್ತಿಯಲ್ಲಿ ನೈತಿಕತೆ ಎಂಬ ಪ್ರಜ್ಞೆಯನ್ನು ತೋರಿಸಿ ಸಹನೆಯಿಂದ ವರ್ತಿಸಿ ಅನುಕಂಪವನ್ನು ಹೊಂದಿ ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕು. ಅವರ ಒಳಿತಿಗಾಗಿ ಸಾಕಷ್ಟು ಪ್ರಯತ್ನಿಸಬೇಕು.

**11) ಮಾಹಿತಿ ಹಕ್ಕು ಅಧಿನಿಯಮವು ಅಧಿಕಾರಿಗಳಿಗೆ ಮಗ್ಗಲು ಮುಳ್ಳಾಗಿದೆ. ಇದರಿಂದ ಅವರು ಮುಕ್ತವಾದ ಆಡಳಿತ ನಡೆಸದಂತೆ ಆರ್.ಟಿ.ಐ ನಿರ್ಬಂಧಿಸುತ್ತಿದೆಯೇ? ಆರ್.ಟಿ.ಐ ನ ದುರ್ಬಳಕೆಯ ಸಾಧ್ಯತೆ ಇದೆಯೇ? ಆರ್.ಟಿ.ಐ ಇಂದಿನ ಪ್ರಸ್ತುತತೆ ಏನು?**

**ಉತ್ತರ:** ಮಾಹಿತಿ ಹಕ್ಕು ಅಧಿನಿಯಮವು ಸಾರ್ವಜನಿಕರಿಗೆ ಸರ್ಕಾರ ಆಗು ಹೋಗುಗಳನ್ನು ಅರಿಯಲು ಇರುವ ಪ್ರಮುಖವಾದ ಕಾಯಿದೆ. ಇದರಿಂದ ಅಪ್ರಾಮಾಣಿಕ ಮತ್ತು ಅಧಕ್ಷ ಅಧಿಕಾರಿಗಳಿಗೆ ಮಾತ್ರ ಮಗ್ಗಲು ಮುಳ್ಳಾಗಲು ಸಾಧ್ಯವಿದೆ. ನಿಷ್ಠಾವಂತ, ದಕ್ಷ, ಕಾರ್ಯತತ್ಪರ ಅಧಿಕಾರಿಗಳಿಗೆ ಮುಕ್ತವಾಗಿ ಆಡಳಿತ ನಡೆಸಲು ಈ ಆರ್‌ಟಿಐ ನಿಂದ ಯಾವುದೇ ನಿರ್ಬಂಧಗಳಿಲ್ಲ.

ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎನ್ನುವಂತೆ ಅಧ್ಯಕ್ಷರು ಮಾತ್ರ ಈ ರೀತಿ ಆರ್‌ಟಿಐ ಯನ್ನು ನೆಪವಾಗಿ ಬಳಸಬಹುದು.

ಕೆಲವು ವ್ಯಕ್ತಿಗಳು ಅಧಿಕಾರಶಾಹಿಗಳಿಗೆ ಬೆದರಿಕೆಯೊಡ್ಡುವ ಮೂಲಕ ಆರ್‌ಟಿಐ ಯನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಅಂತಹ ಸಂದರ್ಭಗಳಲ್ಲಿ ಅದಕ್ಷ ಅಧಿಕಾರಿ ಮತ್ತು ಅಪ್ರಮಾಣಿಕ ಮಾಹಿತಿ ಕಾರ್ಯಕರ್ತ ಇಬ್ಬರನ್ನು ದಂಡಿಸಬೇಕು.

**ಆರ್‌ಟಿಐ ನ ಪ್ರಸ್ತುತತೆ:**

* ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚುತ್ತದೆ
* ಭ್ರಷ್ಟಾಚಾರಕ್ಕೆ ಕಡಿವಾಣ
* ಸಾರ್ವಜನಿಕರಿಗೆ ಸರ್ಕಾರದ ಕಾರ್ಯವೈಖರಿ ಕುರಿತಾದ ಮಾಹಿತಿ
* ಅಧಿಕಾರಿಗಳ ಸಮಯ ಪರಿಪಾಲನೆ ದಕ್ಷತೆ ಹೆಚ್ಚಿಸುತ್ತದೆ

* ಜವಾಬ್ದಾರಿ ಮತ್ತು ಹೊಣೆಗಾರಿಕೆಯ ಅರಿವು ಮೂಡುತ್ತದೆ

* ಆಡಳಿತ ಯಂತ್ರಕ್ಕೆ ವೇಗ.

**12) ಅಭಿಕ್ಷಮತೆ ಮತ್ತು ಮನೋಧೋರಣೆಯ ನಡುವಿನಲ್ಲಿನ ವ್ಯತ್ಯಾಸಗಳೇನು? ಒಬ್ಬ ಅಧಿಕಾರಿಯಲ್ಲಿ ಅವನ ಅಭಿಕ್ಷಮತೆಗಿಂತ ಹೆಚ್ಚಾಗಿ ಒಳ್ಳೆಯ ಮನೋಧೋರಣೆಯ ಅಗತ್ಯತೆ ಇದೆಯೇ? ನಿಮ್ಮ ಅಭಿಪ್ರಾಯಗಳನ್ನು ಕ್ರೋಢೀಕರಿಸಿರಿ.**

**ಉತ್ತರ:** ಅಭಿಕ್ಷಮತೆ ಎಂದರೆ ವ್ಯಕ್ತಿಯ ಕಾರ್ಯ ಸಾಮರ್ಥ್ಯ, ಬದ್ಧತೆ, ನಿಷ್ಠೆ, ಮನೋಧೋರಣೆಯ ವ್ಯಕ್ತಿಯ ನಿರ್ಧಾರಗಳ ಮೇಲೆ ಪ್ರಭಾವ ಬೀರುವ ಆಂತರಿಕ ಸಂಗತಿ ಅಭಿಕ್ಷಮತೆಯನ್ನು ಕಡಿಮೆ ಕಾಲಾವಧಿಯಲ್ಲಿ ಗಳಿಸಿಕೊಳ್ಳಬಹುದು.

ಆದರೆ ಬಹುತೇಕ ಬೆಳೆಯುತ್ತಾ ಬಂದಿರುವ ಮನೋಧೋರಣೆಯನ್ನು ಬದಲಿಸಲು ಹೆಚ್ಚಿನ ಸಮಯದ ಅವಶ್ಯಕತೆ ಇದೆ. ಕಾರಣ ಮನೋಧರ್ಮ ಮಾನಸಿಕವಾಗಿ ಪರಿವರ್ತನೆ ಆಗುವಂತದ್ದು.

ಒಬ್ಬ ಅಧಿಕಾರಿಗೆ ಅಭಿಕ್ಷಮತೆಯಷ್ಟೇ ಉತ್ತಮ ಮನೋಧೋರಣೆಯ ಅಗತ್ಯವಿದೆ. ಮನೋಧೋರಣೆಯು ನಿರ್ಧಾರಕ್ಕೆ ಕಾರಣವಾಗಿರುವುದರಿಂದ ಅದು ಅತ್ಯಗತ್ಯ. ಅದರಿಂದ ಅಭಿಕ್ಷಮತೆಯ ಗುಣಮಟ್ಟ ಅರಿಯಬಹುದು.

ದಕ್ಷವಾಗಿ ಕಾರ್ಯ ನಿರ್ವಹಿಸುವುದಕ್ಕಿಂತ ಅತ್ಯುತ್ತಮವಾದ ಕಾರ್ಯಕ್ಕೆ ಅತ್ಯುತ್ತಮವಾದ ನಿರ್ಧಾರ ಕೈಗೊಳ್ಳುವಿಕೆಯ ಮನೋಧೋರಣೆ ಪ್ರಮುಖವಾದುದು.

**13) ನೈತಿಕತೆಗೂ ಮತ್ತು ರಾಜಕೀಯಕ್ಕೂ ಒಂದು ದೊಡ್ಡ ಕಂದರವಿದೆಯೇ? ರಾಜಕೀಯದಲ್ಲಿ ನೈತಿಕತೆಯ ಅಗತ್ಯಗಳೇನು? ರಾಜಕೀಯದಲ್ಲಿ ನೈತಿಕತೆಯನ್ನು ತರುವ ಹೊಣೆಗಾರರು ಯಾರು? ರಾಜಕೀಯದಲ್ಲಿ ನೈತಿಕತೆಯನ್ನು ಯಾವ ಕ್ರಮಗಳಿಂದ ತರಬಹುದು?**

**ಉತ್ತರ:** ಪ್ರಸ್ತುತ ರಾಜಕೀಯ ವ್ಯವಸ್ಥೆಯನ್ನು ಗಮನಿಸಿದರೆ ನೈತಿಕತೆಗೂ, ರಾಜಕೀಯಕ್ಕೂ ಎತ್ತನಿಂದೆತ್ತ ಸಂಬಂಧವಯ್ಯಾ ಎನ್ನುವಂತಿದೆ. ಆದರೂ ಕತ್ತಲಲ್ಲಿ ಮಿಂಚು ಹುಳುವಿನಂತೆ ನೈತಿಕತೆಯಿಂದ ಕೂಡಿದ ರಾಜಕಾರಣಿಗಳು ಇದ್ದಾರೆ. ಉದಾ: ಅಟಲ್ ಬಿಹಾರಿ ವಾಜಪೇಯಿ.

ಸಮಾಜದಲ್ಲಿ ಧರ್ಮ ಮತ್ತು ರಾಜಕೀಯ ಯಾವ ಕಾಲದಲ್ಲಿಯೂ ಅಪಾರವಾಗಿ ಪ್ರಭಾವಿಸುವ ಸಂಗತಿಗಳು ಅದರಿಂದಾಗಿ ರಾಜಕೀಯದಲ್ಲಿ ನೈತಿಕತೆಯ ಅಗತ್ಯತೆ ಇದೆ.

**ಅಗತ್ಯಗಳು:**

* ರಾಜಕೀಯ ನಾಯಕರು ಪ್ರಾಮಾಣಿಕರಾಗಿದ್ದರೆ ಮಾತ್ರ ಅವರನ್ನು ಪ್ರತಿನಿಧಿ ಮಾಡಿದ ಜನರ ಆಶೋತ್ತರಗಳು ಈಡೇರುತ್ತದೆ

* ರಾಜಕೀಯ ಕಾರ್ಯಾಂಗದ ಮೇಲೆ ಹಿಡಿತವಿರುವುದರಿಂದ ಸಮಗ್ರವಾದ ದೃಷ್ಟಿಯಲ್ಲಿ ನೈತಿಕತೆ ಅತಿ ಅಗತ್ಯ

* ಸ್ವಜನ ಪಕ್ಷಪಾತ, ಪಾರದರ್ಶಕ, ಭ್ರಷ್ಟಾಚಾರ ಮುಕ್ತವಾದ ಸಮಾಜ ನಿರ್ಮಿಸಲು ರಾಜಕೀಯದಲ್ಲಿ ನೈತಿಕತೆಯನ್ನು ತರುವ ಪ್ರಮುಖ ಹೊಣೆಗಾರರು ಈ ಪ್ರಜಾಪ್ರಭುತ್ವದ ಜನರೆಂಬ ಪ್ರಭುಗಳು ಚುನಾವಣೆಯಲ್ಲಿ ಸೂಕ್ತ ವ್ಯಕ್ತಿಯ ಆಯ್ಕೆಯಿಂದ ಇದನ್ನು ಸಾಧಿಸಲು ಸಾಧ್ಯವಿದೆ. ಜೊತೆಗೆ ರಾಜಕೀಯ ಪಕ್ಷಗಳು ನೀತಿವಂತ ರಾಜಕಾರಣಿಗೆ ಮಾತ್ರ ಪಕ್ಷದ ಟಿಕೇಟ್ ದೊರಕಿಸಬೇಕು.

ರಾಜಕೀಯದಲ್ಲಿ ನೈತಿಕತೆಯನ್ನು ತರಬಹುದಾದ ಕ್ರಮಗಳು:

* ರಾಜಕೀಯ ಶಿಕ್ಷಣ: ಉನ್ನತವಾದ ಶಿಕ್ಷಣ ನೀಡಬೇಕು

* ಪ್ರಜೆಗಳನ್ನು ಜಾಗೃತಿಗೊಳಿಸಬೇಕು

* ಪ್ರಜಾಪ್ರತಿನಿಧಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ಮೂಲಕ

* ತಪ್ಪಿತಸ್ಥರಿಗೆ ಶೀಘ್ರ ವಿಚಾರಣೆ ಮತ್ತು ಶಿಕ್ಷೆ

**14) ಆಡಳಿತದಲ್ಲಿ ರಾಜಕೀಯದ ಪ್ರಭಾವಗಳು ಹೆಚ್ಚುತ್ತಿವೆ. ಒಬ್ಬ ಅಧಿಕಾರಿಯೂ ರಾಜಕೀಯದಿಂದ ಹೇಗೆ ದೂರವಿರಬೇಕು. ನೈತಿಕತೆಯಲ್ಲಿ ಬಲಿ ಕೊಡದೇ, ರಾಜಕೀಯವನ್ನು ಎದುರು ಹಾಕಿಕೊಳ್ಳದೇ ಅಧಿಕಾರವನ್ನು ದಕ್ಷತೆಯಿಂದ ನಿರ್ವಹಿಸಲು ಸಾಧ್ಯ ಇದೆಯೇ? ಹೇಗೆ ಎಂಬುದನ್ನು ವಿವೇಚಿಸಿರಿ.**

**ಉತ್ತರ:** ಯಾವುದೇ ಸಾರ್ವಜನಿಕ ಅಧಿಕಾರಿಯೂ ಎಲ್ಲ ರೀತಿಯ ರಾಜಕೀಯ ಪಕ್ಷಗಳಿಂದ ಮುಕ್ತನಾಗಿರಬೇಕು. ಯಾವುದೇ ಇಕ್ಕಟ್ಟುಗಳನ್ನು ಇಟ್ಟುಕೊಳ್ಳಬಾರದು. ರಾಜಕೀಯ ತಾಟಸ್ಥಿಕತೆ ನಮ್ಮನ್ನು ಹಿತಾಸಕ್ತಿ ಸಂಘರ್ಷದಲ್ಲಿ ಸಿಲುಕಿಸುತ್ತದೆ. ರಾಜಕೀಯದಿಂದ ದೂರವಿದ್ದಾಗ ಮಾತ್ರ ನಿಷ್ಪಕ್ಷಪಾತದಿಂದ ಸೇವೆ ಸಲ್ಲಿಸಲು ಸಾಧ್ಯ. ಜನಪ್ರತಿನಿಧಿಗಳು ಜನಾಭಿಪ್ರಾಯ ರೂಪಿಸುವ ಬಲ ಹೊಂದಿರುವುದರಿಂದ ಅವರನ್ನು ಎದುರು ಹಾಕಿಕೊಂಡು ಸೇವೆ ಮಾಡಲು ಸಾಧ್ಯವಿಲ್ಲ. ಜನಪ್ರತಿನಿಧಿಗಳೊಂದಿಗೆ ಸಾರ್ವಜನಿಕವಾದ ಮತ್ತು ಅಧಿಕಾರದಿಂದ ಕೂಡಿದ ಚೌಕಟ್ಟಿನಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಬೇಕು. ಈ ರಾಜಕೀಯದ ಬಲವಂತಿಕೆಗೆ ಮತ್ತು ಆಮಿಷಗಳಿಗೆ ಯಾವತ್ತೂ ಬಲಿಯಾಗಬಾರದು.

ಉತ್ತಮ ಕಾರ್ಯಗಳಿಂದ ಸಾರ್ವಜನಿಕರಿಗೆ ಹತ್ತಿರವಾಗುವ ಮೂಲಕ ರಾಜಕಾರಣಿಯೊಂದಿಗೆ ಒಂದು ನಿರ್ದಿಷ್ಟವಾದ ಸಂಬಂಧಾಂತರವನ್ನು ಕಾಯ್ದುಕೊಂಡು ಕೆಲಸ ಮಾಡಲು ಸಾಧ್ಯವಿದೆ.

ಪಕ್ಷಪಾತದಿಂದ ಮಾತ್ರ ರಾಜಕೀಯ ವ್ಯಕ್ತಿಗಳು ಬಹುತೇಕ ಹಸ್ತಕ್ಷೇಪ ಮಾಡುವರು. ಅದನ್ನು ನಾವು ಯಾವತ್ತೂ ಮಾಡಬಾರದು. ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ. ಅದರ ಅರಿವು ಮೂಡಿಸುತ್ತಾ ಜನ ಸೇವೆ ಮಾಡಬೇಕು.

**15) ಸಂವೇಗಾತ್ಮಕ ಬುದ್ಧಿಶಕ್ತಿ ಎಂದರೇನು? ಒಬ್ಬ ಆಡಳಿತಾಧಿಕಾರಿಗೆ ಅದರ ಅಗತ್ಯವೇನು? ಉದಾಹರಣೆಯೊಂದಿಗೆ ವಿವರಿಸಿರಿ.**

**ಉತ್ತರ:** ಸಂವೇಗಾತ್ಮಕ ಅಥವಾ ಭಾವನಾತ್ಮಕ ಬುದ್ಧಿಶಕ್ತಿಯು ಮನುಷ್ಯನ ಭಾವನೆಗಳಿಂದ ರೂಪಿತವಾದ ಅವನ ಮನೋಧೋರಣೆಯನ್ನು ಪ್ರಭಾವಿಸುವ ಬುದ್ಧಿಶಕ್ತಿಯಾಗಿದೆ.

ಈ ಸಂವೇಗಾತ್ಮಕ ಬುದ್ಧಿಶಕ್ತಿಯು ಸಹನೆ, ತಾಳ್ಮೆ, ಕರುಣೆ, ಅನುಕಂಪಗಳಿಂದ ಆವೃತವಾಗಿದೆ. ಅಧಿಕಾರಿಯಾದವನು ಕೇವಲ ಕಾನೂನಿನಿಂದ ಮಾತ್ರ ಉತ್ತಮ ಕೆಲಸಗಾರನಗಲು ಸಾಧ್ಯವಿಲ್ಲ. ಅವನಲ್ಲಿ ಈ ನೈತಿಕ ಮೌಲ್ಯಗಳ ಸಾರವಿದ್ದರೆ ಮಾತ್ರ ಸಾಧ್ಯ ಎಂಬುದೇ ಆಗಿದೆ.

ಸಂವೇಗಾತ್ಮಕ ಬುದ್ಧಿಶಕ್ತಿಯ ಅಗತ್ಯತೆ:

1) ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಮಾನವೀಯ ಮೌಲ್ಯಗಳನ್ನು ಗಮನಿಸುವ ಅಗತ್ಯವಿದೆ

2) ನಿತ್ಯ ಕಾರ್ಯ ವೈಖರಿಯಲ್ಲಿ ಸಿಬ್ಬಂದಿಯೊಂದಿಗೆ ಸಾರ್ವಜನಿಕರೊಂದಿಗೆ ಭಾವನೆಗಳ ಬುದ್ಧಿಶಕ್ತಿ ಅಗತ್ಯವಿದೆ. ಉದಾ: ಒಂದು ವೇಳೆ ಪೋಲೀಸರ್ ಇಲಾಖೆಯನ್ನು ತೆಗೆದುಕೊಂಡರೆ ಒಬ್ಬ ಮಹಿಳೆ ತಾನೇ ತನ್ನ ಗಂಡನನ್ನು ಕೊಲೆ ಮಾಡಿದೆ ಎಂದು ಅವಳು ಶರಣಾಗಬಹುದು. ಇಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿ ಬಳಸಬೇಕು. ಈ ರೀತಿಯ ಪ್ರಕರಣವನ್ನು ಸರಿಯಾಗಿ ಭೇದಿಸಬೇಕು. ಪ್ರಕರಣದಲ್ಲಿ ಅವಳೇ ಕೊಲೆಗಾರ್ತಿ ಆಗಿರಬಹುದು ಅಥವಾ ಆಗಿರದೆಯೂ ಇರಬಹುದು. ಅದನ್ನು ತನಿಖೆಯಿಂದ ನಿರ್ಧರಿಸಬೇಕು.

**16) ರಾಯರೆಡ್ಡಿ ದಕ್ಷ ಸಹಾಯಕ ಆಯುಕ್ತರೆಂದು ಹೆಸರು ಮಾಡಿದ್ದಾರೆ. ದೈವಿಕತೆಯಿಂದಲೂ ಅವರು ಬಹಳ ನಂಬಿಕೆ ಹೊಂದಿದ್ದಾರೆ. ದೇವರ ದಯೆದಿಂದಲೂ ಮತ್ತು ಅವರ ಪ್ರಯತ್ನದಿಂದಲೂ ಅವರಿಗೆ ಅಧಿಕಾರ ಲಭಿಸಿದೆ ಎಂಬ ಅಪಾರ ನಂಬಿಕೆ ಇದೆ.**

**ಈಗ ಅವರನ್ನು ಚಿಕ್ಕೊಡಿಗೆ ನಿಯೋಜನೆ ಮಾಡಲಾಗಿದೆ. ವಿದೇಶಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವಿನಿಂದ 30 ಕಿ.ಮೀ ರಸ್ತೆ ಅಗಲೀಕರಣದ ಕಾರ್ಯವು ಅನುಷ್ಟಾನ ಮಾಡಲು ಅವರಿಗೆ ಆದೇಶವಾಗಿದೆ. ಅದಕ್ಕೆ ಎಲ್ಲಾ ಅಗತ್ಯತೆ ಪೂರೈಸಲು ಹಣಕಾಸಿನ ಅನುಮೋದನೆ ದೊರಕಿದೆ. ಹೀಗೆ ರಸ್ತೆ ಅಗಲೀಕರಿಸುವ ಕಾರ್ಯದಲ್ಲಿ ಒಂದು ಗ್ರಾಮದ ಲಕ್ಷ್ಮೀದೇವರ ಮಂದಿರ ರಸ್ತೆಯ ಪಕ್ಕದಲ್ಲಿದೆ. ರಾಯರೆಡ್ಡಿ ಲಕ್ಷ್ಮೀದೇವರ ಭಕ್ತ. ಈ ದೇವಸ್ಥಾನ ತೆರವುಗೊಳಿಸುವ ಆದೇಶ ಹೊರಡಿಸುವ ಹೊಣೆಯು ಅವರದು. ಈಗ ಅವನು ತೀರಾ ಸಂದಿಗ್ದತೆಯಲ್ಲಿ ಇದ್ದಾರೆ.**

**ಅ) ಅವರಿಗೆ ಮುಂದಿರುವ ಅವಕಾಶಗಳಾವುವು?**

**ಬ) ಅವರ ಮುಂದಿನ ನಡೆ ಸಾರ್ವಜನಿಕರ ಹಿತ ದೃಷ್ಟಿಯಿಂದ (ಗ್ರಾಮ ಜನತೆ ಮತ್ತು ಸಾರಿಗೆ) ಹೇಗಿರಬೇಕು?**

**ಕ) ಹೇಗೆ ಈ ಸನ್ನಿವೇಶ ಎದುರಿಸಬೇಕು?**

**ಡ) ಇಲ್ಲಿನ ನೈತಿಕ ಅಂಶಗಳಾವುವು?**

**ಉತ್ತರ:** ಸಾರ್ವಜನಿಕ ಅಧಿಕಾರಿಯಾದವನು ಮೊದಲ ಕರ್ತವ್ಯಕ್ಕೆ ಬದ್ದನಾಗಿರಬೇಕು. ಆದ್ದರಿಂದ ರಾಯರೆಡ್ಡಿಗೆ ಈ ಕಾಮಗಾರಿಗೆ ಸಾಕಷ್ಟು ಹಣಕಾಸು ದೊರಕಿರುವುದರಿಂದ ಈ ಮುಂದಿನಂತೆ ವ್ಯವಹರಿಸಬೇಕು.

* ಆ ಗ್ರಾಮದ ಜನರ ಸಭೆ ಕರೆದು ಅದರ ಕಾಮಗಾರಿಯ ಅಗತ್ಯತೆ ಮಹತ್ವ ಮುಂತಾದವುಗಳ ಕುರಿತು ಅರಿವು ಮೂಡಿಸಬೇಕು

* ಸಾಕಷ್ಟು ಹಣಕಾಸು ಲಭ್ಯವಿರುವುದರಿಂದ ಗ್ರಾಮದ ಮತ್ತೊಂದು ಪ್ರದೇಶದಲ್ಲಿ ದೇವಾಲಯ ನಿರ್ಮಿಸಬೇಕು

* ದೇವಸ್ಥಾನದ ಮೂರ್ತಿಗೆ ಹಾನಿಯಾಗದಂತೆ ಮರು ಸ್ಥಾಪಿಸಲು ಕ್ರಮಕೈಗೊಳ್ಳಬೇಕು

* ಜನರ ಭಾವನೆಗಳಿಗೆ ಧಕ್ಕೆಯಾಗದಂತೆ ದೇವಸ್ಥಾನದ ತೆರವು ಕಾರ್ಯವನ್ನು ಮಾಡಬೇಕು

* ಗ್ರಾಮದ ಜನರ ದೃಷ್ಟಿಯಿಂದ ಮತ್ತು ಅಭಿವೃದ್ದಿ ಆಡಳಿತದ ದೃಷ್ಟಿಯಿಂದ ಈ ಕ್ರಮಗಳು ಸೂಕ್ತ

ಈ ಪ್ರಕರಣದಲ್ಲಿ ಎದುರಾಗುವ ನೈತಿಕ ಅಂಶಗಳು:

* ದೈವಿಕತೆಯನ್ನು ಎದುರಿಸುವ ಅವನ ಆತ್ಮಸಾಕ್ಷಿಯ ಸಂಗತಿಗಳು

* ದೇವಸ್ಥಾನ ನಿರ್ಮಿಸುವಲ್ಲಿ ಹಣ ದುರುಪಯೋಗವಾಗದಂತೆ ನೋಡಿಕೊಳ್ಳುವ ಪ್ರಾಮಾಣಿಕತೆಯ ನೈತಿಕ ಅಂಶ

* ರಸ್ತೆಯೆಂಬ ಅಭಿವೃದ್ದಿ ಕಾಮಗಾರಿಗೆ ವಿಳಂಬವಾಗದಂತೆ ನಡೆದುಕೊಳ್ಳುವ ವೃತ್ತಿ ಬದ್ದತೆಯ ಮೌಲ್ಯ, ಸಮಯ ಪರಿಪಾಲನೆ, ಗ್ರಾಮಸ್ಥರ ನಂಬಿಕೆ ಗಳಿಸಿ ಕಾನೂನು ಸುವ್ಯವಸ್ಥೆ ಕಾಪಾಡುವ ಕಾರ್ಯ ಭಾರ.

ಸರ್ಕಾರದ ಕೆಲಸ ದೇವರ ಕೆಲಸ. ಆದ್ದರಿಂದ ಇಚ್ಛಾಶಕ್ತಿ ಇಲ್ಲಿ ಅತ್ಯಗತ್ಯ.

**17) ನೀವು ಒಬ್ಬ ದಂಡಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತೀರಿ. ಇನ್ನು ಮೂರು ತಿಂಗಳಲ್ಲಿ ಒಂದು ಮರು ಚುನಾವಣೆಯನ್ನು ನಿಭಾಯಿಸುವ ಹೊಣೆ ನಿಮ್ಮ ಹೆಗಲೇರಿದೆ. ನಿಮ್ಮ ಕಛೇರಿಯ ಚುನಾವಣಾ ವಿಭಾಗದಲ್ಲಿ ಎಂಟು ಜನ, ಹಾಗೂ ಒಟ್ಟಾರೆ ನಿಮ್ಮ ಅಧೀನದಲ್ಲಿ 30 ಜನರು ಕಾರ್ಯನಿರತರಾಗಿದ್ದಾರೆ. ಈ ಚುನಾವಣೆಯು ಸುವ್ಯವಸ್ಥಿತವಾಗಿ ನಡೆಯಲು 50 ಜನ ಅಧಿಕಾರಿಗಳ ಅಗತ್ಯವಿದೆ. ಚುನಾವಣಾ ವಿಭಾಗದ 4 ಜನ, ಉಳಿದ ವಿಭಾಗದ 10 ಜನ ಕೆ.ಎ.ಎಸ್ ಪರೀಕ್ಷೆಗೆ ಎನ್.ಓ.ಸಿ ಪಡೆದಿದ್ದಾರೆ. ಅವರ ಜೀವನದ ಮುಖ್ಯ ಪರೀಕ್ಷೆಯು ಇನ್ನು ಮೂರು ತಿಂಗಳಲ್ಲಿ ನಿಶ್ಚಯವಾಗಿದೆ. ಅವರು ರಜೆಯ ಅರ್ಜಿ ಹಾಕಿದ್ದಾರೆ. ಈ ಜನರಲ್ಲಿ 2 ಜನ ಮಾತ್ರ ಪಾಸಾಗುವ ಲಕ್ಷಣಗಳಿವೆ.**

**ಚುನಾವಣೆ ನಡೆಸಲು ನಿಮಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. (ನೀವು ಕೂಡ ಇಂತಹ ಸನ್ನಿವೇಶದಲ್ಲಿಯೇ ಪರೀಕ್ಷೆ ಎದುರಿಸಿ ಬಂದಿರುತ್ತೀರಿ).**

**ಅ) ನಿಮ್ಮ ಮುಂದಿರುವ ಆಯ್ಕೆಗಳಾವುವು?**

**ಬ) ಇಲ್ಲಿ ಎದುರಾಗಿರುವ ನೈತಿಕತೆಯ ಅಂಶಗಳು ಯಾವುವು?**

**ಕ) ಹೇಗೆ ಈ ಸನ್ನಿವೇಶವನ್ನು ಎದುರಿಸಬೇಕು?**

**ಉತ್ತರ:** ಈ ಪ್ರಕರಣದಲ್ಲಿ ಮುಂದಿರುವ ಆಯ್ಕೆಗಳು,

* ನಿಗಧಿತ ಸಮಯದಲ್ಲಿ ಚುನಾವಣೆ ನಡೆಸುವ ಜವಾಬ್ದಾರಿ ಮತ್ತು ಹೊಣೆಗಾರಿಕೆ ಎರಡು ಇರುವುದರಿಂದ ಚುನಾವಣಾ ವಿಭಾಗದ ಕೆಲಸಗಾರ ಅನಿವಾರ್ಯತೆ ಇರುವುದರಿಂದ ಅವರಿಗೆ ರಜೆ ಮಂಜೂರು ಮಾಡುವುದಿಲ್ಲ

* ಇನ್ನೂ ಕೆಲಸಗಾರರ ಅಗತ್ಯವಿರುವುದರಿಂದ ಬೇರೆ ಇಲಾಖೆಯ ಕೆಲಸಗಾರರನ್ನು ಚುನಾವಣೆಗೆ ನೇಮಿಸುವ ಅಧಿಕಾರವಿರುವುದರಿಂದ ಅಗತ್ಯವಿರುವ ಕೆಲಸಗಾರರನ್ನು ನಿಯೋಜನೆಗೆ ಆದೇಶ ನೀಡುವುದು

* ಮೇಲ್ನೋಟಕ್ಕೆ 2 ಜನ ಮಾತ್ರ ಪಾಸಾಗುವ ಲಕ್ಷಣಗಳಿರುವುದರಿಂದ ಅವರಿಗೆ ಮಾತ್ರ ಶರತ್ತು ಬದ್ದ ರಜೆ ಮಂಜೂರು ಮಾಡಬಹುದು. ಆದರೆ ಇದು ಪಕ್ಷಪಾತಕ್ಕೆ ಎಡೆ ಮಾಡಿಕೊಡುತ್ತದೆ

* ಇನ್ನೂ ಮೂರು ತಿಂಗಳ ಕಾಲಾವಕಾಶ ಇರುವುದರಿಂದ ಹೊಸದಾಗಿ ನಿಯೋಜನೆ ಆದವರಿಗೆ ತರಬೇತಿ ಕೊಡಿಸಿ ರಜೆ ಮಂಜೂರು ಮಾಡಬಹುದು.

ಎದುರಾಗುವ ನೈತಿಕತೆಯ ಅಂಶಗಳು:

1) ಕರ್ತವ್ಯ ನಿಷ್ಠೆ

2) ಪಕ್ಷಪಾತ ಮಾಡದಿರುವಿಕೆ

3) ಜವಾಬ್ದಾರಿ ನಿರ್ವಹಿಸುವಿಕೆ

4) ಅನುಕಂಪ ಮತ್ತು ಸಹಾಯ ಹಸ್ತ

ಹೊಸದಾಗಿ ನಿಯೋಜಿತರಾದ ಸಿಬ್ಬಂದಿಯಿಂದ ಚುನಾವಣೆಯನ್ನು ಎದುರಿಸಲು ಸಾಧ್ಯವೆಂಬುದು ಮನವರಿಕೆಯಾದರೆ ಹಾಗೆ ಮಾಡುವುದು ಇಲ್ಲವೇ ಪ್ರಾಮಾಣಿಕವಾಗಿ ಓದುವವರಿಗೆ ಮಾತ್ರ ರಜೆ ನೀಡಿ ಉಳಿದವರ ಸೇವೆ ಬಳಸಿಕೊಂಡು ಜವಾಬ್ದಾರಿ ನಿರ್ವಹಿಸಬೇಕು.

**18) ನೀವು ಪೋಲಿಸ್ ಉಪಅಧೀಕ್ಷಕರಾಗಿ, ಹೊಸದಾಗಿ ರಚನೆಯಾದ ಅಥಣಿ ವಿಭಾಗಕ್ಕೆ ನೇಮಕಗೊಂಡಿದ್ದೀರಿ. ನಿಮ್ಮ ಜೊತೆಗೆ ಅಭ್ಯಸಿಸಿ, ಕೆ.ಎ.ಎಸ್ ಪರೀಕ್ಷೆಯಲ್ಲಿ ಅಷ್ಟೇನೂ ಉತ್ತಮವಲ್ಲದ ಹುದ್ದೆಯನ್ನು ಗಳಿಸಿದ ನಿಮ್ಮ ಅತ್ಯಂತ ಆತ್ಮೀಯ ಗೆಳೆಯನ ಮದುವೆಯ ಆಮಂತ್ರಣ ಬಂದಿದೆ. ಮನೆಗೆ ಬಂದು ಖುದ್ದಾಗಿ ಆಮಂತ್ರಿಸಿದ್ದಾನೆ. (ಅವನೇ ನಿಮ್ಮ ಯಶಸ್ಸಿನ ರೂವಾರಿಯಾಗಿದ್ದಾನೆ)**

**ಅವನ ಮದುವೆಯ ದಿನದಂದೇ ನಿಮ್ಮ ವಿಭಾಗದ ವ್ಯಾಪ್ತಿಯಲ್ಲಿ ಆಡಳಿತ ಪಕ್ಷದ ಬೃಹತ್ ಕಾರ್ಯಕ್ರಮವಿದೆ. ಅದರ ಸಂಪೂರ್ಣ ಜವಾಬ್ದಾರಿಯನ್ನು ಜಿಲ್ಲಾ ಎಸ್.ಪಿ. ನಿಮ್ಮ ಹೆಗಲಿಗೆ ಏರಿಸಿದ್ದಾರೆ.**

**ಅ) ಈ ಸಂದಿಗ್ದತೆಯನ್ನು ಎದುರಿಸುವಲ್ಲಿನ ನೈತಿಕತೆ ಏನು?**

**ಬ) ಎದುರಿಸುವ ಬಗೆಗಳು ಯಾವುವು?**

**ಕ) ನಿಮ್ಮ ಮುಂದಿನ ಕಾರ್ಯವೈಖರಿ ಏನು?**

**ಉತ್ತರ:** ಸಂಧಿಗ್ದತೆಯನ್ನು ಎದುರಿಸುವಲ್ಲಿನ ನೈತಿಕತೆಯ ಅಂಶಗಳು:

1) ಸ್ನೇಹ ಸಂಬಂಧ

2) ಕರ್ತವ್ಯ ನಿಷ್ಠೆ ಸಂವೇಗಾತ್ಮಕ ಬುದ್ದಿಶಕ್ತಿ

ಎದುರಿಸುವ ಬಗೆಗಳು:

1) ವೈಯಕ್ತಿಕ ಕಾರಣಗಳಿಗಾಗಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ

2) ಸ್ನೇಹಿತನು ಅಧಿಕಾರಿಯಾಗಿರುವುದರಿಂದ ಕಾರ್ಯದ ಒತ್ತಡವನ್ನು ಮನವರಿಕೆ ಮಾಡುವುದು

ಕೆಲಸದ ನಂತರ ಖುದ್ದಾಗಿ ಮನೆಗೆ ಭೇಟಿ ನೀಡಿ ಶುಭಾಷಯ ಹೇಳುವುದು.

ಇನ್ನಿತರ ಅಂಶಗಳು.

**19) ಹಿತಾಸಕ್ತಿಗಳ ಸಂಘರ್ಷ ಎಂದರೇನು? ಉದಾಹರಣೆಯೊಂದಿಗೆ ವಿಷಧೀಕರಿಸಿ. ಇಲ್ಲಿನ ನೈತಿಕ ಅಂಶಗಳು ಯಾವುವು? ಹಿತಾಸಕ್ತಿ ಸಂಘರ್ಷದ ಪರಿಣಾಮಗಳು ಮತ್ತು ಎದುರಿಸುವ ಬಗೆ ಹೇಗೆ?**

**ಉತ್ತರ:** ಹಿತಾಸಕ್ತಿ ಎಂದರೆ ನಮಗಾಗಿ ಅಥವಾ ನಮ್ಮವರಿಗಾಗಿ ನಮ್ಮವರ ಪರವಾಗಿ ಅನುಕೂಲವಾಗುವಂತೆ ನಡೆದುಕೊಳ್ಳುವುದು. ಅದರಲ್ಲಿ ಸ್ವಹಿತಾಸಕ್ತಿ ಮತ್ತು ಪರಹಿತಾಸಕ್ತಿ ಎಂಬ ಅಂಶಗಳಿವೆ. ಹಿತಾಸಕ್ತಿ ಯಾವುದೇ ಆದರೂ ಒಳ್ಳೆಯದಲ್ಲ.

ಕಾನೂನಿನ ಚೌಕಟ್ಟಿನಲ್ಲಿಯೇ ಕೆಲಸ ಮಾಡಬೇಕು. ಅದನ್ನು ಮೀರಿ ಯಾರದೋ ಹಿತಾಸಕ್ತಿಗಾಗಿ ನಮ್ಮ ಅಧಿಕಾರ ಬಳಸಿಕೊಂಡಾಗ ಎದುರಾಗುವ ಒಂದು ಸಂದಿಗ್ದ ಪರಿಸ್ಥಿತಿಯೇ ಹಿತಾಸಕ್ತಿ ಸಂಘರ್ಷ.

ಉದಾಹರಣೆ ಇತ್ತೀಚೆಗೆ ಕೇಂದ್ರದ ವಿದೇಶಾಂಗ ಸಚಿವರು ವಿದೇಶಕ್ಕೆ ಕಳುಹಿಸುವಲ್ಲಿ ಅವರ ಕುಟುಂಬದ ಹಿತಾಸಕ್ತಿ ಅಡಗಿದೆ ಎಂಬ ಆರೋಪ ಎದುರಿಸುತ್ತಿದ್ದಾರೆ. ಒಂದು ವೇಳೆ ಕುಟುಂಬದೊಂದಿಗೆ ವೀಸಾ ಪಡೆದ ವ್ಯಕ್ತಿಯ ನಂಟು ಇರದೇ ಹೋಗಿದ್ದರೆ ಈ ಹಿತಾಸಕ್ತಿ ಸಂಘರ್ಷ ಏರ್ಪಡುತ್ತಿರಲಿಲ್ಲ.

ಹಿತಾಸಕ್ತಿ ಸಂಘರ್ಷದ ನೈತಿಕ ಅಂಶಗಳು:

* ಮಾನವೀಯ ನೆಲೆಗಟ್ಟು
* ಅಧಿಕಾರ ದುರುಪಯೋಗ

ಇತ್ಯಾದಿ.

ಪರಿಣಾಮಗಳು:

* ವೈಯಕ್ತಿಕ ಪ್ರಾಮಾಣಿಕತೆಗೆ ಧಕ್ಕೆ ತರುತ್ತದೆ
* ಸಾರ್ವಜನಿಕವಾಗಿ ನೈತಿಕತೆಯ ಪ್ರಶ್ನೆ ಎದುರಾಗುತ್ತದೆ
* ಅಧಿಕಾರ ತ್ಯಜಿಸುವ ಸಂದರ್ಭ ಬರಬಹುದು

ಹಿತಾಸಕ್ತಿ ಸಂಘರ್ಷ ಎದುರಿಸುವ ಬಗೆ:

* ನಿಷ್ಪಕ್ಷಪಾತವಾಗಿ ನಡೆಯಬೇಕು
* ಪ್ರಾಮಾಣಿಕವಾಗಿರಬೇಕು
* ಸಾರ್ವಜನಿಕವಾಗಿ ಪ್ರಶ್ನಾತೀತ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು
* ಕಾನೂನು ಮತ್ತು ನೈತಿಕತೆಯ ಎಲ್ಲೆಯನ್ನು ಮೀರಬಾರದು

**20) ನೀವು ಪಡಿತರ ಚೀಟಿಗಳ ಕುರಿತು ಸರ್ಕಾರ ನಡೆಸುತ್ತಿರುವ ಸತ್ಯಾಂಶ ಪರಿಶೀಲನೆಯ ವಿಶೇಷ ಅಧಿಕಾರಿಯಾಗಿದ್ದೀರಿ. ಒಂದು ತಾಲೂಕಿನ ಎಲ್ಲ 1,00,000 ಪಡಿತರ ಅಂಗಡಿಗಳ ಎಲ್ಲ ಪಡಿತರ ಚೀಟಿಗಳ ಅಕ್ರಮ ಸಕ್ರಮಗಳ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವ ಹೊಣೆ ನಿಮ್ಮದು. ಹೀಗಿರುವಾಗ ಅನೇಕ ರೀತಿಯ ಸಮಸ್ಯೆಗಳು ಎದುರಾಗಲಿವೆ.**

**ಅ) ನೀವು ಎದುರಿಸುವ ಸಮಸ್ಯೆಗಳು ಏನು?**

**ಬ) ಪರಿಹಾರ ಕ್ರಮಗಳು ಯಾವುವು?**

**ಕ) ಇದಕ್ಕೆ ನಿಮ್ಮ ಯೋಜನೆ ಹೇಗಿರುತ್ತದೆ?**

**ಡ) ಈ ಕಾರ್ಯ ನಿಜವಾಗಿ ಸಾಧ್ಯವಾಗಬಹುದೇ?**

**ಹ) ನಿಮ್ಮ ಕಾರ್ಯವೈಖರಿಯನ್ನು ಚರ್ಚಿಸಿರಿ.**

**ಉತ್ತರ:** ಪಡಿತರ ಚೀಟಿಗಳ ಅಕ್ರಮ ಸಕ್ರಮ ಸರಿಪಡಿಸುವಾಗ ಎದುರಾಗಬಹುದಾದ ಸಮಸ್ಯೆಗಳು,

1) ಸೂಕ್ತ ದಾಖಲೆಗಳ ಕೊರತೆ

2) ಅಕ್ರಮ ಅನುಭೋಗಿಗಳು

3) ರಾಜಕೀಯ ಒತ್ತಡ, ಪಡಿತರ ಕೆಳ ಅಧಿಕಾರಿಗಳ ಅಸಹಕಾರ

4) 1,00,000 ಪಡಿತರ ಪರಿಶೀಲನೆಯ ಬೃಹತ್ ಕಾರ್ಯಭಾರ

ಪರಿಹಾರ ಕ್ರಮಗಳು ಮತ್ತು ಯೋಜನೆ:

1) ವಿಶೇಷ ಅಧಿಕಾರಿಯಾಗಿರುವುದರಿಂದ ಅಧಿಕಾರಿಗಳ ತಂಡ ರಚಿಸಬೇಕು

2) ಅಕ್ರಮ ಗುರುತಿಸುವ ಮತ್ತು ಅರ್ಹ ಅನುಭೋಗಿಗಳನ್ನು ಗುರುತಿಸಲು ಮಾನಕಗಳ ಕುರಿತು ತಂಡಕ್ಕೆ ಮಾಹಿತಿ

3) ತಂತ್ರಜ್ಞಾನದ ಬಳಕೆ

4) ಪಡಿತರ ಅಂಗಡಿಗಳ ಸಭೆ ಕರೆದು ಅವರಿಗೆ ಅಕ್ರಮ ಬಹಿರಂಗ ಪಡಿಸಲು ತಿಳಿ ಹೇಳಿ ಒಪ್ಪದಿದ್ದರೆ ಅಂತಹ ಅನಧಿಕೃತ ಮಳಿಗೆ ಮುಚ್ಚಿಸಲು ಕ್ರಮ

ಈ ಕಾರ್ಯ ಸಾಧನೆಗೆ ತಂಡಗಳಿಗೆ ಹೋಬಳಿ ಮತ್ತು ಗ್ರಾಮಪಂಚಾಯತಿಗಳನ್ನು ವಿಭಾಗಿಸಿ ಕೊಟ್ಟು, ಅಲ್ಲಿ ಕಾರ್ಯ ಪ್ರವೃತ್ತರಾಗುವಂತೆ ಮಾಡುವುದು. ಈ ಎಲ್ಲ ತಂಡಗಳ ಮೇಲೆ ಸೂಕ್ತ ಮೇಲುಸ್ತುವಾರಿ ಮಾಡುವುದು ಅಕ್ರಮ ಕಂಡುಕೊಳ್ಳಲು ಸೂಕ್ತ ತಾಂತ್ರಿಕತೆಯನ್ನು ಬಳಸಿ ತಂತ್ರಜ್ಞರ ನೆರವು ಪಡೆಯುವುದು. ಯಾದೃಚ್ಛಿಕವಾಗಿ ಪಡಿತರಗಳನ್ನು ಮೇಲುಸ್ತುವಾರಿ ಪರೀಕ್ಷಿಸಿ ಕಾರ್ಯದ ದಕ್ಷತೆ ಪರೀಕ್ಷಿಸುವುದು. ತಾಲೂಕಿನ ಪ್ರತಿ ಗ್ರಾಮದಲ್ಲಿಯೂ ಜಾಹಿರಾತು ಮತ್ತು ತಮಟೆ ಹೊಡೆಸುವ ಮೂಲಕ ಜಾಗೃತಿ ಮೂಡಿಸುವುದು. ಯಾವುದೇ ಬಾಹ್ಯ ಒತ್ತಡಗಳಿಗೆ ಮಣಿಯದೆ ಪಡಿತರ ಪರಿಶೀಲಿಸಿ ವರದಿ ಮಂಡಿಸುವುದು.

# ಪ್ರಶ್ನೆ ಪತ್ರಿಕೆ – 3

**ಪ್ರಶ್ನೆ 1. ಎ) ಆಡಳಿತವು ಒಂದು ನೈತಿಕ ಕ್ರಿಯೆ ಮತ್ತು ಆಡಳಿತಗಾರನು ನೈತಿಕತೆಯ ಪ್ರತಿನಿಧಿ. ಇದನ್ನು ವಿವರಿಸಿ. (10 ಅಂಕಗಳು)**

**ಬಿ) ನಿಮ್ಮ ಪ್ರಕಾರ ಯಾರು ಭ್ರಷ್ಟಾಚಾರಿಗಳು? ನೀವು ಅವರಿಗಿಂತ ಹೇಗೆ ಭಿನ್ನರಿದ್ದೀರಿ? (10 ಅಂಕ)**

ಉತ್ತರ:

ಎ) ಪ್ರಸ್ತುತ ಆಡಳಿತವನ್ನು ನಿರ್ವಹಿಸುವುದಷ್ಟೇ ಮುಖ್ಯವಲ್ಲ. ಆಡಳಿತದಲ್ಲಿ ನೈತಿಕ ಅಂಶಗಳನ್ನು ಅಳವಡಿಸಿಕೊಂಡು ಕಾರ್ಯತತ್ಪರರಾಗಬೇಕಿದೆ. ನೈತಿಕತೆ ಇಂದಿನ ಆಡಳಿತಕ್ಕೆ ಅತಿ ಅಗತ್ಯವಾಗಿದೆ. ಆಡಳಿತದ ದೋಷಗಳನ್ನು ಸರಿಪಡಿಸಲು, ಅಭಿವೃದ್ದಿ ಆಡಳಿತ ಯಶಸ್ವಿಯಾಗಲು ನೈತಿಕತೆಯು ಅತ್ಯಗತ್ಯ.

ನೈತಿಕತೆಯ ಅಗತ್ಯತೆ ಇರುವುದರಿಂದ ಆಡಳಿತವು ಒಂದು ನೈತಿಕ ಕ್ರಿಯೆಯಾಗಿದೆ. ಈ ನೀತಿ, ನೈತಿಕತೆಯ ಅಂಶಗಳು ಆಡಳಿತಾಧಿಕಾರಿಯ ಮೂಲಕ ಅಭಿವ್ಯಕ್ತಗೊಂಡು ಅನುಷ್ಠಾನವಾಗುವುದರಿಂದ ಆಡಳಿತಗಾರ ನೈತಿಕತೆಯ ನೈಜ ಪ್ರತಿನಿಧಿಯಾಗುತ್ತಾನೆ.

ಆಡಳಿತದಲ್ಲಿ ನೈತಿಕತೆಯ ಪ್ರತಿನಿಧಿಯಾದ ಆಡಳಿತಗಾರ ತನ್ಮೂಲಕ ದಕ್ಷತೆ, ಪ್ರಾಮಾಣಿಕತೆ, ನಿಷ್ಪಕ್ಷಪಾತತೆ, ಸಮಯಪ್ರಜ್ಞೆ, ಸಹಾನುಭೂತಿ, ಅನುಕಂಪ, ಸಂಯಮ, ಸನ್ನಡತೆಯಿಂದ ನೈತಿಕ ಅಂಶಗಳನ್ನು ತನ್ನ ನಿತ್ಯ ಕಾರ್ಯದಲ್ಲಿ ಅನುಷ್ಠಾನಕ್ಕೆ ತರುತ್ತಾನೆ. ತನ್ನ ಪ್ರತಿಯೊಂದು ಕಾರ್ಯಗಳನ್ನು ಈ ಎಲ್ಲ ನೈತಿಕ ಅಂಶಗಳ ಆಧಾರದ ಮೇಲೆಯೇ ಕೈಗೊಳ್ಳುತ್ತಾನೆ.

ಸಾರ್ವಜನಿಕ ಆಡಳಿತಗಾರ, ವಿವೇಚನಾ ಅಧಿಕಾರ ಎಂಬ ವಿಶಿಷ್ಟ ಅಧಿಕಾರ ಹೊಂದಿರುವುದರಿಂದ ನೈತಿಕತೆಯು ಬಹಳ ಮುಖ್ಯ. ಒಬ್ಬ ಪೋಲೀಸ್ ಅಧಿಕಾರಿ ಕಾನೂನು, ಸುವ್ಯವಸ್ಥೆ ಕಾಪಾಡುವಲ್ಲಿ, ಒಬ್ಬ ಕಂದಾಯ ಅಧಿಕಾರಿ ಬರ ಪರಿಹಾರ, ಪಿಂಚಣಿ, ಸರ್ಕಾರ ಮತ್ತಿತರ ಯೋಜನೆಗಳನ್ನು ಅನುಷ್ಠಾನ ಮಾಡುವಾಗ ಕಾನೂನಿನ ಜೊತೆಗೆ ನೈತಿಕ ಅಂಶಗಳನ್ನು ಗಮನಿಸಬೇಕು. ಇವೆರಡರ ಸಮತೂಕ ಆಧರಿಸಿದ ಆಡಳಿತ ನಡೆಸಬೇಕು. ಆಗ ಮಾತ್ರ ಸುವ್ಯವಸ್ಥಿತ, ಆಡಳಿತ ನಿರ್ವಹಿಸಲು ಸಾಧ್ಯ.

ಈ ಹಿನ್ನೆಲೆಯಲ್ಲಿ ಸರ್ಕರದ / ಸಾರ್ವಜನಿಕ ಆಡಳಿತಗಾರ ತನ್ನ ಕಾರ್ಯವ್ಯಾಪ್ತಿಯ ಪ್ರತಿಯೊಂದು ಕೆಲಸದಲ್ಲಿ ನೈತಿಕತೆಯು ಅಮೂಲ್ಯವಾಗಿದ್ದು, ಅದರಿಂದಲೇ ಆಡಳಿತಗಾರ ನೈತಿಕತೆಯ ಪ್ರತಿನಿಧಿ ಆಗಿರುತ್ತಾನೆ.

ಬಿ) ಭ್ರಷ್ಟಾಚಾರ ಎಂದರೆ ಕೇವಲ ಒಂದು ಕಾರ್ಯ ನಿರ್ವಹಿಸಲು, ಅನಧಿಕೃತವಾಗಿ ವೈಯಕ್ತಿಕ ಲಾಭ ಮತ್ತು ಹಣವನ್ನು ಪಡೆಯುವಿಕೆಗೆ ಮಾತ್ರ ಸೀಮಿತವಾಗಿಲ್ಲ. ಹಿತಾಶಕ್ತಿ ಸಂಘರ್ಷ, ವೈಯಕ್ತಿಕ ಫಲ, ಪ್ರತಿಫಲ, ವಸ್ತುವಿನ ರೂಪದಲ್ಲಿ, ಮತ್ತೊಂದು ಕೆಲಸದ ರೂಪದಲ್ಲಿ. ತಮಗೆ ಅನುಕೂಲವಾಗುವಂತೆ ಮಾಡಿಕೊಳ್ಳುವ ಯಾವುದೇ ರೀತಿಯ ವರ್ತನೆಗಳು ಭ್ರಷ್ಟಾಚಾರಗಳೇ ಆಗಿವೆ.

ಸೆಕ್ಷೆನ್ 161ರ ಅಡಿ "ಸಾರ್ವಜನಿಕ ಅಧಿಕಾರಿ ತನ್ನ ಕರ್ತವ್ಯ ನಿರ್ವಹಣೆಗಾಗಿ, ಕಾನೂನಿನ ವ್ಯಾಪ್ತಿಯ ಹೊರತಾಗಿ ಪಡೆದುಕೊಳ್ಳುವ ಯಾವುದೇ ರೀತಿಯ ಪ್ರತಿಫಲವೇ ಭ್ರಷ್ಟಾಚಾರವಾಗಿದೆ."

ಈ ರೀತಿಯ ಸಾರ್ವಜನಿಕ ಕರ್ತವ್ಯದಿಂದ ವೈಯಕ್ತಿಕ ಲಾಭ ಮಾಡಿಕೊಳ್ಳುವ ಸಾರ್ವಜನಿಕ ವ್ಯಕ್ತಿಗಳೇ ಭ್ರಷ್ಟಾಚಾರಿಗಳು. ಅವರು ತಮ್ಮ ಪದವಿಯನ್ನು ವೈಯಕ್ತಿಕ ಹಿತಾಸಕ್ತಿ ಪೂರೈಸಿಕೊಳ್ಳಲು ದುರ್ಬಳಕೆ ಮಾಡಿಕೊಂಡು, ಸರ್ಕಾರಕ್ಕೆ ಹಾನಿ ಉಂಟುಮಾಡುವವರೆಲ್ಲಾ ಭ್ರಷ್ಟಾಚಾರಿಗಳು.

ಒಬ್ಬ ಸಾರ್ವಜನಿಕ ಅಧಿಕಾರಿಯಾಗಬಯಸುವ ನಾವು, ಈ ಭ್ರಷ್ಟಾಚಾರದ ಅರಿವಿದೆ. ಅದು ತುಂಬಾ ಹೀನ ಕೃತ್ಯ. ದೇಶ ದ್ರೋಹದ ಕಾರ್ಯ ಎಂದು ಅರಿತಿದ್ದೇನೆ. ಈ ರೀತಿಯ ಭ್ರಷ್ಟತೆಯಿಂದಾಗಿ ದೇಶಕ್ಕೆ ಹಾನಿ, ವೈಯಕ್ತಿಕವಾಗಿ ತಾತ್ಕಾಲಿಕವಾಗಿ ಇದರಿಂದ ತೃಪ್ತಿ ಸಿಕ್ಕಿದರೂ, ಇದು ಮುಂದೊಂದು ದಿನ ದೇಶಕ್ಕೆ, ಸಾರ್ವಜನಿಕ ವ್ಯಕ್ತಿಯಾದ ನಮಗೆ ಹಾನಿಕಾರಕ. ವ್ಯಕ್ತಿಯ ಚಾರಿತ್ರ್ಯ ಹಾಳು ಮಾಡುವಂತದು. ಇದರಿಂದಾಗಿ ಭ್ರಷ್ಟಾಚಾರದಿಂದ ದೂರವಿರುತ್ತೇನೆ ಮತ್ತು ಈ ಹೀನವಾದ ಕಾರ್ಯಕ್ಕೆ ಬೆಂಬಲ ಕೊಡದೇ ಭ್ರಷ್ಟತೆಯ ಅಂಶಗಳು / ಸಂಗತಿಗಳು ನನ್ನ ಕೆಲಸದ ವ್ಯಾಪ್ತಿಯಲ್ಲಿ ಬಂದರೆ ಬಯಲಿಗೆಳೆದು ಅದಕ್ಕೆ ಕಡಿವಾಣ ಹಾಕುತ್ತೇನೆ. ನಾನು ಭ್ರಷ್ಟಾಚಾರ ಮಾಡುವುದಿಲ್ಲ ಮತ್ತು ಮಾಡುವುದಕ್ಕೆ ಬೇರೆಯವರಿಗೆ ಬಿಡುವುದಿಲ್ಲ ಎಂಬ ತತ್ವಕ್ಕೆ ಬದ್ದನಾಗಿರುತ್ತೇನೆ.

**ಪ್ರಶ್ನೆ 2. ಎ) ನಿಮ್ಮ ಜೀವನದ ಗುರಿಯೇನು? ಅದನ್ನು ನೀವು ಹೇಗೆ ಸಾಕಾರಗೊಳಿಸುವಿರಿ? (10 ಅಂಕಗಳು)**

**ಬಿ) ಬ್ರೀಟಿಷರ ಕಾಲದ ಇಂಡಿಯನ್ ಸಿವಿಲ್ ಸರ್ವಿಸ್ ಬಗೆಗೆ "ಅದು ಭಾರತೀಯವೂ ಆಗಿರಲಿಲ್ಲ. ನಾಗರಿಕವೂ ಆಗಿರಲಿಲ್ಲ. ಸೇವೆ ಎಂಬುದಂತೂ ಇದ್ದಿರಲೇ ಇಲ್ಲ" ಎಂಬ ಮಾತಿದೆ. ಇಂದಿನ ಐಎಎಸ್ ಈ ವಿಷಯದಲ್ಲಿ ಎಷ್ಟರ ಮಟ್ಟಿಗೆ ಭಿನ್ನವಾಗಿದೆ? (10 ಅಂಕಗಳು)**

**ಉತ್ತರ:** ಎ) ನನ್ನ ಜೀವನದ ಅಂತಿಮವಾದ ಗುರಿ ಸಂತೋಷದಿಂದ ಬದುಕುವುದು ಮತ್ತು ಜನರು ಹಾಗೇ ಸಂತೋಷದಿಂದ ಬದುಕುವಂತೆ ನನ್ನಿಂದಾದ ಸಹಾಯ ಮಾಡುವುದು.

ಮನುಷ್ಯ **"ಅನ್ನಕ್ಕಾಗಿ ಬದುಕಿಲ್ಲ, ಆನಂದಕ್ಕಾಗಿ ಬದುಕಿದ್ದಾನೆ"**. ಇದೇ ತತ್ವವನ್ನು ನಾನು ಹೊಂದಿದ್ದೇನೆ. ಆನಂದವಾಗಿ ಬದುಕಲು ನಾವಷ್ಟೇ ಸಂತೋಷದಿಂದ ಇದ್ದರೆ ಏನು ಫಲ? ಸಮಾಜವು ಸಂತೋಷದಿಂದ ಇರಬೇಕು. ಈ ಆನಂದಮಯ ಬದುಕಿಗೆ ಶ್ರೀಮಂತಿಕೆಗೆ, ಸಡಗರಗಳು ಬೇಕಿಲ್ಲ. ಕನಿಷ್ಠ ಮೂಲಭೂತ ಸೌಕರ್ಯಗಳೊಂದಿಗೆ 'ಬದುಕುವ ಕಲೆ' ಗೊತ್ತಿರಬೇಕು. ಎಲ್ಲ ಕಲೆಗಳ ಕಲೆ 'ಜೀವನ ಕಲೆ'.

ಈ ನನ್ನ ಜೀವನದ ಗುರಿಯನ್ನು ನಾನು ಒಬ್ಬ ಉತ್ತಮ ಆಡಳಿತಗಾರನಾಗಿ ಆಯ್ಕೆಯಾಗಿ, ಆ ಹುದ್ದೆಯಿಂದ ಲಭಿಸುವ ಅಧಿಕಾರದ ಮೂಲಕ ಜನರ ಸೇವೆಯನ್ನು ಮಾಡಿ ನನ್ನ ಗುರಿಯನ್ನು ಸಾಕಾರಗೊಳಿಸಿಕೊಳ್ಳುತ್ತೇನೆ.

ಈ ಧ್ಯೇಯವನ್ನು ಮುಟ್ಟಲು ನಾನಿಂದು, ಈ ದಾರಿಯಲ್ಲಿ ಬರುತ್ತಿದ್ದೇನೆ. ಸೇವೆ ಸಲ್ಲಿಸಲು ಇದೇ ಸೇವೆ, ಅದೇ ಸೇವೆ ಅಂತ ಭೇದವಿಲ್ಲ. ಈ ಹುದ್ದೆಯೇ ಬೇಕು, ಅಲ್ಲಿದ್ದರೆ ಮಾತ್ರ ನನ್ನ ಗುರಿ ಸಾಕಾರ ಎಂಬ ಪ್ರಶ್ನೆಗಿಂತ ನನ್ನ ಅಂತಿಮವಾದ ನನ್ನ ಮತ್ತು ಸಮುದಾಯದ ಆನಂದವನ್ನು ಸಾಕಾರಗೊಳಿಸಿಕೊಳ್ಳುವುದೇ ಮುಖ್ಯ.

ಯಾವುದೇ ಹುದ್ದೆಯಲ್ಲಿದ್ದರೂ ಸೇವೆಯನ್ನು ಬಯಸಿ ಬಂದವರಿಗೆ ನಿಷ್ಪಕ್ಷಪಾತವಾಗಿ, ಕಾನೂನಿನ ಅಡಿಯಲ್ಲಿ, ಸಮಯಕ್ಕೆ ಸರಿಯಾಗಿ, ಸೇವೆಯನ್ನು ಒದಗಿಸಿ ಜನರು ಖುಷಿಯಿಂದ ಮರಳುವಂತೆ ಮಾಡುತ್ತೇನೆ. ಇದಕ್ಕಾಗಿ ನನ್ನ ಸಹದ್ಯೋಗಿಗಳನ್ನು ಪ್ರೇರೇಪಿಸಿ, ಅವರು ಹಾಗೆಯೇ ಕರ್ತವ್ಯ ನಿಷ್ಠರಾಗುವಂತೆ ನೋಡಿಕೊಳ್ಳುತ್ತೇನೆ.

ಬದ್ದತೆ, ಕಾರ್ಯದಕ್ಷತೆ, ಪ್ರಾಮಾಣಿಕತೆ, ಸತ್ಯನಿಷ್ಠೆ ಇದ್ದರೇ ಯಾವ ಕಾರ್ಯವೂ ಅಸಾಧ್ಯವಲ್ಲ. ಮಾಡುವ ಛಲವಿರಬೇಕು, ಒಳ್ಳೆಯ ಗುಣವಿರಬೇಕು.

ಬಿ) ಭಾರತೀಯ ಆಡಳಿತ ಸೇವೆ (ಐಎಎಸ್)ಯನ್ನು ಇಂದಿಗೂ ಆಡಳಿತದ 'ಉಕ್ಕಿನ ಕವಚ' ಎಂದೇ ಕರೆಯಲಾಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರೀಟಿಷರು ತಮ್ಮ ವಸಾಹತುಶಾಹಿ ಆಡಳಿತಕ್ಕೆ ಅನುಕೂಲಕರ ರೀತಿಯಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್ ಹುದ್ದೆಗಳನ್ನು ನಿರ್ಮಿಸಿತು. ಅವರಲ್ಲಿ ಅನೇಕರು ಭಾರತೀಯರು ಇದ್ದರೂ ಕೂಡ ಅವರಲ್ಲಿ ಭಾರತೀಯತೆಯಾಗಲಿ, ನಾಗರಿಕತೆಯಾಗಲಿ ಇರಲಿಲ್ಲ. ಕಾರಣ ಅವರು ಇಂಗ್ಲೀಷರ ದೇಶಕ್ಕೆ ನಿಷ್ಠರಾಗಿರಬೇಕಿತ್ತು. ಅದಕ್ಕಾಗಿ ಅವರು ದೇಶಕ್ಕೆ ಒಳ್ಳೆಯದಕ್ಕಿಂತ ಕೆಟ್ಟದ್ದು ಮಾಡಿದ್ದೇ ಹೆಚ್ಚು.

ಆದರೆ ಸ್ವಾತಂತ್ರ್ಯಾ ನಂತರ ಈ ಐಸಿಎಸ್ ಸೇವೆಗಳನ್ನು ಪರಿವರ್ತಿಸಿ ಇಂಡಿಯನ್ ಅಡ್‌ಮಿನಿಸ್ಟ್ರೇಟೀವ್ ಸರ್ವೀಸ್ (ಐಎಎಸ್) ಎಂದು ಹೆಸರಿಸಲಾಯಿತು. ಕಾಲಕಾಲಕ್ಕೆ ನೇಮಕಾತಿ ವಿಧಾನದಲ್ಲಿ ಅನೇಕ ಮಾರ್ಪಾಡುಗಳನ್ನು

ಮಾಡಲಾಗಿದೆ. ಅದು ಇನ್ನೂ ಮುಂದುವರೆದಿದೆ. ಇದಕ್ಕೆ ಇತ್ತೀಚೆಗೆ ಆದ ಪರೀಕ್ಷಾ ಬದಲಾವಣೆಗಳು ಮತ್ತು ನೈತಿಕತೆಯಂತಹ ವಿಷಯಗಳನ್ನು ಇರಿಸಿದ್ದೇ ಸಾಕ್ಷಿ.

ಭಾರತವು ಇಂದು ಅಭಿವೃದ್ಧಿಶೀಲವಾದ ದೇಶವಾಗಿದೆ. ಇಲ್ಲಿನ ಐಎಎಸ್ ಅಧಿಕಾರಿಗಳ ದಕ್ಷತೆ, ಕಾರ್ಯಕ್ಷಮತೆಯು ಭಾರತದ ಅಭಿವೃದ್ಧಿಯಲ್ಲಿ ಮಹತ್ವವಾಗಿದೆ. ಎಲ್ಲೋ ಬೆರಳೆಣಿಕೆಯಲ್ಲಿ ಕೆಲ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದ ನಿದರ್ಶನಗಳಿವೆ. ಆದರೆ ದೇಶದಲ್ಲಿ ಆಡಳಿತ ಯಂತ್ರ ಸುಗಮವಾಗಿ ಮುಂದುವರೆಯಲು ಈ ಐಎಎಸ್ ಅಧಿಕಾರಿಗಳ ಪಾಲು ಮಹತ್ವದ್ದಾಗಿದೆ. ನೀತಿ ನಿರೂಪಣೆ, ಯೋಜನೆ, ನಿರ್ದೇಶನ, ನಿಯಂತ್ರಣ ಮತ್ತು ಅನುಷ್ಠಾನದಲ್ಲಿ ಇವರ ದಕ್ಷತೆಯು ಅಧಿಕವಾಗಿದೆ.

ಜನಪರ ಯೋಜನೆಗಳ ಸಮರ್ಪಕ ಜಾರಿ ಮತ್ತು ಅನುಷ್ಠಾನದಲ್ಲಿ ಇವರ ಪಾತ್ರ ಮುಖ್ಯವಾಗಿದೆ. ಇಂದಿನ ಐಎಎಸ್ ಅಧಿಕಾರಿಗಳು ದಕ್ಷರು, ನಾಗರಿಕ ಸೇವೆಯನ್ನೇ ತಮ್ಮ ಜೀವನ ಅಂತಿಮ ಗುರಿಯೆಂದು ಕಾರ್ಯತತ್ಪರರಾದವರೆಲ್ಲಾ ನಮಗೆ ಮಾರ್ಗದರ್ಶಕರಾಗಿದ್ದಾರೆ. ಆದ್ದರಿಂದಲೇ ಐಸಿಎಸ್ ಗಿಂತಲೂ ಐಎಎಸ್ ಅಧಿಕಾರಿಗಳು ಭಿನ್ನವಾಗಿದ್ದಾರೆ.

**ಪ್ರಶ್ನೆ 3. ಎ) ನಾವೆಲ್ಲ ಹುಟ್ಟು ಭ್ರಷ್ಟರಲ್ಲ. ಆದರೆ ಬೆಳೆಯುತ್ತಾ ಭ್ರಷ್ಟರಾಗುತ್ತಿದ್ದೇವೆ. ಈ ವಿಚಾರವನ್ನು ನೀವು ಒಪ್ಪುತ್ತೀರಾ? ಹಾಗಾದರೆ ಪರಿಹಾರ ತಿಳಿಸಿ. (10 ಅಂಕಗಳು)**

**ಬಿ) ಗಾಂಧೀಜಿಯವರು ಭಾರತ ರಾಮ ರಾಜ್ಯವಾಗಬೇಕೆಂದು ಹೇಳುತ್ತಿದ್ದರು. ಹಾಗಿದ್ದರೆ ರಾಮರಾಜ್ಯವು ಇಂದಿನ ಭಾರತಕ್ಕಿಂತ ಹೇಗೆ ಭಿನ್ನವಾಗಿತ್ತು ಎಂಬುದು ತಿಳಿಸಿ. ನಿಮ್ಮ ದೃಷ್ಟಿಯಲ್ಲಿ ಅದು ದೋಷಮುಕ್ತ ರಾಜ್ಯವಾಗಿತ್ತೇ ವಿವರಿಸಿರಿ. (10 ಅಂಕಗಳು)**

**ಉತ್ತರ:** ಎ) ಬೇವಿನ ಮರಕ್ಕೆ, ಬೆಲ್ಲದ ಕಟ್ಟೆಯ ಕಟ್ಟಿ, ತೆಂಗಿನ ನೀರನ್ನು ಹಾಕಿದರೆ ಸಿಹಿಯಾಗಬಲ್ಲದೇ? ಎಂಬ ಮಾತಿದೆ. ಹುಟ್ಟು ಗುಣ ಸುಟ್ಟರೂ ಹೋಗಲ್ಲ ಎಂದು ಹಿರಿಯರು ಹೇಳುತ್ತಾರೆ. ಇದರಿಂದ ತಿಳಿಯುವುದೇನೆಂದರೆ ಪ್ರಾಮಾಣಿಕತೆ, ಅಪ್ರಾಮಾಣಿಕತೆ, ಭ್ರಷ್ಟತೆ, ದಕ್ಷತೆಗಳು ಒಮ್ಮಿಂದೊಮ್ಮೆಲೇ ಗಳಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಪ್ರಾಮಾಣಿಕನಾದವನು ಬೆಳೆಯುತ್ತಾ ಭ್ರಷ್ಟರಾಗುತ್ತಾನೆ ಎಂಬುದು ಸರ್ವಕಾಲಿಕ ಸತ್ಯವೇನೂ ಅಲ್ಲ. ಆದ್ದರಿಂದ ನಾನು ಈ ವಿಚಾರವನ್ನು ಒಪ್ಪುವುದಿಲ್ಲ.

ದಕ್ಷತೆ, ಪ್ರಾಮಾಣಿಕತೆ ಮುಂತಾದ ನೈತಿಕ ಅಂಶಗಳು ಮನೆ, ಶಾಲೆ, ಸಮುದಾಯದಿಂದ ನಮ್ಮಲ್ಲಿ ಪ್ರಭಾವಿಸುವ ಅಂಶಗಳು. ಪ್ರಾಮಾಣಿಕತೆಯಿಂದ ಬೆಳೆದ ಮಗು ಮುಂದೇ ಪ್ರಾಮಾಣಿಕವಾಗಿಯೇ ಜೀವನ ಸಾಗಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಕೆಲವರು ವ್ಯವಸ್ಥೆಯ ಜೊತೆಗೆ ನನ್ನ ಪ್ರಾಮಾಣಿಕತೆಯನ್ನು ಹೊಂದಾಣಿಕೆ ಮಾಡಿಕೊಂಡಿರುವೆ ಎನ್ನುತ್ತಾರೆ. ಆದರೆ ನಿಜಕ್ಕೂ ಅವರು ಮೂಲತ: ಅಪ್ರಮಾಣಿಕರೇ.

ಮೌಲ್ಯಗಳು, ನೈತಿಕ ಅಂಶಗಳನ್ನು ಅಳವಡಿಸಿಕೊಂಡು ಮಾನವ ಎಂದಿಗೂ ಎಂತಹ ಸಂದರ್ಭದಲ್ಲಿಯೂ ಬದಲಾಗಲಾರ, ಬದಲಾಗುವ ಮನಸ್ಥಿತಿ ಇದ್ದರೇ, ಅವನೂ ದಕ್ಷನಲ್ಲ, ಸಮಯ ಸಾಧಕ ಎನ್ನಬಹುದು.

ಅದಕ್ಕಾಗಿ ನಾವು 'ಮನೆಯೇ ಮೊದಲ ಪಾಠ ಶಾಲೆ, ಜನನಿ ತಾನೆ ಮೊದಲ ಗುರು'ವಾಗಿದ್ದರಿಂದ ಅಲ್ಲಿಂದಲೇ ಮೌಲ್ಯಗಳನ್ನು ಕಲಿಸಬೇಕು. ಸಮಾಜದಲ್ಲಿ ನೈತಿಕತೆಗೆ ಹೆಚ್ಚು ಬೆಲೆ ಕೊಡಬೇಕು. ಭ್ರಷ್ಟರನ್ನು ಬೇಗನೆ ಘೋರ ಶಿಕ್ಷೆ ಕೊಡಿಸಬೇಕು. ಇದರಿಂದ ಈ ಸಾಮಾಜಿಕ ರೋಗವನ್ನು ತೊಲಗಿಸಲು ಸಾಧ್ಯ.

ಬಿ) ಮಹಾತ್ಮಾಗಾಂಧೀಜಿ ಅಹಿಂಸೆಯ, ಮತ್ತು ಸತ್ಯದ ಹರಿಕಾರ. ಅವರು 'ಗ್ರಾಮ ಸ್ವರಾಜ್ಯ'ದ ಕನಸು ಕಂಡಿದ್ದರು. ಅದಕ್ಕಾಗಿ ಅವರು 'ರಾಮರಾಜ್ಯ'ವಾಗಬೇಕೆಂದು ಬಯಸಿದ್ದರು. ಅವರ ಅಂತಿಮ ಗುರಿ 'ಸ್ವಸ್ಥ ಸಮಾಜ'ದ ನಿರ್ಮಾಣವೇ ಆಗಿತ್ತು.

ಮಹಾತ್ಮಾಗಾಂಧೀಜಿ, ಮೈಸೂರಿನ ನಾಲ್ವಡಿ ಕೃಷ್ಣರಾಜ ಅರಸರಿಗೆ 'ರಾಜರ್ಷಿ' ಎಂದು ಕರೆದಿದ್ದರು. ಕಾರಣ ಅಂದಿನ ಮೈಸೂರು ದಿವಾನರ ಆಳ್ವಿಕೆಯಿಂದ ಸುಭೀಕ್ಷವಾಗಿತ್ತು. ಅಂತಹ ಸ್ಥಿತಿ ಎಲ್ಲ ಕಡೆಯೂ ಕಾಣುವ ಹಂಬಲ ಮಹಾತ್ಮಾಗಾಂಧೀಜಿಯವರಿಗೆ ಇತ್ತು.

ಈ ಹಿನ್ನೆಲೆಯಲ್ಲಿ 'ರಾಮರಾಜ್ಯ'ದ ನಿರ್ಮಾಣದ ಕುರಿತು ಗಾಂಧೀಜಿ ಪ್ರತಿಪಾದಿಸಿದ್ದರು. ಶ್ರೀರಾಮನ ಅಯೋಧ್ಯೆಯು ಅತ್ಯಂತ ಸುಭೀಕ್ಷವಾಗಿತ್ತು. ಪ್ರಜೆಗಳೆಲ್ಲರೂ ಕ್ಷೇಮವಾಗಿದ್ದರು. ಅಲ್ಲಿ ಮಾನವೀಯತೆ, ಕರುಣೆ, ನ್ಯಾಯ ನೀತಿಗಳಿಗೆ ಅವಕಾಶವಿತ್ತು. ಅದೊಂದು 'ಕಲ್ಯಾಣ ರಾಜ್ಯ'ವಾಗಿತ್ತು.

ಸ್ವಾತಂತ್ರ್ಯಾ ನಂತರ ಆ ರೀತಿಯ 'ಕಲ್ಯಾಣ ರಾಷ್ಟ್ರ'ದ ನಿರ್ಮಾಣದ ಗುರಿಯನ್ನು ಹೊಂದಲಾಗಿತ್ತು. ಇಂದು ಕೆಲವು ಅಮಾನುಷ ವ್ಯಕ್ತಿಗಳಿಂದ, ನೈತಿಕತೆಯ ಅಧ:ಪತನದಿಂದ ಅವರ ಕನಸು ಸಂಪೂರ್ಣವಾಗಿ ಈಡೇರಿಲ್ಲ.

ಆಡಳಿತಗಾರರಾಗಿ ಬಯಸುವ ನಾವು ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ಸಾಕಾರಗೊಳಿಸುವ ಮೂಲಕ ಮಹಾತ್ಮಾಗಾಂಧೀಜಿಯವರ 'ರಾಮರಾಜ್ಯ'ದ ಕನಸನ್ನು ನನಸು ಮಾಡಬೇಕು. ಅದೇ ನಮ್ಮ ಕಾರ್ಯದ ಮೂಲಮಂತ್ರವಾಗಬೇಕಿದೆ.

**ಪ್ರಶ್ನೆ 4) ನೈತಿಕತೆ, ಪ್ರಾಮಾಣಿಕತೆ ಎಂಬಂತಹ ಪದಗಳು ವೇದಿಕೆಯ ಮೇಲೆ ನಿಂತು ಮಾತನಾಡುವವರ ಬಾಯಿಯಲ್ಲಿ ಸಿಕ್ಕು ಸವಕಲು ನಾಣ್ಯಗಳಾಗಿವೆ. ಇದನ್ನು ಒಪ್ಪುತ್ತೀರಾ? ವೇದಿಕೆಯ ಮೇಲೆ ನಿಂತು ನೀವೇ ಮಾತನಾಡುವುದಾದರೆ ಏನು ಮಾಡುತ್ತಿದ್ದೀರಿ? (20 ಅಂಕಗಳು)**

**ಉತ್ತರ:** ಪ್ರಾಮಾಣಿಕತೆ, ನೈತಿಕತೆಯಂತಹ ಪದಗಳು ಡಾಂಭಿಕರ ಕೈಯಲ್ಲಿ ಸಿಕ್ಕು ಸವಕಲು ನಾಣ್ಯಗಳಾಗುತ್ತಿವೆ. ಪಕ್ಕದ ಮನೆಯಿಂದ ಪೆನ್ನು ಕದ್ದ ಮಗನನ್ನು, ತಂದೆ ಹಿಗ್ಗಾ ಮುಗ್ಗಾ ಬಯ್ದು ಪ್ರಾಮಾಣಿಕತೆ ಬಗ್ಗೆ ಹೇಳುತ್ತಾ, ನನಗೆ ಹೇಳಿದ್ದರೆ ನಾನೇ ಕಛೇರಿಯಿಂದ ತಂದು ಕೊಡುತ್ತಿದ್ದೆ ಎಂದು ಹೇಳಿದರೆ ಹೇಗೆ? ಅಲ್ಲದೆ ಅದೇ ತಂದೆ ಪಕ್ಕದ ಮನೆಯಿಂದ ಕದಿಯುತ್ತೀಯಾ? ಅಂತ ಬೈಯ್ಯುತ್ತಾನೆ, ಇದರೊಂದಿಗೆ ಪ್ರಾಮಾಣಿಕತೆಯ ಭಾಷಣ ಬೇಕೇ?

ಹೀಗೆ ಹಲವು ಕಡೆ ಅಪ್ರಮಾಣಿಕರೇ, ಅನೈತಿಕತೆಯನ್ನೇ ತಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿರುವವರೇ, ಆ ಪದಗಳ ಕುರಿತು ಭಾಷಣ ಮಾಡುವ ಕಯಾಲಿ ಶುರುವಾಗಿದೆ. ಇದರಿಂದ ಯಾರು ಹಿತವರು? ಎಂದು ತಿಳಿಯುವುದೇ ಕಷ್ಟಕರವಾಗಿದೆ.

ವೇದಿಕೆಯಲ್ಲಿ ನಾನೇ ಮಾತುಗಾರನಾಗಿದ್ದರೇ ನಾನು ಅಗತ್ಯವಿದ್ದರೆ, ಈ ನೈತಿಕತೆಯ ಅಂಶಗಳ ಕುರಿತು ಮಾತನಾಡುತ್ತಿದ್ದೆ. ಆದರೆ ಅದಕ್ಕಿಂತ ಹೆಚ್ಚಿಗೆ ನಾನು ಪ್ರಾಮಾಣಿಕತೆ ಮತ್ತು ನೈತಿಕತೆಯನ್ನು ಕೇವಲ ಮಾತಿನಲ್ಲಿ ಹೇಳದೆ, ನನ್ನ ಜೀವನದ ಪ್ರತಿ ಹಂತದಲ್ಲಿ ಅಳವಡಿಸಿಕೊಳ್ಳುತ್ತೇನೆ. ಈ ರೀತಿ ಅಳವಡಿಸಿಕೊಂಡಾಗ ನೈತಿಕತೆ ಮತ್ತು ಪ್ರಾಮಾಣಿಕತೆಗಳ ಕುರಿತು ಮಾತನಾಡುವ ಆತ್ಮಸ್ಥೈರ್ಯ ಹೆಚ್ಚಾಗುತ್ತದೆ. ಅದಕ್ಕೆ ಪೂರಕವಾಗಿ ಎದುರಿಸಿದ ಸಂದರ್ಭಗಳನ್ನು ಉದಾಹರಣೆಯಾಗಿ ಈ ವೇದಿಕೆಯಲ್ಲಿ ಹಂಚಿಕೊಳ್ಳಬೇಕು.

ಪ್ರಾಮಾಣಿಕತೆ ಮತ್ತು ನೈತಿಕತೆಯನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡಿದ್ದರಿಂದ ಎದುರಾದ ಸನ್ನಿವೇಶಗಳಲ್ಲಿ, ಸಂದರ್ಭಗಳಲ್ಲಿ ಅವುಗಳನ್ನು ಎದುರಿಸಿದ ಬಗೆಯ ಕುರಿತು ಹಂಚಿಕೊಳ್ಳಬೇಕು. ಈ ನೈತಿಕತೆಯಿಂದ ಶೇ.90ರಷ್ಟು ನಮಗೆ ಒಳ್ಳೆಯದೇ ಆಗಿರುತ್ತದೆ. ಅದರಿಂದ ಅಂತಹ ಒಳ್ಳೆಯ ಘಟನೆಗಳನ್ನು ಸ್ಮರಿಸಿಕೊಳ್ಳುವುದು, ಅದರ ಪ್ರೇರಣೆ ಪಡೆದ ಸಭಿಕರು ಉತ್ತಮ ಸಂದೇಶ ಪಡೆಯುವರು.

ಮುಂದುವರೆದು ಸಮಾಜದಲ್ಲಿನ ಎಲ್ಲ ಮಹಾನ್ ಪ್ರಾಮಾಣಿಕರು, ಮಾನವೀಯ ಮೌಲ್ಯ, ನೈತಿಕತೆಯ ಸಾಕಾರ ಮೂರ್ತಿಗಳ ಜೀವನ, ಅವರ ಯಶಸ್ಸು, ಅದರಿಂದ ಸಮಾಜಕ್ಕೆ ಆಗುವ ಒಳ್ಳೆಯತನವನ್ನು ಸಭಿಕರಿಗೆ ತಿಳಿ ಹೇಳುವುದು.

ವೇದಿಕೆ ಇರುವುದು ಕೇವಲ ಭಾಷಣಕ್ಕೆ ಅಲ್ಲ ಎಂಬ ಅರಿವಿರಬೇಕು. "ನುಡಿದಂತೆ ನಡೆಯಬೇಕು ನಡೆದಿದ್ದನ್ನೇ ನುಡಿಯಬೇಕು" ಎಂಬ ಸತ್ಯವನ್ನು ಅರಿತಿರಬೇಕು. ಇದರಿಂದ ಮಾತ್ರ ನಮ್ಮ ಪ್ರಾಮಾಣಿಕತೆ ಮತ್ತು ನೈತಿಕತೆಯನ್ನು ಉಳಿಸಿಕೊಂಡು ಹೋಗಲು ಸಾಧ್ಯ ಮತ್ತು ಮತ್ತೊಬ್ಬರಲ್ಲಿ ಬೆಳೆಸಲು ಸಾಧ್ಯವಾಗುತ್ತದೆ.

"ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವು ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" ಎಂಬ ಬಸವಣ್ಣನವರ ಮಾತು ಇಲ್ಲಿ ಪ್ರಸ್ತುತವಾಗಿದೆ.

**ಪ್ರಶ್ನೆ 5) ರಾಷ್ಟ್ರಪ್ರೇಮ, ರಾಷ್ಟ್ರ ಭಕ್ತಿ, ರಾಷ್ಟ್ರ ಸೇವೆಯ ಬಗ್ಗೆ ಬೇರೆಯವರಿಗೆ ಬೋಧನೆ ಮಾಡುವುದನ್ನು ನೀವು ಕೇಳಿರಬಹುದು. ಅವುಗಳ ಅರ್ಥ ತಿಳಿಸಿ ಮತ್ತು ನಿಮ್ಮ ಬದುಕಿನಲ್ಲಿ ಅವುಗಳನ್ನು ಅಳವಡಿಸಿಕೊಂಡ ಒಂದೆರಡು ಉದಾಹರಣೆಗಳನ್ನು ವಿವರಿಸಿ. (20 ಅಂಕಗಳು)**

**ಉತ್ತರ:** ಮಹಾನ್ ಚಿಂತಕರಿಂದ ರಾಷ್ಟ್ರ ಪ್ರೇಮ, ರಾಷ್ಟ್ರ ಭಕ್ತಿ, ರಾಷ್ಟ್ರ ಸೇವೆಯ ಕುರಿತು ಅವರು ಹೇಳಿದ ಬೋಧನೆಯನ್ನು ಅನೇಕ ಪುಸ್ತಕಗಳಿಂದ, ಗುರು ಹಿರಿಯರಿಂದ ಕೇಳಿದ್ದೇವೆ, ಕಲಿತಿದ್ದೇವೆ.

ನಮ್ಮ ದೇಶದ ಕುರಿತಾಗಿ ಇರುವ ಹೆಮ್ಮೆಯೇ ರಾಷ್ಟ್ರ ಪ್ರೇಮ. ಇಲ್ಲಿನ ನೆ, ಜಲ, ಪ್ರತಿಯೊಂದು ವಸ್ತುವಿನ ಮೇಲಿನ ನಮ್ಮ ಒಲವೇ ರಾಷ್ಟ್ರ ಪ್ರೇಮ.

ಭಕ್ತಿ ಎಂದರೆ ಭಕ್ತನಿಗೂ, ಭಗವಂತನಿಗೂ ಇರುವ ನಡುವಿನ ಅವಿನಾಭಾವ ಸಂಬಂಧ. ಈ ಹಿನ್ನೆಲೆಯಲ್ಲಿ ರಾಷ್ಟ್ರಕ್ಕೂ, ಪ್ರಜೆಯಾದ ನಮಗೂ ಇರುವ ನಡುವಿನ ಒಂದು ಅಪೂರ್ವವಾದ ಬಂಧವೇ ರಾಷ್ಟ್ರ ಭಕ್ತಿ.

ಸೇವೆ ಎಂದರೆ ಮತ್ತೊಬ್ಬರಿಗೆ ಯಾವ ಪ್ರತಿಫಲಾಪೇಕ್ಷೆ ಇಲ್ಲದೇ, ಅವರ ಕಾರ್ಯದಲ್ಲಿ ನೆರವಾಗುವುದು. ಹಾಗೆಯೇ ರಾಷ್ಟ್ರದ ಯಾವುದೇ ಕಾರ್ಯದಲ್ಲಿ ನೆರವಾಗುವುದು ರಾಷ್ಟ್ರಸೇವೆಯೇ.

ರಾಷ್ಟ್ರಸೇವೆಯನ್ನು ಮಾಡಲು ನಾವು ಮಹಾನ್ ನಾಯಕರಾಗಬೇಕಿಲ್ಲ. ದೊಡ್ಡ ಅಧಿಕಾರಿಯಾಗಬೇಕಿಲ್ಲ. ಕೊನೆಗೆ ಯಾವ, ಹುದ್ದೆ, ಅಧಿಕಾರ, ಅಂತಸ್ತು ಬೇಕಿಲ್ಲ. ಕೇವಲ ನಾನು ಭಾರತೀಯನಾದರೆ ರಾಷ್ಟ್ರಸೇವೆ ಮಾಡಬಹುದು.

ಈ ರಾಷ್ಟ್ರ ಪ್ರೇಮವನ್ನು ರಾಷ್ಟ್ರ ಭಕ್ತಿ ಮತ್ತು ರಾಷ್ಟ್ರ ಸೇವೆಯನ್ನು ಅತಿ ಮಹತ್ವದ ದೊಡ್ಡ ಕಾರ್ಯಗಳಿಗೆ ಅನ್ನುವುದಿಲ್ಲ. ಅಲ್ಪದರಲ್ಲಿಯೂ ಇವೆಲ್ಲವನ್ನು ನಾವು ಮಾಡಬಹುದು.

ಉದಾಹರಣೆಗೆ ನಮ್ಮ ಭಾರತದೇಶದ ಕುರಿತಾಗಿ ಯಾವುದೇ ವ್ಯಕ್ತಿಯು ಕೆಟ್ಟ ನುಡಿಗಳನ್ನು ಆಡಿದರೇ ನಾನು ಸಹಿಸುವುದಿಲ್ಲ. ಹಾಗಂತ ನಾನು ಅವರನ್ನು ದ್ವೇಷಿಸುವುದಿಲ್ಲ. ನಮ್ಮ ದೇಶದ ಹಿರಿಮೆ, ಗರಿಮೆ ಕುರಿತು ಸಮರ್ಥವಾದ ವಾದ ಮಂಡಿಸಿ, ಮುಂದಿರುವ ವ್ಯಕ್ತಿಯ ಅಭಿಪ್ರಾಯವನ್ನು ತಿದ್ದಿಕೊಳ್ಳುವಂತೆ ಮಾಡುತ್ತೇನೆ. ಇದನ್ನು ನಾನು ಸಿಕ್ಕ ಯಾವ ಸಂದರ್ಭದಲ್ಲಿಯೂ ಬಳಸಿಕೊಳ್ಳುತ್ತಲೇ ಇರುತ್ತೇನೆ.

ನನ್ನ ದೇಶದ ನೆಲ ಜಲ, ಸಂಪತ್ತು, ಸ್ಥಿತಿಗತಿಗಳ ಕುರಿತು ಯಾರಾದರೂ ತಪ್ಪಾಗಿ ನಡೆದುಕೊಂಡರೆ ನಾನು ಸುಮ್ಮನಿರುವುದಿಲ್ಲ. ಇಲ್ಲಿನ ಸಂಸ್ಕೃತಿಯ ರಕ್ಷಕರಾಗಿ ನಮ್ಮ ಕರ್ತವ್ಯವನ್ನು ತಪ್ಪು ಮಾಡಿದ ಯಾರೇ ಭಾರತೀಯನಾದರೂ ನಾನು ಅವನ ತಪ್ಪನ್ನು ಎತ್ತಿ ತೋರಿಸುತ್ತೇನೆ. ಅವನ ಮನವೊಲಿಸಿ, ರಾಷ್ಟ್ರ ಭಕ್ತಿಯನ್ನು ಅದರ ಮೌಲ್ಯವನ್ನು ನನಗೆ ಸಿಕ್ಕ ಎಲ್ಲ ಅವಕಾಶಗಳಲ್ಲಿಯೂ ಮನವರಿಕೆ ಮಾಡುತ್ತೇನೆ.

ರಾಷ್ಟ್ರ ಸೇವೆಯನ್ನು ನಾವು ರಸ್ತೆಯ ಮಧ್ಯೆ ಬಿದ್ದಿರುವ ಒಂದು ಕಲ್ಲು ತೆಗೆಯುವ ಮೂಲಕ, ಮುಳ್ಳು ತೆಗೆಯುವ ಮೂಲಕ, ಪೋಲಾಗುತ್ತಿರುವ ನಲ್ಲಿಯನ್ನು ಬಂದು ಮಾಡುವ ಮೂಲಕ, ಬಿದ್ದಿರುವ ಕಸವನ್ನು ಕಸದ ತೊಟ್ಟಿಗೆ ಹಾಕುವ ಮೂಲಕ, ಹೀಗೆ ನಿತ್ಯವೂ ಸಿಕ್ಕ ಎಲ್ಲಾ ಸಂದರ್ಭದಲ್ಲಿ ಈ ಕಾರ್ಯ ಮಾಡುತ್ತೇನೆ ಮತ್ತು ನನ್ನ ಇಲಾಖೆಯಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

**ಪ್ರಶ್ನೆ 6) ನಾವು ಮಾಡುವ ತಪ್ಪುಗಳಿಗೆ, ಕೆಟ್ಟ ಕೆಲಸಗಳಿಗೆ, ಸೋಲು ವಿಫಲತೆಗಳಿಗೆ ನೆಪಗಳನ್ನು ಕಾರಣಗಳನ್ನು ಕೊಡುತ್ತೇವೆ. ಒಳ್ಳೆಯ ಕೆಲಸಕ್ಕೆ ಸಾಧನೆಗೆ ನೆಪಗಳನ್ನು, ಕಾರಣಗಳನ್ನು ಹೇಳಬೇಕಾಗಿಲ್ಲ. ಇದನ್ನು ನೀವು ಒಪ್ಪುತ್ತೀರಾ? ನಿಮ್ಮ ಅನುಭವವನ್ನು ಉದಾಹರಣೆ ಸಮೇತ ವಿವರಿಸಿ. (20 ಅಂಕಗಳು)**

**ಉತ್ತರ:** ಮಾನವನ ಸಹಜ ಮನೋದೌರ್ಬಲ್ಯವೇ ತನ್ನ ತಪ್ಪಿಗಾಗಿ ಕಾರಣಗಳನ್ನು ಹೇಳಿ ತನ್ನನ್ನು ಸಮರ್ಥಿಸಿಕೊಳ್ಳುವುದು. ಆದರೆ ಈ ರೀತಿಯ ತಪ್ಪುಗಳಿಗೆ, ಕೆಟ್ಟ ಕೆಲಸಗಳಿಗೆ, ವಿಫಲತೆಗಳಿಗೆ ಕಾರಣಗಳನ್ನು ಕೊಡುವುದು ಉಚಿತವಲ್ಲ. ಈ ಎಲ್ಲಕ್ಕೂ ನಮ್ಮದೇ ವೈಫಲ್ಯತೆಯೇ ಮೂಲವಾಗಿರುತ್ತವೆ. ಸುಖಾ ಸುಮ್ಮನೆ ನಾವು ಕಾರಣಗಳನ್ನು ಹೇಳಿ ತಮ್ಮ ದೌರ್ಬಲ್ಯ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತೇವೆ.

ಈ ಕುಂಟು ನೆಪ ಹೇಳಲು ಕಾರಣವೇ ನಮ್ಮ ತಪ್ಪುಗಳು, ಕೆಟ್ಟ ಕೆಲಸಗಳು, ನಮ್ಮ ಕಾರ್ಯ ವೈಖರಿ. ಯಾವುದೇ ಕಾರ್ಯವನ್ನು ಸಮರ್ಪಕವಾಗಿ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ, ಸಮಯಕ್ಕೆ ಅನುಸಾರವಾಗಿ ಮಾಡಿದರೇ ಖಂಡಿತ ಯಶಸ್ಸು, ಸಾಧನೆ, ದೊರೆಯುತ್ತದೆ. ಪ್ರಾಮಾಣಿಕತೆ ಇದ್ದರೆ ಅದು ಒಳ್ಳೆಯ ಕೆಲಸವೇ ಆಗುತ್ತದೆ. ಆಗ ಬೇಕಾದರೆ ಯಶಸ್ಸಿನ ಗುಟ್ಟನ್ನು ಹಂಚಿಕೊಳ್ಳಬಹುದು.

ನಮ್ಮ ಇಲಾಖೆಯಲ್ಲಿ (ಅಂಚೆ) ವಿಮಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವಾಗ, ಅಲ್ಲಿ ನೂತನ ತಾಂತ್ರಿಕತೆಗೆ ಹಳೆಯ ತಂತ್ರಾಂಶದಲ್ಲಿನ ದತ್ತಾಂಶವನ್ನು ವರ್ಗಾವಣೆ ಮಾಡುವ ಪರಿಸ್ಥಿತಿ ಬಂದಿತು. ಆಗ ನಾನು 8 ಜನರ ನೇತೃತ್ವವನ್ನು ವಹಿಸಿಕೊಂಡು ಕಾರ್ಯತತ್ಪರನಾದೆ. ಅದಕ್ಕೆ ಅಗತ್ಯವಿರುವ ತಾಂತ್ರಿಕ ತರಬೇತಿಯನ್ನು ಮೊದಲೇ ಗಳಿಸಿಕೊಂಡು, ನನ್ನ ತಂಡದ ಸದಸ್ಯರಿಗೆ ತರಬೇತುಗೊಳಿಸಿದೆ. ಹಗಲು ಮತ್ತು ರಾತ್ರಿ ವೇಳೆ ಸೂಕ್ತ ಯೋಜನೆಯೊಂದಿಗೆ ಎಲ್ಲರನ್ನು ಪ್ರೇರೇಪಿಸುತ್ತಾ ಕೇವಲ ನಾಲ್ಕು ತಿಂಗಳಲ್ಲಿ 60,000 ಕಡತಗಳ ಮಾಹಿತಿಯನ್ನು ವರ್ಗಾವಣೆ ಮಾಡಲು ಯಶಸ್ವಿಯಾದೆವು. ಇದರಿಂದ ನಮ್ಮ ವಿಭಾಗಕ್ಕೆ ಒಳ್ಳೆಯ ಹೆಸರು ಬಂದಿತು. ಸಮರ್ಥವಾಗಿ ಕಾರ್ಯ ನಿರ್ವಹಿಸಿದ ತೃಪ್ತಿ ನನ್ನದಾಗಿತ್ತು.

ಮುಂದೆ ನಾನು ಅಂಚೆ ಉಳಿತಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವಾಗ, ಖಾತೆದಾರರು ಮೃತಪಟ್ಟಾಗ, ಖಾತೆಯಲ್ಲಿನ ಹಣವನ್ನು ಸೂಕ್ತವಾಗಿ ಪರಿಶೀಲನೆ ಮಾಡಿ ಅದರ ಕಾನೂನು ಪ್ರಕಾರದ ಸಂಬಂಧಿಕರಿಗೆ ವಿತರಿಸುವ ಕೆಲಸ ನಿರ್ವಹಿಸುತ್ತಿದ್ದೆ. ಆಗ ಸುಮಾರು 35 ಪ್ರಕರಣಗಳನ್ನು ಕೇವಲ 15 ದಿನಗಳಲ್ಲಿ ನೀತಿ ನಿಯಮಗಳ ಅನ್ವಯ ಪರಿಶೀಲಿಸಿ, ಹಣದ ನಿಜವಾದ ಫಲಾನುಭವಿಗಳಿಗೆ ದೊರೆಯುವಂತೆ ಮಾಡಿದಾಗ, ದು:ಖದಿಂದ ಕೂಡಿದ್ದ, ಆ ಜನರ ಮೊಗದಲ್ಲಿ ಸಂತೋಷವನ್ನು ಕಂಡೆನು. ಇದರಿಂದ ನನ್ನ ಕಾರ್ಯದಲ್ಲಿಯೂ ಅದೆಷ್ಟೋ ತೃಪ್ತಿ ದೊರೆಯಿತು. ಮೇಲಾಧಿಕಾರಿಗಳಿಂದ ಮೆಚ್ಚುಗೆಯ ಮಾತುಗಳು ಬಂದವು.

ಹೀಗೆ ಸೇವೆಯ ವ್ಯಾಪ್ತಿಯಲ್ಲಿ ಮತ್ತು ವೈಯಕ್ತಿಕವಾಗಿಯೂ ಅದೆಷ್ಟೋ, ಒಳ್ಳೆಯ ಕೆಲಸಗಳು ಆಗಿವೆ. ಇನ್ನೂ ಮುಂದುವರೆದಿವೆ, ಮುಂದುವರೆಯುತ್ತವೆ.

**ಪ್ರಶ್ನೆ 7) ಭ್ರಷ್ಟಾಚಾರ ವಿಷಯ ಬಂದಾಗ ಬಹುತೇಕರು ಅಧಿಕಾರಿಗಳತ್ತ ರಾಜಕಾರಣಿಗಳತ್ತ ಬೆರಳು ಮಾಡುತ್ತಾರೆ. ಆದರೆ ಭ್ರಷ್ಟಾಚಾರ ನಿರ್ಮೂಲನೆಯ ಕಾನೂನು, ನಿಯಮಗಳನ್ನು ಅಧಿಕಾರಿಗಳು ಮತ್ತು ರಾಜಕಾರಣಿಗಳು ಸೇರಿಯೇ ಮಾಡುತ್ತಾರೆ. ಈ ಅಸಂಬದ್ದ ಸ್ಥಿತಿಯನ್ನು ನೀವು ಹೇಗೆ ಗ್ರಹಿಸುತ್ತೀರಿ? (20 ಅಂಕಗಳು)**

**ಉತ್ತರ:** ಭ್ರಷ್ಟಾಚಾರವು ಒಂದು ದೇಶದ ಜ್ವಲಂತ ಸಮಸ್ಯೆ. ಎಲ್ಲ ರಾಜಕಾರಣಿಗಳು ಭ್ರಷ್ಟರಲ್ಲ. ಹಾಗೆಯೇ ಎಲ್ಲ ಅಧಿಕಾರಿಗಳು ಪ್ರಾಮಾಣಿಕರಲ್ಲ. ಈ ವೈರುಧ್ಯದಲ್ಲಿಯೇ ಲೋಕಪಾಲ, ಲೋಕಾಯುಕ್ತ, ಮಾಹಿತಿ ಹಕ್ಕು ಸಕಾಲನಂತಹ ಕಾನೂನು, ನಿಯಮಗಳು ಜಾರಿಗೆ ಬರುತ್ತವೆ.

ಇಲ್ಲಿ ಕೆಲವು ರಾಜಕಾರಣಿಗಳು, ಅಧಿಕಾರಿಗಳು ಭ್ರಷ್ಟ ಇರುವುದರಿಂದ ಕಾನೂನುಗಳು ದುರ್ಬಲವಾಗುವುದಿಲ್ಲ. ಕಾರಣ ಪ್ರಾಮಾಣಿಕ, ದಕ್ಷ ರಾಜಕಾರಣಿಗಳು ಇದರ ಪ್ರಭಲವಾದ ಕಾರಣರಾಗಿರುತ್ತಾರೆ. ಕೆಲವೊಮ್ಮೆ ಈ ನಿಯಮಗಳೇ ಭ್ರಷ್ಟರಿಗೆ ತಪ್ಪಿಸಿಕೊಂಡು ಹೋಗಲು ರಹದಾರಿಗಳಾಗುತ್ತವೆ. ಒಮ್ಮೊಮ್ಮೆ ಅತ್ಯಂತ ಪ್ರಭಲವಾದ 'ಲೋಕಾಯುಕ್ತ'ನಂತಹ ಸಂಸ್ಥೆಗಳು ಅದರ ಅತ್ಯುನ್ನತ ಅಧಿಕಾರಿಗಳ ಲೋಪದಿಂದ ಇಡೀ ವ್ಯವಸ್ಥೆಯೇ ಹಾಳಾಗುವ ಸನ್ನಿವೇಶ ಎದುರಾಗುತ್ತವೆ.

ಇದಕ್ಕೆ ಕಾನೂನನ್ನು, ವ್ಯವಸ್ಥೆಯನ್ನು ದೂರುವ ಅಗತ್ಯವಿಲ್ಲ. ಮೊದಲು ಜನರಲ್ಲಿ ಅರಿವು ಮೂಡಬೇಕು. ಅದರಿಂದ ಉತ್ತಮ ಜನಪ್ರತಿನಿಧಿಗಳು ಆಯ್ಕೆಯಾಗುತ್ತಾರೆ. ಈ ಉತ್ತಮ ಜನಪ್ರತಿನಿಧಿಗಳು, ಉತ್ತಮ ಅಧಿಕಾರಿ ವರ್ಗವು ರಚನೆಯಾಗಲು ಸಹಕರಿಸುತ್ತಾರೆ. ಇದರಿಂದ ಇಡೀ ವ್ಯವಸ್ಥೆಯನ್ನು ನಿಧಾನವಾಗಿಯಾದರೂ ಸುಧಾರಿಸಲು ಸಾಧ್ಯವಿದೆ.

ಜನತಾ ಜನಾರ್ಧನನಲ್ಲಿ ಜಾಗೃತಿಯ ಅಗತ್ಯವಿದೆ. ನೈತಿಕತೆಯ ಅಗತ್ಯವು ಅತ್ಯಗತ್ಯವಾಗಿದೆ.

**ಪ್ರಶ್ನೆ 8) ಶ್ರೇಷ್ಠ ತತ್ವಜ್ಞಾನಿ ಅರಿಸ್ಟಾಟಲ್‌ನು ಮಾನವನನ್ನು ಸಮಾಜ ಜೀವಿ ಎಂದು ಕರೆಯುತ್ತಾರೆ. ಆದರೆ ಮಾನವನ ಅಸಾಮಾಜಿಕ ವರ್ತನೆಯ ಬಗ್ಗೆ ನೀವು ಏನು ಹೇಳುತ್ತೀರಿ? ಮತ್ತು ಅದನ್ನು ಹೇಗೆ ತಿದ್ದುತ್ತೀರಿ? (20 ಅಂಕಗಳು)**

**ಉತ್ತರ:** ಮಾನವ ಸಂಘ ಜೀವಿ, ಸಮಾಜ ಜೀವಿ. ಆದರೆ ನೈತಿಕತೆಯು ಅಧ:ಪತನಕ್ಕೆ ಹೋದಾಗ ಈ ಮಾನವ ಅಸಾಮಾಜಿಕ ವರ್ತನೆಯನ್ನು ವ್ಯಕ್ತಪಡಿಸುತ್ತಾನೆ.

ಅನಾಗರಿಕನಂತೆ ಅನ್ಯಾಯ, ಅಕ್ರಮದಲ್ಲಿ ಭಾಗಿಯಾಗುತ್ತಾನೆ. ಕೊಲೆ ಸುಲಿಗೆಗೆ ಇಳಿಯುತ್ತಾನೆ. ಇಲ್ಲಿ ಕೆಲವು ಅಸಾಮಾಜಿಕ ವರ್ತನೆಗಳನ್ನು ತಿಳಿವಳಿಕೆ ಮೂಡಿಸಿ ಬದಲಿಸಬಹುದು. ಕೆಲವನ್ನು ಶಿಕ್ಷೆಯಿಂದ ಮಾತ್ರ ಗುಣಪಡಿಸಬಹುದು. ಇದನ್ನು ಮನುಷ್ಯ ಅಸಾಮಾಜಿಕ ವರ್ತನೆಯ ಕೃತ್ಯದ ತೀವ್ರತೆಯ ಆಧಾರದ ಮೇಲೆ ನಿರ್ಧರಿಸಬೇಕು.

ಕುಟುಂಬದಿಂದಲೇ ಮೊದಲು ಈ ಅಸಾಮಾಜಿಕ ವರ್ತನೆಗಳನ್ನು ನಿಯಂತ್ರಿಸಲು ಆರಂಭಿಸಬೇಕು. ನಂತರ ಶಾಲೆ ಸಮುದಾಯಗಳಿಂದ ಇದನ್ನು ಸಾಕಾರಗೊಳಿಸಿಕೊಳ್ಳಬೇಕು.

**ಪ್ರಶ್ನೆ 9) ಸಮಾಜದಲ್ಲಿ ಪ್ರಾಮಾಣಿಕ, ಸತ್ಯನಿಷ್ಠ ಜನರು ಸಿಗುವುದು ವಿರಳ ಎಂದು ಬಹುತೇಕ ಎಲ್ಲರೂ ಹೇಳುತ್ತಾರೆ. ಒಂದು ವೇಳೆ ಸತ್ಯವಂತರು ದೊರೆತರೂ ಕೂಡಾ ಅವರಿಗೆ ಸತ್ಯಹರಿಶ್ಚಂದ್ರನಿಗೆ ಆದ ಗತಿಯೇ ಆಗುತ್ತದೆ ಎಂದು ಭಾವಿಸುತ್ತಾರೆ. ಇಷ್ಟಾಗಿಯೂ ನೀವು ಹರಿಶ್ಚಂದ್ರನನ್ನು ಅನುಕರಿಸಲು ಇಷ್ಟಪಡುತ್ತೀರೋ ಇಲ್ಲವೋ? (20 ಅಂಕಗಳು)**

**ಉತ್ತರ:** "ಹರನೆಂಬುದೇ ಸತ್ಯ, ಸತ್ಯನೆಂಬುದೇ ಹರನು" ಎಂಬ ಮೌಲ್ಯವನ್ನು ಸಾಕಾರಗೊಳಿಸಿ, ಅದರಿಂದಲೇ ಇಂದಿನ ಸಮಾಜದಲ್ಲಿ ಪ್ರತಿಯೊಬ್ಬರಿಗೂ ಪರಿಚಿತನಾಗಿರುವ ಸತ್ಯಹರಿಶ್ಚಂದ್ರ ಯಶಸ್ವಿ ವ್ಯಕ್ತಿ. ಅವನ ಈ ಹೆಸರು ಚಿರಾಯುವಾಗಲು ಕಾರಣ ಆತನ ಸತ್ಯದ ಕುರಿತಾದ ನಿಲುವು.

"ನುಡಿದಂತೆ ನಡೆಯಬೇಕು, ಇಲ್ಲದಿದ್ದರೆ ಮಡಿಯಬೇಕು". ಸತ್ಯವಂತನಾಗಿ ಬಾಳುವುದರಿಂದ ನಮ್ಮ ಹೆಸರು ಚಿರಾಯುವಾಗುವುದರಿಂದ ನಾನು ಈ ಸತ್ಯವನ್ನೇ ಅನುಕರಿಸಲು ಬಯಸುತ್ತೇನೆ.

ಸುಳ್ಳಿನಿಂದ ತಾತ್ಕಾಲಿಕವಾಗಿ ಮಾತ್ರ ಜಯ ಲಭಿಸಿದಂತಾಗುವುದು. ಆದರೆ ಮುಂದೆ ಸೋಲುವುದು ಸತ್ಯಶ: ಸತ್ಯ. ಆಗ ಅಪಮಾನ ಕಟ್ಟಿಟ್ಟ ಬುತ್ತಿ. ಶ್ರೀ ಹರಿಶ್ಚಂದ್ರ ತನ್ನ ಸತಿ ಸುತರನ್ನು ವಿಕ್ರಯ ಮಾಡಿದರೂ ತನ್ನ ಮಾತಿಗೆ ತಪ್ಪಲಿಲ್ಲ.

ಮಗ ಲೋಹಿತಾಶ್ವ ಮಡಿದು, ಹೆಂಡತಿ ಚಂದ್ರಮತಿಯ ಶಿರಚ್ಛೇದವನ್ನು ತಾನೇ ಮಾಡುವ ಪ್ರಸಂಗ ಎದುರಾದರೂ ಅವನು ಧೃತಿಗೆಡಲಿಲ್ಲ. ಆದ್ದರಿಂದ ಸತ್ಯಹರಿಶ್ಚಂದ್ರ ನಮಗೆ ಮಾದರಿಯಾಗಬೇಕು. ಅವನಿಗೆ ದೇವರೇ ಪ್ರತ್ಯಕ್ಷವಾದರೆ ನಮಗೆ ಸತ್ಯದ ಸಾಕ್ಷಾತ್ಕಾರವಾಗುತ್ತದೆ.

ಸಮಾಜದಲ್ಲಿ ನೀತಿವಂತರಿಗೆ, ಸತ್ಯವಂತರಿಗೆ ಬೆಲೆ ಇವೆ. ಆದ್ದರಿಂದಲೇ ಇನ್ನು ಮನುಕುಲ ಶಾಂತಿ ಸಹಬಾಳ್ವೆಯಿಂದ ಬಾಳುತ್ತಿದೆ. ಅದಕ್ಕೆ ಮಹಾತ್ಮಾಗಾಂಧೀಜಿಯು ನಮಗೆ ಮಾದರಿ. ಅವರ ಸತ್ಯನಿಷ್ಠೆಯೇ ಅವರನ್ನು ರಾಷ್ಟ್ರಪಿತನನ್ನಾಗಿ ಮಾಡಿದೆ. ಆದ್ದರಿಂದ ನಾನು ನನ್ನ ಸೇವಾವಧಿಯಲ್ಲಿ, ವೈಯಕ್ತಿಕ ಜೀವನದಲ್ಲಿ ಸತ್ಯವನ್ನೇ ಅನುಸರಿಸುತ್ತೇನೆ. ನುಡಿದಂತೆ ನಡೆಯುತ್ತೇನೆ.

**ಪ್ರಶ್ನೆ 10) ಇತ್ತೀಚಿನ ವರ್ಷಗಳಲ್ಲಿ ನಿಸರ್ಗದ ಬಗೆಗೆ ಅತಿಯಾದ ಕಾಳಜಿಯ ಮಾತುಗಳನ್ನು ನಾವು ಕೇಳಿದ್ದೇವೆ. ಆದರೂ ಅಭಿವೃದ್ಧಿಯ ಹೆಸರಿನಲ್ಲಿ ನಿಸರ್ಗದ ಶೋಷಣೆ ಅವ್ಯಾಹತವಾಗಿ ಸಾಗಿದೆ. ಈ ಹಿನ್ನೆಲೆಯಲ್ಲಿ "ದೇವರು ಪ್ರತಿಯೊಬ್ಬನ ಅವಶ್ಯಕತೆಗೆ ತಕ್ಕಷ್ಟು ಕೊಟ್ಟಿದ್ದಾನೆಯೇ ಹೊರತು ಲೋಭವನ್ನು ತೃಪ್ತಿಪಡಿಸುವಷ್ಟು ಅಲ್ಲ" ಎಂಬ ಮಾತನ್ನು ಹೇಗೆ ಸಮೀಕರಿಸುವಿರಿ? (20 ಅಂಕಗಳು)**

**ಉತ್ತರ:** "ಪರಿಸರ ಇರುವುದು ಮಾನವನ ಆಸೆಗಳನ್ನು ಪೂರೈಸಲು ಹೊರತು ದುರಾಸೆಗಳನ್ನಲ್ಲ" ಎಂದು ಮಹಾತ್ಮಾಗಾಂಧೀಜಿ ಹೇಳಿದ್ದಾರೆ. ಪ್ರಗತಿ, ಸುಸ್ಥಿರ ಅಭಿವೃದ್ಧಿಯ ಮಾತುಗಳನ್ನೇ ಕೇಳುತ್ತಿರುವ ಪರಿಸರವನ್ನು ಸಂರಕ್ಷಿಸುವ ಕರ್ತವ್ಯ ನಮ್ಮದಾಗಬೇಕು ಹೊರತು ಕೇವಲ ಪರಿಸರ ಕಾಳಜಿಯಿಂದ ನಿಸರ್ಗವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ.

ಕೇವಲ ಕಾಳಜಿಯಿಂದ ನಿಸರ್ಗದ ಶೋಷಣೆಯನ್ನು ತಡೆಯಲು ಸಾಧ್ಯವಿಲ್ಲ. ಈ ಅವ್ಯಾಹತವಾದ, ನಿಸರ್ಗವನ್ನು ಹಾಳು ಮಾಡಿ ಮನುಕುಲವನ್ನು ಆಪೋಶ ಮಾಡುವ ಪ್ರಕ್ರಿಯೆಯನ್ನು ನಾವೆಲ್ಲಾ ಒಂದು ಸವಾಲಾಗಿ ತೆಗೆದುಕೊಂಡು ಅದರ ರಕ್ಷಣೆಗೆ ಧಾವಿಸಬೇಕಾಗಿದೆ. ಭಾಷಣಕ್ಕಿಂತ ಕಾರ್ಯದ ತುರ್ತು ಇದೆ.

ಹಸಿದವರಿಗೆ ಅನ್ನ ನೀಡುವ ಬದಲು ಬೋಧನೆ ಮಾಡಿದಂತೆ, ಕೇವಲ ಪರಿಸರ ಕಾಳಜಿ ಕೇಳಿಸುತ್ತದೆ. ಅರಣ್ಯೀಕರಣ, ಮರು ಅರಣ್ಯೀಕರಣ, ಮತ್ತು ಸಾಮಾಜಿಕ ಅರಣ್ಯೀಕರಣವನ್ನು ಸಾಧಿಸಬೇಕಿದೆ. ಜನರಲ್ಲಿ ಪರಿಸರ ಜಾಗೃತಿ ಮಾಡಿ ಅನುಷ್ಠಾನದಲ್ಲಿ ಶ್ರೇಷ್ಠತೆಯನ್ನು ಸಾಧಿಸಬೇಕಿದೆ.

Recycle, Reuse, Reduce, Recover (4R)ನಂತಹ ಕಾರ್ಯಗಳನ್ನು ಸಮಾಜಮುಖಿಯಾಗಿ, ಸಾರ್ವತ್ರಿಕವಾಗಿ ಕೈಗೊಳ್ಳಬೇಕಾಗಿದೆ. ಇದರಿಂದ ಮಾತ್ರ ನಿಸರ್ಗವನ್ನು ರಕ್ಷಿಸಿಕೊಂಡು, ನಮ್ಮ ಮತ್ತು ಮುಂದಿನ ಪೀಳಿಗೆಯ ಭವಿಷ್ಯವನ್ನು ಕಾಪಾಡಲು ಸಾಧ್ಯವಿದೆ.

ನಿಸರ್ಗವನ್ನು ದೇವರೆಂದು ಪರಿಗಣಿಸಿ ಹಿತಮಿತವಾಗಿ ಅದರ ಬಳಕೆ ಮಾಡಿಕೊಂಡು ಬದುಕುವ ಉತ್ತಮ 'ಜೀವನ ಕಲೆ' ಅಗತ್ಯತೆ ಇದೆ.

**ಪ್ರಶ್ನೆ 11) ಕರ್ನಾಟಕವನ್ನೊಳಗೊಂಡು ಭಾರತದಾದ್ಯಂತ ಜಾತಿ ನೌಕರಶಾಹಿ ರಾಜಕೀಯ ಇವುಗಳ ನಡುವೆ ಪರಸ್ಪರ ಹಿತಾಸಕ್ತಿಗಳನ್ನು ಈಡೇರಿಸುವ ಉದ್ದೇಶದಿಂದ ಅನೈತಿಕ ಸಂಬಂಧವಿದೆ ಎಂಬುದನ್ನು ನೀವು ಒಪ್ಪುತ್ತೀರಾ? ಒಪ್ಪಿದರೆ ಪರಿಹಾರಗಳನ್ನು ಇಲ್ಲವಾದರೆ ಕಾರಣಗಳನ್ನು ತಿಳಿಸಿ. (20 ಅಂಕಗಳು)**

**ಉತ್ತರ:** ಹೌದು. ಭಾರತದಲ್ಲಿ ಕರ್ನಾಟಕವನ್ನು ಒಳಗೊಂಡಂತೆ ಜಾತಿ ನೌಕರಶಾಹಿ ರಾಜಕೀಯ ಇವುಗಳ ನಡುವೆ ಪರಸ್ಪರ ಹಿತಾಸಕ್ತಿಗಳನ್ನು ಈಡೇರಿಸುವ ಉದ್ದೇಶದಿಮದ ಅನೈತಿಕ ಸಂಬಂಧವಿದೆ.

ಇದನ್ನು ನಾವು ಚುನಾವಣೆಯಲ್ಲಿ, ನೌಕರರ ವರ್ಗಾವಣೆ, ಆಯಕಟ್ಟಿನ ನೇಮಕಗಳಲ್ಲಿ ಗುರುತಿಸಬಹುದು.

ಪರಿಹಾರಗಳು:

* ಮೊದಲು ಜನಪ್ರತಿನಿಧಿಗಳನ್ನು ಅವರ ಜಾತಿಯಿಂದ ಆಯ್ಕೆ ಮಾಡದೇ ಅವರ ವೈಯಕ್ತಿಕ ಸಾಧನೆಯಿಂದ ಮಾಡಬೇಕು. ಇದಕ್ಕೆ ಜನರಲ್ಲಿ ಶಿಕ್ಷಣ, ಮಾಧ್ಯಮದ ಮೂಲಕ ಜಾಗೃತಿ ಮೂಡಿಸಬೇಕು

* ಜಾತಿ ರಾಜಕಾರಣವನ್ನು ತಡೆಯಬೇಕು

* ರಾಜಕಾರಣಿಗಳು ಜಾತಿಯ ಕಾರಣದಿಂದಲೇ ತಮಗೆ ಸಮೀಪದ ಹುದ್ದೆಗಳಲ್ಲಿ ಅಧಿಕಾರಿಗಳನ್ನು ನೇಮಿಸಿಕೊಳ್ಳುವುದನ್ನು ನಿಲ್ಲಿಸಬೇಕು

* ಜನಪ್ರತಿನಿಧಿಗಳು, ಅಧಿಕಾರಿಗಳು ಕೇವಲ ಒಂದು ಜಾತಿಯ ಪ್ರತಿನಿಧಿಗಳು ಅಲ್ಲ. ಸರ್ವರ ಸೇವೆಗಾಗಿ ಅವರ ಆಯ್ಕೆ / ನೇಮಕವಾಗಿದೆ ಎಂಬುದನ್ನು ಮನವರಿಕೆ ಮಾಡಿಸಬೇಕು

* ತರಬೇತಿಗಳಲ್ಲಿ ಅಧಿಕಾರಿ / ನೌಕರಶಾಹಿಗೆ ನೈತಿಕತೆಗೆ ಸಂಬಂಧಿಸಿದ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು

* ಈ ಹಿತಾಸಕ್ತಿಯ ಅನೈತಿಕ ಸಂಬಂಧಗಳು ಕಂಡುಬಂದಾಗ ನಿರ್ದಾಕ್ಷಿಣ್ಯವಾಗಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಬೇಕು. ಉದಾ: ಅಧಿಕಾರಿಗಳಿಗೆ ಶಿಸ್ತು ಕ್ರಮ, ರಾಜಕಾರಣಿಗಳಿಗೂ ಶಿಸ್ತು ಕ್ರಮದಂತಹ ವ್ಯವಸ್ಥೆ ತರಬೇಕು

* ವರ್ಗಾವಣೆಯಲ್ಲಿ ಅಧಿಕಾರಿಗಳು ಜಾತಿಯ ಒತ್ತಡ ತಂದರೆ ಶಿಸ್ತುಕ್ರಮ ಕೈಗೊಳ್ಳಬೇಕು

* ಈ ಕುರಿತಾದ ಒಂದು ಕಟ್ಟುನಿಟ್ಟಾದ ಕಾನೂನನ್ನೇ ಜಾರಿಗೆ ತರಬೇಕು

* ಪ್ರಾಮಾಣಿಕ, ದಕ್ಷ, ಜಾತ್ಯಾತೀತ ಅಧಿಕಾರಿಗಳಿಗೆ ಪ್ರೋತ್ಸಾಹ ನೀಡಬೇಕು. ಅವರಿಗೆ ಪದನ್ನೋತಿ ನೀಡಬೇಕು

* ರಾಜಕೀಯ ನೈತಿಕ ಸಂಹಿತೆಯನ್ನು ಈ ಹಿನ್ನೆಲೆಯಲ್ಲಿ ಅಳವಡಿಸಬೇಕು

* ಅಧಿಕಾರಿಗಳಿಗೂ ನೈತಿಕ ಸಂಹಿತೆ ಅಳವಡಿಸಿ, ತಪ್ಪಿತಸ್ಥರಿಗೆ ಶೀಘ್ರವಾದ ವಿಚಾರಣೆಯ ಮೂಲಕ ಕ್ರಮಕೈಗೊಳ್ಳಬೇಕು

* ಸಂವಿಧಾನದ ಆಶಯಗಳನ್ನು ಈಡೇರಿಸಲು ಎಲ್ಲರನ್ನು ಪ್ರೇರೇಪಿಸಬೇಕು

* ಇತರೇ ಪರಿಹಾರ ಕ್ರಮಗಳು.

**ಪ್ರಶ್ನೆ 12) ನೀವು ಒಬ್ಬ ತುಂಬಾ ಬಡತನದ ಗ್ರಾಮೀಣ ಹಿನ್ನೆಲೆಯಲ್ಲಿ ಬೆಳೆದು ಬಂದ ವ್ಯಕ್ತಿಯಾಗಿದ್ದು, ಈಗ ಒಬ್ಬ ಅಧಿಕಾರಿಯಾಗಿದ್ದೀರಿ. ಆರ್ಥಿಕ ಕಾರಣಕ್ಕಾಗಿ ನಿಮ್ಮ ಶಿಕ್ಷಣವನ್ನೇ ನಿಲ್ಲಿಸುವಂತಹ ಸಂದರ್ಭ ಬಂದಾಗ ನಿಮ್ಮ ಊರಿನ ಶ್ರೀಮಂತ ವ್ಯಕ್ತಿಯೊಬ್ಬರು ನೆರವಿಗೆ ಬಂದು ನಿಮ್ಮ ಓದು ಮುಂದುವರೆಯುವಂತೆ ಮಾಡಿದ್ದರು. ನೀವು ಅಧಿಕಾರಿಯಾದ ಬಳಿಕ ಅವರ ಮಗಳನ್ನೇ ಕೊಟ್ಟು ನಿಮಗೆ ಮದುವೆ ಮಾಡಲಾಗಿದೆ. ಈಗ ಅವರು ಒಬ್ಬ ಪ್ರಭಾವಿ ಗುತ್ತಿಗೆದಾರರು. ತಮ್ಮ ವ್ಯವಹಾರಕ್ಕೆ ಕಾನೂನು ಬಾಹಿರವಾಗಿ ನಿಮ್ಮ ನೆರವನ್ನು ಕೇಳುತ್ತಿದ್ದಾರೆ. ನೀವು ಒಬ್ಬ ಪ್ರಾಮಾಣಿಕ ಅಧಿಕಾರಿಯಾಗಿದ್ದು, ಇಂತಹ ನೆರವು ನೀಡಲು ನಿರಾಕರಿಸುತ್ತಿದ್ದೀರಿ. ಆದರೆ ಇದೇ ಹೊತ್ತಿಗೆ ಅವರು ನಿಮಗೆ ಮಾಡಿದ ಸಹಾಯ ನೆನಪಿಗೆ ಬರುತ್ತಿದ್ದು, ಅವರಿಗೆ ಪ್ರತಿಯಾಗಿ ಸಹಾಯ ಮಾಡದೆ ಹೋದರೆ ನಿಮ್ಮ ದಾಂಪತ್ಯ ಜೀವನಕ್ಕೂ ತೊಂದರೆಯಾಗುತ್ತದೆ ಎಂಬುದನ್ನು ಬಲ್ಲವರಾಗಿದ್ದೀರಿ. ಇಂತಹ ಸಂದರ್ಭವನ್ನು ನೀವು ಹೇಗೆ ನಿಭಾಯಿಸುವಿರಿ? (15 ಅಂಕಗಳು)**

**ಉತ್ತರ:** ಈ ಪ್ರಕರಣವು ವೈಯಕ್ತಿಕ ಸಂದಿಗ್ದತೆಗೆ ಉದಾಹರಣೆಯಾಗಿದೆ. ಈ ಸಂದರ್ಭವನ್ನು ನಿಭಾಯಿಸುವ ಬಗೆ,

* ಸಾರ್ವಜನಿಕ ಅಧಿಕಾರಿಯಾದವನು ತನ್ನ ವೈಯಕ್ತಿಕ ಹಿತಾಸಕ್ತಿಗಳಿಗೆ ಸಾರ್ವಜನಿಕ ಸೇವೆಯನ್ನು ಬಳಸಿಕೊಳ್ಳಬಾರದು / ಬಲಿಕೊಡಬಾರದು. ಇದರಿಂದ ಅವರು ಹಿತಾಸಕ್ತಿ ಸಂಘರ್ಷದಲ್ಲಿ ಸಿಕ್ಕಿ ಹಾಕಿಕೊಳ್ಳುವರು. ಇದರಿಂದ ದಕ್ಷವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ.

* ಬಡತನದಲ್ಲಿ ಇದ್ದಾಗ ಸಹಾಯ ಹಸ್ತ ನೀಡಿ ಮುಂದೆ, ನೆಂಟಸ್ತಿಕೆ ಬೆಳೆಸಿದ್ದು, ಇಲ್ಲಿ ಗುತ್ತಿಗೆದಾರರ ಹಿತ ಕಾಯದೇ ಹೋದಾಗ ದಾಂಪತ್ಯದಲ್ಲಿ ತೊಂದರೆ ಆಗಬಹುದು. ಆದರೆ ಅದನ್ನು ನಿಭಾಯಿಸುವ ಹೊಣೆ ನಮ್ಮದೇ ಆಗಿರುತ್ತದೆ. ಯಾವ ತಂದೆಯೂ ತನ್ನ ಮಗಳ ಬಾಳಿನೊಂದಿಗೆ ಆಟವಾಡುವುದು ಸುಲಭವಲ್ಲ. ಹಾಗೆಯೇ ಹೆಂಡತಿಯು ಗಂಡನ ನೆಮ್ಮದಿ ಹಾಳು ಮಾಡಲು ಬಯಸುವುದಿಲ್ಲ. ಇವೆಲ್ಲಾ ತಾತ್ಕಾಲಿಕವಾದ ಒತ್ತಡದ ಸನ್ನಿವೇಶಗಳು ಆಗಿದ್ದು, ದಾಂಪತ್ಯವನ್ನು ಪ್ರೀತಿಯಿಂದ ಗೆಲ್ಲಬೇಕು. ನ್ಯಾಯಕ್ಕೆ ಇರುವ ಅಧಿಕಾರಿಯ ಬದ್ದತೆಯನ್ನೇ ತನ್ನ ಮಾವನಿಗೂ ಮನವರಿಕೆ ಮಾಡಬೇಕೇ ಹೊರತು ಈ ರೀತಿಯ ಅನೈತಿಕ ಮಾರ್ಗದಲ್ಲಿ ನೆರವು ನೀಡಬಾರದು.

* ಒಂದು ವೇಳೆ ಅವರಿಗೆ ಗುತ್ತಿಗೆಯನ್ನು ಪಡೆಯಲೇ ಬೇಕೆಂದಿದ್ದರೆ, ಕಾನೂನು ಪ್ರಕಾರ ಅರ್ಜಿ ಸಲ್ಲಿಸಿ, ತಮ್ಮ ಕಾರ್ಯದ ನೆಲೆಯಲ್ಲಿ ನೈತಿಕವಾಗಿಯೇ ಪಡೆಯಬೇಕು

* ವಾಮ ಮಾರ್ಗದಿಂದ ತಾತ್ಕಾಲಿಕವಾಗಿ ಲಾಭವಾದರೂ, ಮುಂದೆ ಎಲ್ಲರಿಗೂ ಶಿಕ್ಷೆ ಇದ್ದೇ ಇರುತ್ತದೆ

* ಆದ್ದರಿಂದ ಈ ಸನ್ನಿವೇಶದಲ್ಲಿ ದಾಂಪತ್ಯ, ನೆಂಟಸ್ತಿಕೆ ಮತ್ತು ಕರ್ತವ್ಯವನ್ನು ಸರಿಯಾಗಿ ಸಮರ್ಥವಾಗಿ ನಿಭಾಯಿಸಬೇಕು. ಯಾವುದೇ ಕಾರಣಕ್ಕೂ ಅನೈತಿಕ ಮಾರ್ಗ ಹಿಡಿಯಬಾರದು

**ಪ್ರಶ್ನೆ 13) ನಾವೆಲ್ಲಾ ಹೊಟ್ಟೆಗೆ ಅನ್ನವನ್ನು ನೀಡುವ ರೈತನನ್ನು ಹಾಡಿ ಹೊಗಳಿ ಕೊಂಡಾಡುತ್ತೇವೆ. ಆದರೆ ಅವನ ಉತ್ಪನ್ನಗಳಿಗೆ ಸರಿಯಾದ ಬೆಲೆ ಕೊಡುತ್ತಿಲ್ಲ. ನೀವು ಸ್ವತ: ಒಬ್ಬ ರೈತನ ಮಗ / ಮಗಳು ಆಗಿ ರೈತ ಸಮುದಾಯದ ಕಷ್ಟ ಕೋಟಲೆಗಳನ್ನು ಕಣ್ಣಾರೆ ಕಂಡವರಾಗಿದ್ದೀರಿ. ಈ ಒಬ್ಬ ಅಧಿಕಾರಿಯಾಗಿರುವ ನೀವು ಬೆಲೆ ನಿಗದಿಗೆ ಬಂದಾಗ ಒಂದು ಕಿಲೋ ಅಕ್ಕಿಗೆ ರೂ.35 ಕೊಡುವುದನ್ನು ಮತ್ತು ಮುಖಕ್ಕೆ ಹಚ್ಚುವ 100 ಗ್ರಾಂ ಸೌಂದರ್ಯ ಪ್ರಸಾದನಕ್ಕೆ ರೂ.100 ಕೊಡುವುದನನು ನೈತಿಕವಾಗಿ ಹೇಗೆ ಬೆಂಬಲಿಸುತ್ತೀರಿ? ವಿವೇಚಿಸಿ. (15 ಅಂಕಗಳು)**

**ಉತ್ತರ: "**ಕೋಟಿ ವಿದ್ಯೆಗಿಂತ, ಮೇಟಿ ವಿದ್ಯೆಯೇ ಮೇಲು**"** ಎಂಬುದು ಗಾದೆಯಾಗಿ ಮಾತ್ರ ಉಳಿದಿದೆ. ನಿಜವಾಗಿ ರೈತನ ಬಾಳು ಹಸನಾಗಿಲ್ಲ. ಇದಕ್ಕೆ ಸಾಕ್ಷಿ ಇತ್ತೀಚೆಗೆ ಕರ್ನಾಟಕದಲ್ಲಿ ಆಗುತ್ತಿರುವ 500ಕ್ಕಿಂತ ಅಧಿಕವಾದ ರೈತ ಆತ್ಮಹತ್ಯೆಗಳು.

ರೈತನ ಈ ದುಸ್ಥಿತಿಗೆ ಹಲವಾರು ಕಾರಣಗಳಿವೆ. ಅದರಲ್ಲಿ ಈ ಕೃಷಿ ಬೆಳೆಗಳ ಬೆಲೆ ನೀತಿಯೂ ಒಂದು. ಕೃಷಿಕರಿಗೆ ತಾವು ಬೆಳೆದ ಬೆಳೆಗೆ ಯೋಗ್ಯವಾದ ಬೆಲೆ ಸಿಗುತ್ತಿಲ್ಲ. ಇದರಿಂದ ರೈತ ಕಂಗಾಲಾಗಿದ್ದಾನೆ. ಇದಲ್ಲದೇ ಸಾಲ, ಮಳೆ ಅಭಾವ, ಬೀಜ ರಸಗೊಬ್ಬರಗಳ ಕೊರತೆ, ಕೃಷಿ ಕೂಲಿ ಕಾರ್ಮಿಕರ ಕೊರತೆ, ರೈತರನ್ನು ಮತ್ತಷ್ಟು ಘಾಸಿ ಮಾಡುತ್ತಿವೆ.

* ಇದೇ ಸಂದರ್ಭದಲ್ಲಿ ರೈತನ ಅಕ್ಕಿಗೆ ಕೇವಲ ಕಿಲೋಗೆ ರೂ.35, ಹಾಗೆಯೇ 100 ಗ್ರಾಂ ಸೌಂದರ್ಯ ಸಾಧನಕ್ಕೆ ರೂ.100 ಕೊಡುವ ಪದ್ದತಿ ಇದೆ. ಇದಕ್ಕೆ ಕಾರಣ ರೈತನ ಬೆಳೆಗೆ 'ಬೆಲೆ' ಕಟ್ಟುವಲ್ಲಿನ ತಾರತಮ್ಯ

* ರೈತರಿಗೆ ಪ್ಯಾಕ್ ಮಾಡಿ, ಬಣ್ಣ ಹಾಕಿ, ಜಾಹೀರಾತು ನೀಡಿ, ಮಾರುವ ಮಾರ್ಗ ಅನುಸರಿಸುವುದಿಲ್ಲ

* ಆದರೆ ವಾಣಿಜ್ಯ ವಸ್ತುಗಳ ಮಾರಾಟ ಮಾಡುವವರು, ಈ ರೀತಿಯ ಮೇಲು ಮುಸುಕಿನ ತಳುಕಿಗೆ ಹೆಚ್ಚು ಮಹತ್ವ ನೀಡುತ್ತಾರೆ. ಒಳಗೆ ಹುಳುಕು ಇಟ್ಟರೂ ಗ್ರಾಹಕರು ಖರೀದಿಸುತ್ತಾರೆ

* ರೈತನ ಭತ್ತಕ್ಕೆ ರೂ.35, ಅದೇ ಭತ್ತ ಪಾಲೀಷ್ ಮಾಡಿ, ಪ್ಯಾಕಿಂಗ್ ಮತ್ತು ಪ್ಯಾಕೇಜಿಂಗ್ ಮಾಡಿ ವಿಶೇಷ ಬಾಸುಮತಿ ಅಕ್ಕಿ ಎಂದು ರೂ.125ಕ್ಕೆ ಮಾರುತ್ತಾನೆ ವ್ಯಾಪಾರಸ್ತ

* ಇದರಿಂದ ತಿಳಿಯುವುದೇನೆಂದರೆ, ನಮ್ಮ ರೈತರೇ ಈ ರೀತಿಯ ಅನ್ಯ ಮಾರ್ಗ ಹುಡುಕಿ ತಮ್ಮ ಬೆಳೆಗಳಿಗೆ ಸೂಕ್ತ ಬೆಲೆ ಪಡೆಯಬೇಕಾಗಿದೆ. ಕೇವಲ ಸರ್ಕಾರ ನಂಬಿದರೆ ಏನು ಪ್ರಯೋಜನವಿಲ್ಲ. ಆಧುನಿಕ ಕೃಷಿ ಕೈಗೊಂಡು, ಬಹು ಬೆಳೆ ಬೆಳೆದು, ಪ್ರಗತಿಪರ ರೈತರಾಗಿ ನಮ್ಮೆಲ್ಲಾ ರೈತರು ಪರಿವರ್ತನೆಯಾಗಬೇಕು. ಇದರಿಂದ ಅವರು ಯೋಗ್ಯ ಬೆಲೆಯನ್ನು ಪಡೆಯಬಹುದು

* ದೇಶದ ಶೇ.60ರಷ್ಟು ಜನರಿಗೆ ಆಸರೆಯಾಗಿರುವ ಕೃಷಿಗೆ ಮಹತ್ವ ನೀಡಬೇಕು

* ಕೃಷಿಕನ ಕೈ ಕಾಲು ಕೆಸರಾದರೇ ಮಾತ್ರ ನಮ್ಮ ಬಾಯಲ್ಲಿ ಅನ್ನ ಮೊಸರು ಎಂಬುದನ್ನು ನಾವು ಮರೆಯಬಾರದು

* ಈ ರೀತಿಯ ಬೆಲೆ ವ್ಯತ್ಯಾಸವನ್ನು ನೈತಿಕವಾಗಿ ಬೆಂಬಲಿಸಲು ಸಾಧ್ಯವಿಲ್ಲ

* ಆದಷ್ಟು ಬೇಗನೆ ರೈತರಿಗೆ ನೆರವಾಗಿ ಅದರ ಬಾಳನ್ನು ಹಸನು ಮಾಡಬೇಕಿದೆ

* ಇದರಿಂದಲೇ ಕೋಟಿ ವಿದ್ಯೆಗಿಂತ, ಮೇಟಿ ವಿದ್ಯೆ ಮೇಲು ಎಂಬುದು ಸಾರ್ಥಕವಾಗುವುದು.

ಇನ್ನೊಂದು ವಾದವೇನೆಂದರೆ ರೈತನ ಬೆಳೆಯು ಜೀವನಕ್ಕೆ ಅತೀ ಅಗತ್ಯವಾದುದು. ಅದನ್ನು ನಮ್ಮ ಮನಸ್ಸಿಗೆ ಬಂದಷ್ಟು ದರ ನಿಗದಿಪಡಿಸಲು ಬರುವುದಿಲ್ಲ. ಅದೇ ರೀತಿ ಸೌಂದರ್ಯವರ್ಧಕ ವಸ್ತು ಮೂಲಭೂತ ಅವಶ್ಯಕತೆ ಅಲ್ಲ. ಅದನ್ನು ಉಳ್ಳವರು ಮಾತ್ರ ಕೊಳ್ಳುತ್ತಾರೆ. ಬಡವರಿಗೆ ಆಹಾರ ಪೂರೈಸಬೇಕಾದರೆ, ದರವನ್ನು ನಿಗಧಿತ ರೀತಿಯಲ್ಲಿ ಪರಿಷ್ಕರಿಸಬೇಕು. ಇದರಿಂದ ರೈತನ ಹಿತ ಮತ್ತು ಬಡವರ ಹಿತ ಎರಡೂ ಕಾಯಬೇಕು.

# ಉತ್ತರ ಸಹಿತ ಮಾದರಿ ಪ್ರಶ್ನೆ ಪತ್ರಿಕೆಗಳು

## ಪ್ರಶ್ನೆ ಪತ್ರಿಕೆ – 4

**(1ರಿಂದ 12ನೇ ಪ್ರಶ್ನೆವರೆಗೆ 20 ಅಂಕಗಳು, ಕೊನೆಯ ಪ್ರಶ್ನೆಗೆ 10 ಅಂಕ)**

**1) ನೈತಿಕತೆ ಎಂದರೆ ಏನು? ಅದು ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ನೈತಿಕತೆ ಹೇಗೆ ಭಿನ್ನವಾಗಿರುತ್ತದೆ? ವಿವೇಚಿಸಿ.**

**ಉತ್ತರ:** ನೈತಿಕತೆ ಎಂದರೆ ನಮ್ಮ ಜೀವನದಲ್ಲಿ ಯಾವುದು ಸರಿ? ಯಾವುದು ತಪ್ಪು? ಎಂಬುದು ನಿರ್ಣಯಿಸಿ ಸರಿಯಾದ ಮಾರ್ಗವನ್ನು ಯಾವುದು ಎಂದು ಗುರುತಿಸಿ ಅದಕ್ಕೆ ಪೂರಕವಾಗಿ ಪ್ರತಿಕ್ರಯಿಸುವುದು ಆಗಿದೆ.

ಇದು ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ಭಿನ್ನತೆಯಿಂದ ಕೂಡಿರುತ್ತದೆ. ಹುಟ್ಟುತ್ತಾ ಯಾರೂ ಎಲ್ಲ ಕೆಟ್ಟ, ಒಳ್ಳೆಯ ಗುಣಗಳನ್ನು ಪಡೆದು ಜನಿಸುವುದಿಲ್ಲ. ಆದರೆ ಅವರು ಬೆಳೆಯುವ ಪರಿಸರ (ಸಮಾಜ) ಅವರ ಮೇಲೆ ಪರಿಣಾಮ ಬೀರಿ ಅವರಲ್ಲಿ ನೈತಿಕ, ಅನೈತಿಕ ಭಾವನೆಗಳನ್ನು ಹುಟ್ಟುಹಾಕುತ್ತವೆ. ಚಿಕ್ಕಂದಿನಲ್ಲೇ ಮಕ್ಕಳಿಗೆ ಆದರ್ಶ ವ್ಯಕ್ತಿಗಳ ಕುರಿತು ತತ್ವ, ಮೌಲ್ಯಗಳನ್ನು ಬೆಳೆಸಿದರೆ ಅವನು ಕಾಲಕ್ರಮೇಣ ಒಳ್ಳೆಯ ವ್ಯಕ್ತಿಯಾಗಿಯೇ ರೂಪುಗೊಳ್ಳುತ್ತಾನೆ ಮತ್ತು ಸ್ಥಳದಿಂದ ಸ್ಥಳಕ್ಕೆ ನೈತಿಕತೆ ಭಿನ್ನವಾಗಿರುತ್ತದೆ. ಇದನ್ನು ಹೇಗೆ ಉದಾಹರಣೆ ನೀಡಬಹುದು ಎಂದರೆ, "Murder is crime in Society and Victory in a War" ಎನ್ನುವಂತೆ, ಭಿನ್ನತೆಯಿಂದ ಕೂಡಿರುತ್ತದೆ.

ಮಧ್ಯಕಾಲೀನ ಸಮಯದಲ್ಲಿ ವೈಶ್ಯಾವೃತ್ತಿ, ಸತಿಸಹಗಮನ ಸಾಮಾನ್ಯವಾಗಿದ್ದರೆ, ಇಂದು ಅವುಗಳ ಕಾನೂನು ಬಾಹಿರ ಮತ್ತು ಅನೈತಿಕ ಚಟುವಟಿಕೆಗಳಾಗಿವೆ. ಹೀಗೆ ನೈತಿಕತೆ ಎಂಬುದು ಕಾಲದಿಂದ ಕಾಲಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನತೆಯಿಂದ ಕೂಡಿರುತ್ತದೆ.

**2) ಅ) ಸಾರ್ವಜನಿಕ ಆಡಳಿತದಲ್ಲಿ ಆಡಳಿತಗಾರರು ಕೇವಲ ಮೌಲ್ಯಗಳನ್ನಳವಡಿಸಿಕೊಂಡರೆ ಸಾಲದು ಎಂಬ ಮಾತಿದೆ. ನಿಮ್ಮ ಅಭಿಪ್ರಾಯವೇನು? ವಿವರಿಸಿ.**

**ಆ) ನಿಮ್ಮ ಪ್ರಕಾರ ಸಾರ್ವಜನಿಕ ಸೇವೆಗೆ ಅಗತ್ಯವಿರುವ ಕೆಲವು ಪ್ರಮುಖ ಗುಣಗಳು ಯಾವುವು?**

**ಉತ್ತರ:** ಎ) ಸಾರ್ವಜನಿಕ ಆಡಳಿತದಲ್ಲಿ ಆಡಳಿತಗಾರರು ಕೇವಲ ಮೌಲ್ಯಗಳನ್ನಳವಡಿಸಿಕೊಂಡರೆ ಸಾಲದು, ಜೊತೆಗೆ ಅವರಲ್ಲಿ ಆಡಳಿತ ನಿರ್ವಹಿಸುವ ಸಾಮರ್ಥ್ಯವು ಅವಶ್ಯಕವಾಗಿದೆ. ಏಕೆಂದರೆ ಇತ್ತೀಚಿನ ನೂತನ ಸಾರ್ವಜನಿಕ ಆಡಳಿತದ ಕಲ್ಪನೆಯಲ್ಲೂ ಆಡಳಿತಗಾರನ ನೈತಿಕತೆಯಿಂದ ಇರುವುದು ಎಷ್ಟು ಪ್ರಮುಖವೋ ಅಷ್ಟೇ ಪ್ರಾಮುಖ್ಯತೆಯಿಂದ ಕೂಡಿರುವುದು ಅವನ ಬುದ್ಧಿಮಟ್ಟ, ಕೆಲಸದಲ್ಲಿನ ನೈಪುಣ್ಯತೆ, ಸಮಯ ಪಾಲನೆ ಮತ್ತು ಸಿಬ್ಬಂದಿ ನಿರ್ವಹಣೆ. ಅಂದರೆ ತನ್ನಲ್ಲಿ ಮೌಲ್ಯಗಳಿದ್ದರೆ ಸಾಲದು ತನ್ನ ಆಡಳಿತದಲ್ಲಿ ಸಿಬ್ಬಂದಿಗಳಲ್ಲಿ ಮತ್ತು ಕೆಳ ಅಧಿಕಾರಿಗಳಲ್ಲಿ ಅದನ್ನು ತರಲು ಪ್ರಯತ್ನಿಸಬೇಕು. ಮತ್ತು ತನ್ನ ಕಛೇರಿಯಲ್ಲಿ ನಡೆಯುವ ಅನೈತಿಕ ಗಮನಿಸಿ ಸುಮ್ಮನೆ ಕೂರುವಂತಿಲ್ಲ. ಆದ್ದರಿಂದ ಅದನ್ನು ಸಮರ್ಥವಾಗಿ ನಿಭಾಯಿಸುವ ಸಾಮರ್ಥ್ಯ ಅವನಿಗೆ ತುಂಬಾ ಅವಶ್ಯಕವಾಗಿದೆ. ಅಂದರೆ ಮಾತ್ರ ಆಡಳಿತ ಯಂತ್ರವನ್ನು ಸುಗಮವಾಗಿ ಆರ್ಥಿಕ ನಷ್ಟವಾಗದಂತೆ ದಕ್ಷತೆಯಿಂದ ಪ್ರಮಾಣಿಕತೆಯಿಂದ ನಿಭಾಯಿಸಬಹುದಾಗಿದೆ.

ಬಿ) ಸಾರ್ವಜನಿಕ ಸೇವೆಗೆ ಅಗತ್ಯವಿರುವ ಕೆಲವು ಪ್ರಮುಖ ಗುಣಗಳು:

* ಪಾರದರ್ಶಕತೆ: ಆಡಳಿತಗಾರನು ಯಾವುದೇ ಕಾರಣಕ್ಕೂ ಆಡಳಿತದಲ್ಲಿ ಅಪಾರದರ್ಶಕತೆಯಿಂದ ಸ್ವಜನ ಪಕ್ಷಪಾತಕ್ಕೆ ಅನುಕೂಲವಾಗುವಂತೆ ಕಾರ್ಯನಿರ್ವಹಿಸಬಾರದು. ಪಾರದರ್ಶಕತೆ ಇರಬೇಕು

* ಸೇವಾ ಮನೋಭಾವ: ಕರ್ತವ್ಯವನ್ನು ಸಮರ್ಥವಾಗಿ ನಿಭಾಯಿಸುವುದಕ್ಕಿಂತ ಪ್ರಮುಖ ಸಾರ್ವಜನಿಕ ಅಧಿಕಾರಿಗಳಲ್ಲಿ ಸೇವಾ ಮನೋಭಾವ ಹೊಂದಿರಬೇಕು

* ಅನುಕಂಪ: ದೀನ ದಲಿತರು, ಮಹಿಳೆಯರು, ಅಂಗವಿಕಲರಿಗೆ ಇತ್ಯಾದಿ ದುರ್ಬಲ ವರ್ಗದ ಬಗ್ಗೆ ಅನುಕಂಪ ಹೊಂದಿರಬೇಕು

* ಪ್ರಾಮಾಣಿಕತೆ: ಸಾರ್ವಜನಿಕ ಸೇವೆಯಲ್ಲಿ ಅತಿಮುಖ್ಯವಾಗಿ ಅವಶ್ಯವಿರುವ ಅಂಶ ಕೇವಲ ಆಡಳಿತದಲ್ಲಿ ಮಾತ್ರವಲ್ಲದೇ ಜೀವನ ಪೂರ್ತಿ ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ

* ಭ್ರಷ್ಟಾಚಾರ ರಹಿತ ಆಡಳಿತ

* ನ್ಯಾಯ ಒದಗಿಸುವುದು

* ಸಹಾನುಭೂತಿ

* ಪರಾನುಭೂತಿ

* ದಕ್ಷತೆ

ಇತ್ಯಾದಿ ಅಂಶಗಳು.

**3) ಎ) ನಿರ್ಧಾರ ಕೈಗೊಳ್ಳುವಿಕೆಯಲ್ಲಿನ ಸಮಸ್ಯೆಗಳು ಯಾವುವು? ಅವನ್ನು ಹೇಗೆ ಎದುರಿಸಬೇಕು?**

**ಬಿ) ಆಡಳಿತದಲ್ಲಿ ಭಾವನಾತ್ಮಕ ಬುದ್ಧಿವಂತಿಕೆ ಅವಶ್ಯಕತೆ ಏನು? ವಿವೇಚಿಸಿ.**

**ಉತ್ತರ:** ಎ) ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳು, ನಿರ್ಧಾರ ಕೈಗೊಳ್ಳುವುದರಲ್ಲಿ ಹಿಂಜರಿಕೆ, ಬದ್ಧತೆಯಲ್ಲಿ ಕೊರತೆ ಕಂಡು ಬರುತ್ತದೆ ನಿಜ. ಆದರೆ ಇಂದಿನ ಆಡಳಿತದಲ್ಲಿ ನಿರ್ಧಾರ ಕೈಗೊಳ್ಳುವುದು ಆಡಳಿತವಾಗಿದೆ. ಆದ್ದರಿಂದ ನಿರ್ಧಾರವನ್ನು ಪ್ರಕಟಿಸುವಾಗ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಅರಿತು, ನಿರ್ಧಾರವನ್ನು ಕೈಗೊಳ್ಳಬೇಕು ಮತ್ತು ಇದನ್ನು ನಾನು ಈ ಮೂಲಕ ನಿಭಾಯಿಸುತ್ತೇನೆ.

* ಏಕವ್ಯಕ್ತಿ ನಿರ್ಧಾರ ಕೈಗೊಳ್ಳುವುದಕ್ಕಿಂತ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿ

* ನಿರ್ಧಾರ ಕೈಗೊಳ್ಳುವುದರಿಂದ ಆಗುವ ಉಪಯುಕ್ತತೆಯನ್ನು ಆಧರಿಸಿ

* ಈ ನಿರ್ಧಾರ ಕೈಗೊಳ್ಳುವುದರಿಂದ ಸಮಾಜಕ್ಕೆ ಅನುಕೂಲಗಳು / ಅನಾನುಕೂಲಗಳನ್ನು ಸಮಗ್ರವಾಗಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳುತ್ತೇನೆ

* ಪ್ರಮುಖವಾಗಿ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಅರಿತು ನಿರ್ಧಾರ ಕೈಗೊಳ್ಳುತ್ತೇನೆ

* ಸರ್ಕಾರಕ್ಕೆ ಅಧಿಕ ಹೊರೆಯಾಗದಂತೆ ನಿರ್ಧಾರ ಪ್ರಕಟಿಸುವುದು ಮತ್ತು ತೆಗೆದುಕೊಂಡ ನಿರ್ಧಾರಕ್ಕೆ ಬದ್ಧವಾಗಿ ಕಾರ್ಯ ನಿರ್ವಹಿಸುವುದು.

ಬಿ) ಆಡಳಿತದಲ್ಲಿ ಭಾವನಾತ್ಮಕ ಬುದ್ಧಿವಂತಿಕೆ ಅತೀ ಅವಶ್ಯಕವಾಗಿದೆ. ಏಕೆಂದರೆ ಆಡಳಿತಗಾರನಾಗಿ ಇನ್ನೊಬ್ಬರ / ಸಮಾಜದ ಜನರ ಕಷ್ಟ ಸುಖಗಳನ್ನು ಅರ್ಥೈಸಿಕೊಂಡು ನಮ್ಮ ಭಾವನೆಗಳನ್ನು ನಿಯಂತ್ರಿಸಿಕೊಂಡು ಅವರಿಗೆ ಪೂರಕವಾಗಿ ಪ್ರತಿಕ್ರಿಯಿಸುವುದಾಗಿದೆ. ಅಂದರೆ ಅಧಿಕಾರಿಯಾಗಿ ಜನರ ಭಾವನೆಗಳು ಅರ್ಥವಾಗದೆ

ಹೋದಾಗ ನಿರ್ಧಾರ ಪ್ರಕಟಿಸುವುದು ಅತೀ ಕಷ್ಟಕರವೆನಿಸುತ್ತದೆ ಮತ್ತು ನಾವು ತೆಗೆದುಕೊಂಡ ನಿರ್ಧಾರ ವ್ಯತಿರಿಕ್ತವಾಗಿರಬಹುದು. ಆದ್ದರಿಂದ ಆಡಳಿತದಲ್ಲಿ ಭಾವನಾತ್ಮಕ ಬುದ್ದಿವಂತಿಕೆ ಅತಿ ಮಹತ್ವದ್ದು.

ಇದನ್ನು ಬೆಳೆಸಿಕೊಳ್ಳಬೇಕಾದರೆ,

* ನಮ್ಮಲ್ಲಿ ಸಹನೆ, ಸಹಾನುಭೂತಿ ಇರಬೇಕು
* ಅನುಕಂಪ, ಪರಾನುಭೂತಿ ಇರಬೇಕು
* ಜನರೊಂದಿಗೆ ಬೆರೆತುಕೊಳ್ಳಬೇಕು
* ಅವರ ಜಾಗದಲ್ಲಿ ನಿಂತು (ಸ್ಥಿತಿಯನ್ನು ಅವಲೋಕಿಸಿ) ಅದನ್ನು ಅನುಭವಿಸಬೇಕು
* ಜನರ ಧ್ವನಿ, ಮುಖ ಚಿಹ್ನೆಗಳಲ್ಲೇ ಅವರ ಸಮಸ್ಯೆಯನ್ನು ಗುರುತಿಸಬೇಕು

ಇತ್ಯಾದಿ ಅಂಶಗಳು.

**4) ಸತ್ಯ, ಅಹಿಂಸೆಗಳು ಹಿಮಾಲಯದಷ್ಟೇ ಹಳೆಯವು ಎಂಬುದು ಗಾಂಧೀಜಿ ಹೇಳಿಕೆಯು ಸರ್ವಕಾಲಿಕ ಸತ್ಯತೆಯಿಂದ ಕೂಡಿದೆಯೇ? ಸತ್ಯವನ್ನು ಪಾಲಿಸಬೇಕೇ? ಅಹಿಂಸೆ ಈಗ ಪ್ರಸ್ತುತವೇ? ಈ ಕುರಿತು ವಿವೇಚಿಸಿ.**

**ಉತ್ತರ:** ಸತ್ಯ, ಅಹಿಂಸೆಗಳು ಹಿಮಾಲಯದಷ್ಟೇ ಹಳೆಯವು ಎಂಬುದು ಗಾಂಧೀಜಿ ಹೇಳಿಕೆಯು ಸರ್ವಕಾಲಿಕ ಸತ್ಯತೆಯಿಂದ ಕೂಡಿದೆ. ಈ ಮೌಲ್ಯಗಳನ್ನು ಅಳವಡಿಸಿಕೊಂಡು ಗಾಂಧೀಜಿ ನಮ್ಮ ಸ್ವಾತಂತ್ರ್ಯ ದೊರಕಿಸಿಕೊಟ್ಟಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಆದರೆ ಇಂದಿನ ಆಧುನಿಕ ಜಗತ್ತಿನಲ್ಲಿ ನಮ್ಮನ್ನು ನಾವು ಆತ್ಮರಕ್ಷಣೆಗಾಗಿ ಸತ್ಯ, ಅಹಿಂಸೆಯನ್ನು ಪಾಲನೆ ಮಾಡಬಹುದಾಗಿದೆ. ಒಂದು ರಾಷ್ಟ್ರದ ರಕ್ಷಣೆ ವಿಷಯ ಬಂದಾಗ ಅಹಿಂಸಾ ಮನೋಭಾವ ಅಷ್ಟೊಂದು ಸಮಂಜಸವಾದದ್ದು ಅಲ್ಲ. ಏಕೆಂದರೆ ಇತಿಹಾಸವನ್ನು ಅವಲೋಕಿಸಿದಾಗ ಜೈನ, ಬೌದ್ಧ ಧರ್ಮದಲ್ಲಿನ ಅಹಿಂಸಾ ಸಿದ್ಧಾಂತವನ್ನು ಅಳವಡಿಸಿಕೊಂಡು ಆಗಿನ ರಾಜಮನೆತನಗಳು ನಾಶಹೊಂದಿದವು.

ದಾಸ ಸಾಹಿತ್ಯದಿಂದ ಅಹಿಂಸಾತ್ಮಕ ಮನೋಭಾವನೆಯನ್ನು ಬೆಳೆಸಿಕೊಂಡು, ವಿಜಯನಗರ ಸಾಮ್ರಾಜ್ಯ ತಾಳಿಕೋಟಿ ಕದನದಲ್ಲಿ ಸಾಮ್ರಾಜ್ಯವೇ ಮರೆಯಾಯಿತು. ಅಂದರೆ ರಾಷ್ಟ್ರ ರಕ್ಷಣೆ ವಿಷಯ ಬಂದಾಗ ನಾವು ಸತ್ಯವಂತರಾಗಿದ್ದರೂ, ನಮ್ಮನ್ನು ನಾವು ರಕ್ಷಿಸಿಕೊಳ್ಳುವುದಕ್ಕಾಗಿಯಾದರೂ ಹೋರಾಡ ಬೇಕಾಗುತ್ತದೆ. ಹಿಂಸಾತ್ಮಕ ಮಾರ್ಗವನ್ನು ಅನುಸರಿಸಬೇಕಾಗುತ್ತದೆ.

ಸತ್ಯವಂತನಾಗಿದ್ದ ಹರಿಶ್ಚಂದ್ರ ತನ್ನ ರಾಜ್ಯವನ್ನೇ ಕಳೆದುಕೊಂಡು, ಜೀವನದಲ್ಲಿ ಗೆದ್ದ. ಅಂದರೆ ನಮ್ಮ ಜೀವನದಲ್ಲಿ ಸತ್ಯ, ಅಹಿಂಸೆ ಮೌಲ್ಯಗಳು ತುಂಬಾ ಅವಶ್ಯಕವಾಗಿದ್ದು ರಾಷ್ಟ್ರ ರಕ್ಷಣೆಯ ದೃಷ್ಟಿಯಿಂದ ಪರಕೀಯ ದಬ್ಬಾಳಿಕೆಯಿಂದ ನಮ್ಮನ್ನು ನಾವು / ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕು ಮತ್ತು ಹಿಂಸೆಯಿಂದಲೇ ರಕ್ಷಿಸುವುದಕ್ಕೆ ಪರ್ಯಾಯವಾಗಿ ಶಾಂತಿ ಮಾತುಕತೆ ಮೂಲಕವು ನಮ್ಮನ್ನು ನಾವು ಸಮರ್ಥವಾಗಿ ರಕ್ಷಿಸಿಕೊಳ್ಳಬಹುದಾಗಿದೆ. ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ ಎನ್ನುವಂತೆ ಪರಿಣಾಮಕಾರಿ ಸಂಪರ್ಕ / ಮಾತುಕತೆಯಿಂದ ರಾಷ್ಟ್ರ ರಕ್ಷಣೆ ಮಾಡುವುದು ಅವಶ್ಯವಿದೆ. ದ್ವೇಷವನ್ನು ಸಾಧಿಸುವುದಕ್ಕಿಂತ ನೆರೆ ಹೊರೆಯವರೊಂದಿಗೆ ಸ್ನೇಹದಿಂದ ಇರುವುದು ತುಂಬಾ ಅವಶ್ಯಕವಾಗಿದೆ.

**5) ಆತ್ಮಸಾಕ್ಷಿಯ ಹೋಯ್ದಾಟ ಎಂದರೇನು? ಅದನ್ನು ನೀವು ಎದುರಿಸಿದ್ದೀರಾ? ಉದಾಹರಣೆ ಸಹಿತ ವಿವರಿಸಿ.**

**ಉತ್ತರ:** ಪ್ರತಿಯೊಬ್ಬರ ಜೀವನದಲ್ಲಿ ಇಂಥಹ ಸಂದಿಗ್ದ ಪರಿಸ್ಥಿತಿ ಬಂದಿರುತ್ತದೆ. ಅಂದರೆ ಸಮಾಜ ಒಪ್ಪಿಕೊಂಡ ಮೌಲ್ಯಗಳನ್ನು ಮೀರುವಂಥ ಸನ್ನಿವೇಶ ಬಂದಿರುತ್ತದೆ. ನನ್ನ ಜೀವನದಲ್ಲಿ ಎದುರಾದ ಕೆಲವೊಂದು ಸನ್ನಿವೇಶಗಳು

ಈ ಕೆಳಗೆ ವಿವರಿಸಲಾಗಿದೆ. ಉದಾ: ನಮ್ಮ ಸಮಾಜದಲ್ಲಿ ಜಾತ್ರೆಯ ಸಂದರ್ಭದಲ್ಲಿ ಪ್ರಾಣಿ ಬಲಿ ನೀಡುವುದು ಸಾಮಾನ್ಯವಾಗಿದೆ. ಇದನ್ನು ಸಮಾಜ ಒಪ್ಪಿಕೊಂಡಿದೆ. ಆದರೆ ನಾನು ಪ್ರಜ್ಞಾವಂತನಾಗಿದ್ದು ಅಹಿಂಸೆಯನ್ನು ಅನುಸರಿಸಿ ಪ್ರಾಣಿಗಳನ್ನು ಬಲಿ ನೀಡುವುದು ತಪ್ಪು ಎಂದು ತಿಳುವಳಿಕೆ ಹೇಳಿದರೂ ಅವರು ಒಪ್ಪಲಿಲ್ಲ. ಅಂತಹ ಸಂದರ್ಭದಲ್ಲಿ ಪೋಲೀಸರಿಗೆ ದೂರು ನೀಡುವುದರ ಮೂಲಕ ಅದನ್ನು ತಡೆಗಟ್ಟಲು ಪ್ರಯತ್ನಿಸಿದ್ದು. ಉದಾ: ನಮ್ಮ ಮನೆಯಲ್ಲಿ ನಾನು ಒಂದು ಸಾರಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದೆ. ಅದರ ಫಲಿತಾಂಶವನ್ನು ಹೇಳದೆ ಸುಮ್ಮನಿದ್ದು ಸಮಾಜದಲ್ಲಿನ ನಿಯಮ ಮೀರಿ ವರ್ತಿಸಿದ್ದು ಆತ್ಮಸಾಕ್ಷಿ ಎಚ್ಚರಿಸುತ್ತಿತ್ತು.

**6) ಪ್ರಾಮಾಣಿಕತೆ ಮತ್ತು ಅಧಿಕಾರ, ಒಬ್ಬ ವ್ಯಕ್ತಿಯ ಪ್ರಾಮಾಣಿಕತೆ ತಿಳಿಯಲು ಅವನಿಗೆ ಅಧಿಕಾರ ನೀಡಿದರೆ ಹೇಗೆ? ಅಪ್ರಾಮಾಣಿಕತೆಗೆ ಕಾರಣಗಳು ಯಾವುವು?**

**ಉತ್ತರ:** "ಒಬ್ಬ ವ್ಯಕ್ತಿ ನಿಜವಾದ ಗುಣಗಳನ್ನು ಅರಿತುಕೊಳ್ಳಲು ಅವನಿಗೆ ಅಧಿಕಾರ ಕೊಟ್ಟು ನೋಡಿ"– ಅಬ್ರಾಹಂ ಲಿಂಕನ್. ಅಂದರೆ ಒಬ್ಬ ವ್ಯಕ್ತಿಯು ಅಧಿಕಾರದಲ್ಲಿದ್ದಾಗ ಅವನಲ್ಲಿನ ಭಾವನೆಗಳು ಪ್ರಾಮಾಣಿಕನನ್ನಾಗಿ ಮಾಡಿಸಿರಬಹುದು. ಅದರ ಬಗ್ಗೆ ಹೆಚ್ಚಿನ ಒಲವು ಇರಬಹುದು. ಅವನಿಗೆ ಅಧಿಕಾರ ಬಂದಾಗ ಅವನಲ್ಲಿನ ಭಾವನೆಗಳು ಬದಲಾಗಿ ಅಧಿಕಾರವನ್ನು ಸ್ವಂತಕ್ಕೆ ಬಳಸಿಕೊಂಡು ಅಪ್ರಾಮಾಣಿಕನಾಗಬಹುದು. ಇದಕ್ಕೆ ಹಲವಾರು ಕಾರಣಗಳಿವೆ,

* ಅಧಿಕಾರದ ಮೇಲಿನ ವ್ಯಾಮೋಹ
* ದಕ್ಷತೆ ಇಲ್ಲದೇ ಇರುವುದು
* ಭ್ರಷ್ಟ ವ್ಯವಸ್ಥೆಯಿಂದ ಹಣಗಳಿಸಿ ಅದರ ಬೆನ್ನ ಹತ್ತಿರುವುದು
* ರಾಜಕೀಯ ಹಸ್ತಕ್ಷೇಪ
* ಒತ್ತಡ ಗುಂಪುಗಳ ಪ್ರಭಾವದಿಂದ
* ವೃತ್ತಿಪರತೆ ಇಲ್ಲದೇ ಇರುವುದು
* ಸೇವಾ ಮನೋಭಾವ ಕೊರತೆ
* ಪ್ರಾದೇಶಿಕ ಸಮಾನತೆ
* ಸಾಮಾಜಿಕ ಅಂಶಗಳು
* ರಾಷ್ಟ್ರೀಯ ಬದ್ದತೆ ಇಲ್ಲದೇ ಇರುವುದು

ಇತ್ಯಾದಿ ಅಂಶಗಳು.

**7) "ರಕ್ಷಕರೇ ಭಕ್ಷಕರಾದಾಗ ಶಿಕ್ಷೆಯು ಯಾರಿಗೆ" ಈ ಮಾತನ್ನು ಸ್ಪಷ್ಟೀಕರಿಸಿರಿ. ಉದಾಹರಣೆ ಸಹಿತ ವಿವರಿಸಿ. ಸೂಕ್ತ ಪರಿಹಾರಗಳನ್ನು ತಿಳಿಸಿ.**

**ಉತ್ತರ:** "ಬೇಲಿಯೇ ಎದ್ದು ಹೊಲ ಮೇಯ್ದಂತೆ" ಅಂದರೆ ರಕ್ಷಣೆ ಮಾಡಬೇಕಾದವರೇ ಅದನ್ನು ನಾಶ ಮಾಡಲು ನಿಂತಾಗ ವ್ಯವಸ್ಥೆ ಅದೋಪತನಕ್ಕೆ ದಾರಿಯಾಗುತ್ತದೆ. ಇದಕ್ಕೆ ಪರ್ಯಾಯವಾಗಿ ಹೇಳುವುದಾದರೆ "ರಕ್ಷಕರೇ ಭಕ್ಷಕರಾದಾಗ ಶಿಕ್ಷೆಯು ಯಾರಿಗೆ" ಎನ್ನಬಹುದು. ಏಕೆಂದರೆ ಇಂದಿನ ಕರ್ನಾಟಕದ ಲೋಕಾಯುಕ್ತ ಸ್ಥಿತಿಯನ್ನು ಗಮನಿಸಿದರೆ ಭ್ರಷ್ಟಾಚಾರ ವ್ಯವಸ್ಥೆಗೆ ಕಡಿವಾಣ ಹಾಕಿ ಸಮಾಜದಲ್ಲಿ ನಿಷ್ಪಕ್ಷಪಾತ, ಭ್ರಷ್ಟರಹಿತ ಆಡಳಿತಕ್ಕೆ ಅನುಕೂಲ ಮಾಡಿಸಿಕೊಡುವ ವ್ಯವಸ್ಥೆಯೇ ಲಕ್ಷ ಲಕ್ಷ ರೂಪಾಯಿ ಭ್ರಷ್ಟಾಚಾರದಲ್ಲಿ ಭಾಗಿಯಾಗುವಾಗ ಶಿಕ್ಷೆಯನ್ನು ಯಾರು ಯಾರಿಗೆ ಕೊಡುವುದು ಎಂದು ಅವಲೋಕಿಸಬೇಕಾಗಿದೆ.

ಕರ್ನಾಟಕದಲ್ಲಿ ಸದ್ಯ ಲೋಕಾಯುಕ್ತರ ಮಗನೇ ಖುದ್ದಾಗಿ ರಾಜ್ಯದ ಅಧಿಕಾರಗಳಲ್ಲಿ ಬೃಹತ್ ಹಣಕ್ಕೆ ಬೇಡಿಕೆ ಇಟ್ಟು ಸಿಕ್ಕಿ ಹಾಕಿಕೊಂಡಿರುವುದು ಜ್ವಲಂತ ಉದಾಹರಣೆ ಇದೆ. ಆದ್ದರಿಂದ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ತಡೆಯುವ ಸಂಸ್ಥೆಯೇ ಅದರಲ್ಲಿ ಭಾಗಿಯಾದಾಗ ಅದನ್ನು ನಿರ್ಮೂಲನೆ ಮಾಡುವುದು ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಆದ್ದರಿಂದ ಇದಕ್ಕೆ ಸೂಕ್ತ ಕಾನೂನು ಕ್ರಮಗಳನ್ನು ಸುಧಾರಿಸಿಕೊಳ್ಳುವ ಅಗತ್ಯತೆ ಇದೆ.

* ಲೋಕಾಯುಕ್ತ ಕಾನೂನಿಗೆ ತಿದ್ದುಪಡಿ ತರಬೇಕು. ಲೋಕಾಯುಕ್ತ ಕಛೇರಿಯೇ ಭ್ರಷ್ಟಾಚಾರದಲ್ಲಿ ಭಾಗಿಯಾದಾಗ ಶಿಕ್ಷಿಸುವ ಅಧಿಕಾರವನ್ನು ಉನ್ನತ ನ್ಯಾಯಾಲಯಕ್ಕೆ ನೀಡುವುದು
* ಲೋಕಾಯುಕ್ತರನ್ನು ಪದಚ್ಯುತಗೊಳಿಸುವ ಕಾನೂನಿಗೆ ತಿದ್ದುಪಡಿ ತರಬೇಕು
* ಲೋಕಾಯುಕ್ತ ವರದಿಯನ್ನು ಕಾಲಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸಿ ಶಾಸನ ಸಭೆಯಲ್ಲಿ ಮಂಡಿಸಬೇಕು
* ಲೋಕಾಯುಕ್ತರ ನೇಮಕಾತಿಯಲ್ಲಿ ರಾಜಕೀಯ ಹಸ್ತಕ್ಷೇಪವಾಗಬಾರದು
* ಭ್ರಷ್ಟಾಚಾರದಲ್ಲಿ ಭಾಗಿಯಾದ ಅಧಿಕಾರಿಗಳಿಗೆ ಶಿಕ್ಷಿಸುವ ಅಧಿಕಾರವನ್ನು ಲೋಕಾಯುಕ್ತಕ್ಕೆ ನೀಡಬೇಕು

ಇತ್ಯಾದಿ ಕ್ರಮಗಳು.

**8) "ಪ್ರಾಮಾಣಿಕತೆಯು ಖಾದಿ ಮತ್ತು ಖಾಕಿಯೊಂದಿಗೆ ಇರಲಾರದು" ಎಂಬುದನ್ನು ಒಪ್ಪುತ್ತೀರಾ? ಈ ಹೇಳಿಕೆಯನ್ನು ಪರಿಶೀಲಿಸಿರಿ.**

**ಉತ್ತರ:** ಪ್ರಾಮಾಣಿಕತೆಯು ಖಾದಿ ಮತ್ತು ಖಾಕಿಯೊಂದಿಗೆ ಇರಲಾರದು ಎನ್ನುವುದು ಇತ್ತೀಚೆಗೆ ತುಂಬಾ ಪ್ರಚಲಿತವಾಗಿದೆ. ಅಂದರೆ ರಾಜಕೀಯ ವ್ಯವಸ್ಥೆ ಮತ್ತು ಪೋಲೀಸ್ ವ್ಯವಸ್ಥೆಯಲ್ಲಿ ಪ್ರಾಮಾಣಿಕತೆ ಮರೀಚಿಕೆಯಾಗಿದೆ ಎನ್ನುವುದಕ್ಕಿಂತ ಅಲ್ಲಿನ ವ್ಯವಸ್ಥೆ ಅವರನ್ನು ಅಪ್ರಾಮಾಣಿಕರನ್ನಾಗಿ ಬದಲಾಯಿಸಿದೆ ಎನ್ನಬಹುದು.

ರಾಜಕೀಯ ವ್ಯವಸ್ಥೆಯನ್ನು ಗಮನಿಸಿದಾಗ,

ಇಂದಿನ ಚುನಾವಣೆಯೆಲ್ಲವು ಜಾತಿ, ಆಧಾರಿತವಾಗಿ ನಡೆಯುತ್ತಿದ್ದು, ಜಾತಿ / ಧರ್ಮಗಳೇ ರಾಜ್ಯವನ್ನು ಆಳುತ್ತಿವೆ ಎನ್ನುವಂಥಹ ಸ್ಥಿತಿ ನಿರ್ಮಾಣವಾಗಿ ರಾಜಕಾರಣಿಗಳಲ್ಲಿ ಅಪ್ರಾಮಾಣಿಕತೆ, ಸ್ವಜನ ಪಕ್ಷಪಾತ, ಅದಕ್ಷತೆ ಹೆಚ್ಚಾಗಿದೆ ಎನ್ನಬಹುದು.

ಇದರ ಹೊರತು ನಾವು ಅನೇಕ ಪ್ರಾಮಾಣಿಕ ರಾಜಕಾರಣಿಗಳನ್ನು ಕಾಣಬಹುದು. ಲಾಲ್ ಬಹದ್ದೂರ್ ಶಾಸ್ತ್ರಿ, ಸರ್ಧಾರ್ ಪಟೇಲ್, ಅಟಲ್‌ಜೀ ಅಂತಹ ಅನೇಕ ಪ್ರಾಮಾಣಿಕ ರಾಜಕಾರಣಿಗಳನ್ನು ಕಾಣಬಹುದಾಗಿದೆ ಮತ್ತು ಅವರಿಗೆ ನೈತಿಕತೆಯ ಮಹತ್ವವನ್ನು ತಿಳಿಸುವುದರ ಮೂಲಕ ವ್ಯವಸ್ಥೆಯನ್ನು ಸುಧಾರಿಸಬೇಕಾಗಿದೆ.

ಪೋಲೀಸ್ ವ್ಯವಸ್ಥೆಯನ್ನು ಗಮನಿಸಿದರೆ ದಿನಾಲು ಬೆಳಗಾದರೆ ಅವರು ಕಳ್ಳರ, ಖೈದಿಗಳ ಕೊಲೆಗಾರರೊಂದಿಗೆ ವ್ಯವಹರಿಸಬೇಕಾಗಿದೆ. ಅಷ್ಟರ ಮಟ್ಟಿಗೆ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ. ಇವು ಪರೋಕ್ಷವಾಗಿ ಪೋಲೀಸ್ ವ್ಯವಸ್ಥೆ ಮೇಲೆ ಪ್ರಭಾವ ಬೀರಿವೆ. ಅಂದರೆ ಒತ್ತಡ ಗುಂಪುಗಳ ಪ್ರಭಾವ, ರಾಜಕೀಯ ಹಸ್ತಕ್ಷೇಪ, ಅಲ್ಲಿನ ಅಧಿಕಾರಿಗಳನ್ನು ಅಪ್ರಾಮಾಣಿಕರನ್ನಾಗಿ ನಿರ್ಮಾಣ ಮಾಡುತ್ತಿದೆ.

ಪೋಲೀಸ್ ವ್ಯವಸ್ಥೆಯಲ್ಲೂ ಅನೇಕ ಪ್ರಾಮಾಣಿಕ ಅಧಿಕಾರಿಗಳನ್ನು ಕಾಣಬಹುದಾಗಿದೆ. ಕರ್ನಾಟಕದಲ್ಲಿ ಸೋನಿಯಾ ನಾರಂಗ, ಅಸ್ಸಾಂನಲ್ಲಿ ಶ್ವೇತಾ ಬನ್ಸಾಲ್, ಟೈಗರ್ ಅಶೋಕರಂತಹ ಅನೇಕ ಪ್ರಾಮಾಣಿಕ ದಕ್ಷ ಅಧಿಕಾರಿಗಳನ್ನು ಕಾಣಬಹುದಾಗಿದೆ.

ಇಂದಿನ ವ್ಯವಸ್ಥೆ ಮಾನವೀಯ ಮೌಲ್ಯಗಳಿಗೆ, ಮಹತ್ವ ನೀಡುವಂತಾಗಿ ನೈತಿಕ ನೆಲೆಗಟ್ಟಿನಲ್ಲಿ ನೋಡುವಂತಾಗಬೇಕು. ಅಂದಾಗ ಒಳ್ಳೆಯ ಪ್ರಾಮಾಣಿಕ, ದಕ್ಷ, ಪಾರದರ್ಶಕ, ಅಧಿಕಾರಿಗಳನ್ನು ಮತ್ತು ರಾಜಕಾರಣಿಗಳನ್ನು ಸೃಷ್ಟಿಸಬಹುದಾಗಿದೆ.

**9) ನಿಮ್ಮ ದೃಷ್ಟಿಯಲ್ಲಿ ಸುಖ ಅಥವಾ ನೆಮ್ಮದಿಯ ಪರಿಭಾಷೆ ಏನು? ಸರ್ವರ ಸುಖದ ಕುರಿತು ನಿಮ್ಮ ಅಭಿಪ್ರಾಯ ಏನು? ಈ ಮನೋಭಾವ ಕಡಿಮೆ ಆಗಲು ಕಾರಣಗಳು ಯಾವುವು? ವಿವರಿಸಿರಿ.**

**ಉತ್ತರ:** ಸರ್ವೇ ಜನ ಸುಖಿನೋ ಭವಂತು" ಎಂದರೆ ಎಲ್ಲರೂ ಸುಖವಾಗಿದ್ದರೆ ನಾವು ಸುಖವಾಗಿರಬಹುದೆಂದು ಸೂಚಿಸುತ್ತದೆ. ಆದರೆ ಇಂದಿನ ವ್ಯವಸ್ಥೆಯಲ್ಲಿ ನಾನು ಮಾತ್ರ ಸುಖವಾಗಿದ್ದರೆ ಸಾಕು ಎನ್ನುವಂಥ ವಾತಾವರಣ ಸೃಷ್ಟಿಯಾಗಿದೆ. ಆದರೆ ಇದು ಕಷ್ಟ ಸಾಧ್ಯ. ನಮ್ಮ ಸುತ್ತಲಿನ ಜನ ನೆಮ್ಮದಿಯಿಂದ ಇದ್ದರೆ ಮಾತ್ರ ನಾವು ನೆಮ್ಮದಿಯಿಂದ ಇರಬಹುದು. ಅಂದರೆ ಪರರ ಹಿತವೇ ನಮ್ಮ ಹಿತ ಎನ್ನುವಂಥ ಭಾವನೆ ಮೂಡುವುದು ಅವಶ್ಯಕವಾಗಿದೆ. ನಮ್ಮಲ್ಲಿ ಮಾನವೀಯತೆ, ನೈತಿಕತೆ, ತುಂಬಾ ಅವಶ್ಯವಾಗಿದೆ. ಇದಲ್ಲದೆ ಸಮಾಜದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿದೆ. ಇದು ಮರೀಚಿಕೆಯಾಗಿ ಬೆಳೆದಿರುವ ಕೊಡುವ ಕಾರಣಗಳು,

* ಸ್ವಾರ್ಥತೆಯಿಂದ ಕೂಡಿದ ಜನರ ಭಾವನೆ
* ನಾನು, ನಂದು, ನನಗೆ ಬೇಕು ಎಂಬ ಮನೋಧೋರಣೆಯಿಂದ ಮಾನವ ಒಂಟಿಯಾಗಿರುವುದು
* ಆಸ್ತಿ ಅಂತಸ್ತು ಗಳಿಕೆಯಿಂದಲೇ ಸಮಾಜದಲ್ಲಿ ಗೌರವ ಪಡೆಯುವ ಭಾವನೆ
* ಅನುಕಂಪ, ಪರಾನುಭೂತಿ, ಸಹಾನುಭೂತಿ ಇಲ್ಲದಿರುವುದು
* ಇಂದಿನ ಅಧಿಕಾರಿಗಳಲ್ಲಿನ ಅಪ್ರಾಮಾಣಿಕತೆ ಅದಕ್ಷತೆ
* ಸಮಾಜದಲ್ಲಿನ ಮೂಢನಂಬಿಕೆ / ಜಾತಿ ವ್ಯವಸ್ಥೆ

ಇತ್ಯಾದಿ ಅಂಶಗಳು.

**10) ನೀವು ಭ್ರಷ್ಟಾಚಾರ ಪ್ರಕರಣವೊಂದರ ತನಿಖಾಧಿಕಾರಿಯಾಗಿದ್ದು ತನಿಖೆ ನಡೆಸುವಾಗ ನಿಮಗೆ ಅತೀ ಹತ್ತಿರದ ವ್ಯಕ್ತಿಯೇ ಇದರಲ್ಲಿ ಭಾಗಿಯಾಗಿದ್ದಾನೆಂದು ತಿಳಿದ ನಂತರ, ಕೈಗೊಳ್ಳಬಹುದಾದ ಕೆಳಗಿನ ಆಯ್ಕೆಗಳನ್ನು ವಿಶ್ಲೇಷಿಸಿರಿ.**

**ಅ) ಪ್ರಕರಣವನ್ನು ಬೇರೆಯವರಿಗೆ ಹಸ್ತಾಂತರಿಸುತ್ತೀರಿ**

**ಆ) ನಿಮ್ಮ ಹತ್ತಿರದ ವ್ಯಕ್ತಿಯನ್ನು ರಕ್ಷಿಸುತ್ತೀರಿ**

**ಇ) ಯಾರನ್ನು ರಕ್ಷಿಸುವುದಿಲ್ಲ**

**ಈ) ನೀವು ಕೈಗೊಳ್ಳಬಹುದಾದ ಕಾರ್ಯ.**

**ಉತ್ತರ:** ನಾನು ಭ್ರಷ್ಟಾಚಾರ ಪ್ರಕರಣವೊಂದರ ತನಿಖಾಧಿಕಾರಿಯಾಗಿದ್ದು ತನಿಖೆ ನಡೆಸುವಾಗ ನನಗೆ ಅತೀ ಹತ್ತಿರದ ವ್ಯಕ್ತಿಯೇ ಇದರಲ್ಲಿ ಭಾಗಿಯಾಗಿದ್ದಾನೆಂದು ತಿಳಿದರೂ ಸಹಿತ ಈ ಕೆಳಗಿನ ಕೆಲವೊಂದು ಸೂಕ್ತ ಕ್ರಮಗಳಿಂದ ಈ ಪ್ರಕರಣವನ್ನು ನಿಭಾಯಿಸುತ್ತೇನೆ.

* ಯಾವುದೇ ಕಾರಣಕ್ಕೂ ಪ್ರಕರಣವನ್ನು ಅರ್ಧಕ್ಕೆ ಬೇರೆ ಅಧಿಕಾರಿಗಳಿಗೆ ಹಸ್ತಾಂತರಿಸುವುದಿಲ್ಲ. ಏಕೆಂದರೆ ಇದರಿಂದ ನನ್ನಲ್ಲಿನ ಅಧಕ್ಷತೆಯನ್ನು ತೋರೆಸುತ್ತದೆ. ಆದ್ದರಿಂದ ಈ ತನಿಖೆಯನ್ನು ನಾನೇ ಖುದ್ದಾಗಿ ಸಮರ್ಪಕವಾಗಿ ತನಿಖೆ ಮಾಡುತ್ತೇನೆ

* ಇಲ್ಲ, ಈ ರೀತಿ ಮಾಡಲು ಸಾಧ್ಯವಿಲ್ಲ. ಏಕೆಂದರೆ ಅವನು ನನಗೆ ಹತ್ತಿರ ವ್ಯಕ್ತಿಯಾಗಿರಬಹುದು. ಆದರೆ ಕಾನೂನಿನ ಮುಂದೆ ಎಲ್ಲರೂ ಸಮಾನರು, ಎಲ್ಲವನ್ನು ಸಮಗ್ರವಾಗಿ ತನಿಖೆ ಮಾಡಿ ಯಾರೇ ಆಗಲಿ ತಪ್ಪಿತಸ್ಥರ ವಿರುದ್ದ ನಿಖರತೆಯಿಂದ ಕೂಡಿದ ವರದಿ ತಯಾರಿಸುತ್ತೇನೆ

* ಹೌದು, ಶಾಮೀಲಾದ ಯಾವುದೇ ವ್ಯಕ್ತಿಯನ್ನು ರಕ್ಷಿಸುವ ಮನಸ್ಸಿಲ್ಲ ಎನ್ನುವುದಕ್ಕಿಂತ ತಪ್ಪಿತಸ್ಥರು ಯಾರೇ ಆಗಿರಲಿ ಅವರ ವಿರುದ್ದ ನಿಷ್ಪಕ್ಷಪಾತ ಪ್ರಾಮಾಣಿಕತೆಯಿಂದ ಕೂಡಿದ ತನಿಖೆಯನ್ನು ಮಾಡಿ ವಸ್ತು ನಿಷ್ಟ ವರದಿ ತಯಾರಿಸುತ್ತೇನೆ

* ಈ ಬಗ್ಗೆ ನನಗೆ ಬೇಕಾದವರೊಂದಿಗೆ ಅನ್ನುವುದಕ್ಕಿಂತ ಹಿರಿಯ ಅಧಿಕಾರಿಗಳು ಮತ್ತು ಕಾನುನು ತಜ್ಞರಿಂದ ಮಾಹಿತಿ ಪಡೆದು ವರದಿ ಸಲ್ಲಿಸುತ್ತೇನೆ. ಆ ವ್ಯಕ್ತಿ ನನಗೆ ಅತೀ ಹತ್ತಿರ ವ್ಯಕ್ತಿಯಾಗಿದ್ದರೂ ಅವನನ್ನು ಕರೆಸಿ ಕಾನೂನಿನ ಮುಂದೆ ಎಲ್ಲರೂ ಸಮಾನರು ಮತ್ತು ನೀನು ಭಾಗಿಯಾಗಿಲ್ಲವೆಂದು ಸಾಕ್ಷಿ ಸಮೇತ ರುಜುವಾತು ಪಡಿಸಲು ಅವಕಾಶ ನೀಡುತ್ತೇನೆ. ಆರೋಪ ಸಾಬೀತಾದರೆ ಕಾನೂನು ಕ್ರಮಕ್ಕೆ ಶಿಫಾರಸ್ಸು ಮಾಡುತ್ತೇನೆ.

**11) ಒಂದು ವೇಳೆ 14ಕ್ಕಿಂತ ಕಡಿಮೆ ವಯಸ್ಸಿನ ಬಾಲಕ ನಿಮ್ಮ ಕಛೇರಿಯಲ್ಲಿ ಕೆಲಸ ಮಾಡುವುದು ಕಂಡು ಬಂದರೆ ನೈತಿಕ ನೆಲೆಯಲ್ಲಿ ಯಾವ ಪರಿಹಾರ ಕಂಡುಕೊಳ್ಳುತ್ತೀರಿ?**

**ಉತ್ತರ:** ಭಾರತೀಯ ಸಂವಿಧಾನದ ಅಡಿಯಲ್ಲಿ ಬಾಲಕಾರ್ಮಿಕತೆ ಅಂದರೆ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ಸೇರಿಸುವುದು ಅಪರಾಧವೇ ಸರಿ. ಜೊತೆಗೆ ಇಂತಹ ಸನ್ನಿವೇಶಗಳನ್ನು ನಾವು ದಿನನಿತ್ಯದಲ್ಲಿ ಕಾಣುತ್ತಿದ್ದೇವೆ ಮತ್ತು ಒಂದು ವೇಳೆ 14ಕ್ಕಿಂತ ಕಡಿಮೆ ವಯಸ್ಸಿನ ಬಾಲಕ ನನ್ನ ಕಛೇರಿಯಲ್ಲಿ ಕೆಲಸ ಮಾಡುವುದು ಕಂಡು ಬಂದರೆ ಈ ಕೆಳಗಿನ ನೈತಿಕ ನೆಲೆಯಲ್ಲಿ ಅದಕ್ಕೆ ಪರಿಹಾರ ಕಂಡುಕೊಳ್ಳುತ್ತೇನೆ

* ಅವನ ಪೋಷಕರನ್ನು ಕರೆಸಿ ತಿಳುವಳಿಕೆ ಹೇಳಿ ಮತ್ತು ಅದು ಅಪರಾಧವೆಂದು ತಿಳಿಸಿ, ಪಾಲಕರ ಕರ್ತವ್ಯ ಅಂದರೆ ವಿಧಿ 51(ಎ)(ಕೆ) ಪ್ರಕಾರ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಅವರ ಕರ್ತವ್ಯವಾಗಿದೆ ಎಂಬುದನ್ನು ಮನವರಿಕೆ ಮಾಡುತ್ತೇನೆ

* ಅವನ ಕುಟುಂಬ ಆರ್ಥಿಕ ಸಂಕಷ್ಟದಲ್ಲಿ ಇದ್ದರೆ ಎಮ್.ಜಿ.ಎನ್.ಆರ್.ಇ.ಜಿ.ಎಸ್ ನಂತಹ ಯೋಜನೆಯಲ್ಲಿ ಅವರಿಗೆ ಕೆಲಸ ಒದಗಿಸುತ್ತೇನೆ

* ಒಂದು ವೇಳೆ ಪೋಷಕರು ಅಂಗವಿಕಲರು, ಅಶಕ್ತರು, ವಿಧವೆ, ವೃದ್ಧರಾಗಿದ್ದರೆ ಅವರಿಗೆ ಮಾಸಿಕ ಪಿಂಚಣಿಯ ವ್ಯವಸ್ಥೆಯನ್ನು ಮಾಡುತ್ತೇನೆ

* ಈ ಬಾಲಕನಿಗೆ ಸರ್ಕಾರಿ ಶಾಲೆಗೆ ಸೇರಿಸಿ ಖರ್ಚು ವೆಚ್ಚವನ್ನು ನಿಭಾಯಿಸುತ್ತೇನೆ ಮತ್ತು ಅವನನ್ನು ಸರ್ಕಾರಿ ವಸತಿ ನಿಲಯದಲ್ಲಿ ಸೇರಿಸುತ್ತೇನೆ

ಇತ್ಯಾದಿ ಕ್ರಮಗಳು.

**12) ನೀವೊಬ್ಬ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಯಾಗಿ ಸೇವೆ ಸಲ್ಲಿಸುವಾಗ ಮಹಿಳೆಯರ ವಿರುದ್ಧ ನಡೆಯುತ್ತಿರುವ ಶೋಷಣೆಯನ್ನು ಅನೇಕ ಮಾಧ್ಯಮದ ಮೂಲಕ ಗಮನಿಸುತ್ತೀರಿ ಮತ್ತು ಒಂದು ಸನ್ನಿವೇಶದಲ್ಲಿ ಮಹಿಳೆಯರ ಮಾರಾಟ ಜಾಲವನ್ನೇ ಪತ್ತೆ ಹಚ್ಚಿದಾಗ ಇದರಲ್ಲಿ ಶಾಮೀಲಾದ ಒಬ್ಬ ಪ್ರಭಾವಿ ವ್ಯಕ್ತಿ ನಿಮಗೆ ಜೀವ ಬೆದರಿಕೆ ಹಾಕಿದ್ದು ಇಂತಹ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಪ್ರಮುಖ ಕ್ರಮಗಳು ಯಾವುವು?**

**ಉತ್ತರ:** ನಾನೊಬ್ಬ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಯಾಗಿ ಸೇವೆ ಸಲ್ಲಿಸುವಾಗ ಮಹಿಳೆಯರ ವಿರುದ್ಧ ನಡೆಯುತ್ತಿರುವ ಶೋಷಣೆಯನ್ನು ಅನೇಕ ಮಾಧ್ಯಮದ ಮೂಲಕ ಗಮನಿಸುತ್ತೇನೆ ಮತ್ತು ಒಂದು ಸನ್ನಿವೇಶದಲ್ಲಿ ಮಹಿಳೆಯರ ಮಾರಾಟ ಜಾಲವನ್ನೇ ಪತ್ತೆ ಹಚ್ಚಿದಾಗ ಇದರಲ್ಲಿ ಶಾಮೀಲಾದ ಒಬ್ಬ ಪ್ರಭಾವ ವ್ಯಕ್ತಿ ನನಗೆ ಜೀವ ಬೆದರಿಕೆ ಹಾಕಿದ್ದು ಇಂತಹ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಪ್ರಮುಖ ಕ್ರಮಗಳು ಹೀಗಿವೆ,

* ಮೊದಲು ಅವನನ್ನು ಮಾತುಕತೆಗೆ ಆಹ್ವಾನಿಸಿ ಮಹಿಳೆಯರ ವಿರೋಧದ ಅಪರಾಧಕ್ಕೆ ದೇಶದಲ್ಲಿ ಇರುವ ಕಾನೂನು ಮತ್ತು ಕಠಿಣ ಶಿಕ್ಷೆಯನ್ನು ಮನವರಿಕೆ ಮಾಡುವುದು

* ಜೊತೆಗೆ ನಿನ್ನ ತಾಯಿ / ತಂಗಿ ಎಲ್ಲರೂ ಮಹಿಳೆಯರೇ. ಒಂದು ವೇಳೆ ಈ ಘಟನೆ ನಿಮ್ಮ ಮನೆಯಲ್ಲಿ ನಡೆದರೆ ನಿನಗೆ ಹೇಗಾಗುತ್ತದೆ ಎಂದು ಭಾವನಾತ್ಮಕವಾಗಿ ತಿಳಿಸಿ ಹೇಳುವುದರ ಮೂಲಕ ಮನವೊಲೈಕೆ ಮಾಡುವುದು

* ಇದಕ್ಕೂ ಮೀರಿ ಅದೇ ಕೆಲಸದಲ್ಲಿ ಮುಂದುವರೆದು ನನಗೆ ಜೀವ ಬೆದರಿಕೆಗೆ ಮುಂದಾದರೆ ಪೋಲೀಸ್ ಹಿರಿಯ ಅಧಿಕಾರಿಗಳಿಗೆ ಖುದ್ದಾಗಿ ದೂರು ನೀಡಿ ಅದರ ತನಿಖೆಗೆ ಬೇಕಾದ ಎಲ್ಲಾ ಮಾಹಿತಿಯನ್ನು ನೀಡುವುದು ಮತ್ತು ತನಗೆ ಪೋಲೀಸ್ ಭದ್ರತೆಯನ್ನು ಪಡೆಯುವುದು

* ಅವನ ಮನೆ ಮೇಲೆ ದಾಳಿ ಮಾಡಿ ಅದಕ್ಕೆ ಪೂರಕ ದಾಖಲೆ / ಮಾಹಿತಿಯನ್ನು ಸಂಗ್ರಹಿಸಿ ಅವನಿಗೆ ಕಾನೂನು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿ

* ಪತ್ರಿಕಾಗೋಷ್ಠಿ ನಡೆಸಿ ಮುಂದೆ ಈ ತರಹ ಕೆಲಸವನ್ನು ಬೇರೆ ಯಾರೇ ಮಾಡಿದರೂ ಕಠಿಣ ಶಿಕ್ಷೆ ಕುರಿತು ಹೇಳುವುದು. ಇದರಿಂದ ಜನರಲ್ಲಿ ಜಾಗೃತಿ ಮೂಡಿಸುವುದು

* ಯಾವುದೇ ಬಾಹ್ಯ ಒತ್ತಡಕ್ಕೆ ಮಣಿಯದೇ ಕಾರ್ಯ ನಿರ್ವಹಿಸಿ ಮಹಿಳೆಯರಿಗೆ ಸೂಕ್ತ ವಸತಿ / ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಿ ಕೊಡುವುದು

* 24*7 ಮಹಿಳಾ ಸಹಾಯವಾಣಿ ತೆರೆಯುವುದು. ದೂರುಗಳಿಗೆ ತಕ್ಷಣ ಸ್ಪಂದಿಸುವುದು

ಇತ್ಯಾದಿ ಕ್ರಮಗಳಿಂದ ಮಹಿಳಾ ಶೋಷಣೆಯನ್ನು ತಡೆಗಟ್ಟಲು ಪ್ರಯತ್ನಿಸುತ್ತೇನೆ.

**13) ಭಾರತದಲ್ಲಿ ಲೋಕಪಾಲ್, ಲೋಕಾಯುಕ್ತ ಕೇಂದ್ರೀಯ ಜಾಗೃತ ದಳ ಇತ್ಯಾದಿ ಸಂಸ್ಥೆಗಳು ಭ್ರಷ್ಟಾಚಾರ ನಿಯಂತ್ರಿಸುವಲ್ಲಿ ಮಹತ್ತರ ಕಾರ್ಯ ನಿರ್ವಹಿಸುತ್ತಿವೆ. ಆದರೂ ಸಮರ್ಪಕವಾಗಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಸಾಧ್ಯವಾಗುತ್ತಿಲ್ಲ. ಇವುಗಳನ್ನು ಹೊರತಾಗಿ ಬಾಹ್ಯವಾಗಿ ಭ್ರಷ್ಟಾಚಾರವನ್ನು ನಿಯಂತ್ರಿಸಲು ಕೆಲವೊಂದು ಮಾರ್ಗೋಪಾಯಗಳು ಇವೆಯೇ? ಇದ್ದರೆ ಯಾವುವು? ವಿವರಿಸಿ.**

**ಉತ್ತರ:** ಭಾರತದಲ್ಲಿ ಲೋಕಪಾಲ್, ಲೋಕಾಯುಕ್ತ ಕೇಂದ್ರೀಯ ಜಾಗೃತ ದಳ ಇತ್ಯಾದಿ ಸಂಸ್ಥೆಗಳು ಭ್ರಷ್ಟಾಚಾರ ನಿಯಂತ್ರಿಸುವಲ್ಲಿ ಮಹತ್ತರ ಕಾರ್ಯ ನಿರ್ವಹಿಸುತ್ತಿವೆ. ಆದರೂ ಸಮರ್ಪಕವಾಗಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಸಾಧ್ಯವಾಗುತ್ತಿಲ್ಲ. ಇವುಗಳನ್ನು ಹೊರತಾಗಿ ಬಾಹ್ಯವಾಗಿ ಭ್ರಷ್ಟಾಚಾರವನ್ನು ನಿಯಂತ್ರಿಸಲು ಕೆಲವೊಂದು ಮಾರ್ಗೋಪಾಯಗಳು,

* ಭ್ರಷ್ಟಾಚಾರ ಇರುವ ಮೂಲ ಸಮಾಜದಲ್ಲಿ ಅದರಿಂದ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ

* ಪಠ್ಯಪುಸ್ತಕಗಳಲ್ಲಿ ನೈತಿಕತೆ / ಮಾನವೀಯ ಮೌಲ್ಯಗಳನ್ನು ಬೋಧಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಭ್ರಷ್ಟ ರಹಿತ ಸಮಾಜ ನಿರ್ಮಾಣ ಮಾಡಲು ಶ್ರಮಿಸಬೇಕಾಗಿದೆ

* ಅಧಿಕಾರಿಗಳಿಗೆ ನೈತಿಕತೆ (ಮಾನವೀಯತೆ) ಬಗ್ಗೆ ತರಬೇತಿ ನೀಡುವುದು

* ಭ್ರಷ್ಟರಹಿತ ಆಡಳಿತ ನಿರ್ವಹಿಸಿದ ಅಧಿಕಾರಿಗಳನ್ನು ಸಂಸ್ಥೆಯ ಮುಖ್ಯಸ್ಥರನ್ನಾಗಿ ಮಾಡಿ ಕೆಳ ಅಧಿಕಾರಿಗಳ ಪ್ರಭಾವ ಬೀರುವುದು

* ರಾಜಕೀಯ ಹಸ್ತಕ್ಷೇಪವನ್ನು ಸಂಪೂರ್ಣವಾಗಿ ತಡೆಗಟ್ಟುವುದು

* ಸರ್ಕಾರವಿರುವುದು ಜನರಿಗಾಗಿ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸಿ ಸೇವೆಗಳನ್ನು ಉಚಿತವಾಗಿ ಪಡೆಯುವಂತೆ ಪ್ರೇರೇಪಿಸುವುದು

* ಜನರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳುವಳಿಕೆ ಮೂಡಿಸುವುದು

* ಭ್ರಷ್ಟಾಚಾರ ಘಟನೆಯನ್ನು ತಿಳಿಸಲು ಸಹಾಯವಾಣಿಯನ್ನು ಆರಂಭಿಸುವುದು

* ಭ್ರಷ್ಟಾಚಾರವನ್ನು ಬಯಲಿಗೆ ಎಳೆಯುವ ವ್ಯಕ್ತಿಗೆ ಸೂಕ್ತ ಸಂರಕ್ಷಣೆ ಒದಗಿಸುವುದು

* ಆರ್.ಟಿ.ಐ ಯಂಥಹ ಕಾನೂನುಗಳ ಮೂಲಕ ಜನರು ಮಾಹಿತಿಯನ್ನು ಪಡೆಯುವ ಮೂಲಕ ಪಾರದರ್ಶಕತೆಗೆ ನಾಂದಿಯಾಗಬೇಕು

**14) ಜಿಲ್ಲಾಧಿಕಾರಿಯು ರಾಜಕೀಯ ಪಕ್ಷಗಳ ಕುರಿತು ಯಾವ ರೀತಿಯ ಭಾವ ಹೊಂದಿರಬೇಕು. ಪಕ್ಷಪಾತತನದ ಬಗ್ಗೆ ನಿಮ್ಮ ಅಭಿಪ್ರಾಯ ಏನು? ನಿಷ್ಪಕ್ಷಪಾತತೆಯ ತತ್ವಗಳು ಯಾವುವು? ಚುನಾವಣೆಯಲ್ಲಿ ಜಿಲ್ಲಾಧಿಕಾರಿಯು ಹೇಗೆ ನಡೆದುಕೊಳ್ಳಬೇಕು? ವಿವರಿಸಿರಿ.**

**ಉತ್ತರ:** ಯಾವುದೇ ಸರ್ಕಾರಿ ಅಧಿಕಾರಿಯು ರಾಜಕೀಯ ಪಕ್ಷಗಳ ಕುರಿತು 'ನಿರಾಕಾರಿ'ಯಾಗಿ ತಟಸ್ಥ ಮನೋಭಾವನೆ ಹೊಂದಿರಬೇಕು. ಇದಕ್ಕೆ ಜಿಲ್ಲಾಧಿಕಾರಿಯು ಹೊರತಲ್ಲ. ತನ್ನ ಕರ್ತವ್ಯ ಪಾಲನೆಯಲ್ಲಿ ಕಾನೂನು ರೀತಿಯ ಯಾವುದೇ ಪಕ್ಷಪಾತತನದ ಧೋರಣೆ ಅನುಸರಿಸಬಾರದು. ನೈತಿಕ ನೆಲೆಯಲ್ಲಿಯೂ, ಕಾನೂನಿನ ನೆಲೆಯಲ್ಲಿಯೂ ಜಿಲ್ಲಾಧಿಕಾರಿಯ ಪಕ್ಷಪಾತದ ನಡವಳಿಕೆ ಖಂಡನಾರ್ಹ ಮತ್ತು ದಂಡನಾರ್ಹ.

**ನಿಷ್ಪಕ್ಷಪಾತತೆಯ ತತ್ವಗಳು:**

* ಪೂರ್ವಭಾವಿ ಸಭೆ ನಡೆಸಿ, ತಾನೂ ಪಕ್ಷಪಾತಿಯಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಬೇಕು

* ಯಾವ ಪಕ್ಷಕ್ಕೂ ಕಾನೂನನ್ನು ಮೀರಿ ನೆರವನ್ನು ನೀಡುವಂತಿಲ್ಲ

* ಎಲ್ಲ ಪಕ್ಷಗಳಿಗು ನೀತಿ ಸಂಹಿತೆ ಮುಂತಾದ ಕಾನೂನುಗಳನ್ನು ಸರಿಯಾಗಿ ಪಕ್ಷಪಾತವಿಲ್ಲದ ಅನುಸರಣೆ

* ಚುನಾವಣೆಯ ಪ್ರತಿ ಹಂತದಲ್ಲಿಯೂ ಕಿಂಚಿತ್ತು ಪಕ್ಷಪಾತತನವಾಗದಂತೆ ಜಾಗರೂಕತೆ ವಹಿಸಿಕೊಂಡು, ಜಿಲ್ಲಾಧಿಕಾರಿ ಕಛೇರಿಯ ಯಾವ ಅಧಿಕಾರಿಯು ಪಕ್ಷಪಾತ ಮಾಡದಂತೆ ಸೂಕ್ತವಾದ ಎಲ್ಲಾ ಕ್ರಮ ಕೈಗೊಳ್ಳುವುದು

* ಕಾನೂನು ರೀತಿಯ ಸಮಾನ ರಾಜಕೀಯ ಪ್ರಚಾರಕ್ಕೆ ಅವಕಾಶ ಕಲ್ಪಿಸುವುದು

* ಪಕ್ಷಪಾತವಿಲ್ಲದೇ ಚುನಾವಣಾ ಅಕ್ರಮಗಳನ್ನು ತಡೆಯುವುದು

* 24*7 ಸಹಾಯವಾಣಿಯ ಮೂಲಕ, ಜಿಲ್ಲೆಯ ಎಲ್ಲಾ ಇಲಾಖೆಗಳ ಸಹಯೋಗದೊಂದಿಗೆ, ದಕ್ಷತೆಯಿಂದ ಚುನಾವಣಾ ಪ್ರಕ್ರಿಯೆಯನ್ನು ಹಮ್ಮಿಕೊಂಡು ಯಶಸ್ವಿಗೊಳಿಸುವುದು

* ರಾಜಕೀಯತೆ ತಟಸ್ಥತೆಯ ಪಾಲನೆಯ ಮೂಲಕವೇ ಮೇಲಾಧಿಕಾರಿಗಳಿಗೆ ಈ ಮೂಲಕ ಮನವರಿಕೆ ಮಾಡಿಕೊಟ್ಟು, ಸರ್ವ ರೀತಿಯಲ್ಲಿಯೂ ಈ ತತ್ವಗಳನ್ನು ಅನುಸರಿಸುತ್ತೇನೆ.

# ಮಾದರಿ ಪ್ರಶ್ನೆ ಪತ್ರಿಕೆಗಳು

## ಪ್ರಶ್ನೆ ಪತ್ರಿಕೆ – 1

### 20 ಪ್ರಶ್ನೆಗಳು. ಎಲ್ಲವೂ ಕಡ್ಡಾಯ

### 20 * 12.5 = 250

**ಪ್ರತಿ ಪ್ರಶ್ನೆಗೂ 200 ಪದಗಳಿಗೆ ಮೀರದಂತೆ ಉತ್ತರಿಸಿ. ಉತ್ತರ ಎಷ್ಟು ದೀರ್ಘವಾಗಿದೆ ಎಂಬುದಕ್ಕಿಂತ ಏನು ಉತ್ತರ ಬರೆದಿದ್ದೀರಿ ಎಂಬುದು ಮುಖ್ಯ. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.**

1) ಸಾರ್ವಜನಿಕ ಸೇವೆಯ ಸುಧಾರಣೆಗಳನ್ನು ಮತ್ತು ಭಾರತದಲ್ಲಿ ಈ ಸುಧಾರಣೆಗಳ ಅವಶ್ಯಕತೆಯನ್ನು ವಿವರಿಸಿ.

2) ನಾಗರಿಕ ಸೇವಾ ನೀತಿ ಸಂಹಿತೆಯ ಅವಶ್ಯಕತೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

3) ಸಾರ್ವಜನಿಕ ಸೇವೆಯ ಮೇಲೆ ಸಾಮಾಜಿಕ ಪ್ರಭಾವವನ್ನು ಕುರಿತು ಚರ್ಚಿಸಿ.

4) ಸಾಮಾಜಿಕ ಪ್ರಭಾವ ಮತ್ತು ಮನವರಿಕೆ ಇವುಗಳ ನಡುವಣ ಸಂಬಂಧವನ್ನು ವಿವರಿಸಿ.

5) ಸಮಾಜವಾದಿ ಪರಿಕಲ್ಪನೆಯ ಬಗ್ಗೆ ಗಾಂಧಿ ಮತ್ತು ಮಾರ್ಕ್ಸ್ ನಿಲುವುಗಳಲ್ಲಿನ ವ್ಯತ್ಯಾಸವನ್ನು ಬರೆಯಿರಿ.

6) ಭಾರತದ ಪ್ರಜೆಗಳ ಮನೋಭಾವದ ಮೇಲೆ ಸ್ವದೇಶಿ ಚಳುವಳಿಯ ಉಗಮ ಮತ್ತು ಅದರ ಪ್ರಭಾವವನ್ನು ವಿಷಧೀಕರಿಸಿ.

7) ಸಾರ್ವಜನಿಕ ಮತ್ತು ಖಾಸಗಿ ಸಂಬಂಧಗಳಲ್ಲಿ ನೀತಿಗಳ ಪಾಲನೆಯ ಅವಶ್ಯಕತೆಯನ್ನು ವಿವರಿಸಿ.

8) ಸಾರ್ವಜನಿಕ ಪ್ರಶಾಸನದಲ್ಲಿ ಸಾರ್ವಜನಿಕ ನಿಧಿಯ ಸೂಕ್ತ ಬಳಕೆ ಮತ್ತು ಭ್ರಷ್ಟಾಚಾರದ ಸವಾಲುಗಳು ಪ್ರಸಕ್ತದಲ್ಲಿನ ಅತಿ ಮುಖ್ಯ ಸೂಕ್ಷ್ಮ ಅಂಶಗಳು. ಈ ಬಗ್ಗೆ ವಿಮರ್ಶಾತ್ಮಕವಾಗಿ ವಿವರಿಸಿ.

9) ಪ್ರಮುಖ ನಾಯಕರುಗಳ ಬದುಕು ಮತ್ತು ಬೋಧನೆಗಳ ಪಾಠಗಳು ಮಾನವ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದಕ್ಕೆ ಸಹಾಯಕಾರಿ ಎನ್ನುವುದನ್ನು ಸೂಕ್ತ ಉದಾಹರಣೆಗಳೊಡನೆ ವಿವರಿಸಿ.

10) ಸಾರ್ವಜನಿಕ ಪ್ರಶಾಸನದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಪಕ್ಷಪಾತತೆಯ ಪಾತ್ರವನ್ನು ವಿವರಿಸಿ.

11) ಆಡಳಿತಗಾರನ ಆಲೋಚನೆಗಳು ಮತ್ತು ವರ್ತನೆಗಳೊಂದಿಗೆ ಮೌಲ್ಯಗಳ ಸಂಬಂಧ ಮತ್ತು ಪ್ರಭಾವವನ್ನು ವಿವರಿಸಿ.

12) ಆಡಳಿತದಲ್ಲಿ ನೀತಿಯುತ ಮತ್ತು ನೈತಿಕ ಮೌಲ್ಯಗಳನ್ನು ಬಲಯುತಗೊಳಿಸಲು ಸೂಕ್ತ ಸಲಹೆಗಳನ್ನು ನೀಡಿರಿ.

13) ನೀತಿ ಮಾರ್ಗದರ್ಶನದ ಮೂಲವಾಗಿ ಮನ:ಸಾಕ್ಷಿಯಾಗಿ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳನ್ನು ಮೌಲ್ಯೀಕರಿಸಿರಿ.

14) ಮಾನವನ ಕಾರ್ಯಗಳಲ್ಲಿ ನೀತಿಗಳ ನಿರ್ಧಾರಕಗಳು ಮತ್ತು ಪರಿಣಾಮಗಳನ್ನು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿ.

15) ಸಾರ್ವಜನಿಕ ಆಡಳಿತದಲ್ಲಿ ಜವಾಬ್ದಾರಿ ಹೊರುವಿಕೆ ಮತ್ತು ನೀತಿಯುತ ಪ್ರಶಾಸನದ ಪ್ರಾಮುಖ್ಯತೆಯನ್ನು ವಿವರಿಸಿ.

16) ಸರ್ಕಾರದಲ್ಲಿನ ಪ್ರಸಕ್ತ ಪರಿಸ್ಥಿತಿಯಲ್ಲಿ ಸೇವಾ ಪೂರೈಕೆಯ ಗುಣಮಟ್ಟ ಮತ್ತು ನಡತೆಯ ಸಂಹಿತೆಗಳು ಅತಿ ಮುಖ್ಯ ಎಂಬುದನ್ನು ವಿವರಿಸಿ.

17) ನೀತಿಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಸುಧಾರಕರು ಮತ್ತು ಆಡಳಿತಗಾರರು ವ್ಯಕ್ತಿಗತ ಮಾದರಿಗಳಾಗಿರುವುದಕ್ಕೆ ಒಂದು ಟಿಪ್ಪಣಿಯನ್ನು ಬರೆಯಿರಿ.

18) ಸಾರ್ವಜನಿಕ ಸೇವೆಗಾಗಿ ಮನೋಭಾವ ಮತ್ತು ಮೂಲಭೂತ ಮೌಲ್ಯಗಳು ಅತ್ಯವಶ್ಯಕವೆಂಬುದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

19) ಸಾರ್ವಜನಿಕ ಪ್ರಶಾಸನದಲ್ಲಿ ನಾಗರಿಕ ಸನ್ನದು ಮತ್ತು ಮಾಹಿತಿ ಪ್ರಸರಣದ ಅಗತ್ಯತೆಯನ್ನು ವಿವರಿಸಿ.

20) ಸಾರ್ವಜನಿಕ ಆಡಳಿತದಲ್ಲಿ ದುರ್ಬಲ ವರ್ಗಗಳ ಬಗೆಗೆ ಸಹಿಷ್ಣುತೆ ಮತ್ತು ಸಹಾನುಭೂತಿ ಇವುಗಳು ಉತ್ತಮ ಆಡಳಿತಕ್ಕಾಗಿ ನೆರವಾಗುತ್ತವೆ. ಸೂಕ್ತ ಉದಾಹರಣೆಗಳೊಡನೆ ಮೌಲ್ಯೀಕರಿಸಿರಿ.

# ಮಾದರಿ ಪ್ರಶ್ನೆ ಪತ್ರಿಕೆ – 2

## 20 ಪ್ರಶ್ನೆಗಳು. ಎಲ್ಲವೂ ಕಡ್ಡಾಯ

## 20*12.5=250

**ಪ್ರತಿ ಪ್ರಶ್ನೆಗೂ 200 ಪದಗಳಿಗೆ ಮೀರದಂತೆ ಉತ್ತರಿಸಿ. ಉತ್ತರ ಎಷ್ಟು ದೀರ್ಘವಾಗಿದೆ ಎಂಬುದಕ್ಕಿಂತ ಏನು ಉತ್ತರ ಬರೆದಿದ್ದೀರಿ ಎಂಬುದು ಮುಖ್ಯ. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.**

1) ನಿಮ್ಮ ಪ್ರಕಾರ ಸಾರ್ವಜನಿಕ ಸೇವೆಗೆ ಅತ್ಯವಶ್ಯ ಗುಣಗಳು ಯಾವುವು? ಅವುಗಳನ್ನು ವಿವರಿಸಿ.

2) ನೈತಿಕತೆ ಎಂದರೇನು? ಇದು ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ಭಿನ್ನವಾಗಿರುವುದೇ? ಈ ಬಗ್ಗೆ ನಿಮ್ಮ ನಿಲುವುಗಳೇನು?

3) ಬಹಳಷ್ಟು ಅಧಿಕಾರಿಗಳು ನಿರ್ಧಾರ ಕೈಗೊಳ್ಳುವುದರಲ್ಲಿ ಹಿಂಜರಿಕೆಯನ್ನೂ, ಬದ್ದತೆಯಲ್ಲಿ ಕೊರತೆಯನ್ನೂ ಕಾಣುತ್ತೇವೆ. ಇವುಗಳನ್ನು ನೀವು ಹೇಗೆ ನಿಭಾಯಿಸುವಿರಿ.

4) ವಿವೇಚಿಸಿ.

ಅ) ಪ್ರಾಮಾಣಿಕತೆ

ಬ) ಸತ್ಯನಿಷ್ಟೆ

ಕ) ಸಮಯ ಪ್ರಜ್ಞೆ

ಡ) ನಿಷ್ಕಪಟತೆ

ಈ) ಮಾನವೀಯತೆ

5) ಸಾರ್ವಜನಿಕ ಆಡಳಿತದಲ್ಲಿ ಆಡಳಿತಗಾರರು ಕೇವಲ ಮೌಲ್ಯಗಳನ್ನಳವಡಿಸಿಕೊಂಡರಷ್ಟೇ ಸಾಲದು, ಜೊತೆಗೆ ಆಡಳಿತ ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಈ ಹೇಳಿಕೆಯನ್ನು ಮೌಲ್ಯಮಾಪನ ಮಾಡಿರಿ.

6) ಅಧಿಕಾರ ಕೈಯಲ್ಲಿಲ್ಲದ ಪ್ರತಿಯೊಬ್ಬ ವ್ಯಕ್ತಿಯೂ ಪ್ರಾಮಾಣಿಕನೆ. ಅಧಿಕಾರವಿರುವವರು ಅಪ್ರಮಾಣಿಕರೆನಿಸಿಕೊಳ್ಳಲು ಕಾರಣಗಳೇನು?

7) ವ್ಯವಸ್ಥೆಯೊಳಗೆ ಹೊಂದಾಣಿಕೆ ಮಾಡಿಕೊಂಡು, ಆರಾಮವಾಗಿ ಸೇವೆ ಸಲ್ಲಿಸಬೇಕು ಎನ್ನುವವರ ಕುರಿತು ವಿವೇಚಿಸಿ ಇದರ ಕುರಿತು ನಿಮ್ಮ ನಿಲುವೇನು?

8) ಸತ್ಯ ಅಹಿಂಸೆಗಳು ಹಿಮಾಲಯದಷ್ಟೇ ಹಳೆಯವು ಎಂದು ಗಾಂಧೀಜಿ ಹೇಳಿದ್ದಾರೆ? ಈ ಮೌಲ್ಯಗಳನ್ನು ಅಳವಡಿಸಿಕೊಂಡು ದೇಶದ ರಕ್ಷಣೆ ಮಾಡಬಹುದೇ? ಈ ದ್ವಂದ್ವವನ್ನು ನೀವು ಹೇಗೆ ನಿಭಾಯಿಸುವಿರಿ?

9) ಭಾರತದಲ್ಲಿ ಲೋಕಪಾಲ್, ಲೋಕಾಯುಕ್ತ, ಕೇಂದ್ರಿಯ ಜಾಗೃತ ದಳ ಇತ್ಯಾದಿ ಸಂಸ್ಥೆಗಳು ಭ್ರಷ್ಟಾಚಾರ ನಿಯಂತ್ರಿಸುವ ಕೆಲಸದಲ್ಲಿ ತೊಡಗಿವೆಯಾದರೂ ಒಟ್ಟು ಸಮಾಜದ ಭ್ರಷ್ಟಾಚಾರವನ್ನು ನಿಯಂತ್ರಿಸಲು ಇವುಗಳಿಂದ ಸಾಧ್ಯವಿಲ್ಲ. ಈ ಸಂಸ್ಥೆಗಳ ವ್ಯಾಪ್ತಿಯ ಹೊರಗಿರುವ ಭ್ರಷ್ಟಾಚಾರವನ್ನು ನಿಯಂತ್ರಿಸಲು ನಿಮ್ಮ ಬಳಿ ಇರುವ ಮಾರ್ಗೋಪಾಯಗಳೇನು?

10) ಎಂತಹ ಒಳ್ಳೆಯ ವ್ಯಕ್ತಿಗೂ ಸಮಾಜ ಒಪ್ಪಿಕೊಂಡ ಮೌಲ್ಯಗಳನ್ನು ಮೀರುವ ಕೆಲವು ಸಂದರ್ಭಗಳು ಬರುತ್ತವೆ. ನಿಮ್ಮ ಬದುಕಿನಲ್ಲಿ ಎದುರಾದ ಇಂತಹ ಒಂದೆರಡು ಸಂದರ್ಭಗಳನ್ನು ವಿವರಿಸಿ.

11) ನೀತಿಶಾಸ್ತ್ರದ ಆಯಾಮಗಳು ಯಾವುವು? ಚರ್ಚಿಸಿರಿ.

12) ಹೊಣೆಗಾರಿಕೆ ಮತ್ತು ನೈತಿಕ ಆಡಳಿತವನ್ನು ವಿವೇಚಿಸಿ.

13) ನೀತಿ ಶಾಸ್ತ್ರದ ಸಂಹಿತೆಗೂ, ನೀತಿ ಸಂಹಿತೆಗೂ ಏನು ವ್ಯತ್ಯಾಸ. ಈ ಕುರಿತು ಚರ್ಚಿಸಿ.

14) ಪ್ರಾಮಾಣಿಕತೆಯು ಖಾದಿ ಮತ್ತು ಖಾಕಿಯೊಂದಿಗೆ ಜೀವಿಸಲಾರರು ಎಂಬ ಅಭಿಪ್ರಾಯವಿದೆ. ನಿಮ್ಮ ಪ್ರತಿಕ್ರಿಯೆ ಏನು?

15) 'ಸರ್ವೇ ಜನ: ಸುಖಿನೋ ಭವಂತು' ಎಂಬುದು ಭಾರತದಲ್ಲಿ ಸಾವಿರಾರು ವರ್ಷಗಳಿಂದಲೂ ಹೇಳುತ್ತಾ ಬಂದಿರುವ ಮಾತು ಈಗಲೂ ಈ ಮಾತು ಮರೀಚಿಕೆಯಾಗಿಯೇ ಉಳಿದಿರುವುದಕ್ಕೆ ನೀವು ಕೊಡುವ ಕಾರಣಗಳೇನು?

16) ಆತ್ಮಸಾಕ್ಷಿಯ ಹೊಯ್ದಾಟದ ಕುರಿತು ಉದಾಹರಣೆ ಸಹಿತ ವಿವೇಚಿಸಿ.

17) ಈ ಕಲಿಗಾಲದಲ್ಲಿ ಪ್ರಾಮಾಣಿಕತೆಗೆ ಬೆಲೆ ಇದೆಯೇ? ಪ್ರಾಮಾಣಿಕತೆಗಿಂತ ಅಪ್ರಾಮಾಣಿಕತೆಯೇ ಪಾಲಿಸಲು ಸುಲಭ, ಅಲ್ಲವೇ? ಈ ಕುರಿತು ನಿಮ್ಮ ನಿಲುವುಗಳೇನು?

18) ಮಾಹಿತಿ ಹಕ್ಕು – ವಿವರಿಸಿ.

19) ನಾಗರಿಕ ಸನ್ನದು – ಚರ್ಚಿಸಿ.

20) ಸರ್ಕಾರದಲ್ಲಿ ಪಾರದರ್ಶಕತೆ – ಸಕಾಲ ವಿಮರ್ಶಿಸಿ.

# ಮಾದರಿ ಪ್ರಶ್ನೆ ಪತ್ರಿಕೆ – 3

**20 ಪ್ರಶ್ನೆಗಳು. ಎಲ್ಲವೂ ಕಡ್ಡಾಯ**

**20*12.5=250**

**ಪ್ರತಿ ಪ್ರಶ್ನೆಗೂ 200 ಪದಗಳಿಗೆ ಮೀರದಂತೆ ಉತ್ತರಿಸಿ. ಉತ್ತರ ಎಷ್ಟು ದೀರ್ಘವಾಗಿದೆ ಎಂಬುದಕ್ಕಿಂತ ಏನು ಉತ್ತರ ಬರೆದಿದ್ದೀರಿ ಎಂಬುದು ಮುಖ್ಯ. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.**

1) ಖಾಸಗಿ ಮತ್ತು ಸಾರ್ವಜನಿಕ ನೈತಿಕತೆಯಲ್ಲಿ ಸಾಮರಸ್ಯವನ್ನು ವಿವೇಚಿಸಿ.

2) ಭಾರತೀಯ ನಾಗರಿಕ ಸೇವೆಗಳಲ್ಲಿ ನೀವು ಬಯಸುವ ನೈತಿಕ ವಿಷಯಗಳು ಯಾವುವು? ಮತ್ತು ಏಕೆ? ವಿಶ್ಲೇಷಿಸಿರಿ.

3) ಹೊಣೆಗಾರಿಕೆ ಎಂದರೇನು? ಹೊಣೆಗಾರಿಕೆಯ ಮಹತ್ವವನ್ನು ಮೌಲ್ಯೀಕರಿಸಿರಿ.

4) ಸಾರ್ವಜನಿಕ ಉದ್ಯಮದಲ್ಲಿನ ಸವಾಲುಗಳು ಯಾವುವು? ನೈತಿಕತೆಯ ಹಿನ್ನೆಲೆಯಲ್ಲಿ ಇವುಗಳನ್ನು ಹೇಗೆ ಎದುರಿಸಲು ಸಾಧ್ಯ? ಈ ಕುರಿತು ಚರ್ಚಿಸಿ.

5) ನೀತಿ ಸಂಹಿತೆಗೂ ಮತ್ತು ನೈತಿಕ ಸಂಹಿತೆಗೂ ಇರುವ ವ್ಯತ್ಯಾಸಗಳೇನು? ಅವುಗಳ ಮಹತ್ವವೇನು?

6) ವೃತ್ತಿ ನೈತಿಕತೆ ಎಂದರೇನು? ಅದರ ವಿಶೇಷ ಗುಣಗಳು ಯಾವುವು?

7) ಸಾರ್ವಜನಿಕ ನಿಧಿ ಬಳಕೆಯಲ್ಲಿನ ಪ್ರಾಮಾಣಿಕತೆ ಮತ್ತು ಹೊಣೆಗಾರಿಕೆಯನ್ನು ವಿಷಧಪಡಿಸಿ.

8) ಸಮಗ್ರತೆಯು ಗಳಿಸಿಕೊಳ್ಳುವಂತದ್ದೇ? ಸಮಗ್ರತೆಯು ಒಳಗೊಂಡ ಅಂಶಗಳು ಯಾವುವು?

9) ಅಭಿಕ್ಷಮತೆಯು ಸಾರ್ವಜನಿಕ ಆಡಳಿತಗಾರರಿಗೆ ಎಷ್ಟು ಅಗತ್ಯ? ಅದರ ಸ್ವರೂಪವನ್ನು ವಿವೇಚಿಸಿ.

10) ನಿಮಗೆ ಬಹಳಷ್ಟು ಪ್ರೇರಣದಾಯಿಯಾದ, ಮೌಲ್ಯಯುತ ವ್ಯಕ್ತಿಯ ಕುರಿತು ಉದಾಹರಣೆ ಸಹಿತವಾಗಿ ವಿವರಿಸಿ.

11) ಸಮಾಜ ಸುಧಾರಕರು ಎಂದರೆ ಯಾರು? ಈ ಕಾಲದಲ್ಲಿ ಸಮಾಜ ಸುಧಾರಕರ ಅವಶ್ಯಕತೆ ಏನು? ಅದರಿಂದ ಕಲಿಯಬಹುದಾದ ಗುಣಗಳು?

12) ಸಕಾಲ ಮತ್ತು ಮಾಹಿತಿ ಹಕ್ಕು ಅಧಿನಿಯಮವನ್ನು ವಿಶ್ಲೇಷಿಸಿ. ಈ ಕಾಯಿದೆಗಳು ಸೇವಾಗುಣಮಟ್ಟ ಸುಧಾರಿಸಲು ಹೇಗೆ ಸಹಕಾರಿಯಾಗಿವೆ ವಿವೇಚಿಸಿರಿ.

13) ಆಡಳಿತವು ಒಂದು ನೈತಿಕ ಕ್ರಿಯೆ ಮತ್ತು ಆಡಳಿತಗಾರ ನೈತಿಕತೆಯ ಪ್ರತಿನಿಧಿ ಇದನ್ನು ವಿವರಿಸಿ.

14) ನಾವು ಮಾಡುವ ತಪ್ಪುಗಳಿಗೆ, ಕೆಟ್ಟ ಕೆಲಸಗಳಿಗೆ, ಸೋಲು ವಿಫಲತೆಗಳಿಗೆ ನೆಪಗಳನ್ನು ಕಾರಣಗಳನ್ನು ಕೊಡುತ್ತೇವೆ. ಒಳ್ಳೆಯ ಕೆಲಸಕ್ಕೆ, ಸಾಧನೆಗೆ ನೆಪಗಳನ್ನು ಹೇಳಬೇಕಾಗಿಲ್ಲ. ಇದನ್ನು ನೀವು ಹೇಗೆ ಗ್ರಹಿಸುವಿರಿ? ನಿಮ್ಮ ಅನುಭವವನ್ನು ಉದಾಹರಣೆ ಸಮೇತ ವಿವರಿಸಿ.

15) ನಿಮ್ಮ ಪ್ರಕಾರ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೊಲಗಿಸಲು ಸಾಧ್ಯವಿದೆಯೇ? ನಿಮ್ಮ ಪ್ರಕಾರ ಯಾರು ಭ್ರಷ್ಟಾಚಾರಿಗಳು? ನೀವು ಅವರಿಗಿಂತ ಹೇಗೆ ಭಿನ್ನವಾಗಿದ್ದೀರಿ? ವಿವೇಚಿಸಿ.

16) ನಾವೆಲ್ಲಾ ಹುಟ್ಟು ಭ್ರಷ್ಟರಲ್ಲ, ಆದರೆ ಬೆಳೆಯುತ್ತ ಭ್ರಷ್ಟರಾಗುತ್ತೇವೆ. ಈ ವಿಚಾರವನ್ನು ನೀವು ಒಪ್ಪುತ್ತೀರಾ? ಹಾಗಾದರೆ ಪರಿಹಾರ ತಿಳಿಸಿ.

17) ನಿಮ್ಮ ಜೀವನದ ಗುರಿಯೇನು? ಅದನ್ನು ನೀವು ಹೇಗೆ ಸಾಕಾರಗೊಳಿಸಿಕೊಳ್ಳುವಿರಿ?

18) ಬ್ರೀಟಿಷರ ಕಾಲದ ಇಂಡಿಯನ್ ಸಿವಿಲ್ ಸರ್ವಿಸ್ ಬಗ್ಗೆ 'ಅದು ಭಾರತೀಯವೂ ಆಗಿರಲಿಲ್ಲ, ನಾಗರಿಕವೂ ಆಗಿರಲಿಲ್ಲ, ಸೇವೆಯೆಂಬುದಂತೂ ಇದ್ದಿರಲೇ ಇಲ್ಲ" ಎಂಬ ಮಾತಿದೆ. ಇಂದಿನ ಐಎಎಸ್ ಈ ವಿಷಯದಲ್ಲಿ ಎಷ್ಟರ ಮಟ್ಟಿಗೆ ಭಿನ್ನವಾಗಿದೆ?

19) ನೈತಿಕತೆ, ಪ್ರಾಮಾಣಿಕತೆ ಎಂಬಂತಹ ಪದಗಳು ವೇದಿಕೆಯ ಮೇಲೆ ನಿಂತು ಮಾತನಾಡುವವರ ಬಾಯಿಯಲ್ಲಿ ಸಿಕ್ಕು ಸವಕಲು ನಾಣ್ಯಗಳಾಗಿವೆ. ಇದನ್ನು ಒಪ್ಪುತ್ತೀರಾ? ವೇದಿಕೆ ಮೇಲೆ ನಿಂತು ನೀವೇ ಮಾತನಾಡುವವರಾಗಿದ್ದರೆ ಏನು ಮಾಡುತ್ತಿದ್ದೀರಿ?

20) ಕರ್ನಾಟಕವನ್ನೊಳಗೊಂಡು ಭಾರತದಾದ್ಯಂತ ಜಾತಿ ನೌಕರಶಾಹಿ ರಾಜಕೀಯ ಇವುಗಳ ನಡುವೆ ಪರಸ್ಪರ ಹಿತಾಸಕ್ತಿಗಳನ್ನು ಈಡೇರಿಸುವ ಉದ್ದೇಶದಿಂದ ಅನೈತಿಕ ಸಂಬಂಧವಿದೆ ಎಂಬುದನ್ನು ನೀವು ಒಪ್ಪುತ್ತೀರಾ? ಒಪ್ಪಿದರೆ ಪರಿಹಾರಗಳನ್ನು ಇಲ್ಲವಾದರೆ ಕಾರಣಗಳನ್ನು ತಿಳಿಸಿರಿ.

# ಮಾದರಿ ಪ್ರಶ್ನೆ ಪತ್ರಿಕೆ – 4

## 20 ಪ್ರಶ್ನೆಗಳು. ಎಲ್ಲವೂ ಕಡ್ಡಾಯ

## 20*12.5=250

**ಪ್ರತಿ ಪ್ರಶ್ನೆಗೂ 200 ಪದಗಳಿಗೆ ಮೀರದಂತೆ ಉತ್ತರಿಸಿ. ಉತ್ತರ ಎಷ್ಟು ದೀರ್ಘವಾಗಿದೆ ಎಂಬುದಕ್ಕಿಂತ ಏನು ಉತ್ತರ ಬರೆದಿದ್ದೀರಿ ಎಂಬುದು ಮುಖ್ಯ. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.**

1) ಸ್ವಾಮಿ ವಿವೇಕಾನಂದರು ಜೀವನದಲ್ಲಿ ಗೌರವಯುತವಾಗಿ ಬದುಕಲು ಯಾವುದಾದರೂ ಐದು ಮೌಲ್ಯಗಳನ್ನು ಪಾಲಿಸಿರಿ ಎಂದಿದ್ದಾರೆ. ಹಾಗಾದರೆ ನೀವು ಯಾವ ಮೌಲ್ಯಗಳನ್ನು ಪರಿಪಾಲಿಸಲು ಮುಂದಾಗಿದ್ದೀರಿ? ಏಕೆ? ಮತ್ತು ಹೇಗೆ ನಿಭಾಯಿಸುತ್ತಿರುವಿರಿ?

2) ಸಾರ್ವಜನಿಕ ಸೇವೆಗೆ ಸಂಬಂಧಿಸಿದಂತೆ ಹೊಣೆಗಾರಿಕೆ ಎಂದರೇನು? ಸಾರ್ವಜನಿಕ ಸೇವಕರಿಗೆ ವೈಯಕ್ತಿಕ ಮತ್ತು ಸಾಮಾಜಿಕ ಹೊಣೆಗಾರಿಕೆ ಖಚಿತಪಡಿಸಲು ಯಾವ ಕ್ರಮ ಅಳವಡಿಸಿಕೊಳ್ಳುತ್ತೀರಿ?

3) ನೈತಿಕತೆಯನ್ನು ವ್ಯಾಖ್ಯಾನಿಸಿ. ನೈತಿಕತೆಯ ನಿರ್ಧಾರಕಗಳು ಯಾವುವು?

4) ಅಂತರಾಷ್ಟ್ರೀಯ ನೈತಿಕತೆ ಎಂದರೇನು? ವಿವಿಧ ದೃಷ್ಟಿಕೋನಗಳಲ್ಲಿ ಅಂತರ್‌ರಾಷ್ಟ್ರೀಯ ನೈತಿಕತೆಯನ್ನು ವಿವೇಚಿಸಿರಿ.

5) ನಿಷ್ಪಕ್ಷಪಾತ ಮತ್ತು ಪಕ್ಷಪಾತ ಇವುಗಳನ್ನು ವಿಶ್ಲೇಷಿಸಿ. ಉತ್ತಮ ಉದಾಹರಣೆ ಕೊಡಿರಿ.

6) ನಾಗರಿಕ ಸನ್ನದು ಎಂದರೇನು? ಅದರ ತತ್ವಗಳು ಮತ್ತು ಮಹತ್ವ ತಿಳಿಸಿರಿ.

7) ಅಭಿವೃತ್ತಿ ಅರ್ಥ, ಪರಿಕಲ್ಪನೆ ತಿಳಿಸಿ, ಅದರ ಮಹತ್ವ ಚರ್ಚಿಸಿರಿ.

8) ನಾಗರಿಕ ಸೇವೆಯ ಮೂಲಭೂತ ಮೌಲ್ಯಗಳನ್ನು ಉದಾಹರಣೆಯ ಸಹಿತ ಚರ್ಚಿಸಿರಿ.

9) ಸಂವೇಗಾತ್ಮಕ ಬುದ್ದಿಶಕ್ತಿ ಎಂದರೇನು? ಸಂವೇಗಾತ್ಮಕ ಬುದ್ದಿಶಕ್ತಿಯುಳ್ಳ ಅಧಿಕಾರಿಯ ಲಕ್ಷಣಗಳು ಯಾವುವು?

10) 'ವಸುದೈವ ಕುಟುಂಬಕಂ' ಈ ಹೇಳಿಕೆಯಿಂದ ನೀವು ಏನು ತಿಳಿದುಕೊಂಡಿದ್ದೀರಿ?

11) ಜೀವನದಲ್ಲಿ ನೈತಿಕತೆ ಆಚರಿಸುವ ಸಂದರ್ಭದಲ್ಲಿ ನಿಮಗೆ ಯಾರ ಖ್ಯಾತ ವ್ಯಕ್ತಿತ್ವವು ಅತ್ಯಧಿಕವಾಗಿ ಪ್ರೇರಣೆ ನೀಡಿದೆ. ಅವರ ಉಪದೇಶಗಳ ಸಾರಾಂಶವನ್ನು ಪ್ರಸ್ತುತ ಪಡಿಸಿ. ವಿಶೇಷ ಉದಾಹರಣೆ ಕೊಡುತ್ತಾ, ಅವುಗಳನ್ನು ನೀವು ಹೇಗೆ ಅಳವಡಿಸಿಕೊಂಡಿದ್ದೀರಿ ಎಂಬುದನ್ನು ತಿಳಿಸಿರಿ.

12) ಹಿತಾಸಕ್ತಿ ಸಂಘರ್ಷ ಎಂದರೇನು? ಉದಾಹರಣೆ ಸಹಿತ ವಿವೇಚಿಸಿರಿ.

13) "ಒಬ್ಬ ವ್ಯಕ್ತಿಯ ಒಳಿತು ಎಲ್ಲರ ಒಳಿತಿನಲ್ಲಿದೆ"? ಈ ವಾಕ್ಯದಿಂದ ಏನನ್ನು ಗ್ರಹಿಸುವಿರಿ? ಈ ತತ್ವ ಹೇಗೆ ಸಾರ್ವಜನಿಕ ಸೇವೆಯಲ್ಲಿ ಅನ್ವಯಿಸಲ್ಪಡಬೇಕು?

14) ರಾಜಕಾರಣ ಮತ್ತು ನೈತಿಕತೆ ಇವೆರಡು ಜೊತೆಯಾಗಿರುವುದಿಲ್ಲ ಎಂಬುದು ಸಾಮಾನ್ಯ ಹೇಳಿಕೆ. ಈ ಹೇಳಿಕೆಯ ಬಗ್ಗೆ ನಿಮ್ಮ ಅಭಿಪ್ರಾಯ ಏನು? ಸೂಕ್ತ ನಿದರ್ಶನದೊಂದಿಗೆ ನಿಮ್ಮ ಉತ್ತರವನ್ನು ವಿಷದಪಡಿಸಿರಿ.

15) ಟಿಪ್ಪಣಿ ಬರೆಯಿರಿ.

ಅ) ಸಮಗ್ರತೆ

ಬ) ದೃಢತೆ

ಕ) ಸೇವಾಸ್ಫೂರ್ತಿ

ಡ) ಬದ್ದತೆ

ಈ) ನ್ಯಾಯ ನಿರ್ಣಯಿಸುವಿಕೆಯ ಧೈರ್ಯ

16) ಸಾರ್ವಜನಿಕ ಸೇವೆಯಲ್ಲಿ ಇರಬೇಕಾದ ಎರಡು ಪ್ರಮುಖ ಗುಣಗಳು ಯಾವುವು ಎಂದು ನೀವು ಪರಿಗಣಿಸುವಿರಿ? ನಿಮ್ಮ ಉತ್ತರವನ್ನು ಸಮರ್ಥಿಸಿ.

17) ಮೌಲ್ಯ ಮತ್ತು ನೈತಿಕತೆ ಪದಗಳನ್ನು ಹೇಗೆ ಗ್ರಹಿಸುವಿರಿ? ವೃತ್ತಿ ದಕ್ಷತೆಯನ್ನು ಹೊಂದಿ ನೈತಿಕತೆಯನ್ನು ಕಾಪಾಡಿಕೊಂಡು ಹೋಗುವುದರ ಮಹತ್ವವೇನು?

18) ಆತ್ಮಸಾಕ್ಷಿಯ ಧ್ವನಿ ಪರಿಕಲ್ಪನೆಯನ್ನು ಹೇಗೆ ಗ್ರಹಿಸುವಿರಿ? ಆತ್ಮಸಾಕ್ಷಿ ಧ್ವನಿಗೆ ನೀವು ಹೇಗೆ ಬೆಲೆಯನ್ನು ನೀಡುತ್ತೀರಿ?

19) ಆತ್ಮಸಾಕ್ಷಿ ಘರ್ಷಣೆ ಎಂದರೇನು? ನಿಮ್ಮ ಜೀವನದಲ್ಲಿ ಎದುರಿಸಿದಂತೆ ಘರ್ಷಣೆಯನ್ನು ನಿರೂಪಿಸಿ ಮತ್ತು ಅದರಿಂದ ಹೇಗೆ ಹೊರ ಬಂದಿರಿ ವಿಷದಪಡಿಸಿ.

20) "ಸೌಜನ್ಯ ಶತ್ರುಗಳನ್ನು ಕೊಲ್ಲುತ್ತದೆ" ಈ ಮಾತನ್ನು ವಿವೇಚಿಸಿರಿ.

# ಮಾದರಿ ಪ್ರಶ್ನೆ ಪತ್ರಿಕೆ – 5

**20 ಪ್ರಶ್ನೆಗಳು. ಎಲ್ಲವೂ ಕಡ್ಡಾಯ**

**20*12.5=250**

**ಪ್ರತಿ ಪ್ರಶ್ನೆಗೂ 200 ಪದಗಳಿಗೆ ಮೀರದಂತೆ ಉತ್ತರಿಸಿ. ಉತ್ತರ ಎಷ್ಟು ದೀರ್ಘವಾಗಿದೆ ಎಂಬುದಕ್ಕಿಂತ ಏನು ಉತ್ತರ ಬರೆದಿದ್ದೀರಿ ಎಂಬುದು ಮುಖ್ಯ. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.**

1) ಸತ್ಯಮೇವ ಜಯತೆ, ಈ ಕಾಲದಲ್ಲಿ ಈ ಮಾತಿಗೆ ಬೆಲೆ ಇದೆಯೇ? ನೀವು ಈ ಮಾತನ್ನು ಪರಿಪಾಲಿಸುವಿರಾ? ಹೇಗೆ?

2) ನೈತಿಕತೆಯ ಪರಿಣಾಮಗಳನ್ನು ವಿವೇಚಿಸಿ.

3) ಸಂವೇಗಾತ್ಮಕ ಬುದ್ದಿಶಕ್ತಿಯುಳ್ಳ ಅಧಿಕಾರಿಯ ಲಕ್ಷಣಗಳು ಯಾವುವು? ಸಂವೇಗಾತ್ಮಕ ಬುದ್ದಿಶಕ್ತಿಯ ಅಗತ್ಯತೆ ಏನು?

4) ಖಾಸಗಿ ಮತ್ತು ಸಾರ್ವಜನಿಕ ಸಂಬಂಧಗಳಲ್ಲಿನ ನೈತಿಕತೆಯ ಕುರಿತು ಅವಲೋಕಿಸಿರಿ.

5) ಮೌಲ್ಯಗಳ ಸಂಘರ್ಷ ಯಾವಾಗ ಉಂಟಾಗುತ್ತದೆ. ಅದನ್ನು ನಿಭಾಯಿಸುವ ವಿಧಾನಗಳು ಯಾವುವು?

6) ಸಾರ್ವಜನಿಕ ಆಡಳಿತದಲ್ಲಿ ನಾಗರಿಕ ಸಮಾಜ ಪಾಲ್ಗೊಳ್ಳುವಿಕೆಯನ್ನು ಉತ್ತಮೀಕರಿಸುವ ವಿಧಾನಗಳು ಯಾವುವು?

7) ವೈದ್ಯಕೀಯ ಪ್ರಯೋಗಗಳಲ್ಲಿ ನೈತಿಕತೆಯ ಅಗತ್ಯತೆ? ಅಲ್ಲಿನ ನೈತಿಕ ವಿಷಯಗಳು ಯಾವುವು?

8) ಸಾರ್ವಜನಿಕ ಆಡಳಿತದಲ್ಲಿ ಹೊಣೆಗಾರಿಕೆಗೆ ಇರುವ ಪ್ರಾಮುಖ್ಯತೆ ಮತ್ತು ಹೊಣೆಗಾರಿಕೆಯನ್ನು ಪರಿಣಾಕಾರಿಗೊಳಿಸುವ ವಿಧಾನಗಳ ಕುರಿತು ವಿಶ್ಲೇಷಿಸಿರಿ.

9) "ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ (Corporate Social Responsibility)"ಯನ್ನು ವಿಷದಿಕರಿಸಿರಿ.

10) ವೃತ್ತಿ ಸಂಸ್ಕೃತಿ ಎಂದರೇನು? ವೃತ್ತಿ ಸಂಸ್ಕೃತಿಯ ಪ್ರಾಮುಖ್ಯತೆ ಏನು?

11) ನಾಗರಿಕ ಸೇವೆ ಮತ್ತು ರಾಜಕಾರಣ ಇವೆರಡನ್ನು ಬೇರ್ಪಡಿಸಲು ಸಾಧ್ಯವಿದೆಯೇ? ರಾಜಕಾರಣವನ್ನು ಒಂದು ನಿರ್ದಿಷ್ಟ ಅಂತರದಿಂದ ಕಾಯ್ದುಕೊಂಡು ಸೇವೆ ಮಾಡುವುದು ಒಳ್ಳೆಯ ನಿರ್ಧಾರವೇ? ಕಾರಣಗಳನ್ನು ತಿಳಿಸಿರಿ.

12) ಮೌಲ್ಯಗಳನ್ನು ಬೋಧಿಸುವಲ್ಲಿ ಕುಟುಂಬ, ಸಮಾಜ ಮತ್ತು ಶೈಕ್ಷಣಿಕ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

13) ವಿವೇಚಿಸಿ.

1) ಪರಾನುಭೂತಿ

2) ಸಹನೆ

3) ಅನುಕಂಪ

4) ಪ್ರಾಮಾಣಿಕತೆ

5) ನ್ಯಾಯ

14) ಮನೋಧೋರಣೆ ಎಂದರೇನು? ಈ ಮನೋಧೋರಣೆಯ ಆಯಾಮಗಳು ಯಾವುವು? ಮನೋಧೋರಣೆಯ ಮಹತ್ವ?

15) ಸಾಮಾಜಿಕ ಪ್ರಭಾವ ಮತ್ತು ಮನವೊಲಿಕೆ ಎಂದರೇನು? ಈ ಎರಡರ ಪ್ರಕಾರಗಳು ಯಾವುವು?

16) ನಿಮ್ಮ ಪ್ರಕಾರ ನಾಗರಿಕ ಸೇವೆಯ ಮೂಲಭೂತ ಮೌಲ್ಯಗಳು ಯಾವುವು?

17) ನಾಗರಿಕ ಸೇವೆಗಳ ಪ್ರಸಕ್ತ ಪರಿಸರದಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿಯ ಪ್ರಸ್ತುತತೆಯನ್ನು ಪ್ರಮಾಣೀಕರಿಸಿರಿ.

18) **"ಜಿಕಾ"** ರೋಗ ತಡೆಯಲು ಸರ್ಕಾರ ಮುಂದಾಗಿದೆ. ತಹಸೀಲ್ದಾರ್ ಹುದ್ದೆಯಲ್ಲಿರುವ ನಿಮಗೆ, ನಿಮ್ಮ ತಾಲೂಕಿನಲ್ಲಿ ಈ ರೋಗ ತಡೆಯಲು 10 ಲಕ್ಷ ಹಣವನ್ನು ನೀಡಲಾಗಿದೆ. ಈ ಹಣವನ್ನು ನೀವು ಹೇಗೆ ಸದುಪಯೋಗ ಪಡಿಸಿಕೊಳ್ಳುವಿರಿ.

19) ಎಲ್ಲರೂ ಆನಂದದಿಂದ ಬದುಕಲು ಬಯಸುವರು. ನಿಮ್ಮ ಪ್ರಕಾರ ಆನಂದದ ಅರ್ಥವೇನು? ಉದಾಹರಣೆಯೊಂದಿಗೆ ವಿವರಿಸಿ.

20) ಆತ್ಮಸಾಕ್ಷಿಯ ಧ್ವನಿ ಈ ಪರಿಕಲ್ಪನೆಯನ್ನು ಹೇಗೆ ಗ್ರಹಿಸುವಿರಿ? ಆತ್ಮಸಾಕ್ಷಿ ಧ್ವನಿಗೆ ನೀವು ಹೇಗೆ ಬೆಲೆಯನ್ನು ನೀಡುತ್ತೀರಿ?

# ಮಾದರಿ ಪ್ರಶ್ನೆ ಪತ್ರಿಕೆ – 6

## 20 ಪ್ರಶ್ನೆಗಳು. ಎಲ್ಲವೂ ಕಡ್ಡಾಯ

## 20*12.5=250

1) ಕೆಲವು ಜನರ ಪ್ರಕಾರ ಸಮಯ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಮೌಲ್ಯಗಳು ಬದಲಾಗುತ್ತಿರುತ್ತವೆ. ಅದೇ ರೀತಿ ಕೆಲವರು ಸಾರ್ವತ್ರಿಕ ಮತ್ತು ಸರ್ವಕಾಲಿಕ ಮೌಲ್ಯಗಳಿವೆ ಎಂಬುದನ್ನು ದೃಢವಾಗಿ ನಂಬುತ್ತಾರೆ. ಈ ವಿಚಾರವಾಗಿ ನಿಮ್ಮ ಗ್ರಹಿಕೆ ಏನು? ಸಮರ್ಥಿಸಿ.

2) ಮೌಲ್ಯ ಮತ್ತು ನೈತಿಕತೆ ಪದಗಳನ್ನು ಹೇಗೆ ಗ್ರಹಿಸುವಿರಿ? ವೃತ್ತಿ ದಕ್ಷತೆಯನ್ನು ಹೊಂದಿ ನೈತಿಕತೆಯನ್ನು ಕಾಪಾಡಿಕೊಂಡು ಹೋಗುವುದರ ಮಹತ್ವವೇನು?

3) ಸಂವೇಗಾತ್ಮಕ ಬುದ್ಧಿಶಕ್ತಿ ಎಂದರೇನು? ವ್ಯಕ್ತಿಗಳಲ್ಲಿ ಇದನ್ನು ಹೇಗೆ ಬೆಳೆಸಬಹುದು? ನೈತಿಕವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ವ್ಯಕ್ತಿಗೆ ಇದು ಹೇಗೆ ಸಹಾಯಕವಾಗಿದೆ?

4) "ಈ ಭೂಮಿ ಇರುವುದು ಮಾನವನ ಆಸೆಗಳನ್ನು ಪೂರೈಸಲು ಹೊರತು ಅವನ ದುರಾಸೆಗಳನ್ನಲ್ಲ" ಮಹಾತ್ಮಾಗಾಂಧೀಜಿ. ಈ ಹೇಳಿಕೆಯನ್ನು ಅರ್ಥೈಸಿರಿ.

5) ಆತ್ಮಸಾಕ್ಷಿ ಘರ್ಷಣೆ ಎಂದರೇನು? ನಿಮ್ಮ ಜೀವನದಲ್ಲಿ ಎದುರಿಸಿದಂತ ಘರ್ಷಣೆಯನ್ನು ನಿರೂಪಿಸಿ. ಮತ್ತು ಅದರಿಂದ ಹೇಗೆ ಹೊರಬಂದಿರಿ. ವಿಷದಪಡಿಸಿ.

6) ಮಾನವನ ಜೀವನದಲ್ಲಿ ನೈತಿಕತೆಯು ಏನನ್ನು ಉತ್ತೇಜಿಸಲು ಬಯಸುತ್ತದೆ? ಸಾರ್ವಜನಿಕ ಆಡಳಿತದಲ್ಲಿ ಇದು ಹೇಗೆ ಅತಿ ಮಹತ್ವವಾಗಿದೆ?

7) ಸಾರ್ವಜನಿಕ ಜೀವನದಲ್ಲಿ ಸತ್ಯನಿಷ್ಠೆಯನ್ನು ನೀವು ಯಾವ ಅರ್ಥದಲ್ಲಿ ಗ್ರಹಿಸುತ್ತೀರಿ? ವರ್ತಮಾನ ಕಾಲದಲ್ಲಿ ಇದನ್ನು ಅನುಸರಿಸುವಲ್ಲಿ ಯಾವ ತೊಡಕುಗಳಿವೆ? ಹೇಗೆ ಈ ತೊಡಕುಗಳನ್ನು ನಿವಾರಿಸಬಹುದು?

8) ಮನುಷ್ಯರು ತಮ್ಮನ್ನು ಧ್ಯೇಯವಾಗಿ ಪರಿಗಣಿಸಿ ವ್ಯವಹರಿಸಬೇಕು? ಕೇವಲ ಧ್ಯೇಯ ಸಾಧನೆಯ ಸಾಧನವಾಗಿ ಪರಿಗಣಿಸಬಾರದು. ಈ ಹೇಳಿಕೆಯ ಅರ್ಥ ಮತ್ತು ಮಹತ್ವವನ್ನು ವಿವರಿಸಿ.

9) ಪ್ರಸಕ್ತ ಕಾಲಿನ ಸಮಾಜದಲ್ಲಿ ವ್ಯಾಪಕ ವಿಶ್ವಾಸದ ನ್ಯೂನತೆಯು ಪಿಡುಗಾಗಿ ಪರಿಣಮಿಸಿದೆ. ವೈಯಕ್ತಿಕ ಕಲ್ಯಾಣ ಮತ್ತು ಸಮಾಜದ ಕಲ್ಯಾಣದ ಮೇಲೆ ಇಂತಹ ಸ್ಥಿತಿಯ ಪರಿಣಾಮಗಳೇನು? ನಿಮ್ಮಲ್ಲಿ ನಿಮಗೆ ವಿಶ್ವಾಸವನ್ನು ಬರುವಂತೆ ಮಾಡಲು ವೈಯಕ್ತಿಕ ಮಟ್ಟದಲ್ಲಿ ಏನು ಮಾಡುವಿರಿ?

10) ಬಡತನವು ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ ಎಂದು ಆಗಾಗ್ಗೆ ಹೇಳಲಾಗುತ್ತದೆ. ಆದರೂ ಶ್ರೀಮಂತ ಮತ್ತು ಬಲಿಷ್ಠ ಜನರು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳುತ್ತಿರುವ ಉದಾಹರಣೆಗಳಿಗೇನೂ ಕಡಿಮೆಯಿಲ್ಲ. ಜನರ ಮಧ್ಯದಲ್ಲಿನ ಭ್ರಷ್ಟಾಚಾರಕ್ಕೆ ಮೂಲಭೂತ ಕಾರಣಗಳೇನು? ಉದಾಹರಣೆಗಳ ಸಹಿತ ನಿಮ್ಮ ಉತ್ತರವನ್ನು ಸಮರ್ಥಿಸಿ.

11) ಸಾರ್ವಜನಿಕ ಸೇವೆಗೆ ಸಂಬಂಧಿಸಿದಂತೆ ಹೊಣೆಗಾರಿಕೆ ಎಂದರೇನು? ಸಾರ್ವಜನಿಕ ಸೇವಕರಿಗೆ ವೈಯಕ್ತಿಕ ಮತ್ತು ಸಾಮಾಜಿಕ ಹೊಣೆಗಾರಿಕೆ ಖಚಿತಪಡಿಸಲು ಯಾವ ಕ್ರಮಗಳನ್ನು ಅಳವಡಿಸಿಕೊಳ್ಳುತ್ತೀರಿ?

12) ಅಭಿಕ್ಷಮತೆಯನ್ನು ವ್ಯಾಖ್ಯಾನಿಸಿ. ಅಭಿಕ್ಷಮತೆಯ ಸ್ವರೂಪ ಯಾವುದು? ಅಭಿಕ್ಷಮತೆಯ ಪ್ರಯೋಜನಗಳು ಯಾವುವು?

13) ಸಾರ್ವಜನಿಕ ಅಧಿಕಾರಿಗೆ ಮನವೊಲಿಕೆಯ ಅಗತ್ಯತೆ ಏನು? ಮನವೊಲಿಕೆಯ ಮಹತ್ವವನ್ನು ಉದಾಹರಣೆ ಸಹಿತ ವಿವರಿಸಿ.

14) ನಾವೆಲ್ಲಾ ಹೊಟ್ಟೆಗೆ ಅನ್ನವನ್ನು ನೀಡುವ ರೈತನನ್ನು ಹಾಡಿ ಹೊಗಳಿ ಕೊಂಡಾಡುತ್ತೇವೆ. ಆದರೆ ಅವನ ಉತ್ಪನ್ನಗಳಿಗೆ ಸರಿಯಾದ ಬೆಲೆ ಕೊಡುತ್ತಿಲ್ಲ. ನೀವು ಸ್ವತ: ಒಬ್ಬ ರೈತನ ಮಗ / ಮಗಳು ಆಗಿ ರೈತ ಸಮುದಾಯದ ಕಷ್ಟ ಕೋಟಲೆಗಳನ್ನು ಕಣ್ಣಾರೆ ಕಂಡವರಾಗಿದ್ದೀರಿ. ಈಗ ಒಬ್ಬ ಅಧಿಕಾರಿಯಾಗಿರುವ ನೀವು ಬೆಲೆ ನಿಗದಿಗೆ ಬಂದಾಗ ಒಂದು ಕಿಲೋ ಅಕ್ಕಿಗೆ ರೂ.35 ಕೊಡುವುದನ್ನು ಮತ್ತು ಮುಖಕ್ಕೆ ಹೆಚ್ಚುವ 100 ಗ್ರಾಂ ಸೌಂದರ್ಯ ಪ್ರಸಾದನಕ್ಕೆ ರೂ.100 ಕೊಡುವುದನ್ನು ನೈತಿಕವಾಗಿ ಹೇಗೆ ಬೆಂಬಲಿಸುತ್ತೀರಿ? ವಿವೇಚಿಸಿ.

15) ಇತ್ತೀಚಿನ ವರ್ಷಗಳಲ್ಲಿ ನಿಸರ್ಗದ ಬಗೆಗೆ ಅತಿಯಾದ ಕಾಳಜಿಯ ಮಾತುಗಳನ್ನು ನಾವು ಕೇಳುತ್ತಿದ್ದೇವೆ. ಆದರೂ ಅಭಿವೃದ್ಧಿಯ ಹೆಸರಿನಲ್ಲಿ ನಿಸರ್ಗದ ಶೋಷಣೆ ಅವ್ಯಾಹತವಾಗಿ ಸಾಗಿದೆ. ಈ ಹಿನ್ನೆಲೆಯಲ್ಲಿ "ದೇವರು ಪ್ರತಿಯೊಬ್ಬನ ಅವಶ್ಯಕತೆಗೆ ತಕ್ಕಷ್ಟು ಕೊಟ್ಟಿದ್ದಾನೆಯೇ ಹೊರತು ಲೋಭವನ್ನು ತೃಪ್ತಿ ಪಡಿಸುವಷ್ಟು ಅಲ್ಲ" ಎಂಬ ಮಾತನ್ನು ಹೇಗೆ ಸಮೀಕರಿಸುವಿರಿ? ಮೌಲ್ಯೀಕರಿಸಿರಿ.

16) ಸಮಾಜದಲ್ಲಿ ಪ್ರಾಮಾಣಿಕ ಸತ್ಯನಿಷ್ಠೆ ಜನರು ಸಿಗುವುದು ವಿರಳ ಎಂದು ಬಹುತೇಕ ಎಲ್ಲರೂ ಹೇಳುತ್ತಾರೆ. ಒಂದು ವೇಳೆ ಸತ್ಯವಂತರು ದೊರೆತಾಗ ಕೂಡಾ ಅವರಿಗೆ ಸತ್ಯಹರಿಶ್ಚಂದ್ರನಿಗೆ ಆದ ಗತಿಯೇ ಆಗುತ್ತದೆ ಎಂದು ಭಾವಿಸಿದ್ದಾರೆ. ಇಷ್ಟಾಗಿಯೂ ನೀವು ಹರಿಶ್ಚಂದ್ರನನ್ನು ಅನುಕರಿಸಲು ಇಷ್ಟಪಡುತ್ತೀರೋ ಅಥವಾ ಇಲ್ಲವೋ? ವಿವೇಚಿಸಿ.

17) ಆಡಳಿತ ನಡೆಸುವವರಲ್ಲಿ ಭಾವನಾತ್ಮಕ ಬುದ್ಧಿವಂತಿಕೆಯ ಮಹತ್ವವೇನು? ಮತ್ತು ಅದನ್ನು ಬೆಳೆಸುವುದು ಹೇಗೆ?

18) ಬಹಳಷ್ಟು ಸಲ ಜನರು ಆತ್ಮಸಾಕ್ಷಿಯ ಬಗ್ಗೆ ಮಾತನಾಡುವುದನ್ನು ಕೇಳುತ್ತೇವೆ. ಆತ್ಮಸಾಕ್ಷಿಯ ಬಗ್ಗೆ ನಿಮ್ಮ ತಿಳುವಳಿಕೆ ಏನು?

19) ನೀವು ಒಬ್ಬ ಜಿಲ್ಲಾಮಟ್ಟದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಯಾಗಿ ಸೇವೆ ಸಲ್ಲಿಸುವಾಗ ಮಹಿಳೆಯರ ಶೋಷಣೆಯ ಹಲವಾರು ಪ್ರಕರಣಗಳು ನಿಮಗೆ ಎದುರಾಗುತ್ತದೆ. ಉದಾಹರಣೆಗೆ ಮಹಿಳೆಯರ ಮಾರಾಟದ ಪ್ರಕರಣವನ್ನು ನೀವು ಗಮನಿಸಬಹುದು. ಈ ವಿಷಯದ ಕುರಿತಾಗಿ ನೀವು ಕಾನೂನು ಕ್ರಮ ಜರುಗಿಸಲು ಮುಂದಾದರೆ ಅದರಲ್ಲಿ ತೊಡಗಿದಂತೆ ಪ್ರಭಾವಶಾಲಿ ವ್ಯಕ್ತಿಗಳಿಂದ ನಿಮ್ಮ ಜೀವಕ್ಕೆ ಅಪಾಯ ಎದುರಾಗುವ ಸಂದರ್ಭ ಬರಬಹುದು. ಈ ರೀತಿಯ ಸಂದರ್ಭದಲ್ಲಿ ನೀವು ಕೈಗೊಳ್ಳಬೇಕಾದ ಕ್ರಮಗಳು ಏನು?

20) ನೈತಿಕ ನೆಲೆಗಟ್ಟಿನಲ್ಲಿ ಒಬ್ಬ ದಕ್ಷ ಅಧಿಕಾರಿಯಾಗಿ ನಿಮ್ಮ ಕಾರ್ಯವೈಖರಿ ಹೇಗಿರುತ್ತದೆ. ವಿವೇಚಿಸಿ.

# ಮಾದರಿ ಪ್ರಶ್ನೆ ಪತ್ರಿಕೆ – 7

## 20 ಪ್ರಶ್ನೆಗಳು. ಎಲ್ಲವೂ ಕಡ್ಡಾಯ

## 20*12.5=250

1) ಸರ್ಕಾರಿ ನೈತಿಕ ಸಂದಿಗ್ದತೆ ಎಂದರೇನು? ಒಂದು ಸೂಕ್ತ ಉದಾಹರಣೆಯೊಂದಿಗೆ ವಿವರಿಸಿ. ಅದನ್ನು ಹೇಗೆ ನಿಭಾಯಿಸಬೇಕೆಂದು ಚರ್ಚಿಸಿರಿ.

2) ಆತ್ಮಸಾಕ್ಷಿಯೊಂದಿಗಿನ ಹೊಯ್ದಾಟವನ್ನು ನೀವು ಎದುರಿಸಿದ್ದೀರಾ? ಅದು ನಮ್ಮ ನಿರ್ಧಾರಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ? ನೀವು ಎದುರಿಸಿದ ಆತ್ಮಸಾಕ್ಷಿಯ ಗುದ್ದಾಟದ ಅಥವಾ ಒಬ್ಬ ಅಧಿಕಾರಿ ಎದುರಿಸಬಹುದಾದ ಆತ್ಮಸಾಕ್ಷಿಯೊಂದಿಗಿನ ಹೊಯ್ದಾಟದ ಪ್ರಕರಣವೊಂದನ್ನು ತಿಳಿಸಿ. ಅದನ್ನು ಎದುರಿಸುವ ಬಗೆಯನ್ನು ನೈತಿಕವಾದ ನೆಲೆಯಲ್ಲಿ ಚರ್ಚಿಸಿರಿ.

3) ಪ್ರಸ್ತುತ ಆಡಳಿತದಲ್ಲಿ ನೈತಿಕತೆ ಮತ್ತು ಹೊಣೆಗಾರಿಕೆಯ ಕುರಿತು ಚರ್ಚೆಯಾಗುತ್ತಿದೆ. ಇವೆರಡರ ಅಗತ್ಯವೇನು? ಇವೆರಡನ್ನು ನಿಭಾಯಿಸುವಿಕೆಯಲ್ಲಿ ಎದುರಾಗುವ ಸಮಸ್ಯೆಗಳು? ವಿವರಿಸಿರಿ.

4) ನಾಗರಿಕ ಸೇವಾ ನೀತಿ ಸಂಹಿತೆಯ ಅವಶ್ಯಕತೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

5) ಸಾರ್ವಜನಿಕ ಸೇವೆಯ ಮೇಲೆ ಸಾಮಾಜಿಕ ಪ್ರಭಾವವನ್ನು ಕುರಿತು ಚರ್ಚಿಸಿ.

6) ಸಾಮಾಜಿಕ ಪ್ರಭಾವ ಮತ್ತು ಮನವರಿಕೆ ಇವುಗಳ ನಡುವಣ ಸಂಬಂಧವನ್ನು ವಿವರಿಸಿ.

7) ಸಮಾಜವಾದಿ ಪರಿಕಲ್ಪನೆಯ ಬಗ್ಗೆ ಗಾಂಧಿ ಮತ್ತು ಮಾರ್ಕ್ಸ್ ನಿಲುವುಗಳಲ್ಲಿನ ವ್ಯತ್ಯಾಸವನ್ನು ಬರೆಯಿರಿ.

8) ಭಾರತದ ಪ್ರಜೆಗಳ ಮನೋಭಾವದ ಮೇಲೆ ಸ್ವದೇಶಿ ಚಳುವಳಿಯ ಉಗಮ ಮತ್ತು ಅದರ ಪ್ರಭಾವವನ್ನು ವಿಷಧೀಕರಿಸಿ.

9) ನೈತಿಕತೆ ಎಂದರೇನು? ಇದು ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ಭಿನ್ನವಾಗಿರುವುದೇ? ಈ ಬಗ್ಗೆ ನಿಮ್ಮ ನಿಲುವುಗಳೇನು?

10) ಬಹಳಷ್ಟು ಅಧಿಕಾರಿಗಳು ನಿರ್ಧಾರ ಕೈಗೊಳ್ಳುವುದರಲ್ಲಿ ಹಿಂಜರಿಕೆಯನ್ನೂ, ಬದ್ದತೆಯಲ್ಲಿ ಕೊರತೆಯನ್ನೂ ಕಾಣುತ್ತೇವೆ. ಇವುಗಳನ್ನು ನೀವು ಹೇಗೆ ನಿಭಾಯಿಸುವಿರಿ.

11) ವಿವೇಚಿಸಿ.

ಅ) ಪ್ರಾಮಾಣಿಕತೆ

ಬ) ಸತ್ಯನಿಷ್ಠೆ

ಕ) ಸಮಯಪ್ರಜ್ಞೆ

ಡ) ನಿಷ್ಕಪಟತೆ

ಈ) ಮಾನವೀಯತೆ

12) ಭಾರತೀಯ ನಾಗರಿಕ ಸೇವೆಗಳಲ್ಲಿ ನೀವು ಬಯಸುವ ನೈತಿಕ ವಿಷಯಗಳು ಯಾವುವು? ಮತ್ತು ಏಕೆ? ವಿಶ್ಲೇಷಿಸಿರಿ.

13) ಹೊಣೆಗಾರಿಕೆ ಎಂದರೇನು? ಹೊಣೆಗಾರಿಕೆಯ ಮಹತ್ವವನ್ನು ಮೌಲ್ಯೀಕರಿಸಿರಿ.

14) ಸಾರ್ವಜನಿಕ ಉದ್ಯಮದಲ್ಲಿನ ಸವಾಲುಗಳು ಯಾವುವು? ನೈತಿಕತೆಯ ಹಿನ್ನೆಲೆಯಲ್ಲಿ ಇವುಗಳನ್ನು ಹೇಗೆ ಎದುರಿಸಲು ಸಾಧ್ಯ? ಈ ಕುರಿತು ಚರ್ಚಿಸಿ.

15) ನೀತಿ ಸಂಹಿತೆಗೂ ಮತ್ತು ನೈತಿಕ ಸಂಹಿತೆಗೂ ಇರುವ ವ್ಯತ್ಯಾಸಗಳೇನು? ಅವುಗಳ ಮಹತ್ವವೇನು?

16) ಸಾರ್ವಜನಿಕ ಸೇವೆಗೆ ಸಂಬಂಧಿಸಿದಂತೆ ಹೊಣೆಗಾರಿಕೆ ಎಂದರೇನು? ಸಾರ್ವಜನಿಕ ಸೇವಕರಿಗೆ ವೈಯಕ್ತಿಕ ಮತ್ತು ಸಾಮಾಜಿಕ ಹೊಣೆಗಾರಿಕೆ ಖಚಿತಪಡಿಸಲು ಯಾವ ಕ್ರಮ ಅಳವಡಿಸಿಕೊಳ್ಳುತ್ತೀರಿ?

17) ನೈತಿಕತೆಯನ್ನು ವ್ಯಾಖ್ಯಾನಿಸಿ. ನೈತಿಕತೆಯ ನಿರ್ಧಾರಕಗಳು ಯಾವುವು?

18) ಅಂತರ್‌ರಾಷ್ಟ್ರೀಯ ನೈತಿಕತೆ ಎಂದರೇನು? ವಿವಿಧ ದೃಷ್ಟಿಕೋನಗಳಲ್ಲಿ ಅಂತರ್‌ರಾಷ್ಟ್ರೀಯ ನೈತಿಕತೆಯನ್ನು ವಿವೇಚಿಸಿರಿ.

19) ನಿಷ್ಪಕ್ಷಪಾತ ಮತ್ತು ಪಕ್ಷಪಾತ ಇವುಗಳನ್ನು ವಿಶ್ಲೇಷಿಸಿ. ಉತ್ತಮ ಉದಾಹರಣೆ ಕೊಡಿರಿ.

20) ಸತ್ಯಮೇವ ಜಯತೆ, ಸರ್ವೇ ಜನ: ಸುಖಿನೋ ಭವಂತು, ಈ ಕಾಲದಲ್ಲಿ ಈ ಮಾತಿಗೆ ಬೆಲೆ ಇದೆಯೇ? ನೀವು ಈ ಮಾತನ್ನು ಪರಿಪಾಲುಸುವಿರಾ? ಹೇಗೆ?

* * * * *

**ಗ್ರಂಥ ಋಣ:**

1) ಏಥಿಕ್ಸ್ ಅಂಡ್ ಇಂಟಿಗ್ರಿಟಿ: ಲೆಕ್ಸಿಕಾನ್

2) ನೈತಿಕತೆ, ಸಮಗ್ರತೆ, ಅಭಿಕ್ಷಮತೆ;

   ಪರಶುರಾಮ ಕಟ್ಟಿಮನಿ

3) ವಿಕಿಪಿಡಿಯಾ

4) ಪ್ರಜಾವಾಣಿ ದಿನ ಪತ್ರಿಕೆ

5) ಶ್ರೀ ಸಿದ್ದೇಶ್ವರರ ಹಿತನುಡಿಗಳು (ಬಿಜಾಪುರ)

6) ಸ್ವಾಮಿ ವಿವೇಕಾನಂದ ಸಂಪುಟಗಳು

7) ಟಿ.ಎಂ.ಎಚ್.ಎಥಿಕ್ಸ್

8) ಕನ್ನಡದ ಪ್ರಸಿದ್ದ ಸ್ಪರ್ಧಾತ್ಮಕ ಮಾಸಪತ್ರಿಕೆಗಳು (ಸ್ಪರ್ಧಾ ಚೈತ್ರ, ಸ್ಪರ್ಧಾ ಸ್ಫೂರ್ತಿ)

• • • • • • • • • • • • • • • •